\/ BG-GPO /2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಂಪುಟ ೧೪೪ || ಬೆಂಗಳೂರು, ಗುರುವಾರ, ಅಕ್ಟೋಬರ್ ೮, ೨೦೦೯ (ಅಶ್ವಯುಜ ೧೬, ಶಕವರ್ಷ ೧೯೩೧) || ಸಂಚಿಕೆ ೪೦

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ಸಂಖ್ಯೆ	ದಿನಾಂಕ	ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ
906	29.9.2009	No. ED 91 DCE 2004, Dt. 25.9.2009 – Karnataka Education Department Service (Collegiate Education Department) (Cadre & Recruitment) Rules, 2008.
907	29.9.2009	ಸಂ. ಸಂವ್ಯಶಾಇ 20 ಶಾಸನ 2006, ದಿ. 29.9.2009 – The Karnataka Land Revenue (2nd Amendment) Act, 2009.
908	29.9.2009	No. MWD 319 WES 2009, Dt. 7.9.2009 – Addendum.
909	30.9.2009	No. HCE 841/2009, Dt. 29.9.2009 – Recruitment of Candidates to the Post of Library Assistants.
910	30.9.2009	No. HCE 842/2009, Dt. 29.9.2009 – Recruitment of Candidates to the Post of Assistant Librarian.
911	30.9.2009	ಸಂ. ಸಿಐ 363 ಎಸ್‌ಪಿಕ್ಯೂ 2009, ದಿ. 29.9.2009 – ಬೃ.ಬೆ.ಮ.ಪಾ. ವ್ಯಾಪ್ತಿಯಡಿ ಮೆಟ್ರೋ ರೈಲು ಯೋಜನೆಗಾಗಿ ಭೂಸ್ವಾಧೀನ.
912	30.9.2009	No. CVC/05/08-09, Dt. 17.9.2009 - Revision of Market Value Guidelines of immovable properties and buildings in the jurisdiction of Harihara Taluk, Davangere District.
913	30.9.2009	No. CVC/05/08-09, Dt. 17.9.2009 - Revision of Market Value Guidelines of immovable properties and buildings in the jurisdiction of Davangere Taluk, Davangere District.
914	30.9.2009	No. CVC/05/08-09, Dt. 17.9.2009 - Revision of Market Value Guidelines of immovable properties and buildings in the jurisdiction of Honnali Taluk, Davangere District.
915	30.9.2009	No. CVC/05/08-09, Dt. 17.9.2009 - Revision of Market Value Guidelines of immovable properties and buildings in the jurisdiction of Channagiri Taluk, Davangere District.
916	30.9.2009	No. CVC/05/08-09, Dt. 30.9.2009 - Revision of Market Value Guidelines of immovable properties in the Jurisdiction of Sub-Registrar Office Hiriyur, Chitradurga District for the Year 2009-10.
917	30.9.2009	No. CVC/05/08-09, Dt. 30.9.2009 - Revision of Market Value Guidelines of immovable properties in the Jurisdiction of Sub-Registrar Office Chitradurga, Chitradurga District for the Year 2009-10.
918	30.9.2009	No. CVC/05/08-09, Dt. 30.9.2009 - Revision of Market Value Guidelines of immovable properties in the Jurisdiction of Sub-Registrar Office Holalkere, Chitradurga District for the Year 2009-10.
919	30.9.2009	No. DPAR 20 EGV 2009, Dt. 1.9.2009 – Under Sub-section (2) of Section 18A of the KTPP Act 1999.
920	30.9.2009	No. DPAR 20 EGV 2009, Dt. 17.9.2009 – Under Sub-section (2) of Section 18A of the KTPP Act 1999.
921	30.9.2009	ಸಂ. ಆಇ 1068 ವೆಚ್ಚ–12/09, ದಿ. 30.9.2009 – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡುವ ಬಗ್ಗೆ.
922	1.10.2009	No. CO 69 CLM 2009, Dt. 1.10.2009 – Under Sub-section (5) of Section 2A of the KCS Act, 1959.
923	1.10.2009	ಸಂ. ಲೋಇ 377 ಸೇಸಕಿ 09, ದಿ. 25.9.2009 – ಲೋಕೋಪಯೋಗಿ ಇಲಾಖೆಯ ಸ.ಇ. ಹೆಸರನ್ನು ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಕುರಿತು.
924	3.10.2009	No. DPAR 6 SRR 2009, Dt. 29.9.2009 - Karnataka Recruitment of Gazetted Probationers (Appointment by Competitive Examinations) (6th Amendment) Rules, 2009.
925	3.10.2009	No. Samvyashae 35 Shasana 2009, Dt. 3.10.2009 – The Karnataka Fiscal Responsibility (2nd Amendment) Act, 2009.
926	3.10.2009	No. UDD 163 MLR 2009, Dt. 3.10.2009, Karnataka Municipal Corporations (Elections) (Amendment) Rules, 2009.

ವಾರದ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು

http//www.Kar.nic.in/gazette.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು
http//www.Kar.nic.in/gazette.

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ - 1	12-00	700-00
2.	ಭಾಗ - 2	4-00	208-00
3.	ಭಾಗ - 3	30-00	1075-00
4.	ಭಾಗ - 4	3-00	240-00
5.	ಭಾಗ - 4ಎ	8-00	285-00
6.	ಭಾಗ - 5	13-00	528-00
7.	ಭಾಗ - 6 (ಬೆಂಗಳೂರು)..........	7-00	325-00
8.	ಭಾಗ - 6ಎ (ಮೈಸೂರು)..........	50-00	1111-00
9.	ಭಾಗ - 6ಬಿ (ಧಾರವಾಡ)..........	25-00	1637-00
10.	ಭಾಗ - 6ಸಿ (ಗುಲ್ಬರ್ಗ)..........	29-00	1469-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ. ಸ. 1 ರಿಂದ 7 (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	77-00	3360-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	7-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ ಕ್ರಮ ಸಂಖ್ಯೆ 1 ಮತ್ತು 3
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 2 ಮತ್ತು 4 ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗಧಿಪಡಿಸಿರುವುದು.
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ದರ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :-
1. ಚಂದಾಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು "0058 ಲೇಖನ ಸಾಮಗ್ರಿ ಮತ್ತು ಮುದ್ರಣ (I) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು" ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.
2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.
3. ಕರ್ನಾಟಕ ರಾಜ್ಯ ಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59.

ಮುದ್ರಕರು :- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪ | ಬೆಂಗಳೂರು, ಗುರುವಾರ, ಅಕ್ಟೋಬರ್ ೮, ೨೦೦೯ (ಆಶ್ವಯುಜ ೧೬, ಶಕ ವರ್ಷ ೧೯೩೧) | ಸಂಚಿಕೆ ೪೦

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕಂದಾಯ ಸಚಿವಾಲಯ

ವಿಷಯ: ರೈಲ್ವೆ ಮೆನ್ಸ್ ಹೌಸ್ ಬಿಲ್ಡಿಂಗ್ ಕೋ–ಅಪರೇಟಿವ್ ಸೊಸೈಟಿ ತುಮಕೂರು ಇವರಿಗೆ ತುಮಕೂರು ಜಿಲ್ಲೆ, ತುಮಕೂರು ತಾ: ಗೆದ್ದಲಹಳ್ಳಿ ಹಾಗೂ ಮರಳೂರು ಗ್ರಾಮಗಳ ವಿವಿಧ ಸರ್ವೆ ನಂಬರುಗಳಲ್ಲಿ ಒಟ್ಟು 4 ಎಕರೆ 36 ಗುಂಟೆ ಜಮೀನನ್ನು ಮಂಜೂರು ಮಾಡಲು ಸರ್ಕಾರದ ಅನುಮತಿ.

ಓದಲಾಗಿದೆ: ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ಇವರ ಪತ್ರ ಸಂ:ಎಲ್ಆರ್ಎಫ್. ಸಿ.ಆರ್.52/06–07 ದಿನಾಂಕ:12.02.2008.

ಪ್ರಸ್ತಾವನೆ:

ಮೇಲೆ ಓದಲಾದ ತುಮಕೂರು ಜಿಲ್ಲಾಧಿಕಾರಿಯವರ ಪತ್ರದಲ್ಲಿ, ರೈಲ್ವೆ ಮೆನ್ಸ್ ಹೌಸ್ ಬಿಲ್ಡಿಂಗ್ ಕೋ–ಅಪರೇಟಿವ್ ಸೊಸೈಟಿ, ತುಮಕೂರು, ಈ ಸಂಸ್ಥೆಯ ವತಿಯಿಂದ ರೈಲ್ವೆ ಇಲಾಖೆಯ ಕೆಳ ದರ್ಜೆಯ ಹಾಗೂ ಎಲ್ಲಾ ವರ್ಗದ ಎಲ್ಲಾ ನೌಕರರುಗಳಿಗೆ ನ್ಯಾಯಯುತವಾಗಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಅರ್ಜಿದಾರ ಸಂಸ್ಥೆಯು ಹೊಂದಿರುವುದರಿಂದ ಹಾಗೂ ಅರ್ಜಿದಾರ ಸಂಸ್ಥೆಯು ಸದರಿ ಕಡತವನ್ನು ಘಟನೋತ್ತರ ಅನುಮತಿ ಪಡೆಯಲು ಉನ್ನತ ಸಮಿತಿಯ ಮುಂದೆ ಮಂಡಿಸಿ ಮರು ಮಂಜೂರು ಮಾಡಿಕೊಡಲು ಕೋರಿ ಮನವಿ ಸಲ್ಲಿಸಿರುವುದರಿಂದ, ಅರ್ಜಿದಾರ ಸಂಸ್ಥೆಯು ಕೋರಿರುವಂತೆ ಹಾಗೂ ಸದರಿ ಪ್ರಕರಣದ ಬಾಬ್ತು ಈ ಕಾರ್ಯಾಲಯದಿಂದ ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿರುವ ವರದಿಯಂತೆ ಸದರಿ ಪ್ರಕರಣದ ಬಗ್ಗೆ ಸರ್ಕಾರದ ಹಂತದಲ್ಲಿ ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ. ಮತ್ತು ಇವರಿಗೆ ತುಮಕೂರು ತಾಲ್ಲೂಕು, ಗೆದ್ದಲಹಳ್ಳಿ ಗ್ರಾಮದ ಸರ್ವೆ ನಂ.29/1 ರಲ್ಲಿ 2 ಎಕರೆ ಹಾಗೂ ಮರಳೂರು ಗ್ರಾಮದ ಸರ್ವೆ ನಂ.23/3 ರಲ್ಲಿ 2 ಎಕರೆ 36 ಗುಂಟೆ ಜಮೀನನ್ನು ಸರ್ಕರದ ರಾಜ್ಯ ಪತ್ರದ ಅಧಿಸೂಚನೆ ದಿನಾಂಕ: 28.10.1995 ರಂತೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109ರ ತಿದ್ದುಪಡಿಯಂತೆ ಕಲಂ 63 ಮತ್ತು 79 (ಎ)(ಬಿ) ಹಾಗೂ 83 ರ ಮೇರೆಗೆ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸಂಬಂಧಿಸಿದ ಯಾವುದೇ ಜಮೀನನ್ನು ಗೃಹ ನಿರ್ಮಾಣಕ್ಕೆ ಉಪಯೋಗಿಸಿಕೊಳ್ಳಲು ಅನುಮತಿ ನೀಡಲು ಅವಕಾಶವಿರುತ್ತದೆ ಎಂದು ಕೂಡ ತಿಳಿಸಿರುತ್ತಾರೆ.

ಈ ಪ್ರಸ್ತಾವನೆಗೆ ಕಾನೂನು ಕೋಶದ ಮುಖ್ಯಸ್ಥರು ಈ ಕೆಳಕಂಡ ಅಭಿಪ್ರಾಯ ನೀಡಿರುತ್ತಾರೆ.

"ಈ ಪ್ರಕರಣದಲ್ಲಿ ಅರ್ಜಿದಾರರ ಕೋರಿಕೆ ಮೇರೆಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ಕಾಯ್ದೆಯಡಿಯಲ್ಲಿ ಕಲಂ 20(ಸಿ) ಅನುಸಾರ ಮುಟ್ಟುಗೋಲು ಹಾಕಿಕೊಂಡ ಜಮೀನನ್ನು ಮಂಜೂರ ಮಾಡಬಹುದು. ಕಲಂ 20(1)ರ ಅನುಸಾರ ಕಾಯ್ದೆ ಓದುವುದೇನೆಂದರೆ "Land may be granted by the Deputy Commissioner with the prior approval of the State Government under these rules" ಹಾಗೂ ಕಲಂ 20(ಸಿ) ಓದುವುದೇನೆಂದರೆ– "Co-operative Socities and

statutary bodies like the Karnataka State Road Corporation, the K.P.T.C. etc., on collection of 50% of market value to be determined by the Deputy Commissioner". ಆದ್ದರಿಂದ ಈ ಪ್ರಕರಣದಲ್ಲಿ ರೈಲ್ವೆ ಮೆನ್ಸ್ ಹೌಸ್ ಬಿಲ್ಡಿಂಗ್ ಕೋ-ಅಪರೇಟಿವ್ ಸೊಸೈಟಿ, ತುಮಕೂರು, ಇವರಿಂದ ಮುಟ್ಟುಗೋಲು ಹಾಕಿಕೊಂಡ ಎರಡು ಜಮೀನುಗಳನ್ನು ಕಲಂ 20(1)(ಸಿ) ಅನ್ವಯ ಜಮೀನನ್ನು ಮಂಜೂರು ಮಾಡಲು ಕಾನೂನಿನ ತೊಡಕಿರುವುದಿಲ್ಲ".

ಮೇಲ್ಕಂಡ ಕಾನೂನು ಅನುಸರಿಸಿ ಅರ್ಜಿದಾರರ ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಂಡಂಥ ಜಮೀನನ್ನು ಸರ್ಕಾರದ ಅನುಮತಿ ಹೊರಡಿಸಿ ಸಂಬಂದಪಟ್ಟ ಜಿಲ್ಲಾಧಿಕಾರಿಗಳಿಗೆ ಜಮೀನು ಮಂಜೂರು ಮಾಡಲು ಆದೇಶ ಹೊರಡಿಸಬಹುದು ಎಂಬ ಅಭಿಪ್ರಾಯದೊಂದಿಗೆ ಕಡತವನ್ನು ತಮ್ಮ ಅನುಮೋದನೆಗಾಗಿ ಒಪ್ಪಿಸಿದೆ".

ಮೇಲ್ಕಂಡ ಅಂಶಗಳಂತೆ ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಕಂಇ 53 ಎಲ್‌ಆರ್‌ಎಂ 2007, ಬೆಂಗಳೂರು, ದಿನಾಂಕ: 21ನೇ ಮೇ 2009

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳಂತೆ ತುಮಕೂರು ತಾಲ್ಲೂಕು ಗೆದ್ದಲಹಳ್ಳಿ ಗ್ರಾಮದ ಸರ್ವೆ ನಂ.29/3 ರಲ್ಲಿ 2 ಎಕರೆ ಹಾಗೂ ಮರಳೂರು ಗ್ರಾಮದ ಸರ್ವೆ ನಂ.23/3 ರಲ್ಲಿ 2 ಎಕರೆ 36 ಗುಂಟೆ ಹೀಗೆ ಒಟ್ಟು 4 ಎಕರೆ 36 ಗುಂಟೆ ಕೃಷಿ ಜಮೀನನ್ನು ಮಾರುಕಟ್ಟೆ ದರವನ್ನು ವಿಧಿಸಿ ಸರ್ಕಾರಕ್ಕೆ ಪಾವತಿಸುವ ಷರತ್ತಿಗೊಳಪಟ್ಟು ರೈಲ್ವೆ ಮೆನ್ಸ್ ಹೌಸ್ ಬಿಲ್ಡಿಂಗ್ ಕೋ-ಅಪರೇಟಿವ್ ಸೊಸೈಟಿ, ತುಮಕೂರು ಇವರಿಗೆ ಭೂ ಮಂಜೂರಾತಿ ಕಾಯ್ದೆ ನಿಯಮ 20(1)(ಸಿ) ಅಡಿಯಲ್ಲಿ ಸರ್ಕಾರದ ಅನುಮತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2120

ಟಿ.ಎನ್. ನಾರಾಯಣಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಸುಧಾರಣೆ)

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ: ಲೋಕೋಪಯೋಗಿ ಸಚಿವಾಲಯದಲ್ಲಿ ಆಯವ್ಯಯ ಹಾಗೂ ವಿತ್ತೀಯ ಉಸ್ತುವಾರಿ ಕೋಶ–Budget and Fiscal Monitoring Cellನ್ನು ಸೃಷ್ಟಿಸುವ ಬಗ್ಗೆ.

ಪ್ರಸ್ತಾವನೆ:

ಲೋಕೋಪಯೋಗಿ ಇಲಾಖೆಯಲ್ಲಿ ವರ್ಷೇವರ್ಷೇ ಹೆಚ್ಚುತ್ತಿರುವ ಕಾರ್ಯಬಾಹುಳ್ಯ ಹಾಗೂ ಕಾರ್ಯ ಕ್ಷೇತ್ರದಿಂದಾಗಿ ಆರ್ಥಿಕ ಹಾಗೂ ಭೌತಿಕ ರಂಗಗಳಲ್ಲಿ ಅಧಿಕಗೊಳ್ಳುತ್ತಿರುವ ಹಾಗೂ ವಿಸ್ತಾರಗೊಳ್ಳುತ್ತಿರುವ ರಸ್ತೆ ಮತ್ತು ಕಟ್ಟಡ ಯೋಜನೆಗಳ ಸಕಾಲಿಕ, ಸಮರ್ಪಕ ನಿರ್ವಹಣೆ, ನಿಯಂತ್ರಣ ಹಾಗೂ ಸಮರ್ಥ ಉಸ್ತುವಾರಿಗಾಗಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಆಂತರಿಕ ಆರ್ಥಿಕ ಸಲಹೆಗಾರರ ಶಾಖೆ (ಮಧ್ಯಮಾವಧಿ ವಿತ್ತೀಯ ಕೋಶ)ಯನ್ನು–Internal Financial Advisor Section, Medium Term Fiscal Plan Cell-ಸಬಲೀಕರಿಸುವ ನಿಟ್ಟಿನಲ್ಲಿ ಮೇಲ್ದರ್ಜೆಗೇರಿಸಲು ಸರ್ಕಾರವು ತೀರ್ಮಾನಿಸಿದ್ದು, ಹಾಲಿ ಕಾರ್ಯನಿರ್ವಹಿಸುತ್ತಿರುವ ಆಂತರಿಕ ಆರ್ಥಿಕ ಸಲಹೆಗಾರರ ಶಾಖೆ (ಮಧ್ಯಮಾವಧಿ ವಿತ್ತೀಯ ಕೋಶ)– Internal Financial Advisor Section, Medium Term Fiscal Plan Cell-ಯನ್ನು, ಪ್ರಧಾನ ಕಾರ್ಯದರ್ಶಿಗಳ ನೇರ ನಿಯಂತ್ರಣ ಹಾಗೂ ಅವರ ಆಡಳಿತ ವ್ಯಾಪ್ತಿಗೊಳಪಡುವಂತೆ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಪ್ರತ್ಯೇಕವಾದ ಒಂದು ಪೂರ್ಣಪ್ರಮಾಣದಲ್ಲಿ ಶಾಶ್ವತವಾಗಿ ಜಾರಿಗೆ ಬರುವಂತೆ, "ಆಯವ್ಯಯ ಹಾಗೂ ವಿತ್ತೀಯ ಉಸ್ತುವಾರಿ ಕೋಶ–Budget and Fiscal Monitoring Cell" ಎಂದು ಮರುನಾಮಕರಣಗೊಳಿಸಿ ಸೃಜಿಸಲು ಹಾಗೂ ಮಧ್ಯಮಾವಧಿ ವಿತ್ತೀಯ ಕೋಶದ ಆಂತರಿಕ ಆರ್ಥಿಕ ಸಲಹೆಗಾರರ ಹುದ್ದೆಯನ್ನೇ, ಈ ಆಯವ್ಯಯ ಹಾಗೂ ವಿತ್ತೀಯ ಉಸ್ತುವಾರಿ ಕೋಶದ ನಿರ್ದೇಶಕರು(ಆರ್ಥಿಕ) ಹಾಗೂ ಪದನಿಮಿತ್ತ ಜಂಟಿಕಾರ್ಯದರ್ಶಿ ಹುದ್ದೆಯೆಂದು, ವೇತನಶ್ರೇಣಿ ರೂ.24450–600–26250–675–30300–750–31800ನಲ್ಲಿ ಮೇಲ್ದರ್ಜೆಗೇರಿಸಿ ಶಾಶ್ವತವಾಗಿ ಜಾರಿಯಲ್ಲಿರುವಂತೆ ಮರುನಾಮಕರಣಗೊಳಿಸಿ, ಈಗಾಗಲೇ ಮಧ್ಯಮಾವಧಿ ವಿತ್ತೀಯ ಕೋಶದಲ್ಲಿ ಆಂತರಿಕ ಆರ್ಥಿಕ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಆರ್.ಗೋವಿಂದರಾಜು, ಜಂಟಿ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಇವರನ್ನು ಮೇಲ್ದರ್ಜೆಗೇರಿಸಲಾಗುವ ಆಯವ್ಯಯ ಹಾಗೂ ವಿತ್ತೀಯ ಉಸ್ತುವಾರಿ ಕೋಶ ನಿರ್ದೇಶಕರು (ಆರ್ಥಿಕ) ಹಾಗೂ ಸರ್ಕಾರದ ಪದನಿಮಿತ್ತ ಜಂಟಿಕಾರ್ಯದರ್ಶಿಗಳ ಹುದ್ದೆಗೆ ನೇಮಕ ಮಾಡಿ ಶಾಶ್ವತವಾಗಿ ವಿಲೀನಗೊಳಿಸಿ ಪೂರಕ ಸಿಬ್ಬಂದಿಯೊಂದಿಗೆ ಸೃಷ್ಟಿಸಲು ಮಂಜೂರಾತಿ ನೀಡುವಂತೆ ತೀರ್ಮಾನಿಸಲಾಗಿರುತ್ತದೆ.

ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂ.:ಲೋಇ:10:ಐಎಫ್ಎ:2009, ಬೆಂಗಳೂರು ದಿನಾಂಕ: 22ನೇ ಸೆಪ್ಟೆಂಬರ್ 2009

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಆರ್ಥಿಕ ವಲಯದ ಸಕಾಲಿಕ, ಸಮರ್ಪಕ ನಿರ್ವಹಣೆ, ನಿಯಂತ್ರಣ ಹಾಗೂ ಸಮರ್ಥ ಉಸ್ತುವಾರಿಗಾಗಿ, ಹಣಕಾಸಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ನಿರ್ವಹಿಸಲು, ಇಲಾಖೆಯ ವಿವಿಧ ಯೋಜನೆ ಹಾಗೂ ಕಾರ್ಯಕ್ರಮಗಳ ಆರ್ಥಿಕ ನಿರ್ವಹಣೆ ಮತ್ತು ಆಯವ್ಯಯ ಕುರಿತು ಸಮರ್ಪಕವಾದ ಹಾಗೂ ಸಂಪೂರ್ಣ ನಿರ್ವಹಣೆ, ನಿಯಂತ್ರಣ ಮತ್ತು ಉಸ್ತುವಾರಿಗಾಗಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಆಂತರಿಕ ಆರ್ಥಿಕ ಸಲಹೆಗಾರರ ಶಾಖೆ (ಮಧ್ಯಮಾವಧಿ ವಿತ್ತೀಯ ಕೋಶ)– Internal Financial Advisor, Medium Term Fiscal Plan Cell-ಯನ್ನು, ಮೇಲ್ದರ್ಜೆಗೇರಿಸಿ ಪ್ರಧಾನಕಾರ್ಯದರ್ಶಿಗಳ ನೇರ ನಿಯಂತ್ರಣ ಹಾಗೂ ಅವರ ಆಡಳಿತ ವ್ಯಾಪ್ತಿಗೊಳಪಡುವಂತೆ ಲೋಕೋಪಯೋಗಿ ಇಲಾಖೆಗೆ ಪ್ರತ್ಯೇಕವಾದ ಹಾಗೂ ಪೂರ್ಣಪ್ರಮಾಣದಲ್ಲಿ ಶಾಶ್ವತವಾಗಿ ಜಾರಿಯಲ್ಲಿರುವಂತೆ, "ಆಯವ್ಯಯ ಹಾಗೂ ವಿತ್ತೀಯ ಉಸ್ತುವಾರಿ ಕೋಶ–Budget and Fiscal Monitoring Cell" ಎಂದು ಮರು ನಾಮಕರಣಗೊಳಿಸಿ, ಪ್ರಸ್ತುತ ಇಲಾಖೆಯಲ್ಲಿ ಮಧ್ಯಮಾವಧಿ ವಿತ್ತೀಯ ಕೋಶದ ಆಂತರಿಕ ಆರ್ಥಿಕ ಸಲಹೆಗಾರರ ಹುದ್ದೆಯನ್ನೇ, ನಿರ್ದೇಶಕರು(ಆರ್ಥಿಕ) ಹಾಗೂ ಸರ್ಕಾರದ ಪದನಿಮಿತ್ತ ಜಂಟಿಕಾರ್ಯದರ್ಶಿಗಳು–Director (Finance) & Ex-officio Joint Secretary to Govt.-Budget and Fiscal Monitoring Cell-ಹುದ್ದೆಯೆಂದು ಮೇಲ್ದರ್ಜೆಗೇರಿಸಿ, ವೇತನಶ್ರೇಣಿ:ರೂ.24450–600–26250–675–30300–750–31800ನಲ್ಲಿ ಶಾಶ್ವತವಾಗಿ ಜಾರಿಯಲ್ಲಿರುವಂತೆ ಮರುನಾಮಕರಣ ಗೊಳಿಸಿ, ಪೂರಕ ಸಿಬ್ಬಂದಿಯೊಂದಿಗೆ ಸೃಷ್ಟಿಸಲು ಈ ಮೂಲಕ ಮಂಜೂರಾತಿ ನೀಡಲಾಗಿರುತ್ತದೆ.

ಈ ರೀತಿ ಮೇಲ್ದರ್ಜೆಗೇರಿಸಿ ಸೃಜಿಸಲಾದ ಆಯವ್ಯಯ ಹಾಗೂ ವಿತ್ತೀಯ ಉಸ್ತುವಾರಿ ಕೋಶದ ನಿರ್ದೇಶಕರು(ಆರ್ಥಿಕ) ಹಾಗೂ ಪದನಿಮಿತ್ತ ಜಂಟಿಕಾರ್ಯದರ್ಶಿಗಳ ಹುದ್ದೆಗೆ, ಪ್ರಸ್ತುತ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಮಧ್ಯಮಾವಧಿ ವಿತ್ತೀಯ ಕೋಶದ ಆಂತರಿಕ ಆರ್ಥಿಕ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಆರ್.ಗೋವಿಂದರಾಜು, ಜಂಟಿ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಇವರನ್ನು ಹಾಲಿ ನಿರ್ವಹಿಸುತ್ತಿರುವ ಕರ್ತವ್ಯಗಳೊಂದಿಗೆ ಇಲಾಖೆಯ ಆರ್ಥಿಕ ನಿರ್ವಹಣೆ, ಉಸ್ತುವಾರಿ, ನಿಯಂತ್ರಣ ಮತ್ತು ಮೇಲ್ವಿಚಾರಣೆ, ಇಲಾಖೆಯ ಆಯವ್ಯಯ ಹಾಗೂ ವಿವಿಧ ಯೋಜನೆಗಳ ಕ್ರಿಯಾಯೋಜನೆಗಳ ತಯಾರಿಕೆ, ಅನುದಾನ ಹಾಗೂ ಹಣ ಹಂಚಿಕೆ ಹಾಗೂ ವಿತರಣೆ, ಕೋಶದ ಆಡಳಿತ ಮತ್ತು ಇನ್ನಿತರೆ ಕರ್ತವ್ಯಗಳ ನಿರ್ವಹಣೆಯ ಹೆಚ್ಚಿದ ಜವಾಬ್ದಾರಿಗಳೊಂದಿಗೆ ಆಯವ್ಯಯ ಹಾಗೂ ವಿತ್ತೀಯ ಉಸ್ತುವಾರಿ ಕೋಶದ ನಿರ್ದೇಶಕರು(ಆರ್ಥಿಕ) ಹಾಗೂ ಪದನಿಮಿತ್ತ ಜಂಟಿಕಾರ್ಯದರ್ಶಿಗಳ ಹುದ್ದೆಗೆ ಪೂರ್ಣಪ್ರಮಾಣದಲ್ಲಿ ಶ್ರೀ ಆರ್.ಗೋವಿಂದರಾಜು, ಜಂಟಿ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಇವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನೇಮಕ ಮಾಡಿ ಶಾಶ್ವತವಾಗಿ ವಿಲೀನಗೊಳಿಸಲಾಗಿದೆ. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಆಂತರಿಕ ಆರ್ಥಿಕ ಸಲಹೆಗಾರರ ಶಾಖೆ (ಮಧ್ಯಮಾವಧಿ ವಿತ್ತೀಯ ಕೋಶ)– Internal Financial Advisor, Medium Term Fiscal Plan Cell-ಯನ್ನು, ಮೇಲ್ದರ್ಜೆಗೇರಿಸಿ ಕೆಳಕಂಡ ಆಯವ್ಯಯ ಹಾಗೂ ವಿತ್ತೀಯ ಉಸ್ತುವಾರಿ ಕೋಶ–Budget and Fiscal Monitoring Cell-ಕೋಶವನ್ನು ಪೂರಕ ಸಿಬ್ಬಂದಿಯೊಂದಿಗೆ ಸೃಷ್ಟಿಸಲು ಮಂಜೂರಾತಿ ನೀಡಲಾಗಿದೆ.

"ಆಯವ್ಯಯ ಹಾಗೂ ವಿತ್ತೀಯ ಉಸ್ತುವಾರಿ ಕೋಶ

(Budget and Fiscal Monitoring Cell)"

ಕ್ರ. ಸಂ.	ಅಧಿಕಾರಿ ಹೆಸರು	ಹುದ್ದೆ : ಪದನಾಮ	ಹುದ್ದೆ ಸಂ.	ವೇತನ ಶ್ರೇಣಿ
1.	ಶ್ರೀ ಆರ್.ಗೋವಿಂದರಾಜು, ಜಂಟಿ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಇವರನ್ನು ಮೇಲ್ಕಂಡ ಕೋಶಕ್ಕೆ ನಿರ್ದೇಶಕರು (ಆರ್ಥಿಕ) ಹಾಗೂ ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿಗಳ ಹುದ್ದೆಗೆ ನೇಮಕ ಮಾಡಿ ಶಾಶ್ವತವಾಗಿ ವಿಲೀನಗೊಳಿಸಲಾಗಿದೆ.	ನಿರ್ದೇಶಕರು (ಆರ್ಥಿಕ) ಹಾಗೂ ಪದನಿಮಿತ್ತ ಜಂಟಿಕಾರ್ಯದರ್ಶಿಗಳು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ	01 (ಒಂದು)	ರೂ.24450–600–26250–675–30300–750–31800

ಪೂರಕ ಸಿಬ್ಬಂದಿ ಪಟ್ಟಿ :

ಕ್ರಸಂ.	ಹುದ್ದೆ : ಪದನಾಮ	ಹುದ್ದೆ ಸಂ.
1.	ಲೆಕ್ಕ ಅಧೀಕ್ಷಕರು	01 (ಒಂದು)
2.	ಪ್ರಥಮ ಮತ್ತು ದ್ವಿತೀಯ ದರ್ಜೆ ಸಹಾಯಕರು	01+01 (ಎರಡು)
3.	ಶೀಘ್ರಲಿಪಿಗಾರರು ಮತ್ತು ಟೈಪಿಸ್ಟ್ ಕಂ ಕ್ಲರ್ಕ್	01+01 (ಎರಡು)
4.	ಗ್ರೂಪ್ ಡಿ	01 (ಒಂದು)
	ಒಟ್ಟು	**07** (ಏಳು)

(ಒಟ್ಟು ಏಳು ಹುದ್ದೆಗಳು)

- ಶಾಖೆಯಲ್ಲಿ ಲೆಕ್ಕ ಪರಿಶೋಧನೆ ಹಾಗೂ ನಿರ್ವಹಣೆ ಕಾರ್ಯಕ್ಕೆ ಲೆಕ್ಕಾಧೀಕ್ಷಕರ ಹುದ್ದೆಗೆ, ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ.
- ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ, ಮೇಲ್ಕಂಡ ಪೂರಕ ಸಿಬ್ಬಂದಿಗಳ ಪಟ್ಟಿಯ ಕ್ರ.ಸಂ.2, 3 ಮತ್ತು 4ರ ವರೆಗಿನ ಹುದ್ದೆಗಳ ನಿಯೋಜನೆ.
- ಆಯವ್ಯಯ ಹಾಗೂ ವಿತ್ತೀಯ ಉಸ್ತುವಾರಿ ಕೋಶದ ಅಧಿಕಾರಿಗಳ ವೇತನ, ತುಟ್ಟಿಭತ್ಯೆ, ಸಾರಿಗೆ:ವಾಹನ ಭತ್ಯೆ ಮತ್ತು ಇತರೆಭತ್ಯೆ ಹಾಗೂ ಉಳಿದ ಸಿಬ್ಬಂದಿಗಳ ವೇತನ, ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳನ್ನು ಕೇಷಿಪ್ ಲೆಕ್ಕ ಶೀರ್ಷಿಕೆಯಡಿ/ಲೋಕೋಪಯೋಗಿ ಇಲಾಖೆಯ ಲೆಕ್ಕ ಶೀರ್ಷಿಕೆಯಡಿ/ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಲೆಕ್ಕ ಶೀರ್ಷಿಕೆಯಡಿ ಭರಿಸಬಹುದಾಗಿರುತ್ತದೆ.
- ಮೇಲ್ಕಂಡ ಕೋಶವು ಲೋಕೋಪಯೋಗಿ ಸಚಿವಾಲಯದ ಒಂದು ಭಾಗವಾಗಿದ್ದು, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಇವರ ನೇರ ನಿಯಂತ್ರಣ ಹಾಗೂ ಅವರ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸತಕ್ಕದ್ದು.

ಈ ಆದೇಶವನ್ನು ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕದ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ದೇವಿಪ್ರಸಾದ್

ಪಿ.ಆರ್. 2177 ಸರ್ಕಾರದ ಅಧೀನ ಕಾರ್ಯದರ್ಶಿ,

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ (ಇಎಪಿ)

ವಿಷಯ: ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.

ಓದಲಾಗಿದೆ:
1. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರ ಪತ್ರ ಸಂಖ್ಯೆ: ಮು.ಇಂ. ಸಂಕದ / ರಶಾ / ಸಇಂ4 / ಮರಳೇಗವಿ/ಮೇಲದರ್ಜೆ:2008–09 ದಿ:26.2.2008.
2. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರ ಪತ್ರ ಸಂಖ್ಯೆ: ಮು.ಇಂ. ಸಂಕದ / ರಶಾ / ಸಾಕೋ/ಸಇಂ2/2008–09 ದಿ:9.1.2009.
3. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರ ಪತ್ರ ಸಂಖ್ಯೆ: ಮು.ಇಂ. ಸಂಕದ / ರಶಾ / ಸಇಂ4 / 2009–10 ದಿ:3.6.2009.
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ ಇವರ ಪತ್ರ ಸಂಖ್ಯೆ: ಸಿಬಿಎನ್ / ಹೈ.ಆ್ಯಸೆ:ಕಂ.ಸಂ.7: ಶಾಸಮ: ಗ್ರಾರಮೇ: ಹಾವೇರಿ ವಿಭಾಗ: 08–09/13160, ದಿ:3.2.2009.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರಗಳಲ್ಲಿ ರಾಮನಗರ, ಶಿವಮೊಗ್ಗ, ಚಿಕ್ಕಮಗಳೂರು, ಹಾವೇರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ನಿಗದಿತ ನಮೂನೆಯಲ್ಲಿ ಅಗತ್ಯ ನಕ್ಷೆಯೊಂದಿಗೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಹಾಗೂ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕ್ರ. ಸಂ.	ತಾಲ್ಲೂಕು	ಗ್ರಾಮೀಣ ರಸ್ತೆಗಳ ವಿವರ	ಉದ್ದ (ಕಿ.ಮೀ)
1	ರಾಮನಗರ ಜಿಲ್ಲೆ / ಕನಕಪುರ ತಾಲ್ಲೂಕು	ಕನಕಪುರ ಸಂಗಮ ರಸ್ತೆಯಿಂದ ಮರಳೇಗವಿ ಮಠ ಮತ್ತು ಮರಳೆ ಗ್ರಾಮಕ್ಕೆ ಹೋಗುವ ರಸ್ತೆ	2.05
2.	ರಾಮನಗರ ತಾಲ್ಲೂಕು	ಬಿಡದಿ – ಮುದುವಾಡಿ ರಸ್ತೆಯಿಂದ ತೊರೆದೊಡ್ಡಿ, ಇಟ್ಟುಮಡು, ತಿಮ್ಮೇಗೌಡನದೊಡ್ಡಿ ಮುಖಾಂತರ ಬಿಡದಿ – ಹಾರೋಹಳ್ಳಿ ಸೇರುವ ರಸ್ತೆ	4.00
3.	ಚಿಕ್ಕಮಗಳೂರು ಜಿಲ್ಲೆ / ನರಸಿಂಹರಾಜಪುರ ತಾಲ್ಲೂಕು	ರಾಜ್ಯ ಹೆದ್ದಾರಿ 65 ರಲ್ಲಿ ನರಸಿಂಹರಾಜ ಪುರದಿಂದ ಮೆಣಸೂರು ಮಾರ್ಗವಾಗಿ ರಾಜ್ಯ ಹೆದ್ದಾರಿ 65ಕ್ಕೆ ಕೂಡು ರಸ್ತೆ	1.60
4.	ನರಸಿಂಹರಾಜಪುರ ತಾಲ್ಲೂಕು	ಎನ್.ಹೆಚ್. 13 ರಲ್ಲಿ ಮುಡಬಾ ಗ್ರಾಮದಿಂದ ಕುದುರೆಗುಂಡಿ – ಮುತ್ತಿನಕೊಪ್ಪ, ರಸ್ತೆಗೆ ಸೇರುವ ಸಂಪರ್ಕ ರಸ್ತೆ	0.60

ಕ್ರ. ಸಂ.	ತಾಲ್ಲೂಕು	ಗ್ರಾಮೀಣ ರಸ್ತೆಗಳ ವಿವರ	ಉದ್ದ (ಕಿ.ಮೀ)
5.	ನರಸಿಂಹರಾಜಪುರ ತಾಲ್ಲೂಕು	ಸಿಂಸೆಯಿಂದ ಕಳ್ಳಿಕೊಪ್ಪ ಮಾರ್ಗವಾಗಿ ಶೆಟ್ಟಿಕೊಪ್ಪ ಸಂಪರ್ಕ ರಸ್ತೆ	4.00
6.	ಕೊಪ್ಪ ತಾಲ್ಲೂಕು	ಕೊಪ್ಪ – ಬಾಳಗಡಿ ರಸ್ತೆ	3.20
7.	ಕೊಪ್ಪ ತಾಲ್ಲುಕು	ಕೊಪ್ಪ – ಗುಣವಂತೆ – ಮಕ್ಕಿಮನೆ ರಸ್ತೆ	8.20
8.	ಹಾವೇರಿ ಜಿಲ್ಲೆ / ರಾಣೆಬೆನ್ನೂರು ತಾಲ್ಲೂಕು	ಹಲಗೇರಿ – ಹೆಡಿಯಾಲ ರಸ್ತೆ ಮಾರ್ಗ ಬೆನಕೊಂಡ – ಜೋಯಿಸರಹಳ್ಳಿ – ಸುಣಕಲ್‌ಬಿದರಿ	18.00
9.	ರಾಣೆಬೆನ್ನೂರು ತಾಲ್ಲೂಕು	ಕಾಕೋಳು ಗ್ರಾಮದ ರಾಷ್ಟ್ರೀಯ ಹೆದ್ದಾರಿ –4 ರಿಂದ ಕಜ್ಜರಿ – ದೇವರಗುಡ್ಡ ಮುಖಾಂತರ ಬಾಗಲಕೋಟೆ ಬಿಳಿಗಿರಿರಂಗನ ಬೆಟ್ಟ (ರಾಜ್ಯ ಹೆದ್ದಾರಿ 57) ಕ್ಕೆ ಕೂಡುವ ರಸ್ತೆ	11.00
10.	ರಾಣೆಬೆನ್ನೂರು ತಾಲ್ಲೂಕು	ಬಾಗಲಕೋಟೆ ಬಿಳಿಗಿರಿರಂಗನ ಬೆಟ್ಟ ರಾಜ್ಯ ಹೆದ್ದಾರಿ 57 ರಿಂದ ದೇವರಗುಡ್ಡ ರಸ್ತೆ	4.00
11.	ರಾಣೆಬೆನ್ನೂರು ತಾಲ್ಲೂಕು	ದೇವರಗುಡ್ಡ ಕ್ರಾಸ್‌ನಿಂದ ಯಲ್ಲಾಪುರ ಗ್ರಾಮದ ರಸ್ತೆ	2.50
12.	ರಾಣೆಬೆನ್ನೂರು ತಾಲ್ಲೂಕು	ರಾಷ್ಟ್ರೀಯ ಹೆದ್ದಾರಿ –4 ರಿಂದ ಅಸುಂದಿ ಕ್ರಾಸ್ ಕಜ್ಜರಿ ಗ್ರಾಮದವರೆಗಿನ ರಸ್ತೆ	2.50
		ಒಟ್ಟು	**61.65**

ಸರ್ಕಾರವು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ಲೋಇ 374 ಸಿಆರ್‌ಎಂ 2007, ಬೆಂಗಳೂರು, ದಿನಾಂಕ: 21ನೇ ಆಗಸ್ಟ್ 2009

ರಾಮನಗರ, ಶಿವಮೊಗ್ಗ, ಚಿಕ್ಕಮಗಳೂರು, ಹಾವೇರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ 12 ಗ್ರಾಮೀಣ ರಸ್ತೆಗಳನ್ನು ಜಿಲ್ಲಾಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕ್ರ. ಸಂ.	ತಾಲ್ಲೂಕು	ಗ್ರಾಮೀಣ ರಸ್ತೆಗಳ ವಿವರ	ಉದ್ದ (ಕಿ.ಮೀ)
1	ರಾಮನಗರ ಜಿಲ್ಲೆ / ಕನಕಪುರ ತಾಲ್ಲೂಕು	ಕನಕಪುರ ಸಂಗಮ ರಸ್ತೆಯಿಂದ ಮರಳೇಗವಿ ಮಠ ಮತ್ತು ಮರಳೆ ಗ್ರಾಮಕ್ಕೆ ಹೋಗುವ ರಸ್ತೆ	2.05
2.	ರಾಮನಗರ ತಾಲ್ಲೂಕು	ಬಿಡದಿ – ಮುದುವಾಡಿ ರಸ್ತೆಯಿಂದ ತೊರೆದೊಡ್ಡಿ, ಇಟ್ಟುಮಡು, ತಿಮ್ಮೇಗೌಡನದೊಡ್ಡಿ ಮುಖಾಂತರ ಬಿಡದಿ – ಹಾರೋಹಳ್ಳಿ ಸೇರುವ ರಸ್ತೆ	4.00
3.	ಚಿಕ್ಕಮಗಳೂರು ಜಿಲ್ಲೆ / ನರಸಿಂಹರಾಜಪುರ ತಾಲ್ಲೂಕು	ರಾಜ್ಯ ಹೆದ್ದಾರಿ 65 ರಲ್ಲಿ ನರಸಿಂಹರಾಜ ಪುರದಿಂದ ಮೆಣಸೂರು ಮಾರ್ಗವಾಗಿ ರಾಜ್ಯ ಹೆದ್ದಾರಿ 65ಕ್ಕೆ ಕೂಡು ರಸ್ತೆ	1.60
4.	ನರಸಿಂಹರಾಜಪುರ ತಾಲ್ಲೂಕು	ಎನ್.ಹೆಚ್. 13 ರಲ್ಲಿ ಮುಡಬಾ ಗ್ರಾಮದಿಂದ ಕುದುರೆಗುಂಡಿ – ಮುತ್ತಿನಕೊಪ್ಪ, ರಸ್ತೆಗೆ ಸೇರುವ ಸಂಪರ್ಕ ರಸ್ತೆ	0.60
5.	ನರಸಿಂಹರಾಜಪುರ ತಾಲ್ಲೂಕು	ಸಿಂಸೆಯಿಂದ ಕಳ್ಳಿಕೊಪ್ಪ ಮಾರ್ಗವಾಗಿ ಶೆಟ್ಟಿಕೊಪ್ಪ ಸಂಪರ್ಕ ರಸ್ತೆ	4.00
6.	ಕೊಪ್ಪ ತಾಲ್ಲೂಕು	ಕೊಪ್ಪ – ಬಾಳಗಡಿ ರಸ್ತೆ	3.20
7.	ಕೊಪ್ಪ ತಾಲ್ಲುಕು	ಕೊಪ್ಪ – ಗುಣವಂತೆ – ಮಕ್ಕಿಮನೆ ರಸ್ತೆ	8.20
8.	ಹಾವೇರಿ ಜಿಲ್ಲೆ / ರಾಣೆಬೆನ್ನೂರು ತಾಲ್ಲೂಕು	ಹಲಗೇರಿ – ಹೆಡಿಯಾಲ ರಸ್ತೆ ಮಾರ್ಗ ಬೆನಕೊಂಡ – ಜೋಯಿಸರಹಳ್ಳಿ – ಸುಣಕಲ್‌ಬಿದರಿ	18.00
9.	ರಾಣೆಬೆನ್ನೂರು ತಾಲ್ಲೂಕು	ಕಾಕೋಳು ಗ್ರಾಮದ ರಾಷ್ಟ್ರೀಯ ಹೆದ್ದಾರಿ –4 ರಿಂದ ಕಜ್ಜರಿ – ದೇವರಗುಡ್ಡ ಮುಖಾಂತರ ಬಾಗಲಕೋಟೆ ಬಿಳಿಗಿರಿರಂಗನ ಬೆಟ್ಟ (ರಾಜ್ಯ ಹೆದ್ದಾರಿ 57) ಕ್ಕೆ ಕೂಡುವ ರಸ್ತೆ	11.00
10.	ರಾಣೆಬೆನ್ನೂರು ತಾಲ್ಲೂಕು	ಬಾಗಲಕೋಟೆ ಬಿಳಿಗಿರಿರಂಗನ ಬೆಟ್ಟ ರಾಜ್ಯ ಹೆದ್ದಾರಿ 57 ರಿಂದ ದೇವರಗುಡ್ಡ ರಸ್ತೆ	4.00

ಕ್ರ. ಸಂ.	ತಾಲ್ಲೂಕು	ಗ್ರಾಮೀಣ ರಸ್ತೆಗಳ ವಿವರ	ಉದ್ದ (ಕಿ.ಮೀ)
11.	ರಾಣೆಬೆನ್ನೂರು ತಾಲ್ಲೂಕು	ದೇವರಗುಡ್ಡ ಕ್ರಾಸ್‌ನಿಂದ ಯಲ್ಲಾಪುರ ಗ್ರಾಮದ ರಸ್ತೆ	2.50
12.	ರಾಣೆಬೆನ್ನೂರು ತಾಲ್ಲೂಕು	ರಾಷ್ಟ್ರೀಯ ಹೆದ್ದಾರಿ –4 ರಿಂದ ಅಸುಂದಿ ಕ್ರಾಸ್ ಕಜ್ಜರಿ ಗ್ರಾಮದವರೆಗಿನ ರಸ್ತೆ	2.50
		ಒಟ್ಟು	**61.65**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ದೇವಿಪ್ರಸಾದ್

ಪಿ.ಆರ್. 2021 ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ).

ವಿಷಯ: ತುಮಕೂರು ಜಿಲ್ಲೆ ಶಿರಾ, ಚಿಕ್ಕನಾಯಕನಹಳ್ಳಿ, ತುಮಕೂರು ತಾಲ್ಲೂಕಿನ ವ್ಯಾಪ್ತಿಯ ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಿರುವ ಆದೇಶವನ್ನು ರದ್ದುಪಡಿಸಿ ಗ್ರಾಮೀಣ ರಸ್ತೆಯನ್ನಾಗಿ ಮುಂದುವರೆಸುವ ಬಗ್ಗೆ.

ಓದಲಾಗಿದೆ: 1. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರ ಪತ್ರ ಸಂಖ್ಯೆ: ಮು.ಇಂ. ಸಂಕದ / ರಶಾ / ಸಇಂ4 / 2009–10 ದಿ:27.6.2009.

2. ಶ್ರೀ ಟಿ.ಬಿ. ಜಯಚಂದ್ರ, ಶಾಸಕರು, ಶಿರಾ ವಿಧಾನಸಭಾ ಕ್ಷೇತ್ರ, ಇವರ ಪತ್ರ ದಿ:2.7.2009 ಹಾಗೂ 15.6.2009.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರಗಳಲ್ಲಿ ತುಮಕೂರು ಜಿಲ್ಲೆ ಶಿರಾ, ಚಿಕ್ಕನಾಯಕನಹಳ್ಳಿ, ತುಮಕೂರು ತಾಲ್ಲೂಕಿನ ವ್ಯಾಪ್ತಿಯ ಈ ಕೆಳಕಂಡ 9 ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಅನುದಾನದ ಕೊರತೆಯಿಂದ ಸಮರ್ಪಕ ನಿರ್ವಹಣೆ ಇಲ್ಲದೇ ಈ ರಸ್ತೆಗಳು ತುಂಬಾ ಹದಗೆಟ್ಟಿದ್ದು ಸಾರ್ವಜನಿಕರು ಹಾಗೂ ರೈತರು ತೀವ್ರ ತೊಂದರೆಗೊಳಗಾಗಿದ್ದಾರೆ ಮತ್ತು ಕಬಉಖಜ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲು ಅನುಕೂಲವಾಗುವುದೆಂದು ಸ್ಥಳೀಯ ಶಾಸಕರು ಪತ್ರದೊಂದಿಗೆ ಕೆಳದರ್ಜೆಗಿಳಿಸಲು ಮನವಿ ಸಲ್ಲಿಸಿದ್ದರಿಂದ ಸದರಿ 9 ರಸ್ತೆಗಳನ್ನು ಲೋಕೋಪಯೋಗಿ ಇಲಾಖೆ ವಶಕ್ಕೆ ತೆಗೆದುಕೊಂಡಿರುವುದನ್ನು ಕೈಬಿಟ್ಟು ಕೆಳದರ್ಜೆಗಿಳಿಸಲು (Denotify) ಪ್ರಸ್ತಾವನೆಯನ್ನು ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರು ಸಲ್ಲಿಸಿರುತ್ತಾರೆ.

ಕ್ರ. ಸಂ.	ತಾಲ್ಲೂಕಿನ ಹೆಸರು	ವಿಧಾನಸಭಾ ಕ್ಷೇತ್ರದ ಹೆಸರು	ಡಿ–ನೋಟಿಫೈ ಮಾಡಲು ಪರಿಗಣಿಸಿರುವ ರಸ್ತೆಗಳ ಹೆಸರು	ರಸ್ತೆಗಳ ಉದ್ದ ಕಿ.ಮೀ. ಗಳಲ್ಲಿ			ಮೇಲ್ದರ್ಜೆ ಗೇರಿಸಿರುವ ಸರ್ಕಾರಿ ಆದೇಶ
				ಸರಪಳಿ ಪ್ರಾರಂಭ	ಸರಪಳಿ ಮುಕ್ತಾಯ	ಒಟ್ಟು ಉದ್ದ ಕಿ.ಮೀ. ಗಳಲ್ಲಿ	
1	ಶಿರಾ	ಶಿರಾ	ಎನ್.ಎಸ್. ರಸ್ತೆಯಿಂದ ತರೂರು, ಗುಂಜಪ್ಪನದೇವಸ್ಥಾನ ಮಾರ್ಗವಾಗಿ ಕೊರಟಗೆರೆ ತಾ: ಗಡಿಗೆ ಸೇರುವ ರಸ್ತೆ	0.00	4.00	4.00	ಸಂ: ಲೋಇ 468 ಸಿಆರ್‌ಎಂ 2007, ದಿ:4.10.2007
2	ಶಿರಾ	ಶಿರಾ	ಹರಿಯಜ್ಜನಹಳ್ಳಿಯಿಂದ ಗೋನಿಹಳ್ಳಿ ಮಾರ್ಗವಾಗಿ ಹಾರೋಗೆರೆಗೆ ಸೇರುವ ರಸ್ತೆ	0.00	6.00	6.00	– ಅದೇ –
3	ಶಿರಾ	ಶಿರಾ	ಎನ್.ಹೆಚ್. –04 ರಸ್ತೆಯಿಂದ ಯಲದಬಾಗಿ ಮಾರ್ಗವಾಗಿ ಬ್ಯಾಡರಹಳ್ಳಿಗೆ ಸೇರುವ ರಸ್ತೆ	10.00	15.00	5.00	– ಅದೇ –
4	ಚಿಕ್ಕನಾಯಕನಹಳ್ಳಿ	ಶಿರಾ	ಚಿಕ್ಕನಾಯಕನಹಳ್ಳಿ – ಹಾಗಲವಾಡಿ ರಸ್ತೆಯಿದ ತಿಮ್ಮನಹಳ್ಳಿ ಮಾರ್ಗ ಸಾಲ್ಕಟ್ಟೆ ಬೆಳ್ಳಾರ ರಸ್ತೆಗೆ ಸೇರುವ ರಸ್ತೆ	0.00	14.50	14.50	ಸಂ: ಲೋಇ 262 ಸಿಆರ್‌ಎಂ 2001 ದಿ:24.9.2003 (ತುಮಕೂರು ಜಿಲ್ಲೆ ಕ್ರ.ಸಂ. 12)
5	ತುಮಕೂರು	ತುಮಕೂರು ಗ್ರಾಮಾಂತರ	ಕೆ.ಕೆ. ರಸ್ತೆಯಿಂದ ಬೇಗೂರು ರಾಮನಹಳ್ಳಿ ಮಾರ್ಗ ಬೊಮ್ಮನಹಳ್ಳಿ ಕ್ರಾಸ್‌ವರೆಗೆ ಸೇರುವ ರಸ್ತೆ	0.00	20.00	20.00	ಸಂ:ಲೋಇ ಸಿಆರ್‌ಎಂ 15 2007, ಬೆಂಗಳೂರು ದಿ:11.1.2007

ಕ್ರ. ಸಂ.	ತಾಲ್ಲೂಕಿನ ಹೆಸರು	ವಿಧಾನಸಭಾ ಕ್ಷೇತ್ರದ ಹೆಸರು	ಡಿ–ನೋಟಿಫೈ ಮಾಡಲು ಪರಿಗಣಿಸಿರುವ ರಸ್ತೆಗಳ ಹೆಸರು	ರಸ್ತೆಗಳ ಉದ್ದ ಕಿ.ಮೀ. ಗಳಲ್ಲಿ			ಮೇಲ್ದರ್ಜೆ ಗೇರಿಸಿರುವ ಸರ್ಕಾರಿ ಆದೇಶ
				ಸರಪಳಿ ಪ್ರಾರಂಭ	ಸರಪಳಿ ಮುಕ್ತಾಯ	ಒಟ್ಟು ಉದ್ದ ಕಿ.ಮೀ. ಗಳಲ್ಲಿ	
6	ತುಮಕೂರು	ತುಮಕೂರು ಗ್ರಾಮಾಂತರ	ಕೆ.ಕೆ. ರಸ್ತೆಯಿಂದ ಲಕ್ಕೇನಹಳ್ಳಿ ತಾವರೇಕೆರೆ ಹೊನ್ನೇನಹಳ್ಳಿ ಮಾರ್ಗ ಕಲ್ಯಾಣಪುರ ರಸ್ತೆ	0.00	20.00	20.00	ಸಂ:ಲೋಇ ಸಿಆರ್ಎಂ 15 2007, ಬೆಂಗಳೂರು ದಿ:11.1.2007
7	ತುಮಕೂರು	ತುಮಕೂರು ಗ್ರಾಮಾಂತರ	ಹೊನ್ನುಡಿಕೆ ಹ್ಯಾಂಡ್ ಪೋಸ್ಟ್‌ನಿಂದ ನರಗನಹಳ್ಳಿ ಮಳ್ಳಕುಂಟೆ ಚಿಕ್ಕಪುರ ಮಾರ್ಗ ತೊಂಡೆಗೆರೆ ರಸ್ತೆ	0.00	22.00	22.00	– ಅದೇ –
8	ತುಮಕೂರು	ತುಮಕೂರು ಗ್ರಾಮಾಂತರ	ರಾಜ್ಯ ಹೆದ್ದಾರಿ – 33 ಯಿಂದ ಶಾಂತಪುರ ಬಿಸಲಹಳ್ಳಿ ಮಾರ್ಗ ಹೆಬ್ಬೂರು ಕಲ್ಲೂರು ರಸ್ತೆಗೆ ಸೇರುವ ರಸ್ತೆ (ಶಾಂತಪುರ ರಸ್ತೆಯಿಂದ ಹೆಬ್ಬೂರು ಕಲ್ಲೂರು ರಸ್ತೆವರೆಗೆ ಮಾತ್ರ)	4.00	6.00	2.00	– ಅದೇ –
9	ತುಮಕೂರು	ತುಮಕೂರು ಗ್ರಾಮಾಂತರ	ಹಾಲನೂರು ಗೂಳೂರು ಹರಳೂರು ರಸ್ತೆ (ಗಂಗಸಂದ್ರ ರಸ್ತೆಯಿಂದ ಗೂಳೂರು ಮತ್ತು ರಾಜ್ಯ ಹೆದ್ದಾರಿ – 94 ಯಿಂದ ಹರಳೂರು)	5.00 25.00	10.00 28.00	5.00 3.00	– ಅದೇ –

ಮೇಲ್ಕಂಡ ರಸ್ತೆಗಳ ಅಭಿವೃದ್ಧಿಗೆ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಗ್ರಾಮೀಣ ರಸ್ತೆ ಯೋಜನೆಯಡಿಯಲ್ಲಿ ಅನುದಾನ ದೊರೆಯುತ್ತಿರುವುದರಿಂದ ಸದರಿ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸುವ ಆದೇಶವನ್ನು ಹಿಂತೆಗೆದುಕೊಂಡು ಪುನಃ ಗ್ರಾಮೀಣ ರಸ್ತೆಗಳನ್ನಾಗಿ ಪರಿವರ್ತಿಸಲು ಕೋರಲಾಗಿದೆ. ಸರ್ಕಾರವು ಸದರಿ ಮನವಿಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಸಿಸಿದೆ.

ಸರ್ಕಾರದ ಆದೇಶ ಸಂ: ಲೋಇ 374 ಸಿಆರ್ಎಂ 2007, ಬೆಂಗಳೂರು, ದಿನಾಂಕ: 21ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭದ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂ: ಲೋಇ 468 ಸಿಆರ್ಎಂ 2007, ದಿನಾಂಕ:4.10.2007 ಹಾಗೂ ಸಂ:ಲೋಇ ಸಿಆರ್ಎಂ 15 2007, ಬೆಂಗಳೂರು ದಿ:11.1.2007 ರಲ್ಲಿ ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಯ ವಶಕ್ಕೆ ತೆಗೆದುಕೊಂಡಿರುವ ಈ ಕೆಳಕಂಡ 9 ರಸ್ತೆಗಳ 101.50 ಕಿ.ಮೀ. ಉದ್ದದ ರಸ್ತೆಗಳನ್ನು ದಿ: 4.10.2007 ಹಾಗೂ 11.1.2007 ರ ಸರ್ಕಾರಿ ಆದೇಶದ ವ್ಯಾಪ್ತಿಯಿಂದ ಕೈಬಿಟ್ಟು ಈ ಕೆಳಗೆ ತೋರಿಸಿರುವ 9 ಗ್ರಾಮೀಣ ರಸ್ತೆಗಳನ್ನಾಗಿ ಮುಂದುವರೆಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಶಕ್ಕೆ ನೀಡಲಾಗಿದೆ.

ಕ್ರ. ಸಂ.	ತಾಲ್ಲೂಕಿನ ಹೆಸರು	ವಿಧಾನಸಭಾ ಕ್ಷೇತ್ರದ ಹೆಸರು	ಡಿ–ನೋಟಿಫೈ ಮಾಡಲು ಪರಿಗಣಿಸಿರುವ ರಸ್ತೆಗಳ ಹೆಸರು	ರಸ್ತೆಗಳ ಉದ್ದ ಕಿ.ಮೀ. ಗಳಲ್ಲಿ			ಮೇಲ್ದರ್ಜೆ ಗೇರಿಸಿರುವ ಸರ್ಕಾರಿ ಆದೇಶ
				ಸರಪಳಿ ಪ್ರಾರಂಭ	ಸರಪಳಿ ಮುಕ್ತಾಯ	ಒಟ್ಟು ಉದ್ದ ಕಿ.ಮೀ. ಗಳಲ್ಲಿ	
1	ಶಿರಾ	ಶಿರಾ	ಎನ್.ಎಸ್. ರಸ್ತೆಯಿಂದ ತರೂರು, ಗುಂಜಪ್ಪನದೇವಸ್ಥಾನ ಮಾರ್ಗವಾಗಿ ಕೊರಟಗೆರೆ ತಾ: ಗಡಿಗೆ ಸೇರುವ ರಸ್ತೆ	0.00	4.00	4.00	ಸಂ: ಲೋಇ 468 ಸಿಆರ್ಎಂ 2007, ದಿ:4.10.2007
2	ಶಿರಾ	ಶಿರಾ	ಹರಿಯಜ್ಜನಹಳ್ಳಿಯಿಂದ ಗೋನಿಹಳ್ಳಿ ಮಾರ್ಗವಾಗಿ ಹಾರೋಗೆರೆಗೆ ಸೇರುವ ರಸ್ತೆ	0.00	6.00	6.00	– ಅದೇ –
3	ಶಿರಾ	ಶಿರಾ	ಎನ್.ಹೆಚ್. –04 ರಸ್ತೆಯಿಂದ ಯಲದಬಾಗಿ ಮಾರ್ಗವಾಗಿ ಬ್ಯಾಡರಹಳ್ಳಿಗೆ ಸೇರುವ ರಸ್ತೆ	10.00	15.00	5.00	– ಅದೇ –
4	ಚಿಕ್ಕನಾಯಕನಹಳ್ಳಿ	ಶಿರಾ	ಚಿಕ್ಕನಾಯಕನಹಳ್ಳಿ – ಹಾಗಲವಾಡಿ ರಸ್ತೆಯಿದ ತಿಮ್ಮನಹಳ್ಳಿ ಮಾರ್ಗ ಸಾಲ್ಕಟ್ಟೆ ಬೆಳ್ಳಾರ ರಸ್ತೆಗೆ ಸೇರುವ ರಸ್ತೆ	0.00	14.50	14.50	ಸಂ: ಲೋಇ 262 ಸಿಆರ್ಎಂ 2001 ದಿ:24.9.2003 (ತುಮಕೂರು ಜಿಲ್ಲೆ ಕ್ರ.ಸಂ. 12)

ಕ್ರ. ಸಂ.	ತಾಲ್ಲೂಕಿನ ಹೆಸರು	ವಿಧಾನಸಭಾ ಕ್ಷೇತ್ರದ ಹೆಸರು	ಡಿ–ನೋಟಿಫೈ ಮಾಡಲು ಪರಿಗಣಿಸಿರುವ ರಸ್ತೆಗಳ ಹೆಸರು	ರಸ್ತೆಗಳ ಉದ್ದ ಕಿ.ಮೀ. ಗಳಲ್ಲಿ			ಮೇಲ್ದರ್ಜೆ ಗೇರಿಸಿರುವ ಸರ್ಕಾರಿ ಆದೇಶ
				ಸರಪಳಿ ಪ್ರಾರಂಭ	ಸರಪಳಿ ಮುಕ್ತಾಯ	ಒಟ್ಟು ಉದ್ದ ಕಿ.ಮೀ. ಗಳಲ್ಲಿ	
5	ತುಮಕೂರು	ತುಮಕೂರು ಗ್ರಾಮಾಂತರ	ಕೆ.ಕೆ. ರಸ್ತೆಯಿಂದ ಬೇಗೂರು ರಾಮನಹಳ್ಳಿ ಮಾರ್ಗ ಬೊಮ್ಮನಹಳ್ಳಿ ಕ್ರಾಸ್‌ವರೆಗೆ ಸೇರುವ ರಸ್ತೆ	0.00	20.00	20.00	ಸಂ:ಲೋಇ ಸಿಆರ್‌ಎಂ 15 2007, ಬೆಂಗಳೂರು ದಿ:11.1.2007
6	ತುಮಕೂರು	ತುಮಕೂರು ಗ್ರಾಮಾಂತರ	ಕೆ.ಕೆ. ರಸ್ತೆಯಿಂದ ಲಕ್ಕೇನಹಳ್ಳಿ ತಾವರೇಕೆರೆ ಹೊನ್ನೇನಹಳ್ಳಿ ಮಾರ್ಗ ಕಲ್ಯಾಣಪುರ ರಸ್ತೆ	0.00	20.00	20.00	– ಅದೇ –
7	ತುಮಕೂರು	ತುಮಕೂರು ಗ್ರಾಮಾಂತರ	ಹೊನ್ನುಡಿಕೆ ಹ್ಯಾಂಡ್ ಪೋಸ್ಟ್‌ನಿಂದ ನರಗನಹಳ್ಳಿ ಮಳ್ಳಕುಂಟೆ ಚಿಕ್ಕಪುರ ಮಾರ್ಗ ತೊಂಡೆಗೆರೆ ರಸ್ತೆ	0.00	22.00	22.00	– ಅದೇ –
8	ತುಮಕೂರು	ತುಮಕೂರು ಗ್ರಾಮಾಂತರ	ರಾಜ್ಯ ಹೆದ್ದಾರಿ – 33 ಯಿಂದ ಶಾಂತಪುರ ಬಿಸಲಹಳ್ಳಿ ಮಾರ್ಗ ಹೆಬ್ಬೂರು ಕಲ್ಲೂರು ರಸ್ತೆಗೆ ಸೇರುವ ರಸ್ತೆ (ಶಾಂತಪುರ ರಸ್ತೆಯಿಂದ ಹೆಬ್ಬೂರು ಕಲ್ಲೂರು ರಸ್ತೆವರೆಗೆ ಮಾತ್ರ)	4.00	6.00	2.00	– ಅದೇ –
9	ತುಮಕೂರು	ತುಮಕೂರು ಗ್ರಾಮಾಂತರ	ಹಾಲನೂರು ಗೂಳೂರು ಹರಳೂರು ರಸ್ತೆ (ಗಂಗಸಂದ್ರ ರಸ್ತೆಯಿಂದ ಗೂಳೂರು ಮತ್ತು ರಾಜ್ಯ ಹೆದ್ದಾರಿ – 94 ಯಿಂದ ಹರಳೂರು)	5.00 25.00	10.00 28.00	5.00 3.00	– ಅದೇ –
			ಒಟ್ಟು ಕಿ.ಮೀ. ಗಳು			**101.50**	

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ದೇವಿಪ್ರಸಾದ್

ಪಿ.ಆರ್. 2064

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ).

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ತಿದ್ದೋಲೆ ಸಂ: ಸಿಆಸುಇ 42 ಸೇಲುನ್ಯಾ 2009, ಬೆಂಗಳೂರು, ದಿನಾಂಕ: 1ನೇ ಆಗಸ್ಟ್ 2009

ಅಧಿಸೂಚನೆ ಸಂ: ಸಿಆಸುಇ 42 ಸೇಲುನ್ಯಾ 2009, ದಿನಾಂಕ: 02.07.2009ರಲ್ಲಿನ ಕ್ರಮ ಸಂ: 1ರ ಕಾಲಂ 4 ರಲ್ಲಿನ ನಮೂದುಗಳನ್ನು "**Presiding Officer, Additional Industrial Tribunal, Bangalore City**" ಎಂದು ದಿನಾಂಕ:02.07.2009 ರಿಂದಲೇ ಜಾರಿಗೆ ಬರುವಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 1925

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ. (ಸೇವೆಗಳು–3)

INFRASTRUCTURE DEVELOPMENT SECRETARIAT

ADDENDUM No. IDD 115 ITS 2008, Bangalore, Dated: 11th August 2009

The words in the last para of the order portion of GOVERNMENT ORDER No. ID/115/ITS/2008, Bangalore, Dated 17.07.2009 i.e. “ The Order issues with the concurrence of FD “ shall be substituted by the following words and read as “This order falls within the preview of the proviso to sub-rule (2) of rule 17 of the Karnataka Government (Transaction of Business) Rules, 1977” and is issued accordingly” shall be substituted.

Other paras in the order portion of the G.O. remains unchanged.

By Order and in the name of the Governor of Karnataka,

N. MANJULA GEETHA

P.R. 1943

Under Secretary to Government,

Infrastructure Development Department.

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ: ರೇಷ್ಮೆ ಇಲಾಖೆಯ ವಿವಿಧ ಸಂಸ್ಥೆಗಳಲ್ಲಿ ನಿರ್ವಹಿಸುವ ಕೆಲಸ ಕಾರ್ಯಗಳಿಗೆ ಕಾರ್ಯಾಧಾರಿತ ದರ ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ವಾಕೈ 42 ರೇಯೋವಿ 2001, ದಿನಾಂಕ: 28.09.2001.

2. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು, ಹಾಗೂ ನಿರ್ದೇಶಕರು, ಇವರ ಪತ್ರ ಸಂಖ್ಯೆ:ರೇಕೃಕ್ಷೇ/ಬಿಕೋ/ಗು.ಆ.ಕೆ.ನಿ./24/07/08, ದಿನಾಂಕ: 19/12/2007.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ರೇಷ್ಮೆ ಇಲಾಖೆಯ ವಿವಿಧ ಕ್ಷೇತ್ರಗಳ ಮತ್ತು ಸಂಸ್ಥೆಗಳ ಕೆಲಸ ಕಾರ್ಯಗಳನ್ನು ಕಾರ್ಯಾಧಾರಿತ ದರಗಳ ಮೇಲೆ ನಿರ್ವಹಿಸಲು ಕಾರ್ಯಾಧಾರಿತ ದರವನ್ನು ನಿಗದಿಪಡಿಸಲಾಗಿತ್ತು. ಸದರಿ ದರಗಳು ಪ್ರಸ್ತುತ ಕ್ಷೇತ್ರ ಮಟ್ಟದಲ್ಲಿ ಚಾಲ್ತಿ ಇವರ ದರಗಳಿಗೆ ಹೋಲಿಸಿದಲ್ಲಿ ಕಡಿಮೆ ಇರುವ ಕಾರಣ ಸದರಿ ದರಗಳನ್ನು ಪರಿಷ್ಕರಿಸುವುದು ಅವಶ್ಯಕವಾದ್ದರಿಂದ ಈ ಬಗ್ಗೆ ಒಂದು ಸಮಿತಿಯನ್ನು ರಚಿಸಿ, ದರ ಪರಿಷ್ಕರಣೆಗೆ ಇಲಾಖೆಯು ಪರಿಶೀಲಿಸಿದ್ದು, ಕಾರ್ಮಿಕ ಇಲಾಖೆಯ ಅಧಿಸೂಚನೆಯಲ್ಲಿರುವ ದರಗಳನ್ನು ತಾಂತ್ರಿಕ, ಮತ್ತು ಕಠಿಣ ಪರಿಶ್ರಮದ ಕೆಲಸಗಳಿಗೆ ಕ್ಷೇತ್ರ ಮಟ್ಟದಲ್ಲಿ ಚಾಲ್ತಿಯಲ್ಲಿರುವ ದರಗಳನ್ನು ಗಣನೆಗೆ ತೆಗೆದುಕೊಂಡು ಇಲಾಖೆಯ ವಿವಿಧ ಕ್ಷೇತ್ರಗಳ ಮತ್ತು ಸಂಸ್ಥೆಗಳ ಕೆಲಸಗಳನ್ನು ಸುಗಮವಾಗಿ ಮುಂದುವರೆಸಲು ವಿವಿಧ ಕೆಲಸಕಾರ್ಯಗಳನ್ನು ಗುರುತಿಸಿ, ಗ್ರಾಹಕರ ಬೆಲೆಗಳ ಆಧಾರದಲ್ಲಿ ಜೀವನ ನಿರ್ವಹಣಾ ಭತ್ಯೆಯನ್ನು ಗಮನದಲ್ಲಿಟ್ಟುಕೊಂಡು ಕನಿಷ್ಠ ವೇತನ ಕಾಯ್ದೆಯ ಹಿನ್ನೆಲೆಯಲ್ಲಿ ವಿವಿಧ ಕೆಲಸ ಕಾರ್ಯಗಳಿಗೆ ದರಪಟ್ಟಿಯನ್ನು ತಯಾರಿಸಿ, ಪರಿಷ್ಕರಿಸಿರುವುದಾಗಿ ತಿಳಿಸಿ, ಸದರಿ ಪರಿಷ್ಕೃತ ದರಗಳ ಅನುಸೂಚಿಗೆ ಸರ್ಕಾರದ ಅನುಮೋದನೆ ನೀಡುವಂತೆ ಹಾಗೂ 1 ರಿಂದ 7 ರವರೆಗಿನ ಅನುಬಂಧಗಳನ್ನು ಲಗತ್ತಿಸಿ ಅದನ್ನು ಜಾರಿಗೊಳಿಸಲು ಅನುಮತಿ ನೀಡುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ರೇಷ್ಮೆ ಇಲಾಖೆಯ ವಿವಿಧ ಸಂಸ್ಥೆಗಳಲ್ಲಿ ನಿರ್ವಹಿಸುವ ಕೆಲಸ ಕಾರ್ಯಗಳಿಗೆ ಕಾರ್ಯಾಧಾರಿತ ದರವನ್ನು 2001ನೇ ಸಾಲಿನಲ್ಲಿ ನಿಗದಿಪಡಿಸಲಾಗಿದ್ದು, ಗ್ರಾಹಕರ ಬೆಲೆ ಸೂಚ್ಯಾಂಕದನ್ವಯ ಕಾರ್ಮಿಕ ಇಲಾಖೆಯು ಹೊರಡಿಸಿರುವ ದರಗಳನ್ವಯ ದರಪಟ್ಟಿಯನ್ನು ಇಲಾಖೆಯು ಸಿದ್ಧಪಡಿಸಿರುವುದಾಗಿಯೂ ಹಿಪ್ಪುನೇರಳೆ ಬೇಸಾಯ ಹಾಗೂ ಹುಳು ಸಾಕಾಣಿಕೆಗೆ ಸಂಬಂಧಿಸಿದ ದರಗಳು ಕಾರ್ಮಿಕ ಇಲಾಖೆಯು ಅನುಮೋದಿಸುವ ದರಗಳಿಗೆ ತಾಳೆಯಾಗುತ್ತದೆ. ರೀಲಿಂಗ್ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಾರ್ಮಿಕ ಇಲಾಖೆಯು ದರಗಳನ್ನು ನಿಗಿದಿಪಡಿಸಿಲ್ಲದ ಕಾರಣ, ರೇಷ್ಮೆ ಇಲಾಖೆಯು ದರಗಳನ್ನು ನಮೂದಿಸಿದ ಬಗ್ಗೆ ತಿಳಿಸಿದ್ದು, ಈ ವೆಚ್ಚವನ್ನು ಕಾರ್ಯಾಧಾರಿತ ದರದಲ್ಲಿ ಕೆಲಸ ನಿರ್ವಹಿಸಲು ನಗದಿಪಡಿಸಿರುವ ಅನುದಾನದ ಮಿತಿಯಲ್ಲಿಯೇಭರಿಸುವುದಾಗಿ ಇಲಾಖೆಯು ತಿಳಿಸಿರುವ ಹಿನ್ನೆಲೆಯಲ್ಲಿ ಇಲಾಖೆಯು ಪ್ರಸ್ತಾವಿಸಿರುವ ಕಾರ್ಯಾಧಾರಿತ ದರಗಳನ್ನು ಪರಿಶೀಲಿಸಿ ಅದನ್ನು ಅನುಮೋದಿಸಲು ತೀರ್ಮಾನಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ವಾಕೈ 9 ರೇಯೋವಿ 2008, ಬೆಂಗಳೂರು, ದಿನಾಂಕ: 14ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ರೇಷ್ಮೆ ಇಲಾಖೆಯ ವಿವಿಧ ಕ್ಷೇತ್ರಗಳ ಮತ್ತು ಸಂಸ್ಥೆಗಳ ಕೆಲಸ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಿಕೊಂಡು ಹೋಗಲು ವಿವಿಧ ಸಂಸ್ಥೆಗಳಲ್ಲಿ ನಿರ್ವಹಿಸುವ ಕೆಲಸ ಕಾರ್ಯಗಳಿಗೆ ಪರಿಷ್ಕೃತ ಕಾರ್ಯಾಧಾರಿತ ದರವನ್ನು ಅನುಬಂಧ 1 ರಿಂದ 7ರಲ್ಲಿರುವಂತೆ ಪರಿಷ್ಕರಿಸುವುದಕ್ಕೆ ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರಾತಿ ನೀಡಿದೆ.

1. ಅನುಬಂಧದಲ್ಲಿ ನಮೂದಿಸಿರುವ ದರಗಳು ವರ್ಷಕ್ಕೆ ಒಂದು ಬಾರಿ ಗ್ರಾಹಕರ ಬೆಲೆ ಸೂಚ್ಯಾಂಕದ ಆಧಾರವನ್ನು ಅವಲಂಭಿಸಿ ಪರಿಷ್ಕರಿಸುವಂತಹದ್ದಾಗಿರುತ್ತದೆ.
2. ಪ್ರತಿ ಸಂಸ್ಥೆಯ ಮುಖ್ಯಸ್ಥರು ವಾರ್ಷಿಕ ನಿರ್ವಹಣೆಗೆ ಆಯಾಯ ಸಂಸ್ಥೆಯ ಕೆಲಸ ಕಾರ್ಯಗಳಿಗೆ ದರಪಟ್ಟಿಯನ್ನು ಪಡೆಯಲು ಟೆಂಡರ್ ಕರೆಯುವುದು. ಕಡಿಮೆ ದರ ನೀಡುವ ಸಂಘ ಸಂಸ್ಥೆಗೆ ಕರಾರು ಒಪ್ಪಂದ ಮಾಡಿ ಕೆಲಸದ ಆದೇಶ ನೀಡುವುದು. ಪ್ರತಿ ಮಾಹೆಯಲ್ಲಿ ಮುಗಿಯುವ ಕೆಲಸಕ್ಕೆ ಹಣ ಪಾವತಿಸುವುದು. ದರ ಒಪ್ಪಂದ ಮಾಡಿಕೊಂಡ ಸಂಸ್ಥೆಯಿಂದ ಪೂರ್ಣ ಮೊಬಲಗಿನ ಶೇಕಡ 10 ರಷ್ಟನ್ನು ಭದ್ರತಾ ಠೇವಣಿಯಾಗಿ ಪಡೆಯುವುದು.
3. ಸಂಘ ಸಂಸ್ಥೆಗಳು ನೀಡುವ ದರಗಳು, ಅನುಸೂಚಿಯ ದರಗಳು ಅಥವಾ ಅದಕ್ಕಿಂತ ಕಡಿಮೆ ಇದ್ದಲ್ಲಿ, ಆಯಾ ಸಂಸ್ಥೆಯ ಪರಿಶೀಲನಾ ಅಧಿಕಾರಿಗಳು ಅಂಗೀಕರಿಸುವುದು. ನೀಡಿದ ದರಗಳು ಅನುಸೂಚಿಯ ದರಕ್ಕಿಂತ

ಶೇಕಡಾ 10 ಭಾಗಕ್ಕಿಂತ ಹೆಚ್ಚಾಗಿದ್ದಲ್ಲಿ ವಿಭಾಗೀಯ ಜಂಟಿ ನಿರ್ದೇಶಕರು, ಶೇಕಡಾ 10 ಭಾಗಕ್ಕಿಂತ ಹೆಚ್ಚಾಗಿದ್ದು, ಶೇಕಡ 20 ಕ್ಕಿಂತ ಕಡಿಮೆ ಇದ್ದಲ್ಲಿ, ಇಲಾಖೆಯ ಮುಖ್ಯಸ್ಥರಿಂದ ಅನುಮೋದನೆ ಪಡೆಯುವುದು.

4. ವಿವಿಧ ಕೆಲಸಕಾರ್ಯಗಳಿಗೆ ಪ್ರಸ್ತಾವಿತ ಕಾರ್ಯಾಧಾರಿತ ದರಪಟ್ಟಿಯು ಕಾರ್ಮಿಕ ಇಲಾಖೆಯು ಪ್ರತಿವರ್ಷ ಹೊರಡಿಸುವ ಕನಿಷ್ಠ ವೇತನ ಕಾಯ್ದೆ ಮತ್ತು ಸಿ.ಪಿ.ಐ. ಪ್ರಕಾರ ಇರತಕ್ಕದ್ದು.
5. ಕಾಯಾಧಾರಿತ ದರದಲ್ಲಿ ಕೆಲಸ ನಿರ್ವಹಿಸಲು ನಿಗದಿಪಡಿಸಿರುವ ಅನುದಾನದ ಮಿತಿಯಲ್ಲಿಯೇ ವೆಚ್ಚವನ್ನು ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 1420 ವೆಚ್ಚ – 106, ದಿನಾಂಕ 1.12.2008 ರಲ್ಲಿ ನೀಡಿರುವ ಅಭಿಪ್ರಾಯದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಭಾರತಿ ಆರ್. ನಾಯಕ್

ಪೀಠಾಧಿಕಾರಿ (ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಅನುಬಂಧ – 1

ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರಗಳ ಕೆಲಸದ ಪ್ರಮಾಣ ಮತ್ತು ದರ ವಿಶ್ಲೇಷಣೆ

ಕ್ರ. ಸಂ.	ಕೆಲಸದ ವಿವರ	ಮಾನವ ದಿನಗಳು	ಘಟಕ ಪ್ರಮಾಣ	ದರ (ರೂ.ಗಳಲ್ಲಿ)	ಷರಾ
1.	ಭೂಮಿಯನ್ನು 11/2–2 ಅಡಿ ಆಳವಾಗಿ ಉಳುಮೆ ಮಾಡುವುದು ಅ) ಟ್ರ್ಯಾಕ್ಟರ್ ಬಳಸಿ ಡಿಸ್ಕ್ ಉಳುಮೆ ಆ) ಡಿಸ್ಕ್ ಉಳುಮೆ ನಂತರ ಟ್ರ್ಯಾಕ್ಟರ್ ಬಳಸಿ ಕಲ್ಟಿವೇಟರ್ ಉಳುಮೆ	3 ಗಂಟೆಗಳು 1 1/2 ಗಂಟೆ	1 ಎಕರೆ 1 ಎಕರೆ	2100–00 1050–00	ಗಂಟೆಗೆ ರೂ. 700–00 ಗಂಟೆಗೆ ರೂ. 700–00
2.	ಎತ್ತುಗಳಿಂದ ಉಳುಮೆ ಮಾಡುವುದು	2 ದಿನ	1 ಎಕರೆ	600–00	1 ಜೊತೆ ಎತ್ತಿಗೆ ರೂ. 300–00
3.	ಹೆಂಟೆ ಒಡೆದು, ಕಳೆ ತೆಗೆದು ಸ್ವಚ್ಛಗೊಳಿಸುವುದು	10 ಮಾ.ದಿನ	1 ಎಕರೆ	1050–00	ದರ ರೂ. 105.00
4.	ಭೂಮಿಯನ್ನು ಸಮತಟ್ಟು ಮಾಡಿ ಪಾತಿಗಳನ್ನು ಮಾಡುವುದು	6 ಮಾ.ದಿನ	1 ಎಕರೆ	900–00	ದರ ರೂ. 150–00
5.	ಹಿಪ್ಪುನೇರಳೆ ಕಡ್ಡಿಗಳನ್ನು ಆಯ್ಕೆ ಮಾಡಿ 4 ಮೊಗ್ಗುಗಳು ಇರುವಂತೆ ಕತ್ತರಿಸಿ 3'x3' ಅಂತರದಲ್ಲಿ ನಾಟಿ ಮಾಡುವುದು	20 ಮಾ.ದಿನ	1 ಎಕರೆ	2100–00	4840 ಗಿಡಗಳು ದರ ರೂ. 105–00
6.	ನೀರು ಕಾಲುವೆ ನಿರ್ಮಿಸುವುದು	10 ಮಾ.ದಿನ	1 ಎಕರೆ	1050–00	ದರ ರೂ. 105–00
7.	ನೀರಾವರಿ	8 ಮಾ.ದಿನ	1 ಎಕರೆ 1 ಬೆಳೆಗೆ	840–00	ದರ ರೂ. 105–00
8.	ಕೆಮ್ಮಣ್ಣು, ಕೊಟ್ಟಿಗೆ ಗೊಬ್ಬರ ಹಾಕುವುದು (ಜೈವಿಕ ಗೊಬ್ಬರ ಬೆರಸಿ)	7 ಮಾ.ದಿನ	1 ಎಕರೆ	735–00	10 ಟನ್ ದರ ರೂ. 105–00
9.	ರಸಾಯನಿಕ ಗೊಬ್ಬರ ಹಾಕುವುದು (ಅಮೋನಿಯಂ ಸಲ್ಫೇಟ್, ಸೂಪರ್ ಫಾಸ್ಫೇಟ್ ಮತ್ತು ಮ್ಯೂರಿಯೇಟ್ ಆಫ್ ಪೊಟ್ಯಾಷ್ ಮಿಶ್ರ ಮಾಡಿ)	6. ಮಾ.ದಿನ	1 ಎಕರೆ	630–00	ದರ ರೂ. 105–00
10.	ಕಳೆ ಕೀಳುವುದು, ಬುಡ ಸಮೇತ ಕಳೆ ಗಿಡಗಳನ್ನು ಕಿತ್ತು ಹಾಕುವುದು –ಗ್ಲೈಸಲ್ ಸಿಂಪಡಿಸುವುದು	5 ಮಾ.ದಿನ 2 ಮಾ.ದಿನ	1 ಎಕರೆ 1 ಎಕರೆ	525–00 300–00	ದರ ರೂ. 105–00 ದರ ರೂ. 150–00
11.	ಕೀಟನಾಶಕ : ಬೆಳೆಸಂವರ್ಧಕ ಸಿಂಪರಣೆ	2 ಮಾ.ದಿನ.	1 ಎಕರೆ	300–00	ದರ ರೂ. 150–00

ಕ್ರ. ಸಂ.	ಕೆಲಸದ ವಿವರ	ಮಾನವ ದಿನಗಳು	ಘಟಕ ಪ್ರಮಾಣ	ದರ (ರೂ.ಗಳಲ್ಲಿ)	ಷರಾ
12.	ಕಡ್ಡಿ ಕಟಾವು ಮಾಡುವುದು ಅ) ವರ್ಷಕ್ಕೆ ಒಂದು ಬಾರಿ ಕಡ್ಡಿ ಬುಡ ಕಟಾವು ಮಾಡಿ ತೋಟದಿಂದ ಹೊರಕ್ಕೆ ಸಾಗಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಕೆಲಸಗಳು ಆ) ವರ್ಷಕ್ಕೆ ಒಂದು ಮಧ್ಯಮಾವಧಿ ಕಟಾವು ಮತ್ತು ಇತರ ಕೆಲಸಗಳು	6 ಮಾ.ದಿನ 6 ಮಾ.ದಿನ	1 ಎಕರೆ 1 ಎಕರೆ	630–00 630–00	2 ಬೆಳೆ ಆದ ಮೇಲೆ ಒಂದು ಬುಡ ಕಟಾವು ದರ ರೂ. 105–00
13.	ಬೇರು ಸಮೇತ ಜೆಸಿಬಿ ಬಳಸಿ ಕಡ್ಡಿ ಕೀಳುವುದು ಮತ್ತು ಸಂಬಂಧಪಟ್ಟ ಇತರೆ ಕೆಲಸಗಳು	8 ಗಂಟೆಗಳು	1 ಎಕರೆ	5600–00	15 ರಿಂದ 20 ವರ್ಷಕ್ಕೊಂದು ಬಾರಿ ಗಂಟೆಗೆ ರೂ. 700–00

ಭಾರತಿ ಆರ್. ನಾಯಕ್

ಪೀಠಾಧಿಕಾರಿ (ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಅನುಬಂಧ – 2

ರೇಷ್ಮೆ ಕೃಷಿ ಹುಳು ಸಾಕಾಣಿಕೆ ವಿಭಾಗದಲ್ಲಿ ಹುಳು ಸಾಕಣಿಕೆಯ ಕೆಲಸದ ಪ್ರಮಾಣ ಮತ್ತು ದರ ವಿಶ್ಲೇಷಣೆ

ಕ್ರ. ಸಂ.	ಕೆಲಸದ ವಿವರ	ಘಟಕ ಪ್ರಮಾಣ	ದರ	ಷರಾ
1.	ರೇಷ್ಮೆ ಹುಳು ಸಾಕಾಣಿಕೆ ಪಿ3, ಪಿ4 ಕೃಷಿ ಕ್ಷೇತ್ರಗಳು:– ಸಾಕಾಣಿಕಾ ಮನೆಯ ಸೋಂಕು ನಿವಾರಣೆ, ಚಾಕಿ ಮಾಡುವುದು, ಚಾಕಿ ಸಾಕಾಣಿಕೆ ಬಲಿತ ಹುಳು ಸಾಕಾಣಿಕೆ, ಪ್ರತಿ ಹಂತದಲ್ಲಿ ಜ್ವರಕ್ಕೆ ಹೋಗದಿರುವ ಹುಳುಗಳು, ಅಸಮ ಹುಳುಗಳನ್ನು ಆಯ್ದು ಸೂಕ್ಷ್ಮದರ್ಶಕ ಪರೀಕ್ಷೆಗೆ ಒಳಪಡಿಸುವುದು. ಹುಳು ಹಂತಕ್ಕೆ ಸೂಕ್ತವಾದ ಚಾಕಿ ಹುಳುಗಳಿಗೆ, ಅಂದರೆ ಮೊದಲ ಎರಡು ಹಂತಗಳಿಗೆ 3, 4, ಮತ್ತು 5 ಮೃದು ಎಲೆಗಳು, 3 ಮತ್ತು 4ನೇ ಹಂತಕ್ಕೆ ಮಧ್ಯಮ ಬಲಿತ ಸೊಪ್ಪು ಹಾಗೂ 5ನೇ ಹಂತಕ್ಕೆ ಬಲಿತ ಸೊಪ್ಪು ಬಿಡಿಸಿ ತರುವುದು, ಚಾಕಿ ಹಂತದಲ್ಲಿ ಸೊಪ್ಪು ಕತ್ತರಿಸಿ ಹಾಕುವುದು, ಪ್ರೌಢ ಹುಳುಗಳಿಗೆ ಪೂರ್ಣ ಸೊಪ್ಪು ಹಾಕುವುದು, ಹಾಸಿಗೆ ಸೋಂಕು ನಿವಾರಕಗಳನ್ನು ಸಿಂಪಡಿಸುವುದು, ಹಣ್ಣಾದ ಹುಳುಗಳನ್ನು ಆರಿಸಿ ಚಂದ್ರಿಕೆ ಮೇಲೆ ಬಿಡುವುದು, ಗೂಡು ಬಿಡಿಸುವುದು, ಹಾಸಿಗೆ ಬದಲಾಯಿಸುವುದು, ಹುಳು ಮನೆಯನ್ನು ಸ್ವಚ್ಛಗೊಳಿಸುವುದು ಹಾಗೂ ಇತರೆ ಕೆಲಸಗಳು (ಒಂದು ಮೊಟ್ಟೆಯ ಪ್ರತ್ಯೇಕ ಸಾಕಾಣಿಕೆ)	5 ಮೊಟ್ಟೆ 10 ಮೊಟ್ಟೆ 15 ಮೊಟ್ಟೆ 25 ಮೊಟ್ಟೆ 30 ಮೊಟ್ಟೆ 40 ಮೊಟ್ಟೆ 50 ಮೊಟ್ಟೆ	630 1155 1785 3045 3570 4830 5985	ಹುಳು ಸಾಕಾಣಿಕೆ 22–27 ದಿನಗಳು, ಸೋಂಕು ನಿವಾರಣೆ 2 ದಿನಗಳು, ಪ್ರತಿ ಬೆಳೆಗೆ 30 ದ್ವಿತಳಿ ಅಥವಾ 50 ಮೈಸೂರು ತಳಿ ಮೊಟ್ಟೆಗಳಿಗಿಂತ ಮೀರಬಾರದು.
2.	ರೇಷ್ಮೆ ಹುಳು ಸಾಕಾಣಿಕೆ : ಪಿ–2 : ಕೃಷಿ ಕ್ಷೇತ್ರಗಳು : ಸಾಕಾಣಿಕೆ ಮನೆಯ ಸೋಂಕು ನಿವಾರಣೆ, ಚಾಕಿ ಮಾಡುವುದು, ಚಾಕಿ ಸಾಕಾಣಿಕೆ, ಬಲಿತ ಹುಳು ಸಾಕಾಣಿಕೆ, ಪ್ರತಿ ಹಂತದಲ್ಲಿ ಜ್ವರಕ್ಕೆ ಹೋಗದಿರುವ ಹುಳುಗಳು ಅಸಮ ಹುಳುಗಳನ್ನು ಆಯ್ದು ಸೂಕ್ಷ್ಮದರ್ಶಕ ಪರೀಕ್ಷೆಗೆ ಒಳಪಡಿಸುವುದು, ಹುಳು ಹಂತಕ್ಕೆ ಸೂಕ್ತವಾದ ಚಾಕಿ ಹುಳುಗಳಿಗೆ ಅಂದರೆ ಮೊದಲ 2 ಹಂತಗಳಿಗೆ 3,4 ಮತ್ತು 5 ಮೃದು ಎಲೆಗಳು, 3 ಮತ್ತು 4ನೇ ಹಂತಕ್ಕೆ ಬಲಿತೆ ಸೊಪ್ಪು ಬಿಡಿಸಿ ತರುವುದು. ಚಾಕಿ ಹಂತದಲ್ಲಿ ಸೊಪ್ಪು ಕತ್ತರಿಸಿ	25 ಮೊಟ್ಟೆ 50 ಮೊಟ್ಟೆ 60 ಮೊಟ್ಟೆ 75 ಮೊಟ್ಟೆ	2625 5250 6300 7875	ಪ್ರತಿ ಬೆಳೆಗೆ 75 ಮೊಟ್ಟೆಗಳನ್ನು ಮೀರಬಾರದು

ಕ್ರ. ಸಂ.	ಕೆಲಸದ ವಿವರ	ಘಟಕ ಪ್ರಮಾಣ	ದರ	ಷರಾ
	ಹಾಕುವುದು. ಪ್ರೌಢ ಹುಳುಗಳಿಗೆ ಪೂರ್ಣ ಸೊಪ್ಪು ಹಾಕುವುದು, ಹಾಸಿಗೆ ಸೋಂಕು ನಿವಾರಕಗಳನ್ನು ಸಿಂಪಡಿಸಿವುದು, ಹಣ್ಣಾದ ಹುಳುಗಳನ್ನು ಆರಿಸಿ ಚಂದ್ರಿಕೆ ಮೇಲೆ ಬಿಡುವುದು, ಗೂಡು ಬಿಡಿಸುವುದು, ಹಾಸಿಗೆ ಬದಲಾಯಿಸುವುದು, ಹುಳು ಮನೆಯನ್ನು ಸ್ವಚ್ಛಗೊಳಿಸುವುದು ಹಾಗೂ ಇತರೆ ಕೆಲಸಗಳು (ಎರಡು ಮೊಟ್ಟೆಗಳ ಪ್ರತ್ಯೇಕ ಸಾಕಾಣಿಕೆ)			
3.	ರೇಷ್ಮೆ ಹುಳು ಸಾಕಾಣಿಕೆ–ಪಿ1, ಕೃಷಿ ಕ್ಷೇತ್ರಗಳು : ಸಾಕಾಣಿಕೆ ಮನೆಯ ಸೋಂಕು ನಿವಾರಣೆ, ಚಾಕಿ ಮಾಡುವುದು, ಚಾಕಿ ಚಾಕಾಣಿಕೆ, ಬಲಿತ ಹುಳು ಸಾಕಾಣಿಕೆ, ಪ್ರತಿ ಹಂತದಲ್ಲಿ ಜ್ವರಕ್ಕೆ ಹೋಗದಿರುವ ಹುಳುಗಳು, ಅಸಮ ಹುಳುಗಳನ್ನು ಆಯ್ದು ಸೂಕ್ಷ್ಮದರ್ಶಕ ಪರೀಕ್ಷೆಗೆ ಒಳಪಡಿಸುವುದು, ಹುಳು ಹಂತಕ್ಕೆ ಸೂಕ್ತವಾದ ಚಾಕಿ ಹುಳುಗಳಿಗೆ ಅಂದರೆ ಮೊದಲ 2 ಹಂತಗಳಿಗೆ 3, 4, ಮತ್ತು 5 ಮೃದು ಎಲೆಗಳು, 3 ಮತ್ತು 4ನೇ ಹಂತಕ್ಕೆ ಮಧ್ಯಮ ಬಲಿತ ಸೊಪ್ಪು ಹಾಗೂ 5ನೇ ಹಂತಕ್ಕೆ ಬಲಿತ ಸೊಪ್ಪು ಬಿಡಿಸಿ ತುರುವುದು. ಚಾಕಿ ಹಂತದಲ್ಲಿ ಸೊಪ್ಪು ಕತ್ತರಿಸಿ ಹಾಕುವುದು, ಪ್ರೌಢ ಹುಳುಗಳಿಗೆ ಪೂರ್ಣ ಸೊಪ್ಪು ಹಾಕುವುದು. ಹಾಸಿಗೆ ಸೋಂಕು ನಿವಾರಕಗಳನ್ನು ಸಿಂಪಡಿಸುವುದು ಹಣ್ಣಾದ ಹುಳುಗಳನ್ನು ಆರಿಸಿ ಚಂದ್ರಿಕೆ ಮೇಲೆ ಬಿಡುವುದು, ಗೂಡು ಬಿಡಿಸುವುದು, ಹಾಸಿಗೆ ಬದಲಾಯಿಸುವುದು, ಹುಳುಮನೆಯನ್ನು ಸ್ವಚ್ಛಗೊಳಿಸುವುದು ಹಾಗೂ ಇತರೆ ಕೆಲಸಗಳು (ಸಾಮೂಹಿಕ ಸಾಕಾಣಿಕೆ)	25 ಮೊಟ್ಟೆ 50 ಮೊಟ್ಟೆ 60 ಮೊಟ್ಟೆ 75 ಮೊಟ್ಟೆ 80 ಮೊಟ್ಟೆ 100 ಮೊಟ್ಟೆ	2625 5250 6300 7875 8400 10500	ಪ್ರತಿ ಬೆಳೆಗೆ 100 ರೇಷ್ಮೆ ಮೊಟ್ಟೆಗಳನ್ನು ಮೀರಬಾರದು.

ಭಾರತಿ ಆರ್. ನಾಯಕ್

ಪೀಠಾಧಿಕಾರಿ (ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಅನುಬಂಧ – 3

ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಗಳಲ್ಲಿ ಕೆಲಸ ಪ್ರಮಾಣ ಮತ್ತು ದರ ವಿಶ್ಲೇಷಣೆಯ ವಿವರಗಳು

ಕ್ರ. ಸಂ.	ಕೆಲಸದ ವಿವರ	ಘಟಕ ಪ್ರಮಾಣ	ದರ (ರೂ.)	ಷರಾ (ರೂ)
I	**ಬಿತ್ತನೆ ಕೊಠಡಿಗಳಲ್ಲಿ ಮೊಟ್ಟೆ ತಯಾರಿಕೆ:**			
	1. ಸೋಂಕು ನಿವಾರಣೆ : ಕಟ್ಟಡಗಳಿಗೆ ಸೋಂಕು ನಿವಾರಣೆಗೆ ಬೇಕಾದ ದ್ರಾವಕ ತಯಾರಿಸುವುದು. ಕಟ್ಟಡ ಸ್ವಚ್ಛಗೊಳಿಸುವುದು, ಹಾಗೂ ದ್ರಾವಕ ಸಿಂಪಡಿಸುವುದು, ಸಲಕರಣೆಗಳಾದ ತಟ್ಟೆ ಹಾಗೂ ಸೆಲ್ಯೂಲ್ಸ್ (ಕುಪ್ಪಿ)ಗಳ ಸ್ವಚ್ಛಗೊಳಿಸುವಿಕೆ ಹಾಗೂ ಸೋಂಕು ನಿವಾರಣೆ;	1000 ಚ ಅ.ಗಳ ವಿಸ್ತೀರ್ಣ 35 ತಟ್ಟೆ 2500 ಕುಪ್ಪಿ	150 150	300–00 300–00
	2. ಬಿತ್ತನೆ ಗೂಡುಗಳನ್ನು ಪ್ರತ್ಯೇಕಿಸುವಿಕೆ : ಜೆಲ್ಲಿ, ಕರಗಿದ ಹಾಗೂ ಇತರೆ ಕಳಪೆ ಗೂಡುಗಳನ್ನು ಪ್ರತ್ಯೇಕಿಸಿ, ಏಕ ಪದರದಲ್ಲಿ ಹರಡುವುದು (ಒಂದು ತಟ್ಟೆಯಲ್ಲಿ 1500 ಮೈಸೂರು ತಳಿ ಅಥವಾ 1000 ದ್ವತಳಿ ಬಿತ್ತನೆ ಗೂಡು) ಹಾಗೂ ಲಿಂಗ ವಿಭಜನೆ (ದ್ವಿತಳಿ ಮೊಟ್ಟೆ ತಯಾರಿಕೆಯಲ್ಲಿ ಗೂಡುಗಳ ತುದಿಯನ್ನು ಕತ್ತರಿಸಿ ಚಿಟ್ಟೆ ಹೊರಬರಲು ಅನುಕೂಲ ಮಾಡುವುದು) 3 ಚಿಟ್ಟೆ ಆರಿಸುವುದು, ಪೇರಿಂಗ್, ಡಿಪೇರಿಂಗ್, ಮೊಟ್ಟೆ ಹಾಳೆಗಳ ಮೇಲೆ ಸೆಲ್ಯೂಲ್ಸ್‌ಗಳನ್ನು ಜೋಡಿಸುವುದು ಹಾಗೂ ಸಂಬಂಧಿಸಿದ ಕೆಲಸಗಳು.	8000 ಮೈಸೂರು ತಳಿ ಗೂಡುಗಳು 5000 ದ್ವಿತಳಿ ಗೂಡುಗಳಿಗೆ 3500 ಜೊತೆಗಳು	150 150	300–00 450–00

ಕ್ರ. ಸಂ.	ಕೆಲಸದ ವಿವರ	ಘಟಕ ಪ್ರಮಾಣ	ದರ (ರೂ.)	ಷರಾ (ರೂ)
II	**ಪ್ಯೂಪ ಪರೀಕ್ಷೆ (ವಿಜ್ಞಾನ ಜ್ಞಾನವುಳ್ಳವರಾಗಿರಬೇಕು) :** ಕಳಪೆ ಗೂಡು ಹಾಗೂ ಉತ್ತಮ ಗೂಡುಗಳನ್ನು ಆರಿಸಿ ಗೂಡುಗಳನ್ನು ಕತ್ತರಿಸಿ ಪ್ಯೂಪ ಹೊರತೆಗೆದು 10 ರಿಂದ 20 ಪ್ಯೂಪಾಗಳನ್ನು ಕುಪ್ಪೆಯಲ್ಲಿ ಅರೆದು ರಸವನ್ನು 1 ಗ್ಲಾಸ್ ಸ್ಲೈಡ್ ಮೇಲೆ 5 ಸ್ಮಿಯರ್‌ಗಳನ್ನು ತೆಗೆದು ಕವರ್ ಸ್ಲಿಪ್ ನಿಂದ ಮುಚ್ಚಿ ಸೂಕ್ಷ್ಮದರ್ಶಕದಲ್ಲಿ ಪರೀಕ್ಷೆ ಮಾಡುವುದು, ಸಲಕರಣೆ ಮತ್ತು ಅರೆದ ವಸ್ತುಗಳನ್ನು ಸ್ವಚ್ಛ ಮಾಡುವುದು.	200 ಸ್ಮೀಯರ್ಸ್	150	300–00
III	**ಚಿಟ್ಟೆ ಪರೀಕ್ಷೆ :** 1. ಮಿಶ್ರತಳಿ ಮೊಟ್ಟೆ ತಯಾರಿಕೆಗೆ (ಶೇ 20 ರಷ್ಟು ಸಾಮೂಹಿಕ ಚಿಟ್ಟೆ ಪರೀಕ್ಷೆ) ಮೊಟ್ಟೆ ಇಟ್ಟ ನಂತರ ತಾಯಿ ಚಿಟ್ಟೆಗಳ ಮಾದರಿಯನ್ನು ಆಯ್ಕೆ ಮಾಡಿ ಕುಪ್ಪಿಯಲ್ಲಿ ಅಥವಾ ಮಿಕ್ಸಿಯಲ್ಲಿ ಪೊಟ್ಯಾಷಿಯಂ ಕಾರ್ಬೋನೇಟ್ ರಾಸಾಯನಿಕ ಸೇರಿಸಿ ಅರೆಯುವುದು, ಅರೆದ ನಂತರ ಸೋಸಿ ರಸವನ್ನು 1 ಗ್ಲಾಸ್ ಸ್ಲೈಡ್ ಮೇಲೆ 5 ಸ್ಮೀಯರ್‌ಗಳನ್ನು ತೆಗೆದು ಕವರ್ ಸ್ಲಿಪ್‌ನಿಂದ ಮುಚ್ಚಿ ಸೂಕ್ಷ್ಮದರ್ಶಕದಲ್ಲಿ ಪರೀಕ್ಷೆ ಮಾಡುವುದು, ಸಲಕರಣೆ ಮತ್ತು ಅರೆದ ವಸ್ತುಗಳನ್ನು ಸ್ವಚ್ಛ ಮಾಡುವುದು.	200 ಸ್ಮೀಯರ್ಸ್	150	300–00
	2) ಶುದ್ಧ ತಳಿ ಮೊಟ್ಟೆ ತಯಾರಿಕೆಗೆ : (ಶೇ 100 ಪ್ರತ್ಯೇಕ ಚಿಟ್ಟೆ ಪರೀಕ್ಷೆ) ಪ್ರತಿ ತಾಯಿ ಚಿಟ್ಟೆಯನ್ನು ಪ್ರತ್ಯೇಕವಾಗಿ ಪೊಟ್ಯಾಷಿಯಂ ಕಾರ್ಬೋನೇಟ್ ರಾಸಾಯನಿಕ ಸೇರಿಸಿ ಅರೆಯುವುದು. ಅರೆದ ನಂತರ ರಸವನ್ನು 1 ಗ್ಲಾಸ್ ಸ್ಲೈಡ್ ಮೇಲೆ 5 ಸ್ಮಿಯರ್ಸ್‌ಗಳನ್ನು ತೆಗೆದು ಕವರ್ ಸ್ಲಿಪ್‌ನಿಂದ ಮುಚ್ಚಿ ಸೂಕ್ಷ್ಮದರ್ಶಕದಲ್ಲಿ ಪರೀಕ್ಷೆ ಮಾಡುವುದು. ಅ) ಮೊಟ್ಟೆ ಹಾಳೆಗಳ ಸೋಂಕು ನಿವಾರಣೆ ಆ) ಬಿಡಿ ಮೊಟ್ಟೆಗಳ ಸೋಂಕು ನಿವಾರಣೆ	200 ಸ್ಮಿಯರ್ಸ್	150–00	300–00
IV	ಆಮ್ಲೋಪಚಾರ – ಮೊಟ್ಟೆ ಹಾಳೆಗೆ ಹಾಗೂ ಚಾಕಿ ಮೊಟ್ಟೆಗಳಿಗೆ, ಮೊಟ್ಟೆಗಳನ್ನು ಆಮ್ಲಾಂಶ ಹೋಗುವ ತನಕ ಹರಿಯುವ ನೀರಿನಲ್ಲಿ ತೊಳೆದು ನೆರಳಿನಲ್ಲಿ ಒಣಗಿಸಿ ಶೇಖರಿಸುವುದು.	400 ಹಾಳೆಗಳು ಅಥವಾ 2 ಕೆ.ಜಿ. ಬಿಡಿ ಮೊಟ್ಟೆಗಳು	150–00	300–00
V	**ಶೈತ್ಯಾಗಾರ ನಿರ್ವಹಣೆ :** 1) ಎಲೆಕ್ಟ್ರಿಕಲ್ ಅಥವಾ ಮೆಕ್ಯಾನಿಕಲ್ ಅಥವಾ ರೆಫ್ರಿಜಿರೇಷನ್‌ನಲ್ಲಿ ಡಿಪ್ಲೊಮೊ ಪಡೆದಿರಬೇಕು. ಶೈತ್ಯಾಗಾರದ ಮತ್ತು ಸಿಬ್ಬಂದಿ ವರ್ಗದ ಮೇಲ್ವಿಚಾರಣೆ	–	200–00	200–00
	2) ಎಲೆಕ್ಟ್ರಿಕಲ್ ಅಥವಾ ಮೆಕ್ಯಾನಿಕಲ್ ಐ.ಟಿ.ಐ. ಸರ್ಟಿಫಿಕೇಟ್ ಹೊಂದಿರಬೇಕು. ಶೈತ್ಯಾಗಾರದ ಸಾಮಾನ್ಯ ನಿರ್ವಹಣೆ ಮತ್ತು ದಿನನಿತ್ಯ ಯಂತ್ರಗಳನ್ನು ಶುಚಿಗೊಳಿಸುವುದು.	–	150–00	150–00
	3) ವೈರ್‌ಮೆನ್ ಸರ್ಟಿಫಿಕೇಟ್ ಹೊಂದಿರಬೇಕು. ಸ್ವಿಚ್‌ಗೇರ್ ರೂಮಿನ ಮೇಲ್ವಿಚಾರಣೆ ಮತ್ತು 100 ಕೆ.ವಿ.ಎ . ಟ್ರಾನ್ಸ್‌ಫಾರಂನ ಸಂಪೂರ್ಣ ನಿರ್ವಹಣೆ.	–	150–00	150–00
	4) ಶೈತ್ಯಾಗಾರದ ಸಂಪೂರ್ಣ ಶುಚಿತ್ವ ಮಾಡುವುದು ಹಾಗೂ ಇತರೆ ಕೆಲಸಗಳು	–	150–00	150–00

ಭಾರತಿ ಆರ್. ನಾಯಕ್

ಪೀಠಾಧಿಕಾರಿ (ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಅನುಬಂಧ – 4

ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ನಿರ್ವಹಿಸುವ ಕೆಲಸದ ಪ್ರಮಾಣ ಮತ್ತು ದರ ವಿಶ್ಲೇಷಣೆಯ ವಿವರ

ಕ್ರ. ಸಂ.	ಕೆಲಸದ ವಿವರ	ಘಟಕ ಪ್ರಮಾಣ	ದರ	ಷರಾ
1.	ಮಾರುಕಟ್ಟೆಯ ಕೆಲಸ ಹರಾಜು ಚೀಟಿ ಬರೆಯುವುದು, ಡಿ.ಟಿ.ಆರ್. ನಿರ್ವಹಣೆ, ರೇಷ್ಮೆ ಗೂಡು ಗುಣಮಟ್ಟ ಪರೀಕ್ಷಿಸುವುದು, ಮಾರುಕಟ್ಟೆ ಸಹಾಯಕರಾಗಿ ಕೆಲಸ ನಿರ್ವಹಿಸುವುದು.	1 ದಿನಕ್ಕೆ	150–00	--
2.	ಮಾರುಕಟ್ಟೆ ಶುಚಿತ್ವ (ಮೊದಲನೆ ದರ್ಜೆ ಘಟಕಕ್ಕೆ)	1 ದಿನಕ್ಕೆ	105–00	ಪ್ರತಿ ಘಟಕಕ್ಕೆ
3.	ಮಾರುಕಟ್ಟೆ ಶುಚುತ್ವಕ್ಕೆ ಸಂಬಂಧಪಟ್ಟ ಎಲ್ಲಾ ಕೆಲಸ ಕಾರ್ಯಗಳಿಗೆ – ಸಾಮಾನ್ಯ ದರ್ಜೆ	1 ದಿನಕ್ಕೆ	105–00	ಪ್ರತಿ ಘಟಕಕ್ಕೆ
4.	ಶೌಚಾಲಯ ಶುಚಿತ್ವ	1 ದಿನಕ್ಕೆ	105–00	ಪ್ರತಿ ಘಟಕಕ್ಕೆ

ಭಾರತಿ ಆರ್. ನಾಯಕ್
ಪೀಠಾಧಿಕಾರಿ (ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಅನುಬಂಧ – 5

ರೀಲಿಂಗ್ ತಾಂತ್ರಿಕ ಸೇವಾ ಕೇಂದ್ರಗಳ ಕೆಲಸದ ಪ್ರಮಾಣ ಮತ್ತು ದರ ವಿಶ್ಲೇಷಣೆಯ ವಿವರ

ಕ್ರ. ಸಂ.	ಕೆಲಸದ ವಿವರ	ಘಟಕ ಪ್ರಮಾಣ	ದರ	ಷರಾ
1.	ರೀಲಿಂಗ್ ತಾಂತ್ರಿಕ ಸೇವಾ ಕೇಂದ್ರದ ಕೆಲಸದ ವಿವರ : (1) ವೈಂಡಿಂಗ್, ರೀವೈಂಡಿಂಗ್, ಕಿಲ್ ಚಾ ಮಾಡುವುದು, ಹಾಗೂ ಇತರೆ ಕೆಲಸಗಳು	ಒಂದು ಮಾದರಿಗೆ ರೂ. 30–00 ರಂತೆ 5 ಮಾದರಿಗಳು	150–00	

ಭಾರತಿ ಆರ್. ನಾಯಕ್
ಪೀಠಾಧಿಕಾರಿ (ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಅನುಬಂಧ – 6

ನೂಲು ಬಿಚ್ಚಾಣಿಕೆ ಕಿರು ಘಟಕಗಳು, ತರಬೇತಿ ಮತ್ತು ರೇಷ್ಮೆ ನೂಲು ಉತ್ಪಾದನಾ ಕೇಂದ್ರಗಳು; ನೂಲು ಬಿಚ್ಚಾಣಿಕೆ ಸಂಕೀರ್ಣಗಳಲ್ಲಿ ಕೆಲಸದ ಪ್ರಮಾಣ ಹಾಗೂ ದರ ವಿಶ್ಲೇಷಣೆ.

ಕ್ರ. ಸಂ.	ಕೆಲಸದ ವಿವರ	ಘಟಕ ಪ್ರಮಾಣ	ದರ	ಷರಾ
1.	ನೂಲು ಬಿಚ್ಚಾಣಿಕೆಯ ಕೆಲಸ :	1 ಕೆ.ಜಿ. ಕಚ್ಚಾ ರೇಷ್ಮೆ ಉತ್ಪಾದಿಸಲು	105–00	ಪ್ರತಿ ಮಾನವ ದಿನಕ್ಕೆ ರೂ. 105–00
	1) ಗೂಡು ವಿಂಗಡಿಸುವುದು		105–00	
	2) ಗೂಡು ಬೇಯಿಸುವುದು		315–00	ಪ್ರತಿ ಮಾನವ ದಿನಕ್ಕೆ ರೂ. 105–00
	3) ರೀಲಿಂಗ್, ರೀ–ರೀಲಿಂಗ್		105–00	
	4) ರೇಷ್ಮೆ ಸ್ವಚ್ಛ ಮಾಡುವುದು, ರೇಷ್ಮೆ ನಟ್ಟಿಯನ್ನು ಸ್ವಚ್ಛ ಮಾಡುವುದು, (ಲೇಸಿಂಗ್ ಮತ್ತು ಪ್ಯಾಕಿಂಗ್ ಸೇರಿ)			
2.	ಬೆಲೆ ನಿರ್ವಹಣೆ ಹಾಗೂ ಇತರೆ ಕೆಲಸಗಳು		105–00	

ಭಾರತಿ ಆರ್. ನಾಯಕ್
ಪೀಠಾಧಿಕಾರಿ (ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಅನುಬಂಧ – 7

ರೇಷ್ಮೆ ಇಲಾಖೆಯ ತಾಂತ್ರಿಕ ಕೆಲಸ ಕಾರ್ಯಗಳ ನಿರ್ವಹಣೆಗೆ ಬೇಕಾದ ಕೆಲಸದ ಪ್ರಮಾಣದ ಮತ್ತು ದರ ವಿಶ್ಲೇಷಣೆಯ ವಿವರ

ಕ್ರ. ಸಂ.	ಕೆಲಸದ ವಿವರ	ಘಟಕ ಪ್ರಮಾಣ	ದರ (ರೂ)	ಷರಾ
1.	ವಾಹನ ಚಾಲನೆ	1 ದಿನಕ್ಕೆ	150–00	
2.	ಕಛೇರಿ ಕೆಲಸ : ಬೆರಳಚ್ಚು	1 ದಿನಕ್ಕೆ	150–00	
3.	ಕಾವಲು ಕೆಲಸ	1 ದಿನಕ್ಕೆ	100–00	

ಕ್ರ. ಸಂ.	ಕೆಲಸದ ವಿವರ	ಘಟಕ ಪ್ರಮಾಣ	ದರ (ರೂ)	ಷರಾ
4.	ಸೋಂಕು ನಿವಾರಣಾ ಕಾರ್ಯಕ್ಕಾಗಿ ಖಾಸಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ನೇಮಿಸುವುದು, (ವಾಹನ ಇಂಧನ, ಮತ್ತು ಸಿಬ್ಬಂದಿ ವೆಚ್ಚ ಸೇರಿ)	1 ದಿನಕ್ಕೆ (40 ಮನೆಗಳು)	1500–00	
5.	ವಲಯಾಧಿಕಾರಿಗಳು ಅಥವಾ ಇತರೆ ಅಧಿಕಾರಿಗಳು ರೇಷ್ಮೆ ಬೆಳೆಗಾರರಿಂದ ಪಡೆದು ತಂದ ವಿವಿಧ ಹಂತಗಳಿಗೆ ಹುಳುಗಳನ್ನು ಸೂಕ್ಷ್ಮದರ್ಶಕ ಪರೀಕ್ಷೆಗೆ ಒಳಪಡಿಸುವುದು. ಪ್ರತಿ ಬೆಳೆಗಾರನ ಹುಳುಗಳ ಐದು ಮಾದರಿಗಳನ್ನು (ಸ್ಮೀಯರ್ಸ್) ತಯಾರಿಸಿ ಪರೀಕ್ಷಿಸುವುದು.	20 ಬೆಳೆಗಳ ಹುಳುಗಳು	150–00	

ಭಾರತಿ ಆರ್. ನಾಯಕ್

ಪಿ.ಆರ್. 1957 ಪೀಠಾಧಿಕಾರಿ (ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಸಿಆಸುಇ 193 ಸಅಸೇ 2009, ಬೆಂಗಳೂರು, ದಿನಾಂಕ: 10ನೇ ಆಗಸ್ಟ್ 2009

ಶ್ರೀ ಟಿ.ಆರ್. ಜಯರಾಮೇಗೌಡ, ಹಿಂದಿನ ಮುಖ್ಯ ಮಂತ್ರಿಯವರ ಸಂಸದೀಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇವರ ಗುತ್ತಿಗೆ ಆಧಾರದ ನೇಮಕಾತಿಯ ಸೇವಾ ಷರತ್ತು ಮತ್ತು ನಿಬಂಧನೆಗಳನ್ನು ನಿಗದಿಪಡಿಸಿ ಹೊರಡಿಸಲಾದ ಆದೇಶ ಸಂ. ಸಿಆಸುಇ 101 ಸಅಸೇ 2007, ದಿನಾಂಕ: 10.07.2007ರ ಆದೇಶದ ಅನುಬಂಧದ ಕಂಡಿಕೆ 6ನ್ನು ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಭವಿಷ್ಯ ನಿಧಿ ವಂತಿಗೆ: ಶ್ರೀ ಟಿ.ಆರ್. ಜಯರಾಮೇಗೌಡ ಇವರಿಗೆ ಮೂಲ ವೇತನ ಮತ್ತು ತುಟ್ಟಿ ಭತ್ಯೆಯ ಶೇ. 12 ರಷ್ಟು ಭವಿಷ್ಯ ನಿಧಿ ವಂತಿಗೆ ಮತ್ತು ಶೇ. 12 ರಷ್ಟು ಸರ್ಕಾರದ ವತಿಯಿಂದ ಪಾವತಿಸುವುದು ಮತ್ತು ಇವರ ಮೂಲ ವೇತನದ ಶೇ. 12 ಹಾಗೂ ತುಟ್ಟಿ ಭತ್ಯೆ ಶೇ. 12 ರಷ್ಟನ್ನು ಭವಿಷ್ಯ ನಿಧಿ ವಂತಿಗೆಯಾಗಿ ಪ್ರತ ತಿಂಗಳಿನ ಸಂಬಳದಲ್ಲಿ ಕಟಾಯಿಸಿ ಮೈಸೂರು ಪೇಪರ್ ಮಿಲ್ಸ್ ಉದ್ಯೋಗಿಗಳ ಭವಿಷ್ಯ ನಿಧಿಗೆ ಪಾವತಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 1948 ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

EDUCATION SECRETARIAT

Sub: Starting of new Government Polytechnic College at Chitapur, Gulbarga District.

Ref: Note No. MUMAKA 1719/2008 dated 07.07.2009

During the visit of the Hon'ble Chief Minister on 05.06.2009 to Chitapur Town in Gulbarga District, the local citizens by explaining the need to establish a Government Polytechnic in Chitapur requested the Hon'ble Chief Minister to secure approval of the Government for establishment of a new Government Polytechnic to be started from the academic year 2009-10.

The matter has been examined in detail and in consultation with the Director of Technical Education, besides considering the need and the request of the people of Chitapur and in the interest of student community, the Government is pleased to pass the following :

Order No. ED 191 YOYOKA 2009, Bangalore, Dated: 17th July 2009

Approval is hereby accorded for starting of a new Government Polytechnic College in Chitapur, Gulbarga District, from the academic year 2009-10.

2. In the new Polytechnic, approval is also accorded for commencement of the following courses with the intake as under :

	Course	Intake
1.	Electronics and Communication	60
2.	Mechanical Engineering	60
3.	Civil Engineering	60
4.	Computer Science	60

3. The terms and conditions for commencement of Polytechnic Colleges and the required staff, furniture, expenditure debitable etc., would be as in the Government Order of even number dated 29.06.2009.

By Order and in the name of the Governor of Karnataka,

P.R. 1949

S.M. NANDA KUMAR

Under Secretary to Government, Education Department (Planning)

ಒಳಾಡಳಿತ ಸಚಿವಾಲಯ

ವಿಷಯ: ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಬಿ.ಎಸ್.ಸಿ. (ಕೃಷಿ) ವಿದ್ಯಾರ್ಥಿಯಾದ ಶ್ರೀ ಜಿ.ಕೆ. ರಮೇಶ್ ರವರು ದಿನಾಂಕ: 1.7.09 ರಂದು ಆತ್ಮಹತ್ಯೆ ಮಾಡಿರುವ ಪ್ರಕರಣವನ್ನು ಸಿ.ಐ.ಡಿ. ತನಿಖೆಗೆ ವಹಿಸುವ ಬಗ್ಗೆ.

ಓದಲಾಗಿದೆ: ಟಿಪ್ಪಣಿ ಸಂ. ಮುಮಕಾ/2480/2480/2009 ದಿನಾಂಕ: 28.07.2009.

ಪ್ರಸ್ತಾವನೆ:

ಮೇಲೆ ಓದಲಾದ ಟಿಪ್ಪಣಿಯಲ್ಲಿ ದಿನಾಂಕ: 1.7.2009 ರಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿರುವ ವಿದ್ಯಾರ್ಥಿ ನಿಲಯದಲ್ಲಿ ಬಿ.ಎಸ್.ಸಿ. (ಕೃಷಿ) 3ನೇ ಸೆಮಿಸ್ಟರಿನಲ್ಲಿ ಓದುತ್ತಿದ್ದ ವಿದ್ಯಾರ್ಥಿಯಾದ ಶ್ರೀ ಜಿ.ಕೆ. ರಮೇಶ್ ರವರು ಮರಣ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಮೃತರ ತಂದೆಯವರಾದ ಶ್ರೀ ಜಮದಾಡಪ್ಪ ಇವರು ದೂರು ನೀಡಿದ್ದು, ತಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ. ಈ ವಿಷಯದಲ್ಲಿ ದಲಿತ ಸಂಘರ್ಷ ಸಮಿತಿ (ಸಂಯೋಜಕ) ರಾಜ್ಯ ಸಮಿತಿ, ಬೆಂಗಳೂರು, ಇವರು ಸಹ ಮನವಿಯನ್ನು ಸಲ್ಲಿಸಿ ಈ ಆತ್ಮಹತ್ಯೆ ಪ್ರಕರಣವನ್ನು ಸಿ.ಐ.ಡಿ. ತನಿಖೆ ಆದೇಶಿಸಲು ಕೋರಿರುತ್ತಾರೆ.

ಆದುದರಿಂದ ಈ ಆದೇಶ.

ಆದೇಶ ಸಂ. ಒಇ 98, ಸಿಐಡಿ ಬೆಂಗಳೂರು, ದಿನಾಂಕ: 14ನೇ ಆಗಸ್ಟ್ 2009

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ದಿನಾಂಕ: 1.7.2009 ರಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿರುವ ವಿದ್ಯಾರ್ಥಿ ನಿಲಯದಲ್ಲಿ ಬಿ.ಎಸ್.ಸಿ. (ಕೃಷಿ) 3ನೇ ಸೆಮಿಸ್ಟರಿನಲ್ಲಿ ಓದುತ್ತಿದ್ದ ವಿದ್ಯಾರ್ಥಿಯಾದ ಶ್ರೀ ಜಿ.ಕೆ. ರಮೇಶ್ ರವರು ಮರಣ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣದ ಸತ್ಯಾಸತ್ಯತೆಗಳನ್ನು ತಿಳಿಯುವ ಸಲುವಾಗಿ ಈ ಪ್ರಕರಣವನ್ನು ಸಿ.ಐ.ಡಿ. ತನಿಖೆಗೆ ಒಳಪಡಿಸಲು ಆದೇಶಿಸಿದೆ.

ಸಿ.ಐ.ಡಿ. ತನಿಖೆಗೆ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳು ಸಂಪೂರ್ಣ ಸಹಕಾರ ನೀಡುವುದು.

ಸಿ.ಐ.ಡಿ. ತಂಡವು ಈ ಪ್ರಕರಣದ ಬಗ್ಗೆ ತನಿಖೆ ನಡೆಸಿ ಆದಷ್ಟು ಶೀಘ್ರವಾಗಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1961

ಪಿ. ಶಿವರಾಮ ಭಟ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಅಪರಾಧಗಳು)

FOREST, ECOLOGY AND ENVIRONMENT SECRETARIAT

Sub: Reconstitution of Advisory Committee under Bio-Medical Waste (Management and Handling) Rules, 1998 – Orders.

Read:
1. Govt. Order No. FEE 126 ENV 98, Dt. 23.04.1999
2. Govt. Order No. FEE 126 ENV 98, Dt. 23.02-2000
3. Govt. Order No. FEE 126 ENV 98, Dt. 25.08.2000
4. Govt. Order No. FEE 126 ENV 98 P-3) Dt. 25.07.2002
5. Govt. Order No. FEE 126 ENV 98 (P-3) Dt. 02.11.2007
6. Proceedings of the Advisory Committee held on 20.02.2009

Preamble:

The Ministry of Environment and Forests, Govt. of India have issued the Bio-Medical Waste (Management and Handling) Rules, 1998 in Notification No. S.O. 630 – (E), dt. 20-07-1998. In terms of Rule 9 of the said Rules, the State Government constituted, inter-alia, an Advisory Committee in Govt. order read at (1) above consisting of members as indicated therein. Non-official members have been included in the said Advisory Committee in Govt. Order read at (2) above. The task of enforcement of the

provisions of the Bio-Medical Waste (Management and Handling) Rules, 1998 has been assigned to the Karnataka State Pollution Control Board in Govt. Order read at (3) above. This order also cancelled the prescribed Authority constituted in G.O. read at (1) above. In Govt. order read at (4) above, the Advisory Committee was reconstituted. By way of slight modification of the earlier orders Government again reconstituted the Advisory Committee in the above Govt. order read at (5) above. It has been decided in the advisory committee meeting held on 20-02-2009 to include the Chairman, Karnataka Veterinary Association also as a Member of Advisory Committee as all the Private Hospitals/Clinics and practicing Veterinarians would be represented. After careful examination, it has been deicded to consider the recommendation of the Adivsory committee, to include the Chairman, Karnataka Veterinary Association and the Chairman, Bangalore Water Supply and Sewage Board, as a members of the Advisory Committee under Bio-Medical Waste (Management and Handling) Rules, 1998 hence this order.

Government Order No. FEE 22 EPC 2009, Bangalore, Dated: 17th August 2009

In view of the circumstances explained in the preamble the Government are pleased to include the Chairman, Karnataka Veterinary Association and the Chairman, Bangalore Water Supply and Sewage Board, as members of the Advisory Committee constituted under Rule (9) of Bio-Medical Waste (Management and Handling) Rules, 1998.

In addition to the members listed in the Government Order issued vide Order No. FEE 126 ENV 98 (P-3) dated 02.11.2007, subject to the terms and conditions spelt out in the said order.

By Order and in the name of Governor of Karnataka,

N.R. JAGANMATHA

P.R. 1964

Under Secretary to Government,

Forest, Ecology and Environment Department.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಗ್ರಾಅಪ 62 ಜಿಪಅ 2009, ಬೆಂಗಳೂರು, ದಿನಾಂಕ: 19ನೇ ಆಗಸ್ಟ್ 2009

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 62 ಜಿಪಅ 2009, ದಿನಾಂಕ: 10–06–2009ರ ಆದೇಶ ಭಾಗದ ಮೊದಲನೇ ಪ್ಯಾರಾದಲ್ಲಿ ಯೋಜನಾ ವಿಭಾಗದ ಕ್ರಮ ಸಂ. (1) ರಲ್ಲಿನ **"ಸಾಗರ, ಶಿವಮೊಗ್ಗ ಜಿಲ್ಲೆ"** ಎಂಬುದನ್ನು **"ಶಿಕಾರಿಪುರ, ಶಿವಮೊಗ್ಗ ಜಿಲ್ಲೆ"** ಎಂದೂ ಮೂರನೇ ಪ್ಯಾರಾದಲ್ಲಿ ಯೋಜನಾ ಉಪ ವಿಭಾಗದ ಕ್ರಮ ಸಂಖ್ಯೆ (8) ರಲ್ಲಿನ **"ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ"** ಎಂಬುದನ್ನು **"ಕೂಡ್ಲಿಗಿ, ಬಳ್ಳಾರಿ ಜಿಲ್ಲೆ"** ಎಂದೂ ಹಾಗೂ ಕ್ರಮ ಸಂಖ್ಯೆ (11) ರಲ್ಲಿನ **"ಕೊಪ್ಪ, ಚಿಕ್ಕಮಗಳೂರು ಜಿಲ್ಲೆ"** ಎಂಬುದನ್ನು **"ನರಸಿಂಹರಾಜಪುರ, ಚಿಕ್ಕಮಗಳೂರು ಜಿಲ್ಲೆ"** ಎಂದೂ ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ವೈ. ಸಾಗರ

ಪಿ.ಆರ್. 1965

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು–ಎ)

ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಕೇಂದ್ರ ಸರ್ಕಾರದ 2ನೇ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳಲ್ಲಿ ಕರ್ನಾಟಕ ರಾಜ್ಯಕ್ಕೆ ಸೂಕ್ತವಾದ ಅಂಶಗಳನ್ನು ಪರಿಶೀಲಿಸಿ, ಶಿಫಾರಸ್ಸು ಮಾಡಲು ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ: 1) ಮಾನ್ಯ ಮುಖ್ಯಮಂತ್ರಿಗಳ ಟಿಪ್ಪಣಿ ಸಂಖ್ಯೆ : ಸಿಎಂ/756/ಎಸ್ಐಪಿ/2009 ದಿನಾಂಕ: 20/04/2009.

ಪ್ರಸ್ತಾವನೆ:

ಮೇಲೆ ಓದಲಾದ ಮಾನ್ಯ ಮುಖ್ಯಮಂತ್ರಿಗಳ ಟಿಪ್ಪಣಿಯನ್ವಯ, ಕೇಂದ್ರ ಸರ್ಕಾರವು ನೇಮಿಸಿದ್ದ 2ನೇ ಆಡಳಿತ ಸುಧಾರಣಾ ಆಯೋಗವು ತನ್ನ ಶಿಫಾರಸ್ಸುಗಳನ್ನು ಈಗಾಗಲೇ ನೀಡಿದ್ದು, ಅವುಗಳನ್ನು ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಕರ್ನಾಟಕ ರಾಜ್ಯಕ್ಕೆ ಸೂಕ್ತವಾದ ಅಂಶಗಳನ್ನು ಪರಿಶೀಲಿಸಿ ಶಿಫಾರಸ್ಸು ಮಾಡಲು ಒಂದು ಅಧಿಕಾರಿಗಳ ಸಮಿತಿಯನ್ನು ರಚಿಸುವಂತೆ ಸೂಚಿಸಿದ್ದಾರೆ. ಅದರಂತೆ ಸಮಿತಿಯೊಂದನ್ನು ರಚಿಸುವುದು ಅಗತ್ಯವೆಂದು ಪರಿಗಣಿಸಿ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 25 ಅಸಪ 2009, ಬೆಂಗಳೂರು, ದಿನಾಂಕ: 17ನೇ ಆಗಸ್ಟ್ 2009

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಕೇಂದ್ರ ಸರ್ಕಾರದ 2ನೇ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳಲ್ಲಿ ಕರ್ನಾಟಕ ರಾಜ್ಯಕ್ಕೆ ಸೂಕ್ತವಾದ ಅಂಶಗಳ ಅನುಷ್ಠಾನದ ಬಗ್ಗೆ ಶಿಫಾರಸ್ಸು ಮಾಡಲು ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಿದೆ.

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು	–	ಅಧ್ಯಕ್ಷರು
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು	–	ಸದಸ್ಯರು
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ	–	ಸದಸ್ಯರು
4) ಪ್ರೊ: ರಾಜು, ಮಾನ್ಯ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರು	–	ಸದಸ್ಯರು
5) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು	–	ಸದಸ್ಯರು
6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)	–	ಸದಸ್ಯರು
7) ಸರ್ಕಾರದ ಪ್ರಧಾನ ಕಾರ್ಯದರ್ಶಿ ಲೋಕೋಪಯೋಗಿ ಇಲಾಖೆ	–	ಸದಸ್ಯರು
8) ಸರ್ಕಾರದ ಪ್ರಧಾನ ಕಾರ್ಯದರ್ಶಿ ಯೋಜನಾ ಇಲಾಖೆ	–	ಸದಸ್ಯರು
9) ಸರ್ಕಾರದ ಕಾಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	–	ಸದಸ್ಯರು
10) ಸರ್ಕಾರದ ಪ್ರಧಾನ ಕಾರ್ಯದರ್ಶಿ ಸಿ.ಆ.ಸು.ಇ (ಆಡಳಿತ ಸುಧಾರಣೆ)	–	ಸಂಚಾಲಕರು

2) ಈ ಸಮಿತಿಯು ಕೇಂದ್ರ ಸರ್ಕಾರವು ನೀಡಿರುವ 2ನೇ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವ ಸೂಕ್ತ ಅಂಶಗಳನ್ನು ಶಿಫಾರಸ್ಸು ಮಾಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಬಿ. ದೇವೂರ್

ಪಿ.ಆರ್. 1989

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಾಧ್ಯಯನ)

ವಿಷಯ: ಕರ್ನಾಟಕ ಸರ್ಕಾರದ ಸಚಿವಾಲಯದ ಲೋಕೋಪಯೋಗಿ, ಬಂದರು, ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿನ ವಿಶೇಷಾಧಿಕಾರಿ (ಸಬಾರ್ಡ್) ಹುದ್ದೆಯನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 35 ಸಸಿವಿ 2006, ದಿನಾಂಕ : 08.06.2006

2) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 41 ಸಸಿವಿ 2007, ದಿನಾಂಕ : 08.10.2007

3) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 586 ಸಅಸೇ 2008, ದಿನಾಂಕ : 11.07.2008

4) ಅನಧಿಕೃತ ಟಿಪ್ಪಣಿ ಸಂಖ್ಯೆ : ಲೋಇ 362 ಸೇಸಎ 2009, ದಿನಾಂಕ : 10.07.2009

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ಮತ್ತು (2) ರಲ್ಲಿ ಓದಲಾದ ದಿನಾಂಕ: 08.06.2006ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಲೋಕೋಪಯೋಗಿ, ಬಂದರು, ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವಿಶೇಷಾಧಿಕಾರಿ (ನಬಾರ್ಡ್) ಹುದ್ದೆಯನ್ನು ಒಂದು ವರ್ಷದ ಅವಧಿಗೆ ಸೃಜಿಸಿ ಕಾಲಕಾಲಕ್ಕೆ ಮುಂದುವರಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ: 11.07.2008 ರ ಸರ್ಕಾರಿ ಆದೇಶದಲ್ಲಿ ಸದರಿ ಹುದ್ದೆಯನ್ನು ದಿನಾಂಕ: 08.06.2008 ರಿಂದ ಜಾರಿಗೆ ಬರುವಂತೆ ಮತ್ತೆ ಒಂದು ವರ್ಷದ ಅವಧಿಗೆ ಮುಂದುವರಿಸಿ ಆದೇಶಿಸಲಾಗಿತ್ತು. ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ನಬಾರ್ಡ್ ಯೋಜನೆಯಡಿ ಈಗಾಗಲೇ ಮಂಜೂರಾಗಿರುವ ಸುಮಾರು 600 ಕೋಟಿ ರೂ. ಗಳ ಕಾಮಗಾರಿಗಳಿರುವುದಲ್ಲದೇ ಪ್ರಸ್ತುತ 2009–10ನೇ ಸಾಲಿಗೆ 230.00 ಕೋಟಿ ರೂ. ಗಳ ಪ್ರಸ್ತಾವನೆಯು ಮಂಜೂರಾಗಿರುವುದರಿಂದ ಹಾಗೂ ಆಡಳಿತ ಹಿತದೃಷ್ಟಿಯಿಂದ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವಿಶೇಷಾಧಿಕಾರಿ (ನಬಾರ್ಡ್) ಹುದ್ದೆಯನ್ನು ದಿನಾಂಕ: 08.06.2009 ರಿಂದ ಮತ್ತೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಮುಂದುವರಿಸುವಂತೆ ಕೋರಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 387 ಸಅಸೇ 2009, ಬೆಂಗಳೂರು, ದಿನಾಂಕ: 12ನೇ ಆಗಸ್ಟ್ 2009

ಕರ್ನಾಟಕ ಸರ್ಕಾರದ ಸಚಿವಾಲಯದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವಿಶೇಷಾಧಿಕಾರಿ (ನಬಾರ್ಡ್) ಹುದ್ದೆಯನ್ನು ದಿನಾಂಕ: 08.06.2009 ರಿಂದ ಮತ್ತೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಮುಂದುವರಿಸಿ ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಅದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ, 96, ದಿನಾಂಕ: 10.07.1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದ ಅನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಶಿವರಾಮ್
ಪಿ.ಆರ್. 1990
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು– 3)

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ: ಗುಬ್ಬಿ ತಾಲ್ಲೂಕು, ಹೆರೂರು ಗ್ರಾಮದ ರೇಷ್ಮೆ ಕೃಷಿ ಕ್ಷೇತ್ರದ ಜಾನುವಾರು ಕೊಠಡಿಯನ್ನು ವಿದ್ಯುತ್ ಮಗ್ಗಗಳ ಮಾರಾಟ ಸಹಕಾರ ಸಂಘ ನಿಯಮಿತಕ್ಕೆ ನೀಡುವ ಬಗ್ಗೆ.

ಓದಲಾಗಿದೆ: ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಇವರ ಪತ್ರ ಸಂಖ್ಯೆ: ಸರೇಕೃಕ್ಷೇ/ಹೆರೂರು/ಜಮೀನು/06–07, ದಿನಾಂಕ : 05.05.2009 ಹಾಗೂ 16.07.2009.

ಪ್ರಸ್ತಾವನೆ:

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಹೆರೂರು ರೇಷ್ಮೆ ಕೃಷಿ ಕ್ಷೇತ್ರದಲ್ಲಿರುವ ಜಾನುವಾರು ಕೊಠಡಿಯನ್ನು ಉಪಯೋಗಿಸದೇ ಇರುವ ಪ್ರಯುಕ್ತ ತರಬೇತಿ ಕೇಂದ್ರವನ್ನು ನಡೆಸಲು ವಿದ್ಯುತ್ ಮಗ್ಗಗಳ ನೇಕಾರರ ಉತ್ಪಾದನೆ ಹಾಗೂ ಮಾರಾಟ ಸಹಕಾರ ಸಂಘ ನಿಯಮಿತ, ಸೋಮಲಾಪುರ ಇವರು ಕೋರಿರುವುದಾಗಿ ವಿದ್ಯುತ್ ಮಗ್ಗಗಳ ನೇಕಾರರ ಉತ್ಪಾದನೆ ಮತ್ತು ಮಾರಾಟ ಸಂಘ ನಿಯಮಿತ, ಸೋಮಲಾಪುರವು ಹೈಟೆಕ್ ವೀವಿಂಗ್ ಪಾರ್ಕ್‌ನ ಪ್ರಮುಖ ಅಂಶ ಸಂಸ್ಥೆಯಾಗಿದ್ದು, ಪ್ರಸ್ತುತ ಹೆರೂರು ಕೃಷಿ ಕ್ಷೇತ್ರದ ಜಾನುವಾರು ಕೊಠಡಿಯನ್ನು ಉಪಯೋಗಿಸದೇ ಇರುವುದರಿಂದ ಮಾಹೆಯಾನ ಬಾಡಿಗೆ ಆಧಾರದ ಮೇಲೆ ಈ ಅನುಪಯುಕ್ತ ಜಾನುವಾರು ಕೊಠಡಿಯನ್ನು ವಿದ್ಯುತ್ ಮಗ್ಗಗಳ ಮಾರಾಟ ಸಹಕಾರ ಸಂಘ, ಸೋಮಲಾಪುರ ಇವರಿಗೆ ಬಾಡಿಗೆ ಆಧಾರದ ಮೇಲೆ ನೀಡಬಹುದಾಗಿದೆಯಾದ್ದರಿಂದ ಈ ಬಗ್ಗೆ ಸೂಕ್ತ ಆದೇಶ ಹೊರಡಿಸುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಮೇಲೆ ಓದಲಾದ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ಹೆರೂರಿನ ರೇಷ್ಮೆ ಕೃಷಿ ಕ್ಷೇತ್ರದಲ್ಲಿನ ಜಾನುವಾರು ಕೊಠಡಿಯನ್ನು ರೇಷ್ಮೆ ಇಲಾಖೆಯು ಉಪಯೋಗಿಸದೇ ಇರುವುದರಿಂದ ಈ ಅನುಪಯುಕ್ತ ಜಾನುವಾರು ಕೊಠಡಿಯನ್ನು ರೇಷ್ಮೆ ಆಯುಕ್ತರು ಕೋರಿರುವಂತೆ ಬಾಡಿಗೆ ಆಧಾರದ ಮೇಲೆ ವಿದ್ಯುತ್ ಮಗ್ಗಗಳ ಮಾರಾಟ ಸಹಕಾರ ಸಂಘಕ್ಕೆ ನೀಡಲು ತೀರ್ಮಾನಿಸಿದೆ.

ಸರ್ಕಾರಿ ಆದೇಶ ಸಂ: ವಾಕೈ 4 ರೇಯೋವಿ, 2007, ಬೆಂಗಳೂರು, ದಿನಾಂಕ: 17ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಗುಬ್ಬಿ ತಾಲ್ಲೂಕು, ಹೆರೂರು ರೇಷ್ಮೆ ಕೃಷಿ ಕ್ಷೇತ್ರದಲ್ಲಿರುವ ಜಾನುವಾರು ಕೊಠಡಿಯನ್ನು ವಿದ್ಯುತ್ ಮಗ್ಗಗಳ ನೇಕಾರರ ಉತ್ಪಾದನೆ ಹಾಗೂ ಮಾರಾಟ ಸಹಕಾರ ಸಂಘ ನಿಯಮಿತ, ಸೋಮಲಾಪುರ, ಇವರಿಗೆ ಬಾಡಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಲೋಕೋಪಯೋಗಿ ಇಲಾಖೆಯು ನಿಗದಿಪಡಿಸುವ ದರಕ್ಕೆ ನೀಡುವುದಕ್ಕೆ ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ.ಆರ್. 1994
ಭಾರತಿ ಆರ್. ನಾಯಕ್
ಪೀಠಾಧಿಕಾರಿ (ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಲೋಕೋಪಯೋಗಿ, ಬಂದರು, ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ: ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.

ಓದಲಾಗಿದೆ: 1) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು, ಇವರ ಪತ್ರ ಸಂ. ಮುಇಂ/ಸುಂಕದ/ರಶಾ/ಸಇಂ3/2008–09, ದಿನಾಂಕ : 18.12.2008.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರಗಳಲ್ಲಿ ದಾವಣಗೆರೆ ಜಿಲ್ಲೆ, ಹಾಗೂ ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಮುಖ್ಯ ರಸ್ತೆಗಳನ್ನು ಒಂದಕ್ಕೊಂದು ಸರಪಳಿಗಳನ್ನು ಸೇರಿಸಿ ರಾಜ್ಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಒಟ್ಟು

209.60 ಕಿ.ಮೀ ಉದ್ದದ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು, ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಹಲವು ಜಿಲ್ಲಾ ಮುಖ್ಯ ರಸ್ತೆಗಳನ್ನು ಸಂಪರ್ಕವಿರುವಂತೆ ಜೋಡಿಸಿ ಭಾರತೀಯ ರಸ್ತೆ ಮಹಾಸಭೆಯ (Indian Road Congress) ರಸ್ತೆ ಅಭಿವೃದ್ಧಿ ಕುರಿತ ಲಕ್ನೋ ಯೋಜನೆ 1981–2001ರ ಪ್ರಕಾರ ಮೂಲಭೂತ ಗುಣಧರ್ಮಗಳನ್ನು ಅನುಸರಿಸಿ ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾಪಿಸಲಾಗಿದೆ.

ಕ್ರ. ಸಂ.	ರಾಜ್ಯ ಹೆದಾರಿಗಳನ್ನಾಗಿ ಮೇಲ್ದರ್ಜೆಗೇರಿಸುವ ವಿವರ	ರಾಜ್ಯ ಹೆದ್ದಾರಿಯ ಉದ್ದ (ಕಿ.ಮೀ)
1.	ದಾವಣಗೆರೆ – ಹೊಳಲು ರಾಜ್ಯ ಹೆದ್ದಾರಿ ಮಾರ್ಗ : ಕಂಚಿಕೆರೆ – ಬೆಂಡಿಗೆರೆ	71.30
2.	ಇಟಗಿಯಿಂದ – ಕಂಚಿಕೆರೆ ರಾಜ್ಯ ಹೆದ್ದಾರಿ ಮಾರ್ಗ : ಕೆಂಚಮ್ಮನಹಳ್ಳಿ – ಮೈದೂರು – ಚಿಗಟಗೇರಿ – ನಜೀರನಗರ – ಅರಸೀಕೆರೆ	44.50
3.	ರಾಷ್ಟ್ರೀಯ ಹೆದ್ದಾರಿ – 206ರ ಕಡೂರಿನಿಂದ – ಮರವಂಜಿ – ಬೆಲಗೂರು ಮೂಲಕ ಶ್ರೀರಾಮಪುರಕ್ಕೆ ಸೇರುವ ರಾಜ್ಯ ಹೆದ್ದಾರಿ	51.00
4.	ರಾಷ್ಟ್ರೀಯ ಹೆದ್ದಾರಿ – 206ರ ಕಡೂರಿನಿಂದ – ಹಿರೇನಲ್ಲೂರು – ಅಜ್ಜಂಪುರ – ಎರಗನಹಳ್ಳಿ ಮೂಲಕ ರಾಷ್ಟ್ರೀಯ ಹೆದ್ದಾರಿ – 13ನ್ನು ಹೊಳಲ್ಕೆರೆ ಹತ್ತಿರ ಸಂಪರ್ಕಿಸುವ ರಾಜ್ಯ ಹೆದ್ದಾರಿ	42.80

ಸರ್ಕಾರವು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲೋಇ 374 ಸಿಆರ್ಎಂ 2007, ಬೆಂಗಳೂರು, ದಿನಾಂಕ: 17ನೇ ಆಗಸ್ಟ್ 2009

ದಾವಣಗೆರೆ ಜಿಲ್ಲೆ ಹಾಗೂ ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಹಾಯ್ದುಹೋಗುವ ಈ ಕೆಳಕಂಡ ಜಿಲ್ಲಾ ಮುಖ್ಯ ರಸ್ತೆಗಳ ಸರಪಳಿಗಳನ್ನು ರಾಜ್ಯ ಹೆದ್ದಾರಿ ಎಂದು ನಾಮಕರಣ ಮಾಡಿ ಘೋಷಿಸಿದೆ.

ರಾಜ್ಯ ಹೆದ್ದಾರಿ ಸಂ.	ರಾಜ್ಯ ಹೆದಾರಿಗಳನ್ನಾಗಿ ಮೇಲ್ದರ್ಜೆಗೇರಿಸುವ ವಿವರ	ರಾಜ್ಯ ಹೆದ್ದಾರಿಯ ಉದ್ದ (ಕಿ.ಮೀ)
150	ದಾವಣಗೆರೆ – ಹೊಳಲು ರಾಜ್ಯ ಹೆದ್ದಾರಿ ಮಾರ್ಗ : ಕಂಚಿಕೆರೆ – ಬೆಂಡಿಗೆರೆ	71.30
151	ಇಟಗಿಯಿಂದ – ಕಂಚಿಕೆರೆ ರಾಜ್ಯ ಹೆದ್ದಾರಿ ಮಾರ್ಗ : ಕೆಂಚಮ್ಮನಹಳ್ಳಿ – ಮೈದೂರು – ಚಿಗಟಿಗೇರಿ – ನಜೀರನಗರ – ಅರಸೀಕೆರೆ	44.50
152	ರಾಷ್ಟ್ರೀಯ ಹೆದ್ದಾರಿ – 206 ಕಡೂರಿನಿಂದ – ಮರವಂಜಿ – ಬೆಲಗೂರು – ಮೂಲಕ ಶ್ರೀರಾಮಪುರಕ್ಕೆ ಸೇರುವ ರಾಜ್ಯ ಹೆದ್ದಾರಿ	51.00
153	ರಾಷ್ಟ್ರೀಯ ಹೆದ್ದಾರಿ – 206ರ ಕಡೂರಿನಿಂದ – ಹಿರೇನಲ್ಲೂರು – ಅಜ್ಜಂಪುರ – ಎರಗನಹಳ್ಳಿ ಮೂಲಕ ರಾಷ್ಟ್ರೀಯ ಹೆದ್ದಾರಿ – 13ನ್ನು ಹೊಳಲ್ಕೆರೆ ಹತ್ತಿರ ಸಂಪರ್ಕಿಸುವ ರಾಜ್ಯ ಹೆದ್ದಾರಿ.	42.80

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ದೇವಿಪ್ರಸಾದ್
ಪಿ.ಆರ್. 1993 ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ)
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ)

INFRASTRUCTURE DEVELOPMENT SECRETARIAT

Sub: Release of GoK's Share towards Shimoga Talaguppa Gauge Conversion Project / Reg.

Read: 1. G.O. No.IDD 52 NSW 2007, dated 24.07.2007
2. G.O. No. IDD No. 52 NSW 2007 dated 19.09.2007
3. G.O. No. IDD 52 NSW 2007 dated 26.12.2007
4. Letter No.W. 193/GC/BNC/SMET-TLGP- dated: 09.07.2009 of Chief Engineer, (Con.,) SWR Bangalore.

Premable:

In the Government Order referred to at Sl. Nos (1) and (3) above Government of Karnataka has released an amount of Rs. 50.00 crore towards 50:50 cost sharing for Shimoga – Talaguppa Gauge conversion project.

2. The Chief Engineer, South Western Railways, Bangalore, in his letter read at Sl. No. (4) above, has stated that, the GoK has already deposited Rs. 50.00 crore as against Rs. 76.50 crore (50% of

balance cost i.e. 153.00 crores projected as on 1.4.02). The revised cost of the project is Rs. 220.71 crore (including the expenditure of Rs. 27.93 crore incurred by Railways prior to 1.4.2002). Thus the revised share of GoK and Railways at 50:50 ratio will be Rs. 96.39 crore each. As against the above Railway has already spent Rs. 91.26 crore till 15.06.09. Further expenditure has been incurred by railways till date. Thus railways have already exhausted their share. GoK has so far deposited only Rs. 50.00 crore leaving a balance of Rs. 46.39 crore to be deposited. He has therefore requested for immediate balance deposit of Rs.50% share of Government of Karnataka which comes to Rs. 46.39 crore as per the revised cost of Rs. 220.71 crore.

3. The proposals of Railways has been examined and it has been decided to release an amount of Rs. 26.50 crore out of the Budget of Rs.100.00 crore provided under the Head of Account "5465-01-190-3-05" (Plan) 211 investment towards cost sharing for new railway projects during 2009-10. Hence this order.

Government Order No. IDD NSW 2007, Bangalore, Dated: 19th August 2009

After careful examination of the request of Railways, Government is pleased to release Rs. 26.50 crore (Rupees Twenty Six Crore Fifty lakhs only) towards Shimoga-Talaguppa gauge conversion project being the part of the balance 50:50 share of Government of Karnataka.

2. The expenditure shall be met under the Head of Account "5465-01-190-3-05" (Plan) 211 investment out of the budget provision Rs. 100.00 crore towards cost sharing for new railway projects during 2009-10.

3. The Chief Executive Officer, K-RIDE is authorizsed to draw the amount on a payee's receipt duly countersigned by the Under Secretary to Government, Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), South Western Railway, Bangalore.

4. The Chief Executive Officer, K-RIDE, shall ensure technical and Financial Analysis of the cost of the Project with due diligence with validition of costing and utilization before further release.

5. This order is issued in accordance with the concurrence of Finance Department given vide U.O. Note No.FD.1333 Ex-1/09 dated 11.08.2009.

By Order and in the name of Governor of Karnataka,

N. MANJULA GEETHA

Under Secretary to Government

Infrastructure Development Department

P.R. 1996

ಶಿಕ್ಷಣ ಸಚಿವಾಲಯ

ವಿಷಯ: 2009–10ನೇ ಸಾಲಿಗೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಗೆ ಸಂಬಂಧಿಸಿದಂತೆ, ಮುಂದುವರಿಕೆ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಎರಡನೇ ತ್ರೈಮಾಸಿಕ ಅನುದಾನ ಬಳಸಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 76 ಯೋಯೋಕ 2009, ದಿನಾಂಕ: 28.04.2009ರ (ಇಡಿ 77 ಸ್ಕೀಮರ (ಯುನಿಕ್) 2009 ದಿನಾಂಕ: 28.04.2009

2. ಸರ್ಕಾರದ ಆದೇಶ ಸಂಖ್ಯೆ: ಇಡಿ ಯೋಯೋಕ 2009 (ಭಾಗ–4) ದಿನಾಂಕ: 28.04.2009 (ಇಡಿ 77 ಸ್ಕೀಮರ) (ಯುನಿಕ್) 2009 ದಿನಾಂಕ : 28.04.2009.

ಪ್ರಸ್ತಾವನೆ:

1. ಮೇಲೆ (1) ರಲ್ಲಿ ಓದಲಾದ ದಿನಾಂಕ 28.04.2009ರ ಸರ್ಕಾರದ ಆದೇಶದಲ್ಲಿ 2009–10ನೇ ಸಾಲಿಗೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಗೆ (ರಾಜ್ಯ ವಲಯ ಯೋಜನೆಗಳು) ಸಂಬಂಧಿಸಿದಂತೆ ಮುಂದುವರಿಕೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಇಲಾಖೆಯ ನಿರ್ದೇಶಕರಿಗೆ ಅನುಮತಿ ನೀಡಲಾಗಿದೆ.

2. ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆರ್ಥಿಕ ಇಲಾಖೆ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ : 16.05.2008ರ ಆದೇಶದ ಪ್ರಕಾರ 2009–10ನೇ ಸಾಲಿನಲ್ಲಿ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಒದಗಿಸಲಾದ ಅನುದಾನದಲ್ಲಿ ಮೊದಲನೇ ತ್ರೈಮಾಸಿಕ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

3. ಎರಡನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 76 ಯೋಯೋಕ 2009, (ಭಾಗ–4) ಬೆಂಗಳೂರು, ದಿನಾಂಕ: 17ನೇ ಆಗಸ್ಟ್ 2009
[ಇಡಿ : 103 : ಸ್ವೀಮರ (ಯುನಿಕ್), 2009, ದಿನಾಂಕ: 17.08.2009]

4. 2009–10ನೇ ಸಾಲಿಗೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಗೆ ಸಂಬಂಧಿಸಿದಂತೆ ಎಲ್ಲಾ ಮುಂದುವರಿಕೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ, ಅನುಬಂಧದಲ್ಲಿರುವ ಕಾರ್ಯಕ್ರಮಗಳಿಗೆ ಒದಗಿಸಲಾದ ಅನುದಾನದಲ್ಲಿ 25 ಭಾಗದಷ್ಟು ಅನುದಾನವನ್ನು ವೆಚ್ಚ ಮಾಡಲು ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು, ಇವರಿಗೆ ಅನುಮತಿ ನೀಡಿದೆ.

5. ಸದರಿ ಆದೇಶವನ್ನು ಆರ್ಥಿಕ ಇಲಾಖೆ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ : 16.05.2008ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಇವರ ಟಿಪ್ಪಣಿ ಸಂಖ್ಯೆ : ಶಿಇ 1855 ಐಎಫ್ (ಬಿ&ಎ) 2009, ದಿನಾಂಕ : 11.08.2009ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ.ಎಫ್. ಮಾಗಿ
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ)

ಸರ್ಕಾರಿ ಆದೇಶ ಸಂಖ್ಯೆ ಇಡಿ: 76: ಯೋಯೋಕ 2009 (ಭಾಗ–4) ದಿನಾಂಕ : 17.08.2009
[ಇಡಿ 103 : ಸ್ವೀಮರ (ಯುನಿಕ್) 2009, ದಿನಾಂಕ : 17.08.2009] ಕ್ಕೆ ಅನುಬಂಧ
ರಾಜ್ಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಇಲಾಖೆ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಆಯವ್ಯಯ ಲೆಕ್ಕ ಶೀರ್ಷಿಕೆ ಮತ್ತು ಕಾರ್ಯಕ್ರಮದ ಹೆಸರು	2009–10ನೇ ಸಾಲಿಗೆ ಒದಗಿಸಲಾದ ಅನುದಾನ	ಬಿಡುಗಡೆ ಮಾಡಿರುವ ಎರಡನೇ ತ್ರೈಮಾಸಿಕ ಅನುದಾನ
1.	ನಿರ್ದೇಶನ ಮತ್ತು ಆಡಳಿತ [2202–02–001–0–04]	2202–02–001–0–04–002 – ರೂ. 3.41 ಲಕ್ಷ 2202–02–001–0–04–011 – ರೂ. 1.30 ಲಕ್ಷ 2202–02–001–0–04–014 – ರೂ. 0.56 ಲಕ್ಷ 2202–02–001–0–04–041 – ರೂ. 9.73 ಲಕ್ಷ	1.28 0.49 0.21 3.65
2.	ತರಬೇತಿಯಲ್ಲಿರುವ ಪದವೀಧರ ಶಿಕ್ಷಕರು (2202–02–105–0–01–015)	ರೂ. 10.00 ಲಕ್ಷ (ಹತ್ತು ಲಕ್ಷ ರೂಪಾಯಿಗಳು ಮಾತ್ರ)	3.75
3.	ರಾಜ್ಯ ವಿಜ್ಞಾನ ಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮ (2202–80–800–0–06–059)	ರೂ. 25.00 ಲಕ್ಷ (ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ)	9.38
4.	ಎಸ್.ಸಿ.ಇ.ಆರ್.ಟಿ (2202–80–800–0–07–059)	20.00 ಲಕ್ಷ ರೂಪಾಯಿಗಳು (ಇಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ)	7.50
5.	ಶಿಕ್ಷಣ ಮತ್ತು ತರಬೇತಿಗಾಗಿ ಜಿಲ್ಲಾ ಸಂಸ್ಥೆ ಮತ್ತು ಅಧ್ಯಾಪಕರ ಶಿಕ್ಷಣ ಮತ್ತು ತರಬೇತಿಗಾಗಿ ಕಾಲೇಜು (2202–80–800–0–19)	ರೂ. 3598.24 ಲಕ್ಷ (ಮೂರು ಸಾವಿರದ ಐದು ನೂರ ತೊಂಭತ್ತೆಂಟು ಲಕ್ಷ ಇಪ್ಪತ್ತ ನಾಲ್ಕು ಸಾವಿರ ರೂಪಾಯಿಗಳ ಮಾತ್ರ)	1349.34

ಕ್ರ. ಸಂ.	ಆಯವ್ಯಯ ಲೆಕ್ಕ ಶೀರ್ಷಿಕೆ ಮತ್ತು ಕಾರ್ಯಕ್ರಮದ ಹೆಸರು	2009-10ನೇ ಸಾಲಿಗೆ ಒದಗಿಸಲಾದ ಅನುದಾನ	ಬಿಡುಗಡೆ ಮಾಡಿರುವ ಎರಡನೇ ತ್ರೈಮಾಸಿಕ ಅನುದಾನ
6.	ಪ್ರೌಢಶಾಲೆಯಲ್ಲಿ ಗಣಕ ಶಿಕ್ಷಣದ ಸಾಕ್ಷರತೆ (2202-80-800-0-23) 059	ರೂ. 7000.00 ಲಕ್ಷ (ಏಳು ಸಾವಿರ ಲಕ್ಷ ರೂಪಾಯಿಗಳು ಮಾತ್ರ)	2625.00
7.	ಮಾಹಿತಿ ಸಿಂಧು – (2202-80-800-0-26)	2202-80-800-0-26-059- ಇತರೆ ಖರ್ಚು ರೂ. 270.00 ಲಕ್ಷ 422-ವಿಶೇಷ ಘಟಕ ಯೋಜನೆ ರೂ. 430.00 ಲಕ್ಷ 423- ಗಿರಿಜನ ಉಪಯೋಜನೆ ರೂ. 100.00 ಲಕ್ಷ	 101.25 161.25 37.50
8.	ಎಜ್ಯುಸ್ಯಾಟ್ (2202-01-800-1-79) 059	ರೂ. 200.00 ಲಕ್ಷ (ಎರಡು ನೂರು ಲಕ್ಷ ರೂಪಾಯಿಗಳು ಮಾತ್ರ)	75.00

ಐ.ಎಫ್. ಮಾಗಿ

ಪಿ.ಆರ್. 1997

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ)

ಉನ್ನತ ಶಿಕ್ಷಣ ಸಚಿವಾಲಯ

ವಿಷಯ: ಆರ್.ಐ.ಡಿ.ಎಫ್.-14 ಯೋಜನೆಯಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ತರಗತಿ ಕೊಠಡಿಗಳನ್ನು ನಿರ್ಮಾಣ ಮಾಡುವ ಬಗ್ಗೆ.

ಓದಲಾಗಿದೆ: 1. ಪ್ರಬಂಧಕರು, ನಬಾರ್ಡ್ ಸಂಸ್ಥೆ, ಬೆಂಗಳೂರು ರವರ ಪತ್ರ ಸಂಖ್ಯೆ: NB/SPD/2443/RIDF-14 (Karnataka RO) 101/PSC/2008-09 ದಿನಾಂಕ: 28.01.2009.

2. ಸರ್ಕಾರ ಆದೇಶ ಸಮ ಸಂಖ್ಯೆ ದಿನಾಂಕ 12.06.2009.

3. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: ಕಾಶಿಇ 14ಯೋಜನೆ 2008-09, ದಿನಾಂಕ : 25.06.2009.

ಪ್ರಸ್ತಾವನೆ:

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿ ಓದಲಾದ ನಬಾರ್ಡ್ ಸಂಸ್ಥೆಯ ಪ್ರಬಂಧಕರು, ರವರ ಪತ್ರದಲ್ಲಿ ಆರ್.ಐ.ಡಿ.ಎಫ್-14ರ ಯೋಜನೆಯಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಒಟ್ಟು ರೂ. 3,000.00 ಲಕ್ಷಗಳ ವೆಚ್ಚದಲ್ಲಿ ತರಗತಿ ಕೊಠಡಿಗಳನ್ನು ನಿರ್ಮಾಣ ಮಾಡಲು ಒಟ್ಟು ರೂ. 2550.00 ಲಕ್ಷಗಳ ಸಾಲವನ್ನು ಮಂಜೂರು ಮಾಡಿದೆ.

ಓದಲಾದ (2)ರ ದಿನಾಂಕ: 12.06.2009ರ ಸರ್ಕಾರಿ ಆದೇಶದಲ್ಲಿ ಕಾಮಗಾರಿ ಸಲುವಾಗಿ ಕಾರ್ಯಾದೇಶ ಹೊರಡಿಸಲಾಗಿತ್ತು. ಆದರೆ, (3) ರಲ್ಲಿ ಓದಲಾದ ದಿನಾಂಕ : 25.06.2009ರ ಪತ್ರದಲ್ಲಿ ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಇವರು ನಬಾರ್ಡ್ ಸಂಸ್ಥೆಯ ಮಂಜೂರಾತಿ ಆದೇಶಾನುಸಾರ 27 ಕಾಲೇಜು ಕಾಮಗಾರಿಗಳನ್ನು ಪ್ರಾರಂಭಿಸಲು ಹೊರಡಿಸಲಾದ ದಿನಾಂಕ: 12.06.2009ರ ಸರ್ಕಾರಿ ಆದೇಶದ ಅನುಬಂಧ 1,2 ಮತ್ತು 3ರಲ್ಲಿ ನ್ಯೂನತೆಗಳಿದ್ದು ಅವುಗಳನ್ನು ಸರಿಪಡಿಸಿ, ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ. ಆದುದರಿಂದ ದಿನಾಂಕ 12.06.2009ರ ಸರ್ಕಾರಿ ಆದೇಶ ಹಿಂದಕ್ಕೆ ಪಡೆದು ಪರಿಷ್ಕೃತ ಆದೇಶ ಹೊರಡಿಸಲು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 03 ಯೋಸಕ 2008, ಬೆಂಗಳೂರು, ದಿನಾಂಕ: 14ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ 03 ಯೋಸಕ 2008 ದಿನಾಂಕ:12.06.2009 ನ್ನು ಈ ಮೂಲಕ ಹಿಂಪಡೆಯಲಾಗಿದೆ. ನಬಾರ್ಡ್ ಸಂಸ್ಥೆಯವರು ಅನುಮೋದಿಸಿರುವ ಪಟ್ಟಿಯಲ್ಲಿನ ಈ ಕೆಳಕಂಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ಕಾಮಗಾರಿಗಳನ್ನು ರೈಟ್ಸ್ ಸಂಸ್ಥೆಗೆ (ಕರ್ನಾಟಕ ಪಾರದರ್ಶಕ ಕಾಯ್ದೆಯಡಿ ವಿನಾಯಿತಿ ನೀಡಿದೆ) ವಹಿಸಿ 2009-10ನೇ ಸಾಲಿಗೆ ಒದಗಿಸಲಾಗಿರುವ ಅನುದಾನದಲ್ಲಿ ಕೂಡಲೇ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಂತೆ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಈ ಕೆಳಕಂಡ ಷರತ್ತನ್ನು ವಿಧಿಸಿ ಅನುಮತಿ ನೀಡಲಾಗಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಗಳ ವಿವರ	ಒಟ್ಟು ಅಂದಾಜು ಮೊತ್ತ
1.	ಸ.,ಪ್ರ.ದ. ಕಾಲೇಜು, ಸೂಲಿಬೆಲೆ, ಬೆಂಗಳೂರು ಗ್ರಾ. ಜಿಲ್ಲೆ.	110.00
2.	ಸ.,ಪ್ರ.ದ. ಕಾಲೇಜು, ಬಡವನಹಳ್ಳಿ, ತುಮಕೂರು ಜಿಲ್ಲೆ	100.00
3.	ಸ.,ಪ್ರ.ದ. ಕಾಲೇಜು, ನರೇಗಲ್, ಗದಗ ಜಿಲ್ಲೆ	110.00
4.	ಸ.,ಪ್ರ.ದ. ಕಾಲೇಜು, ಮುಳಗುಂದ, ಗದಗ ಜಿಲ್ಲೆ	110.00
5.	ಸ.,ಪ್ರ.ದ. ಕಾಲೇಜು, ಜಾಲಹಳ್ಳಿ, ರಾಯಚೂರು ಜಿಲ್ಲೆ	110.00
6.	ಸ.,ಪ್ರ.ದ. ಕಾಲೇಜು, ಮುದಗಲ್, ರಾಯಚೂರು ಜಿಲ್ಲೆ	110.00
7.	ಸ.,ಪ್ರ.ದ. ಕಾಲೇಜು, ಮರಿಯಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ	110.00
8.	ಸ.,ಪ್ರ.ದ. ಕಾಲೇಜು, ತೆಕ್ಕಲಕೋಟೆ, ಬಳ್ಳಾರಿ ಜಿಲ್ಲೆ	110.00
9.	ಸ.,ಪ್ರ.ದ. ಕಾಲೇಜು, ಅಳವಂಡಿ, ಕೊಪ್ಪಳ ಜಿಲ್ಲೆ	110.00
10.	ಸ.,ಪ್ರ.ದ. ಕಾಲೇಜು, ಇರಕಲ್‌ಗಡ, ಕೊಪ್ಪಳ ಜಿಲ್ಲೆ	110.00
11.	ಸ.,ಪ್ರ.ದ. ಕಾಲೇಜು, ಶ್ರೀರಾಮನಗರ, ಕೊಪ್ಪಳ ಜಿಲ್ಲೆ	110.00
12.	ಸ.,ಪ್ರ.ದ. ಕಾಲೇಜು, ಹಿರೇವಂಕಲಕುಂಟೆ, ಕೊಪ್ಪಳ ಜಿಲ್ಲೆ	110.00
	ಒಟ್ಟು	**1320.00**

ಷರತ್ತುಗಳು:

- ಸದರಿ ಕಾಮಗಾರಿಗಳನ್ನು ಈಗಾಗಲೇ ನಿಗದಿಯಾಗಿರುವ ಆಯವ್ಯಯದ ಮಿತಿಯಲ್ಲಿಯೇ ಪೂರ್ಣಗೊಳಿಸಲು ಸೂಚಿಸಿದೆ.
- ಕಟ್ಟಡ ನಿರ್ಮಾಣದ ಗುಣಮಟ್ಟದ ಬಗ್ಗೆ ನಿಗಾ ವಹಿಸಲು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು. ಕೇಂದ್ರ ಕಛೇರಿಯಿಂದ ತಿಂಗಳಿಗೊಮ್ಮೆ ಕಟ್ಟಡ ನಿರ್ಮಾಣದ ಅಭಿವೃದ್ಧಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು.
- ಕಟ್ಟಡ ನಿರ್ಮಾಣ ಕಾರ್ಯವನ್ನು ವಹಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
- ನಬಾರ್ಡ್ ಸಂಸ್ಥೆಯವರು ಈಗಾಗಲೇ ಅನುಮೋದಿಸಿರುವ ಮಾದರಿಯಲ್ಲಿಯೇ ಕಟ್ಟಡ ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ಸೂಚಿಸತಕ್ಕದ್ದು.
- ಕಟ್ಟಡ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದ ಹತ್ತು ತಿಂಗಳೊಳಗಾಗಿ ಪೂರ್ಣಗೊಳಿಸಲು ಸಂಬಂಧಪಟ್ಟ ಕಟ್ಟಡ ನಿರ್ಮಾಣ ಸಂಸ್ಥೆಗೆ ಆದೇಶ ನೀಡತಕ್ಕದ್ದು. ಕಟ್ಟಡವನ್ನು ಪೂರ್ಣಗೊಳಿಸಿ ಕಾಲೇಜಿಗೆ ಹಸ್ತಾಂತರಿಸಿದ ನಂತರ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಪ್ರಮಾಣ ಪತ್ರವನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚನೆ ನೀಡುವುದು.
- ಪ್ರತಿ ಮಾಹೆಯ ಕಾಮಗಾರಿಯ ಪ್ರಗತಿ ವರದಿಯನ್ನು ಆಯಾ ಮಾಹೆಯ ಎಂ.ಎಂ.ಆರ್. ವರದಿಯಲ್ಲಿ ನಮೂದಿಸತಕ್ಕದ್ದು. ಕಾಮಗಾರಿ ಪ್ರಗತಿಯಾಗುತ್ತಿದಂತೆಯೇ ನಬಾರ್ಡ್‌ನಿಂದ ಮರು ಪಾವತಿ ಪಡೆಯಲು ಪ್ರಸ್ತಾವನೆಯನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
- ಕಾಮಗಾರಿಯ ಪ್ರಗತಿಯನ್ನು ಆಧರಿಸಿ ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡಲು ಸೂಚಿಸಿದೆ.

ಇದಕ್ಕೆ ಸಂಬಂಧಿಸಿದ ಮೊತ್ತವನ್ನು 2009–10ನೇ ಸಾಲಿನ ಲೆಕ್ಕ ಶೀರ್ಷಿಕ 4202–01–203–1–01–139 ಅಡಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಉನ್ನತ ಶಿಕ್ಷಣ ಇಲಾಖೆ (ಯೋಜನೆ)

ಪಿ.ಆರ್. 1998

ಕಾರ್ಮಿಕ ಸಚಿವಾಲಯ

ವಿಷಯ : ಶ್ರೀ ಶಿವಲಿಂಗಮೂರ್ತಿ, ಜಂಟಿ ನಿರ್ದೇಶಕರು (ತರಬೇತಿ), ಉದ್ಯೋಗ ಮತ್ತು ತರಬೇತಿ ಇಲಾಖೆ, ವಿಭಾಗೀಯ ಕಛೇರಿ, ಗುಲ್ಬರ್ಗಾ ರವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದ ಅಭಿಯೋಜನಾ ಮಂಜೂರಾತಿ ಕುರಿತು.

ಓದಲಾಗಿದೆ :
1 ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್ /ಐಎನ್‌ವಿ(ಜಿ) ಸಿಟಿ/ಕ್ರೈಂ. 9/2004 ದಿನಾಂಕ:21.4.2009
2. ತನಿಖಾಧಿಕಾರಿಯ ವರದಿ ಸಂಖ್ಯೆ:9/2004 ದಿನಾಂಕ:12/3/2004
3. ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ ಸಾಕ್ಷಿದಾರರ ಹೇಳಿಕೆಗಳು, ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.

ಪ್ರಸ್ತಾವನೆ:

ಶ್ರೀ ಶಿವಲಿಂಗಮೂರ್ತಿ, ಜಂಟಿ ನಿರ್ದೇಶಕರು (ತರಬೇತಿ), ಉದ್ಯೋಗ ಮತ್ತು ತರಬೇತಿ ಇಲಾಖೆ, ವಿಭಾಗೀಯ ಕಛೇರಿ, ಗುಲ್ಬರ್ಗಾ ರವರ ವಿರುದ್ಧ ಗುನ್ನೆ ಸಂಖ್ಯೆ:9/2004 ರಲ್ಲಿ ಆರಕ್ಷಕ ನಿರೀಕ್ಷಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ನಗರ ವಿಭಾಗ, ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು, ಮಾನ್ಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ತಮ್ಮ ಪತ್ರ ದಿನಾಂಕ:21/4/2009 ರೊಡನೆ ಕಳುಹಿಸುತ್ತಾ, ಆಪಾದಿತನನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ–1988ರ 19(1)(ಬಿ) ಕಲಂನ ಅಡಿಯಲ್ಲಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಉಲ್ಲೇಖಿತ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)ಸಿಟಿ/ಕ್ರೈಂ.9/2004 ದಿನಾಂಕ:21.4.2009 ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1) ಶ್ರೀ ಎ.ಎನ್. ರಾಜಣ್ಣ, ಆರಕ್ಷಕ ಉಪ ಅಧೀಕ್ಷಕರು, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ಫಿರ್ಯಾದಿ ದಿನಾಂಕ:26.7.2003
2) ಪ್ರಥಮ ವರ್ತಮಾನ ವರದಿ ಬೆಂಗಳೂರು ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಲೋಕಾಯುಕ್ತ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ:9/.2004
3) ಪ್ರಾಯೋಗಿಕ ಪಂಚನಾಮೆ ದಿನಾಂಕ:26.7.2003
4) ಟ್ರ್ಯಾಪ್‌ನಮಹಜರ್ ದಿನಾಂಕ:26.7.2003
5) ಕೃತ್ಯ ನಡೆದ ಸ್ಥಳದ ನಕಾಶೆ: ನಿರ್ದೇಶಕರ ಕಛೇರಿ, ಉದ್ಯೋಗ ವಿನಿಮಯ ಮತ್ತು ತರಬೇತಿ ಇಲಾಖೆ, ಪ್ರಶಾಂತ್ ಕಾಂಪ್ಲೆಕ್ಸ್, ಸುಬ್ಬಯ್ಯ ಸರ್ಕಲ್, ಬೆಂಗಳೂರು.
6) ಸಾಕ್ಷಿಗಳ ಹೇಳಿಕೆಗಳು
   1) ಶ್ರೀ ಪೋಲನ್‌ರಾಜು, ದ್ವಿ.ದ.ಸ. ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
   2) ಶ್ರೀಮತಿ ಕಾಂತಿಮತಿ, ದ್ವಿ.ದ.ಸ. ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು
   3) ಶ್ರೀ ಗುಂಡೂರಾವ್, ಪ್ರ.ದ.ಸ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
   4) ಶ್ರೀ ಬಿ.ಕೆ. ಮಂಜುನಾಥ, ದ್ವಿ.ದ.ಸ. ರೇಷ್ಮೆ ಆಯುಕ್ತರು ಮತ್ತು ನಿರ್ದೇಶಕರ ಕಛೇರಿ ಬಹುಮಹಡಿಗಳ ಕಟ್ಟಡ, ಬೆಂಗಳೂರು
   5) ಶ್ರೀ ಕೆ.ಹೆಚ್. ನರಸೇಗೌಡ, ಪ್ರ.ದ.ಸ. ಕೆ.ಜಿ.ಐ.ಡಿ. ವಿವಿ ಗೋಪುರ, ಬೆಂಗಳೂರು
   6) ಶ್ರೀ ಯೋಗೇಶ್, ಪ್ರ.ದ.ಸ. ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು
   7) ಶ್ರೀ ಮುದ್ದಣ್ಣ, ಉಪನಿರ್ದೇಶಕರು ಮತ್ತು ಪ್ರಾಂಶುಪಾಲರು, ಕೈಗಾರಿಕಾ ತರಬೇತಿ ಸಂಸ್ಥೆ, ಪೀಣ್ಯಾ, ಬೆಂಗಳೂರು
   8) ಶ್ರೀ ಪ್ರೇಮ್‌ಕುಮಾರ್, ಪ್ರ.ದ.ಸ. ಕೈಗಾರಿಕಾ ತರಬೇತಿ ಸಂಸ್ಥೆ, ಪೀಣ್ಯಾ, ಬೆಂಗಳೂರು
   9) ಶ್ರೀ ಹೆಚ್. ಬಾಬು, ತರಬೇತಿ ಅಧಿಕಾರಿ, ಕೈಗಾರಿಕಾ ತರಬೇತಿ ಸಂಸ್ಥೆ, ಪೀಣ್ಯಾ, ಬೆಂಗಳೂರು
   10) ಶ್ರೀ ರಾಜೇಂದ್ರಸಿಂಗ್, ಪೊಲೀಸ್ ಕಾನ್ಸಟೇಬಲ್, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
   11) ಶ್ರೀಮತಿ ಜಿ.ಕೆ. ಸಾವಿತ್ರಿಬಾಯಿ, ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
   12) ಶ್ರೀ ಕೆ.ಎಲ್. ಚಂದ್ರಶೇಖರ್, ಪೊಲೀಸ್ ಕಾನ್ಸ್‌ಟೇಬಲ್, ನಗರ ವಿಭಾಗ,. ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

7) **ಲಂಚ ಕೇಳಲು ಆಧಾರವಾದ ವಿಷಯ:** ಉದ್ಯೋಗ ವಿನಿಮಯ ಮತ್ತು ತರಬೇತಿ ಇಲಾಖೆಯ ಜಂಟೀ ನಿರ್ದೇಶಕರಾದ ಶ್ರೀ ಶಿವಲಿಂಗಮೂರ್ತಿರವರು ಜುಲೈ 2003ರಲ್ಲಿ ನಡೆಸಲಾಗುವ ಐ.ಟಿ.ಐ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಹಾಜರಾಗುವ ಪರೀಕ್ಷಾರ್ಥಿಗಳಿಂದ ಅವರನ್ನು ಪರೀಕ್ಷೆಯಲ್ಲಿ ಕಾಪಿ ಮಾಡಲು ಅವಕಾಶ ಮಾಡಿಕೊಡಲು ಮತ್ತು ಖಾಸಗಿ ಐ.ಟಿ.ಐ ಸಂಸ್ಥೆಗಳಿಗೆ ಅಫಿಲಿಯೇಷನ್ ಮಂಜೂರು ಮಾಡಿಸಿಕೊಡಲು ಲಂಚದ ಹಣವನ್ನು ಐ.ಟಿ.ಐ. ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮುಖಾಂತರ ವಸೂಲು ಮಾಡಲಾಗುತ್ತಿದೆ ಎಂಬ ಖಚಿತ ವರ್ತಮಾನವೇ ಆಧಾರವಾಗಿದೆ.

ತನಿಖಾಧಿಕಾರಿಗಳಾದ ಶ್ರೀ ಎ.ಎನ್. ರಾಜಣ್ಣ ಆರಕ್ಷಕ ಉಪ ಅಧೀಕ್ಷಕರು, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು, ಶ್ರೀ ಶಿವಲಿಂಗಮೂರ್ತಿ, ಜಂಟಿ ನಿರ್ದೇಶಕರು (ತರಬೇತಿ), ಉದ್ಯೋಗ ಮತ್ತು ತರಬೇತಿ ಇಲಾಖೆ, ವಿಭಾಗೀಯ ಕಛೇರಿ, ಗುಲ್ಬರ್ಗಾ ರವರ ವಿರುದ್ಧ ದಂಡಾರ್ಹ ಪ್ರಕರಣವನ್ನು ದಿನಾಂಕ:26.7.2003ರಂದು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ, ಬೆಂಗಳೂರು ಪೋಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ 9/2004ರಲ್ಲಿ ಲಂಚ ನಿರೋಧಕ ಕಾಯ್ದೆ–1988ರ ಕಲಂ 7, 13(1)ಡಿ ಜೊತೆಯಲ್ಲಿ 13(2)ರ ಅಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ಉದ್ಯೋಗ ವಿನಿಮಯ ಮತ್ತು ತರಬೇತಿ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಶಿವಲಿಂಗಮೂರ್ತಿರವರು ಜುಲೈ 2003ರಲ್ಲಿ ನಡೆಸಲಾಗುವ ಐ.ಟಿ.ಐ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಹಾಜರಾಗುವ ಪರೀಕ್ಷಾರ್ಥಿಗಳಿಂದ ಅವರನ್ನು ಪರೀಕ್ಷೆಯಲ್ಲಿ ಕಾಪಿ ಮಾಡಲು ಅವಕಾಶ ಮಾಡಿಕೊಡಲು ಮತ್ತು ಖಾಸಗಿ ಐ.ಟಿ.ಐ ಸಂಸ್ಥೆಗಳಿಗೆ ಅಫಿಲಿಯೇಷನ್ ಮಂಜೂರು ಮಾಡಿಸಿಕೊಡಲು ಲಂಚದ ಹಣವನ್ನು ಐ.ಟಿ.ಐ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮುಖಾಂತರ ವಸೂಲು ಮಾಡಲಾಗುತ್ತಿದೆ. ಎಂಬ ಖಚಿತ ವರ್ತಮಾನದ ಮೇರೆಗೆ ಫಿರ್ಯಾದುದಾರರಾದ ಶ್ರೀ ಎ.ಎನ್. ರಾಜಣ್ಣ ಆರಕ್ಷಕ ಉಪ ಅಧೀಕ್ಷಕರು, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ದಿನಾಂಕ:26.7.2003ರಂದು ಫಾರ್ಮ ನಂಬರ್ 1 ಮತ್ತು 2 ರಲ್ಲಿ ವರದಿಯನ್ನು ಮಾನ್ಯ ಲೋಕಾಯುಕ್ತ ನ್ಯಾಯಮೂರ್ತಿಗಳಿಗೆ ಸಲ್ಲಿಸಿ ಆರೋಪಿಯ ಕಛೇರಿ ಮತ್ತು ವಾಸದ ಮನೆಯನ್ನು ಶೋಧನೆ ಮಾಡಲು ಸರ್ಚ್ ವಾರೆಂಟ್ ಪಡೆದು ನಿರ್ದೇಶಕರ ಕಛೇರಿ, ಉದ್ಯೋಗ ಮತ್ತು ತರಬೇತಿ ಇಲಾಖೆ ಇಲ್ಲಿಗೆ ಪಂಚರು ಹಾಗೂ ಲೋಕಾಯುಕ್ತ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರೊಡನೆ ಗುಪ್ತವಾಗಿ ಮಧ್ಯಾಹ್ನ ಒಂದು ಘಂಟೆಗೆ ಬಂದು ಸೂಕ್ಷ್ಮವಾಗಿ ಅಲ್ಲಿನ ಚಲನವಲನಗಳನ್ನು ಗಮನಿಸುತ್ತಿದ್ದಾಗ ಇಬ್ಬರು ವ್ಯಕ್ತಿಗಳು ತಮ್ಮ ಕೈಗಳಲ್ಲಿ ಒಂದು ಬ್ಯಾಗ್ ಮತ್ತು ಪ್ಲಾಸ್ಟಿಕ್ ಕವರುಗಳನ್ನು ಹಿಡಿದುಕೊಂಡು ಅನುಮಾನಸ್ಪದ ರೀತಿಯಲ್ಲಿ ವರ್ತಿಸುತ್ತಿರುವಾಗ ಅವರನ್ನು ಹಿಡಿದು ಪ್ರಶ್ನಿಸಿದಾಗ ಆ ವ್ಯಕ್ತಿಗಳು ಹಣ ನೀಡಲು ಬಂದಿದ್ದಾಗಿ ತಿಳಿಸಿದರು. ನಂತರ ಇಬ್ಬರೂ ವ್ಯಕ್ತಿಗಳನ್ನು ನಿರ್ದೇಶಕರ ಕೊಠಡಿಯೊಳಗೆ ಕರೆದುಕೊಂಡು ಹೋಗಿ ವಿಚಾರಣೆಗೊಳಪಡಿಸಿದಾಗ ಆ ಇಬ್ಬರೂ ವ್ಯಕ್ತಿಗಳು ಆರೋಪಿಯ ಆದೇಶದಂತೆ 2003ನೇ ಇಸವಿ ಜುಲೈ ಮಾಹೆಯಲ್ಲಿ ನಡೆಸಲಾಗುವ ಐ.ಟಿ.ಐ ಪರೀಕ್ಷಾರ್ಥಿಗಳಿಗೆ ಪರೀಕ್ಷೆ ಬರೆಯುವ ಸಮಯದಲ್ಲಿ ಕಾಪಿ ಮಾಡಲು ಅವಕಾಶ ಮಾಡಿಕೊಡುತ್ತೇವೆಂದು ಭರವಸೆ ನೀಡಿ, ಪರೀಕ್ಷಾರ್ಥಿಗಳಿಂದ ಹಣ ವಸೂಲಿ ಮಾಡಿ ತಂದಿರುವುದಾಗಿ ತಿಳಿಸಿರುವರು– ಈ ರೀತಿ ಸಿಕ್ಕಿಬಿದ್ದ ವ್ಯಕ್ತಿಗಳೆಂದರೆ, ಶ್ರೀ ಹೆಚ್. ಬಾಬು, ತರಬೇತಿ ಅಧಿಕಾರಿ ಮತ್ತು ಶ್ರೀ ಪ್ರೇಮ್ ಕುಮಾರ್, ಪ್ರಥಮ ದರ್ಜೆ ಸಹಾಯಕರುಗಳಾಗಿದ್ದು, ಇವರುಗಳ ಮೇಲಿನ ವಿಚಾರಣೆ ಆಧಾರದ ಮೇಲೆ ಶೋಧನಾ ಮಹಜರನ್ನು ದಿನಾಂಕ:26.7.2003 ರಂದು ಮಧ್ಯಾಹ್ನ 1–45 ಘಂಟೆಯಿಂದ ಸಂಜೆ 5–30 ಘಂಟೆಯವರೆಗೆ ನಡೆಸಿ ಪಂಚರ ಸಮಕ್ಷಮ ವರದಿ ತಯಾರಿಸಲಾಯಿತು. ಮತ್ತು ಲಂಚ ನೀಡಲು ತಂದಿದ್ದ ಏಳು ಲಕ್ಷ ರೂಪಾಯಿಗಳು, ತಪಾಸಣೆಯ ಕಾಲಕ್ಕೆ ಜಂಟಿ ನಿರ್ದೇಶಕರ ಬಳಿ ರೂ. 10,000/– ಶ್ರೀ ಪ್ರೇಮ್ ಕುಮಾರ್ ರವರ ಬಳಿ ರೂ. 4480/– ಮತ್ತು ಶ್ರೀ ಹೆಚ್. ಬಾಬುರವರ ಬಳಿ ರೂ. 520/–ಗಳಿದ್ದು ಈ ಹಣವನ್ನು ಸಹ ಅಮಾನತ್ತುಪಡಿಸಲಾಯಿತು.

ಜಂಟಿ ನಿರ್ದೇಶಕರಾದ ಶ್ರೀ ಶಿವಲಿಂಗಮೂರ್ತಿರವರ ವಾಸದ ಮನೆಯನ್ನು ಶೋಧನೆ ಮಾಡಿ ವರದಿ ನೀಡುವಂತೆ ಅಂದಿನ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಟಿ. ಮಲ್ಲೇಶ್ ರವರಿಗೆ ಫಿರ್ಯಾದುದಾರರಾದ ಶ್ರೀ ಎ.ಎನ್. ರಾಜಣ್ಣ ಆರಕ್ಷಕ ಉಪ ಅಧೀಕ್ಷಕರು, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ನೀಡಿದ ಸೂಚನೆಯ ಮೇರೆಗೆ ಶ್ರೀ ಟಿ. ಮಲ್ಲೇಶ್, ಪಿ.ಐ. ನಗರ ವಿಭಾಗ, ಕರ್ನಾಟಕ ಲೋಕಾಯುಕ್ತರವರು ಶ್ರೀ ಶಿವಲಿಂಗಮೂರ್ತಿರವರ ವಾಸದ ಮನೆಯಾದ ನಂ. 102, ಬಿ. ಬ್ಲಾಕ್, ಟೆರೇಸ್, ಅಪಾರ್ಟ್‌ಮೆಂಟ್, ಬನಶಂಕರಿ ಮೂರನೇ ಹಂತ, ಬೆಂಗಳೂರು ಇಲ್ಲಿ ಪಂಚರೊಂದಿಗೆ ದಿನಾಂಕ:26.7.2003ರಂದು ಮಧ್ಯಾಹ್ನ 2–45 ಘಂಟೆಯಿಂದ ಸಂಜೆ 6–00ಘಂಟೆಯವರೆಗೆ ಶೋಧನಾ ಕಾರ್ಯ ನಡೆಸಿ ಮಹಜರನ್ನು ಸಿದ್ದಪಡಿಸಿ ಅಲ್ಲಿ ದೊರೆತ ನಗದು ಹಣ ರೂ. 12,15, 000/–ಗಳನ್ನು ತನಿಖಾಧಿಕಾರಿಗಳಾದ ಶ್ರೀ ಟಿ. ಮಲ್ಲೇಶ್ ರವರು ಅಮಾನತ್ತುಪಡಿಸಿಕೊಂಡಿರುತ್ತಾರೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ–1988ರ ಕಲಂ 7, 13(1)(ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಲಂಚ ನಿರೋಧ ಕಾಯ್ದೆ–1988ರ ಅನ್ವಯ ಕಲಂ, 7, 13(1)(ಡಿ) ಜೊತೆಗೆ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂದು ಸರ್ಕಾರ ಮನಗಂಡಿದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತನನ್ನು ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಯ ನಿಯಮ 8(20) ಹಾಗೂ 95(3)ನ್ನು ಓದಿಕೊಂಡಂತೆ ಕೆ.ಸಿ.ಎಸ್ (ಸಿಸಿಎ) ನಿಯಮ 1957ರ ನಿಯಮ 8(viii)ರ ಪ್ರಕಾರ ಕೆಲಸದಿಂದ ತೆಗೆದುಹಾಕಲು ಅಧಿಕಾರ ಹೊಂದಿರುತ್ತದೆ. ಮೇಲೆ ನಮೂದಿಸಿದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಮನಗಂಡು, ಆರೋಪಿ ಆರೋಪಣೆ ಎಸಗಿರುವ ಬಗ್ಗೆ ಸಾಬೀತಾಗಿರುವುದು ಮನವರಿಕೆಯಾಗಿದೆ. ಆದ್ದರಿಂದ ಲಂಚ ನಿರೋಧಕ ಕಾಯ್ದೆ–1988ರ ಅಡಿ ಆಪಾದಿತ ಸಾರ್ವಜನಿಕ ಅಧಿಕಾರಿ ಶ್ರೀ ಶಿವಲಿಂಗಮೂರ್ತಿ, ಜಂಟಿ ನಿರ್ದೇಶಕರು (ತರಬೇತಿ), ಉದ್ಯೋಗ ಮತ್ತು ತರಬೇತಿ ಇಲಾಖೆ, ವಿಭಾಗೀಯ ಕಛೇರಿ, ಗುಲ್ಬರ್ಗಾ ರವರನ್ನು ಕಲಂ 7 ಮತ್ತು 13(1)(ಡಿ) ಜೊತೆಗೆ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಕಾಇ 231 ಇಟಿಐ 2009, ಬೆಂಗಳೂರು, ದಿನಾಂಕ:9ನೇ ಜುಲೈ 2009

ಆರೋಪಿಯಾದ ಶ್ರೀ ಶಿವಲಿಂಗಮೂರ್ತಿ, ಜಂಟಿ ನಿರ್ದೇಶಕರು (ತರಬೇತಿ), ಉದ್ಯೋಗ ಮತ್ತು ತರಬೇತಿ ಇಲಾಖೆ, ವಿಭಾಗೀಯ ಕಛೇರಿ, ಗುಲ್ಬರ್ಗಾ ಇವರನ್ನು ಹುದ್ದೆಯಿಂದ ತೆಗೆದು ಹಾಕುವ /(ವಜಾಮಾಡುವ) ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಶ್ರೀ ಶಿವಲಿಂಗಮೂರ್ತಿ, ಜಂಟಿ ನಿರ್ದೇಶಕರು (ತರಬೇತಿ), ಉದ್ಯೋಗ ಮತ್ತು ತರಬೇತಿ ಇಲಾಖೆ, ವಿಭಾಗೀಯ ಕಛೇರಿ, ಗುಲ್ಬರ್ಗಾ ಇವರನ್ನು ಲಂಚ ನಿರೋಧಕ ಕಾಯ್ದೆ–1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ 13(2)ರ ಪ್ರಕಾರ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಇದೇ ಕಾಯ್ದೆಯ ಕಲಂ 19(1) (ಬಿ) ಅಡಿಯಲ್ಲಿ ಈ ಮೂಲಕ ಮಂಜೂರಾತಿಯನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1716

ವಿಮಲಾ ಕುಮಾರಿ

ಸರ್ಕಾರದ ಉಪ ಕಾರ್ಯದರ್ಶಿ

ಕಾರ್ಮಿಕ ಇಲಾಖೆ

ಸಮಾಜ ಕಲ್ಯಾಣ ಸಚಿವಾಲಯ

ವಿಷಯ : 2009–10ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ವತಿಯಿಂದ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ.

ಓದಲಾಗಿದೆ : 1 ಸರ್ಕಾರದ ಆದೇಶ ಸಂಖ್ಯೆ:ಸಕಇ 33 ಮೊದೇಶಾ 2008, ದಿ:31.12.2008.

2. ಪತ್ರ ಸಂಖ್ಯೆ:ಕವಶಿಸಸ/ಶಿಕ್ಷಣ/ಸಿಆರ್–4/2008–09 ದಿ:25.3.2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಪ್ರತಿ ಜಿಲ್ಲೆಗೆ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಯಂತೆ ಒಟ್ಟು 29 ಪದವಿ ಪೂರ್ವ ಕಾಲೇಜುಗಳನ್ನು 2009–10ನೇ ಸಾಲಿನಿಂದ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿತ್ತು. ನಂತರ ದಿನಾಂಕ:19.3.2009ರಂದು ಸರ್ಕಾರದ ಕಾರ್ಯದರ್ಶಿ ಸಮಾಜ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅಂತಹ ಪದವಿ ಪೂರ್ವ ಕೋರ್ಸ್ ಕಾಲೇಜುಗಳ ಸ್ಥಳ ಬದಲಾವಣೆ ಮಾಡಲು ತೀರ್ಮಾನಿಸಲಾಗಿದೆ. ದಿನಾಂಕ:31.12.2008ರ ಆದೇಶಕ್ಕೆ ತಿದ್ದುಪಡಿ ತರುವುದರ ಜೊತೆಗೆ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಸೃಜಿಸಲು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯ ನಿರ್ವಾಹಕ ನಿರ್ದೇಶಕರು, ಪ್ರಸ್ತಾವನೆ ಸಲ್ಲಿಸುತ್ತಾರೆ.

ಸದರಿ ಪ್ರಸ್ತಾವನೆ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸಕಇ 33 ಮೊದೇಶಾ 2008, ಬೆಂಗಳೂರು, ದಿನಾಂಕ:7ನೇ ಜುಲೈ 2009

ಸರ್ಕಾರಿ ಆದೇಶ ಸಂಖ್ಯೆ: ಸಕಇ 33 ಮೊದೇಶಾ 2008 ದಿನಾಂಕ:31.12.2008ನ್ನು ರದ್ದುಗೊಳಿಸುತ್ತಾ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ 2009–10ನೇ ಸಾಲಿನಲ್ಲಿ ಒಟ್ಟು 29 ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜುಗಳನ್ನು ಈ ಕೆಳಗಿನಂತೆ ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

(1) ಪರಿಶಿಷ್ಟ ಜಾತಿಯ ಪದವಿ ಪೂರ್ವ ವಸತಿ ಕಾಲೇಜುಗಳು

ಕ್ರ.ಸಂ.	ಜಿಲ್ಲೆ	ಕ್ರ.ಸಂ	ಜಿಲ್ಲೆ
1	ಬೆಂಗಳೂರು(ಗ್ರಾ)	2	ಚಿತ್ರದುರ್ಗ
3	ಕೋಲಾರ	4	ಮೈಸೂರು
5	ತುಮಕೂರು	6	ಚಾಮರಾಜನಗರ

7	ಹಾಸನ	8	ಗುಲ್ಬರ್ಗಾ
9	ಬಿಜಾಪುರ	10	ಚಿಕ್ಕಮಗಳೂರು
11	ದಾವಣಗೆರೆ	12	ಕೊಪ್ಪಳ
(2) ಪರಿಶಿಷ್ಟ ವರ್ಗದ ಪದವಿ ಪೂರ್ವ ವಸತಿ ಕಾಲೇಜುಗಳು			
13	ಬಳ್ಳಾರಿ	14	ರಾಯಚೂರು
(3) ಹಿಂದುಳಿದ ವರ್ಗದ ಪದವಿ ಪೂರ್ವ ವಸತಿ ಕಾಲೇಜುಗಳು			
15	ಬೆಂಗಳೂರು (ನ)	16	ಶಿವಮೊಗ್ಗ
17	ಧಾರವಾಡ	18	ಬಾಗಲಕೋಟೆ
19	ಹಾವೇರಿ	20	ಚಿಕ್ಕಬಳ್ಳಾಪುರ
21	ಮಂಡ್ಯ	22	ಉಡುಪಿ
23	ಕೊಡಗು	24	ಬೆಳಗಾಂ
25	ಉತ್ತರಕನ್ನಡ	26	ಗದಗ
(4) ಅಲ್ಪಸಂಖ್ಯಾತರ ಪದವಿ ಪೂರ್ವ ವಸತಿ ಕಾಲೇಜುಗಳು			
27	ರಾಮನಗರ	28	ದಕ್ಷಿಣ ಕನ್ನಡ
29	ಬೀದರ್		

ಅಂತಹ ಪದವಿ ಪೂರ್ವ ಕಾಲೇಜುಗಳಲ್ಲಿ ಈ ಕೆಳಗಿನಂತೆ ಹುದ್ದೆಗಳನ್ನು ಸೃಜಿಸಲು ಸಹ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕ್ರ.ಸಂ	ಹುದ್ದೆಯ ಪದನಾಮ	ವೇತನ ಶ್ರೇಣಿ (ರೂ)	ಪ್ರತಿ ಪದವಿ ಪೂರ್ವ ಕಾಲೇಜಿಗೆ ಮಂಜೂರಾದ ಹುದ್ದೆಗಳು	ಒಟ್ಟು ಹುದ್ದೆಗಳ ಸಂಖ್ಯೆ
1	ಪ್ರಾಂಶುಪಾಲರು	15200–25650	01	29
2	ಭಾಷಾ ಉಪನ್ಯಾಸಕರು	11400–21600	02	58
3	ಐಚ್ಛಿಕ ವಿಷಯ ಉಪನ್ಯಾಸಕರು	11400–21600	05	145
4	ನಿಲಯ ಪಾಲಕರು	10000–18150	01	29
5	ಪ್ರಥಮ ದರ್ಜೆ ಸಹಾಯಕರು (ಗಣಕ ಯಂತ್ರ ಜ್ಞಾನವುಳ್ಳವರು)	7275–13350	01	29
6	ಗ್ರೂಪ್–ಡಿ	4800–7275	02	58
7	ಅಡುಗೆಯವರು	5200–8200	04	116
8	ಅಡುಗೆ ಸಹಾಯಕರು	4800–7275	03	87
	ಒಟ್ಟು		19	551

ಆ ಸಂಬಂಧದ ವೆಚ್ಚವನ್ನು 2009–10ನೇ ಸಾಲಿನಲ್ಲಿ ಈ ಕೆಳಗಿನಂತೆ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗಳ ಅಡಿ ಭರಿಸತಕ್ಕದ್ದು.

ಕ್ರ.ಸಂ	ವರ್ಗ	ಲೆಕ್ಕ ಶೀರ್ಷಿಕೆ
1	ಪರಿಶಿಷ್ಟ ಜಾತಿ	2225–01–277–0–62
2	ಪರಿಶಿಷ್ಟ ವರ್ಗ	2225–02–277–0–34
3	ಹಿಂದುಳಿದ ವರ್ಗ	2225–03–277–2–62
4	ಅಲ್ಪಸಂಖ್ಯಾತರು	2225–03–277–2–63

ಷರತ್ತುಗಳು:

(1) ಈ ಪದವಿ ಪೂರ್ವ ಕಾಲೇಜುಗಳಲ್ಲಿ 2009–10ನೇ ಸಾಲಿಗೆ 11ನೇ ತರಗತಿಯನ್ನು ಹಾಗೂ 2010–11ನೇ ಸಾಲಿನಲ್ಲಿ 12ನೇ ತರಗತಿಯನ್ನು (ಸಹಶಿಕ್ಷಣದಲ್ಲಿ) ಪ್ರಾರಂಭಿಸತಕ್ಕದ್ದು.

(2) ಈ ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿ ಭಾಷಾ ವಿಷಯಗಳನ್ನು ಹೊರತುಪಡಿಸಿ ಉಳಿದ ವಿಷಯಗಳನ್ನು ಆಂಗ್ಲ ಮಾಧ್ಯಮದಲ್ಲಿ ನಡೆಸತಕ್ಕದ್ದು

(3) 2009–10ನೇ ಸಾಲಿನಲ್ಲಿ 11ನೇ ತರಗತಿಯನ್ನು ಎರಡು ವಿಷಯದ ಸಂಯೋಗದಲ್ಲಿ (combination) (ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ ಜೀವಶಾಸ್ತ್ರ ಮತ್ತು ಭೌತಶಾಸ್ತ್ರ ರಾಸಾಯನಶಾಸ್ತ್ರ, ಗಣಿತಶಾಸ್ತ್ರ, ಗಣಕಶಾಸ್ತ್ರ) ಪ್ರತಿ ಸಂಯೋಜನೆಗೆ 40 ವಿದ್ಯಾರ್ಥಿ ಪ್ರಮಾಣ ಮೀರದಂತೆ ದಾಖಲಾತಿ ಮಾಡಿಕೊಳ್ಳತಕ್ಕದ್ದು. ಈ ವಿದ್ಯಾರ್ಥಿಗಳ ಮಿತಿಯು 12ನೇ ತರಗತಿಗೂ ಅನ್ವಯವಾಗುತ್ತದೆ.

(4) ಯಾವುದೇ ವಿಷಯಗಳ ಸಂಯೋಗದಲ್ಲಿ (combination) ಕನಿಷ್ಠ 10 ವಿದ್ಯಾರ್ಥಿಗಳಿದ್ದು, ಗರಿಷ್ಠ ಪ್ರಮಾಣ 40ನ್ನು ಮೀರಬಾರದು.

(5) ಗಣಕ ವಿಜ್ಞಾನ ವಿಭಾಗದಲ್ಲಿ ಕನಿಷ್ಟ 10 ವಿದ್ಯಾರ್ಥಿಗಳಿಗೆ ಒಂದರಂತೆ (10:1) ಗಣಕ ಯಂತ್ರಗಳಿರಬೇಕು. 40 ವಿದ್ಯಾರ್ಥಿಗಳಿಗೆ 04 ಗಣಕ ಯಂತ್ರ, ಕೊಠಡಿ ಹಾಗೂ ಇತರೆ ಸೌಲಭ್ಯಗಳಿರಬೇಕು.

(6) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ವಿವಿಧ ವರ್ಗದ ವಿದ್ಯಾರ್ಥಿಗಳ ಪ್ರವೇಶಾತಿಗಾಗಿ ಜಾರಿಯಲ್ಲಿರುವ ಮೀಸಲಾತಿ ಅನುಪಾತವು ಈ ಪದವಿ ಪೂರ್ವ ಕಾಲೇಜುಗಳಿಗೂ ಅನ್ವಯವಾಗುತ್ತದೆ.

(7) ಯಾವುದೇ ಪದವಿ ಪೂರ್ವ ಕೋರ್ಸಿಗೆ ನಿಗದಿಪಡಿಸಿದ ಸೀಟುಗಳಲ್ಲಿ ಶೇಕಡ 50ರಷ್ಟನ್ನು ಹುಡುಗಿಯರಿಗೆ ಮತ್ತು ಉಳಿದ 50 ರಷ್ಟು ಹುಡುಗರಿಗೆ ಮೀಸಲಾಗಿಡತಕ್ಕದ್ದು. ಒಂದು ಪಕ್ಷ ಸಾಕಷ್ಟು ಸಂಖ್ಯೆಯಲ್ಲಿ ಹುಡುಗಿಯರು ಅಥವಾ ಹುಡುಗರು ಲಭ್ಯವಾಗದಿದ್ದಲ್ಲಿ ಅವರುಗಳ ಕೋಟಾವನ್ನು ಭರ್ತಿ ಮಾಡಲು ಆಂತರಿಕ ಬದಲಾವಣೆ ಮಾಡಿಕೊಳ್ಳತಕ್ಕದ್ದು.

(8) ಯಾವುದೇ ಜಿಲ್ಲೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ಪರೀಕ್ಷೆ ನಡೆಸಿ ಸಂಬಂಧಪಟ್ಟ ಜಿಲ್ಲೆಯಲ್ಲಿ ಪ್ರಾರಂಭಿಸುವ ಪದವಿ ಪೂರ್ವ ಕಾಲೇಜಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು. ಆದರೆ ಯಾವುದೇ ಜಿಲ್ಲೆಯಲ್ಲಿ ಆ ಜಿಲ್ಲೆಗೆ ಸೇರಿದ ಸಾಕಷ್ಟು ವಿದ್ಯಾರ್ಥಿಗಳು ಲಭ್ಯವಾಗದಿದ್ದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ರವರು ನಡೆಸುವ ಪ್ರವೇಶ ಪರೀಕ್ಷೆಗೆ ಹಾಜರಾದ ಇತರೆ ಜಿಲ್ಲೆಗಳ ಅಭ್ಯರ್ಥಿಗಳನ್ನು ಪರಿಗಣಿಸಬಹುದು.

(9) ಆಯಾ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಟ 50 ರಷ್ಟು ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಮಾತ್ರ ಹೊರ ಗುತ್ತಿಗೆ (out sourcing) ಆಧಾರದ ಮೇಲೆ ಉಪನ್ಯಾಸಕರ ಹುದ್ದೆಗಳಿಗೆ ನೇಮಿಸಿಕೊಳ್ಳತಕ್ಕದ್ದು. ಆದರೆ ಸಂಬಂಧಪಟ್ಟ ಸ್ನಾತಕೋತ್ತರ ಪದವಿಯ ಜೊತೆಗೆ ಬಿ.ಇ.ಡಿ. ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡತಕ್ಕದ್ದು.

(10) ಯಾವುದೇ ಸ್ನಾತಕೋತ್ತರ ಪದವಿಯಲ್ಲಿ (ಎಂ.ಎಸ್ಸಿ) ಕನಿಷ್ಟ 50 ರಷ್ಟು ಅಂಕಗಳನ್ನು ಪಡೆದಿದ್ದು ಕನಿಷ್ಟ 5 ವರ್ಷಗಳ ಬೋಧನಾ ಅನುಭವ ಹೊಂದಿರುವ ಅಭ್ಯರ್ಥಿಗಳನ್ನು ಹೊರ ಗುತ್ತಿಗೆ (out sourcing) ಆಧಾರದ ಮೇಲೆ ಕಾಲೇಜಿನ ಪ್ರಾಂಶುಪಾಲರ ಹುದ್ದೆಗೆ ನೇಮಿಸಿಕೊಳ್ಳತಕ್ಕದ್ದು. ಆದರೆ ಸಂಬಂಧಪಟ್ಟ ಸ್ನಾತಕೋತ್ತರ ಪದವಿಯ ಜೊತೆಗೆ ಬಿ.ಇ.ಡಿ. ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡತಕ್ಕದ್ದು.

(11) ಈ ಉಪನ್ಯಾಸಕರ/ಪ್ರಾಂಶುಪಾಲರ ಹುದ್ದೆಗಳನ್ನು ನಿಯೋಜನೆ ಮೇಲೆ ಶಿಕ್ಷಣ ಇಲಾಖೆಯಿಂದ ಸಹ ತುಂಬಬಹುದು.

(12) ಈ ನೇಮಕಾತಿ ತಾತ್ಕಲಿಕ ವ್ಯವಸ್ಥೆಯಾಗಿದ್ದು ಈ ಪದವಿ ಪೂರ್ವ ಕಾಲೇಜುಗಳ ವಿವಿಧ ಬೋಧಕ ಹಾಗೂ ಬೋಧಕೇತರ ಹುದ್ದೆಗಳಿಗೆ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸುವವರೆಗೆ ಜಾರಿಯಲ್ಲಿರುತ್ತದೆ.

(13) ಪದವಿ ಪೂರ್ವ ಕಾಲೇಜುಗಳನ್ನು ಸಂಬಂಧಪಟ್ಟ ಜಿಲ್ಲಾ ಕೇಂದ್ರಗಳಲ್ಲಿ ತಾತ್ಕಾಲಿಕವಾಗಿ ಪ್ರಾರಂಭಿಸಿ, ನಂತರ ಅವುಗಳನ್ನು ಜಿಲ್ಲೆಯ ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲು ಕ್ರಮಕ್ಕೈಗೊಳ್ಳತಕ್ಕದ್ದು.

(14) ಅಂತಹ ಪದವಿ ಕೋರ್ಸುಗಳಿಗೆ ಸಂಬಂಧಿಸಿದಂತೆ ಯಾವುದೇ ಇತರೆ ವಿಷಯದಲ್ಲಿ ಸೂಚನೆಗಳು ಇರದೇ ಇದ್ದಲ್ಲಿ ಹಾಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಜಾರಿಯಲ್ಲಿರುವ ಆದೇಶ ಮತ್ತು ನಿಯಮಗಳನ್ನು ಪಾಲಿಸತಕ್ಕದ್ದು.

(15) ಪದವಿ ಪೂರ್ವ ಕಾಲೇಜುಗಳಿಗೆ ಹೊಸ ಲೆಕ್ಕ ಶೀರ್ಷಿಕೆಗಳನ್ನು ನೀಡಿ ಅನುದಾನ ಬಿಡುಗಡೆಯಾಗುವವರೆಗೆ ಈಗಾಗಲೇ 2009–10ನೇ ಸಾಲಿನಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ವಹಣಾ ಲೆಕ್ಕ ಶೀರ್ಷಿಕೆಗಳಲ್ಲಿರುವ ಅನುದಾನವನ್ನು ಉಪಯೋಗಿಸಿಕೊಳ್ಳತಕ್ಕದ್ದು. ಹೆಚ್ಚುವರಿ ವೆಚ್ಚವನ್ನು ಆಯಾ ಇಲಾಖೆಗಳ ಆಯವ್ಯಯದಲ್ಲಿಯೇ ಭರಿಸಿಕೊಳ್ಳತಕ್ಕದ್ದು. ಅದಲ್ಲದೆ 2009–10ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಅಡಿ ರಾಜ್ಯ ವಲಯದ ಅಡಿ ಲೆಕ್ಕ ಶೀರ್ಷಿಕೆ 2225–01–102–0–08 ರಲ್ಲಿ ಒದಗಿಸಿರುವ ರೂ. 1044.49 ಲಕ್ಷಗಳನ್ನು ಸಹ ವಿನಿಯೋಗಿಸಿಕೊಳ್ಳಬಹುದು.

(16) ಈ ಪದವಿ ಪೂರ್ವ ಕಾಲೇಜುಗಳಿಗೆ 2010–11ನೇ ಸಾಲಿಗೆ ಬೇಕಾಗುವ ಅನುದಾನ ಒದಗಿಸಿಕೊಳ್ಳಲು ಸಹ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ಇದಕ್ಕೆ ಶಿಕ್ಷಣ ಇಲಾಖೆ ಹಾಗೂ ಆರ್ಥಿಕ ಇಲಾಖೆಯ ಸಹಮತಿಯನ್ನು ಕ್ರಮವಾಗಿ ಟಿಪ್ಪಣಿ ಸಂ:ಶಿಇ 98 ಯೋಯೋಕ 2009 ದಿನಾಂಕ:25.5.2009 ಮತ್ತು ಆಇ 300 ವೆಚ್ಚ-3/2009 ದಿನಾಂಕ:23.6.2009 ರಲ್ಲಿ ಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1719

ಎ.ಎಂ. ಚಿದಾನಂದಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ-I

ಸಮಾಜ ಕಲ್ಯಾಣ ಇಲಾಖೆ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಆದೇಶ ಸಂಖ್ಯೆ:ಪಸಂಮೀ 07 ಪಅವಿ 2009, ಬೆಂಗಳೂರು, ದಿನಾಂಕ:28ನೇ ಜುಲೈ 2009

ವಿಷಯ : ದೇವರಹಿಪ್ಪರಗಿ ಪಶುಆಸ್ಪತ್ರೆಯಲ್ಲಿನ ಎರಡು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಗಳ ಪೈಕಿ ಒಂದು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಯನ್ನು ಇಂಡಿ ಪಶುಆಸ್ಪತ್ರೆಗೆ ಸ್ಥಳಾಂತರಿಸುವ ಬಗ್ಗೆ.

ಓದಲಾಗಿದೆ : 1 ಆದೇಶ ಸಂಖ್ಯೆ:ಎಹೆಚ್ಎಫ್ 109 ವಿಎಹೆಚ್ 92, ದಿನಾಂಕ:17.3.1993.

2. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ :ಆಪಸಂ/ಡಿವಿಡಿ-3/ವಿವ-35/2007-08(33), ದಿನಾಂಕ:30.12.2008 ಹಾಗೂ 12.6.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಆದೇಶದಲ್ಲಿ ಬಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕಿನ ದೇವರಹಿಪ್ಪರಗಿ ಪಶುಚಿಕಿತ್ಸಾಲಯವನ್ನು ಪಶುಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿ ಒಂದು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಯನ್ನು ಮಂಜೂರು ಮಾಡಿದೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ದೇವರಹಿಪ್ಪರಗಿ ಈ ಹಿಂದೆ ಪಶುಚಿಕಿತ್ಸಾಲಯವಾಗಿದ್ದ ಸಂದರ್ಭದಲ್ಲಿ ಮತ್ತೊಂದು ಪಶುವೈದ್ಯಕೀಯ ಸಂಸ್ಥೆಯಿಂದ ಒಂದು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆ ಸ್ಥಳಾಂತರಗೊಂಡಿರುವುದಾಗಿಯೂ, ಹುದ್ದೆ ಸ್ಥಳಾಂತರ ಹಾಗೂ ದಿನಾಂಕ:17.3.1993ರ ಆದೇಶದನ್ವಯ ಹೊಸ ಹುದ್ದೆಯ ಮಂಜೂರಾತಿಯಿಂದಾಗಿ ಪ್ರಸ್ತುತ ದೇವರಹಿಪ್ಪರಗಿ ಪಶುಆಸ್ಪತ್ರೆಯಲ್ಲಿ ಒಟ್ಟು ಎರಡು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಗಳಿರುತ್ತದೆಂದು ತಿಳಿಸಿರುತ್ತಾರೆ. ಈ ಬಗ್ಗೆ ಬಿಜಾಪುರ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ದೇವರಹಿಪ್ಪರಗಿ ಪಶುಆಸ್ಪತ್ರೆಯಲ್ಲಿರುವ ಎರಡು ಸೂಪರ್ ವೈಸರ್ ಹುದ್ದೆಗಳಲ್ಲಿ ಒಂದು ಹುದ್ದೆಯನ್ನು ಇಂಡಿ ಪಶುಆಸ್ಪತ್ರೆಗೆ ಸ್ಥಳಾಂತರಿಸಲು ಸರ್ವಾನುಮತದಿಂದ ಅನುಮೋದನೆ ನೀಡಿದೆ ಹಾಗೂ ದೇವರಹಿಪ್ಪರಗಿ ಪಶುಆಸ್ಪತ್ರೆಯಿಂದ ಒಂದು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಯನ್ನು ಇಂಡಿ ಪಶುಆಸ್ಪತ್ರೆಗೆ ಸ್ಥಳಾಂತರಿಸುವುದರಿಂದ ದೇವರಹಿಪ್ಪರಗಿ ಪಶುಆಸ್ಪತ್ರೆಯ ದೈನಂದಿನ ಕಾರ್ಯಚಟುವಟಿಕೆಗಳಿಗೆ ತೊಂದರೆಯಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಇಂಡಿ ಪಶುಆಸ್ಪತ್ರೆ ತಾಲ್ಲೂಕು ಮಟ್ಟದ ಆಸ್ಪತ್ರೆಯಾಗಿದ್ದು ಅಲ್ಲಿ ಕಾರ್ಯಾಬಾಹುಳ್ಯ ಹೆಚ್ಚಾಗಿದ್ದು ಅಲ್ಲಿ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆ ಮಂಜೂರಾಗಿರುವುದಿಲ್ಲ. ಆದ್ದರಿಂದ ಜಿಲ್ಲಾ ಪಂಚಾಯತ್‌ನ ಅನುಮೋದನೆ ಹಾಗೂ ಬಿಜಾಪುರ ಜಿಲ್ಲಾ ಉಪನಿರ್ದೇಶಕರ ಕೋರಿಕೆಯಂತೆ ದೇವರಹಿಪ್ಪರಗಿ ಪಶುಆಸ್ಪತ್ರೆಯಲ್ಲಿರುವ ಎರಡು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಗಳಲ್ಲಿ ಒಂದು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಯನ್ನು ಲೆಕ್ಕಶೀರ್ಷಿಕೆ 2403-00-101-0-71 (ಯೋಜನೆ) ಅಡಿ ಸಿಬ್ಬಂದಿ ಸಮೇತ ಇಂಡಿ ಪಶುಆಸ್ಪತ್ರೆಗೆ ಸ್ಥಳಾಂತರಿಸಲು ಆದೇಶ ಹೊರಡಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸಿಬ್ಬಂದಿ ಮಾದರಿ (Norms) ಅನ್ವಯ ಪಶುಆಸ್ಪತ್ರೆಯಲ್ಲಿ ಒಂದು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆ ಇರಬೇಕಾಗುತ್ತದೆ. ಆ ಪ್ರಕಾರ ಇಂಡಿ ಪಶುಆಸ್ಪತ್ರೆಯಲ್ಲಿಯೂ ಒಂದು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆ ಇರಬೇಕಾಗಿದ್ದು, ಸದರಿ ಆಸ್ಪತ್ರೆಗೆ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆ ಮಂಜೂರಾಗಿರುವುದಿಲ್ಲ ಆದರೆ ಹೋಬಳಿ ಕೇಂದ್ರದಲ್ಲಿರುವ ದೇವರ ಹಿಪ್ಪರಗಿ ಪಶುಆಸ್ಪತ್ರೆಯಲ್ಲಿ ಪ್ರಸ್ತುತ ಎರಡು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆ ಇದ್ದು ಒಂದು ಹುದ್ದೆ ಹೆಚ್ಚುವರಿಯಾಗಿರುತ್ತದೆ. ಈ ಹೆಚ್ಚುವರಿ ಹುದ್ದೆಯನ್ನು ಇಂಡಿ ಪಶುಆಸ್ಪತ್ರೆಗೆ ಸಿಬ್ಬಂದಿ ಸಹಿತ ಸ್ಥಳಾಂತರಿಸುವುದರಿಂದ ದೇವರ ಹಿಪ್ಪರಗಿ ಪಶುಆಸ್ಪತ್ರೆಯ ದೈನಂದಿನ ಕಾರ್ಯಚಟುವಟಿಕೆಗಳಿಗೆ ತೊಂದರೆಯಾಗುವುದಿಲ್ಲ ಬದಲಾಗಿ ಕಾರ್ಯಬಾಹುಳ್ಯ ಹೆಚ್ಚಾಗಿರುವ ಇಂಡಿ ಪಶುಆಸ್ಪತ್ರೆಯ ದೈನಂದಿನ ಕಾರ್ಯಚಟುವಟಿಕೆಗಳಿಗೆ ಅನುಕೂಲವಾಗುವುದರ ಜೊತೆಗೆ ಒಂದು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆ ನೀಡಿದಂತಾಗುತ್ತದೆ. ಸದರಿ ಹುದ್ದೆಗೆ ಲೆಕ್ಕಶೀರ್ಷಿಕೆ: 2403-00-101-0-71 ಅಡಿ ಅನುದಾನ ಲಭ್ಯವಿದ್ದು, ಸಿಬ್ಬಂದಿ ಮತ್ತು ಲೆಕ್ಕಶೀರ್ಷಿಕೆ ಸಮೇತ ಸ್ಥಳಾಂತರಿಸುವುದರಿಂದ ಸರ್ಕಾರಕ್ಕೆ ಆರ್ಥಿಕವಾಗಿ ಹೊರೆಯಾಗುವುದಿಲ್ಲ ಹಾಗೂ ಯಾವುದೇ ರೀತಿಯ ವೆಚ್ಚ ತಗಲುವುದಿಲ್ಲ. ಈ ದಿಸೆಯಲ್ಲಿ ಎಲ್ಲಾ ಅಂಶಗಳನ್ನು

ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರ ದೇವರಹಿಪ್ಪರಗಿ ಪಶುಆಸ್ಪತ್ರೆಯಲ್ಲಿರುವ ಎರಡು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಗಳ ಪೈಕಿ ಒಂದು ಹುದ್ದೆಯನ್ನು ಲೆಕ್ಕಶೀರ್ಷಿಕೆ:2403–00–101–0–71 ಅಡಿ ಕಾರ್ಯನಿರತ ಸಿಬ್ಬಂದಿಯೊಂದಿಗೆ ಇಂಡಿ ಪಶುಆಸ್ಪತ್ರೆಗೆ ಸ್ಥಳಾಂತರಿಸಲು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಬಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕಿನ ದೇವರಹಿಪ್ಪರಗಿ ಪಶುಆಸ್ಪತ್ರೆಯಲ್ಲಿರುವ ಎರಡು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಗಳ ಪೈಕಿ ಒಂದು ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಯನ್ನು ಲೆಕ್ಕ ಶೀರ್ಷಿಕೆ:2403–00–101–0–71 (ಯೋಜನೆ) ಅಡಿ ಕಾರ್ಯನಿರತ ಸಿಬ್ಬಂದಿ ಸಮೇತ ಪಶುಆಸ್ಪತ್ರೆ, ಇಂಡಿ, ಇಂಡಿ ತಾಲ್ಲೂಕು ಬಿಜಾಪುರ ಜಿಲ್ಲೆ ಇಲ್ಲಿಗೆ ಸ್ಥಳಾಂತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1825

ಎಂ.ಪಿ. ನಾಗರಾಜ

ಪೀಠಾಧಿಕಾರಿ–2,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಪಶುಸಂಗೋಪನೆ–ಎ)

ವಸತಿ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂ:ವಇ 42 ಹೆಚ್ ಎಎಂ 1999 ದಿನಾಂಕ:10.5.2000.

ಪ್ರಸ್ತಾವನೆ:

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪುನರ್ರಚಿಸಲು ತೀರ್ಮಾನಿಸಿದ್ದು, ಅದರಂತೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ. ವಇ 22 ಹೆಚ್ಎಎಸ್ 2009, ಬೆಂಗಳೂರು, ದಿನಾಂಕ:1ನೇ ಆಗಸ್ಟ್ 2009

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಶ್ರಯ ಸಮಿತಿಯನ್ನು ಪುನರ್ರಚಿಸಲಾಗಿದೆ.

	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ ರಾಕೇಶ್, ಬಾಬು ಕಂಪೌಂಡ್, ಕೊಟ್ಟಾರ ಕ್ರಾಸ್ ರಸ್ತೆ, ಕಾಫಿಕಾಡ್ ಬಿಜೈ ಅಂಚೆ, ಮಂಗಳೂರು	ಪರಿಶಿಷ್ಟ ಜಾತಿ
2	ಶ್ರೀ ಶ್ರೀಧರ ಭಂಡಾರಿ, ಭಂಡಾರಿ ಮನೆ, ಅಂಚೆ, ಕಣ್ಣೂರು, ಮಂಗಳೂರು	ಹಿಂದುಳಿದ ವರ್ಗ
3	ಶ್ರೀಮತಿ ಫಾತೀಮಾ ಖಾನ್ ತಾಯಿ ಜಮೀಲಭಾನು, ಅಜಾದಿ ಕಂಪೌಂಡ್, ಕರ್ಬಲ ರಸ್ತೆ, ನಡುಪಳ್ಳಿ, ಹಿಂದೆ, ಕುದ್ರೋಳಿ ಮಂಗಳೂರು	ಅಲ್ಪಸಂಖ್ಯಾತರ (ಮಹಿಳೆ)
4	ಶ್ರೀ ದಿನಕರ ಶೆಟ್ಟಿ, ಭಂಡಾರಿ ಮನೆ, ಈಶ್ವರಸ್ಥಾನ ರಸ್ತೆ, ಕಂಬ್ಳ, ಮಂಗಳೂರು	ಸಾಮಾನ್ಯ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1882

ಕೆ.ಆರ್. ವಲ್ಲೂರ

ಪೀಠಾಧಿಕಾರಿ–2, ವಸತಿ ಇಲಾಖೆ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಆದೇಶ ಸಂಖ್ಯೆ:ಪಸಂಮೀ 342 ಪಸಸೇ 2009, ಬೆಂಗಳೂರು, ದಿನಾಂಕ: 3ನೇ ಆಗಸ್ಟ್, 2009

ವಿಷಯ : ಡಾ: ಬಸವರಾಜ ಮಠಪತಿ, ಪಶುವೈದ್ಯಾಧಿಕಾರಿ, ಪಶುಚಿಕಿತ್ಸಾಲಯ, ಸಿಂಧವಾಳ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರನ್ನು ಸರ್ಕಾರಿ ಸೇವೆಯಿಂದ ತೆಗೆದುಹಾಕುವ (Discharge) ಬಗ್ಗೆ.

ಓದಲಾಗಿದೆ: ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ಆಪಸಂ/ಸಿಬ್ಬಂದಿ–2/ವಿವ/12/2007–08, ದಿನಾಂಕ:30.6.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಡಾ:ಬಸವರಾಜ ಮಠಪತಿ, ಪಶುವೈದ್ಯಾಧಿಕಾರಿ ಇವರು ದಿನಾಂಕ:18.8.2008ರಂದು ಪಶುಚಿಕಿತ್ಸಾಲಯ,

ಸಿಂಧವಾಳ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇಲ್ಲಿ ಕರ್ತವ್ಯಕ್ಕೆ ಹಾಜರಾಗಿ ನಂತರ ದಿನಾಂಕ:19.8.2008ರಿಂದಲೇ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುತ್ತಾರೆ. ಈ ಬಗ್ಗೆ ಸಹಾಯಕ ನಿರ್ದೇಶಕರು, ಪಶುಆಸ್ಪತ್ರೆ, ಬಳ್ಳಾರಿ ಇವರ ವರದಿಯನ್ನಾಧರಿಸಿ ಸದರಿ ಅಧಿಕಾರಿಗೆ ಕರ್ತವ್ಯಕ್ಕೆ ಹಾಜರಾಗಲು ಪತ್ರ ಬರೆದಿದ್ದು, ಅದು ಸ್ವೀಕೃತಗೊಳ್ಳದೇ ತಿರಸ್ಕೃತಗೊಂಡು ವಾಪಸ್ಸು ಬಂದಿರುವುದಾಗಿಯೂ ಹಾಗೂ ಸದರಿ ಅಧಿಕಾರಿ ಇದುವರೆಗೂ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲವೆಂದು ಉಪನಿರ್ದೇಶಕರು ಮಾಹಿತಿ ನೀಡಿರುವುದಾಗಿ ತಿಳಿಸಿರುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಪಶುವೈದ್ಯಾಧಿಕಾರಿಗಳ ತೀವ್ರ ಕೊರತೆಯಿರುವುದರಿಂದ ಇಲಾಖಾ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದ್ದು ಇಂತಹ ಸನ್ನಿವೇಶದಲ್ಲಿ ಡಾ: ಬಸವರಾಜ ಮಠಪತಿ, ಪಶುವೈದ್ಯಾಧಿಕಾರಿ ದೀರ್ಘಕಾಲ ಅನಧಿಕೃತ ಗೈರುಹಾಜರಾಗಿರುವುದರಿಂದ ಹಾಗೂ ಪರೀಕ್ಷಾರ್ಥ ಅವಧಿಯಲ್ಲಿ ದುರ್ವರ್ತನೆ ತೋರಿ ಕರ್ತವ್ಯಲೋಪ ಎಸಗಿರುವುದರಿಂದ ಅವರನ್ನು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 6(1)ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ತೆಗೆದುಹಾಕಲು (Discharge) ಕೋರಿರುತ್ತಾರೆ.

ಡಾ: ಬಸವರಾಜ ಮಠಪತಿ, ಪಶುವೈದ್ಯಾಧಿಕಾರಿ ಇವರು ಕರ್ತವ್ಯಕ್ಕೆ ಹಾಜರಾದ ಮರುದಿನದಿಂದಲೇ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿ ಕಛೇರಿಯ ದೈನಂದಿನ ಕಾರ್ಯಚಟುವಟಿಕೆಗಳಿಗೆ ತೊಂದರೆ ಉಂಟು ಮಾಡಿರುತ್ತಾರೆ. ಈ ಬಗ್ಗೆ ಕರ್ತವ್ಯಕ್ಕೆ ಹಾಜರಾಗುವಂತೆ ಬಳ್ಳಾರಿ ಜಿಲ್ಲಾ ಉಪನಿರ್ದೇಶಕರು ನೋಟೀಸ್ ಜಾರಿಗೊಳಿಸಿದರೂ ನೋಟೀಸಿಗೆ ಸ್ಪಂದಿಸಿರುವುದಿಲ್ಲ ಹಾಗೂ ಕರ್ತವ್ಯಕ್ಕೂ ಹಾಜರಾಗಿರುವುದಿಲ್ಲ. ಈ ರೀತಿ ಪರೀಕ್ಷಾರ್ಥ ಅವಧಿಯಲ್ಲಿಯೇ ಅನಧಿಕೃತ ಗೈರುಹಾಜರಾಗಿ ಕರ್ತವ್ಯಲೋಪ ಎಸಗಿರುವುದರ ಜೊತೆಗೆ ದುರ್ವರ್ತನೆ ತೋರಿರುವುದು ಅವರಿಗೆ ಸರ್ಕಾರಿ ಸೇವೆಯಲ್ಲಿ ಮುಂದುವರೆಯುವ ಆಸಕ್ತಿ ಇಲ್ಲದಿರುವುದಾಗಿ ತೋರಿಸುತ್ತದೆ. ಇದರಿಂದಾಗಿ ಡಾ: ಬಸವರಾಜ ಮಠಪತಿ, ಪಶುವೈದ್ಯಾಧಿಕಾರಿ ಇವರನ್ನು ಸರ್ಕಾರಿ ಸೇವೆಯಿಂದ ತೆಗೆದುಹಾಕಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಡಾ:ಬಸವರಾಜ ಮಠಪತಿ, ಪಶುವೈದ್ಯಾಧಿಕಾರಿ, ಪಶುಚಿಕಿತ್ಸಾಲಯ, ಸಿಂಧವಾಳ ಬಳ್ಳಾರಿ ಜಿಲ್ಲೆ ಇವರು ಕರ್ತವ್ಯಕ್ಕೆ ಹಾಜರಾದ ಮರುದಿನದಿಂದಲೇ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದರಿಂದ ಹಾಗೂ ಪರೀಕ್ಷಾರ್ಥ ಅವಧಿಯಲ್ಲಿ ದುರ್ವರ್ತನೆ ತೋರಿ ಕರ್ತವ್ಯಲೋಪ ಎಸಗಿರುವುದು ದೃಢಪಟ್ಟಿರುವುದರಿಂದ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ರವರ ಶಿಫಾರಸ್ಸಿನಂತೆ ಡಾ: ಬಸವರಾಜ ಮಠಪತಿ, ಪಶುವೈದ್ಯಾಧಿಕಾರಿ ಇವರನ್ನು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು, 1977ರ ನಿಯಮ 6(1)ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ತೆಗೆದುಹಾಕಿ (Discharge) ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1929

ಎಂ.ಪಿ. ನಾಗರಾಜ

ಪೀಠಾಧಿಕಾರಿ–2,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಪಶುಸಂಗೋಪನೆ–ಎ)

ಆದೇಶ ಸಂಖ್ಯೆ:ಪಸಂಮೀ 239 ಪಸಸೇ 2008, ಬೆಂಗಳೂರು, ದಿನಾಂಕ: 10ನೇ ಆಗಸ್ಟ್, 2009

ವಿಷಯ : ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು ತೂಬುಗೆರೆ ಹೋಬಳಿಯ ಮೆಳೆಕೋಟೆ ಕೃತಕ ಗರ್ಭಧಾರಣಾ ಕೇಂದ್ರವನ್ನು ಪಶುಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸುವಿಕೆ.

ಓದಲಾಗಿದೆ: ಪತ್ರ ಸಂಖ್ಯೆ:ಆಪಸಂ/ಡಿವಿಡಿ–3/ವಿವ–21/2008–09, ದಿನಾಂಕ:8–9–2008, 31.10.2008, 28.2.2009 ಹಾಗೂ 5.5.2009.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಅಧ್ಯಕ್ಷರು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು ತೂಬುಗೆರೆ ಹೋಬಳಿಯ ಮೆಳೆಕೋಟೆ ಕೃತಕ ಗರ್ಭಧಾರಣಾ ಕೇಂದ್ರವನ್ನು ಪಶುಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸುವಂತೆ ಕೋರಿದ್ದನ್ನು ಅನುಸರಿಸಿ ಪರಿಶೀಲಿಸಲಾಗಿ 2003ರ ಜಾನುವಾರು ಗಣತಿಯಂತೆ ಮೆಳೆಕೋಟೆ ಹಾಗೂ ಸುತ್ತಮುತ್ತಲಿನ ಗ್ರಾಮಗಳಾದ ಮಾರಹಳ್ಳಿ, ಭೂಮೇನಹಳ್ಳಿ, ದೊಡ್ಡರಾಯಪ್ಪನಹಳ್ಳಿ ಚಿಕ್ಕರಾಯಪ್ಪನಹಳ್ಳಿ, ಚಿಕ್ಕರಾಯಪ್ಪನಹಳ್ಳಿ, ಗಂಟಿಗಾನಹಳ್ಳಿ ಮತ್ತು ಚೋಗೊಂಡನಹಳ್ಳಿ ಗ್ರಾಮಗಳು 2435 ಕುಕ್ಕುಟ ಹಾಗೂ 5422 ಜಾನುವಾರುಗಳು ಹೊಂದಿದ್ದು, ತೂಬುಗೆರೆ ಹೋಬಳಿಯಲ್ಲಿ ಒಟ್ಟು 75, 245 ಜಾನುವಾರುಗಳಿದ್ದು, ಅಲ್ಲಿ ಕೃತಕ ಗರ್ಭಧಾರಣಾ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು ಪಶುಚಿಕಿತ್ಸಾಲಯ ಇರುವುದಿಲ್ಲ ಎನ್ನುತ್ತ, ಮೆಳೆಕೋಟೆ ಗ್ರಾಮ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಹೈನುಗಾರಿಕೆ ಪ್ರಮುಖ ಕಸುಬಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಮಿಶ್ರತಳಿ ರಾಸುಗಳಿರುವುದರಿಂದ ಸದರಿ ಕೃತಕ ಗರ್ಭಧಾರಣಾ ಕೇಂದ್ರವನ್ನು

ಪಶುಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸಿದಲ್ಲಿ ಹೆಚ್ಚಿನ ಮಟ್ಟದಲ್ಲಿ ಪಶುವೈದ್ಯಕೀಯ ಸೇವೆಯನ್ನು ನೀಡಬಹುದಾಗಿರುತ್ತದೆಂದು ಶಿಫಾರಸ್ಸು ಮಾಡಿರುತ್ತಾರೆ. ಸದರಿ ಸಂಸ್ಥೆ ಪಶುಚಿಕಿತ್ಸಾಲಯವಾಗಿ ಉನ್ನತೀಕರಣಗೊಳ್ಳಲು ಎಲ್ಲಾ ಅರ್ಹತೆ ಹೊಂದಿರುತ್ತದೆಂದು ಮಾಹಿತಿ ನೀಡಿರುತ್ತಾರೆ. ಸದರಿ ಉನ್ನತೀಕರಣಕ್ಕೆ ಒಟ್ಟು ರೂ. 2.60 ಲಕ್ಷ ವಾರ್ಷಿಕ ವಂಟನ ಅವಶ್ಯಕವಾಗಿದ್ದು, ಸದರಿ ಅನುದಾನವನ್ನು ಲೆಕ್ಕಶೀರ್ಷಿಕೆ:2403–00–101–0–71 (ಯೋಜನೆ) (ತಾಲ್ಲೂಕು ಪಂಚಾಯತ್ ಕಾರ್ಯಕ್ರಮ)ಅಡಿ ಭರಿಸಲು ಮಂಜೂರಾತಿ ನೀಡುವಂತೆ ಹಾಗೂ ಒಂದು ಪಶುವೈದ್ಯಾಧಿಕಾರಿ ಹಾಗೂ ಒಂದು ಗ್ರೂಪ್–ಡಿ ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಮೇಳೆಕೋಟೆ ಕೃತಕ ಗರ್ಭಧಾರಣಾ ಕೇಂದ್ರವನ್ನು ಪಶುಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸಲು ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ತೂಬುಗೆರೆ ಹೋಬಳಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಜಾನುವಾರುಗಳಿದ್ದು, ಹೈನುಗಾರಿಕೆ ಪ್ರಮುಖ ಕಸುಬಾಗಿರುತ್ತದೆ ಹಾಗೂ ಅಲ್ಲಿ ಹೆಚ್ಚಿನ ಸಂಖ್ಯೆಯ ಮಿಶ್ರತಳಿ ರಾಸುಗಳಿರುತ್ತದೆ. ಮೆಳೆಕೋಟೆ ಕೃತಕ ಗರ್ಭಧಾರಣಾ ಕೇಂದ್ರವು ಪಶುಚಿಕಿತ್ಸಾಲಯವಾಗಿ ಉನ್ನತೀಕರಣಗೊಳ್ಳಲು ಎಲ್ಲಾ ಅರ್ಹತೆ ಹೊಂದಿದ್ದು., ಹೋಬಳಿಯ 6 ಗ್ರಾಮಗಳಿಗೆ ಕೇಂದ್ರ ಸ್ಥಾನದಲ್ಲಿದೆ. ಅಲ್ಲಿರುವ ಕೃತಕ ಗರ್ಭಧಾರಣಾ ಕೇಂದ್ರವನ್ನು ಪಶುಚಿಕಿತ್ಸಾಲಯವನ್ನಾಗಿ ಉನ್ನತೀಕರಿಸಿದರೆ ಪಶುವೈದ್ಯಾಧಿಕಾರಿ ಹುದ್ದೆ ದೊರೆಯುವುದರಿಂದ ಜಾನುವಾರುಗಳ ಚಿಕಿತ್ಸೆಗೆ, ಮಿಶ್ರತಳಿ ರಾಸುಗಳ ಅಭಿವೃದ್ಧಿಗೆ ಹಾಗೂ ಹೈನುಗಾರಿಕೆ ಚಟುವಟಿಕೆಗಳಿಗೆ ಅನುಕೂಲವಾಗುವುದರಿಂದ ತೂಬುಗೆರೆ ಹೋಬಳಿಯ ಮೆಳೆಕೋಟೆ ಕೃತಕ ಗರ್ಭಧಾರಣಾ ಕೇಂದ್ರವನ್ನು ಪಶುಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಸರ್ಕಾರ ಮಿಶ್ರತಳಿ ರಾಸುಗಳ ಅಭಿವೃದ್ಧಿ, ಹೈನುಗಾರಿಕೆ ಚಟುವಟಿಕೆಗಳಿಗೆ ನೆರವು ನೀಡಲು ಮತ್ತು ಜಾನುವಾರುಗಳ ಚಿಕಿತ್ಸೆ ಹಾಗೂ ರೈತಾಪಿ ವರ್ಗದವರಿಗೆ ಹೆಚ್ಚಿನ ಮಟ್ಟದ ಪಶುವೈದ್ಯಕೀಯ ಸೇವೆಗಳನ್ನು ಒದಗಿಸುವ ಸಲುವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ತೂಬುಗೆರೆ ಹೋಬಳಿಯ ಮೆಳೆಕೋಟೆ ಕೃತಕ ಗರ್ಭಧಾರಣಾ ಕೇಂದ್ರವನ್ನು ಪಶುಚಿಕಿತ್ಸಾಲಯವನ್ನಾಗಿ ಉನ್ನತೀಕರಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ 517 ವೆ. 4/2008, ದಿನಾಂಕ:26.6.2009ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1930

ಎಂ.ಪಿ. ನಾಗರಾಜ

ಪೀಠಾಧಿಕಾರಿ–2,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಪಶುಸಂಗೋಪನೆ–ಎ)

ಆದೇಶ ಸಂಖ್ಯೆ:ಪಸಂಮೀ 151 ಪಸಸೇ 2008, ಬೆಂಗಳೂರು, ದಿನಾಂಕ: 14ನೇ ಆಗಸ್ಟ್, 2009

ವಿಷಯ : ಹೊಸಪೇಟೆ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಯ ಸಹಾಯಕ ನಿರ್ದೇಶಕರ ಹುದ್ದೆ ರದ್ದಾದ ಪ್ರಯುಕ್ತ ಬಳ್ಳಾರಿ ಜಿಲ್ಲೆಯ ವಿವಿಧ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರಗಳನ್ನು ಸ್ಥಳಾಂತರಿಸುವಿಕೆ.

ಓದಲಾಗಿದೆ: ಪತ್ರ ಸಂಖ್ಯೆ:ಆಪಸಂ/ಡಿವಿಡಿ–3/ಕುರಿ ನಿಗಮ/2006–07, ದಿನಾಂಕ:19.5.2008, 19.5.2009 ಹಾಗೂ 17.6.2009.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆ, ಹೊಸಪೇಟೆ ಇಲ್ಲಿನ ಸಹಾಯಕ ನಿರ್ದೇಶಕರ ಹುದ್ದೆ ರದ್ದಾದ ಪ್ರಯುಕ್ತ, ಸದರಿ ಯೋಜನೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊಸಪೇಟೆ, ಮರಿಯಮ್ಮನಹಳ್ಳಿ, ತೋರಣಗಲ್ ಹಾಗೂ ಕುಡತಿನಿಯಲ್ಲಿರುವ ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರಗಳನ್ನು ಕಾರ್ಯನಿರತ ಹುದ್ದೆಗಳೊಂದಿಗೆ ಸ್ಥಳಾಂತರಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ. ಸದರಿ ಕುರಿ ವಿಸ್ತರಣಾ ಕೇಂದ್ರಗಳನ್ನು ಸ್ಥಳಾಂತರಿಸುವುದರಿಂದ ಪಶುವೈದ್ಯಕೀಯ ಸಂಸ್ಥೆಗಳಿಲ್ಲದ ಗ್ರಾಮಗಳಿಗೆ ಪಶುವೈದ್ಯಕೀಯ ಸೇವೆಯನ್ನು ಒದಗಿಸಬಹುದಾಗಿದ್ದು, ಇದರಿಂದ ಸರ್ಕಾರಕ್ಕೆ ಯಾವುದೇ ಹೆಚ್ಚಿನ ಆರ್ಥಿಕ ಹೊರೆ ಬೀಳುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಕೇಂದ್ರಗಳ ಸ್ಥಳಾಂತರ ಸಂಬಂಧ ಜಿಲ್ಲಾ ಪಂಚಾಯತ್ ಠರಾವು ಹಾಗೂ ಸ್ಥಳೀಯ ಶಾಸಕರ ಅಭಿಪ್ರಾಯವನ್ನು ಸಹ ಕಳುಹಿಸಿರುತ್ತಾರೆ.

ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರಗಳನ್ನು ಸ್ಥಳಾಂತರಿಸುವ ಸಂಬಂಧ ಸ್ಥಳೀಯ ಶಾಸಕರು ಅಭಿಪ್ರಾಯ ಕೋರಲಾಗಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಕುಡಿತಿನಿ ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರವನ್ನು

ಬಳ್ಳಾರಿ ತಾಲ್ಲೂಕಿನ ಹರಗಿನಡೋಣಿ ಗ್ರಾಮಕ್ಕೆ ಸ್ಥಳಾಂತರಿಸುವಂತೆ ಕೋರಿರುತ್ತಾರೆ. ಮಾನ್ಯ ಸಂಡೂರು ವಿಧಾನಸಭಾ ಕ್ಷೇತ್ರದ ಶಾಸಕರು ತೋರಣಗಲ್ ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರವನ್ನು ಸಂಡೂರು ತಾಲ್ಲೂಕಿನ ತಾರಾನಗರ ಗ್ರಾಮಕ್ಕೆ ಸ್ಥಳಾಂತರಿಸವಂತೆ ಕೋರಿರುತ್ತಾರೆ. ಮಾನ್ಯ ವಿಜಯನಗರ ಕ್ಷೇತ್ರದ ಶಾಸಕರು ಹೊಸಪೇಟೆ ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರವನ್ನು ಹೊಸಪೇಟೆ ತಾಲ್ಲೂಕಿನ ಹೊಸೂರು ಗ್ರಾಮಕ್ಕೆ ಸ್ಥಳಾಂತರಿಸುವಂತೆ ಕೋರಿರುತ್ತಾರೆ ಹಾಗೂ ಮಾನ್ಯ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರು, ಮರಿಯಮ್ಮನಹಳ್ಳಿ ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರವನ್ನು ಹೊಸಪೇಟೆ ತಾಲ್ಲೂಕಿನ ಡಣಾಯಕನಕೆರೆ ಗ್ರಾಮಕ್ಕೆ ಸ್ಥಳಾಂತರಿಸುವಂತೆ ಕೋರಿರುತ್ತಾರೆ ಈ ಬಗ್ಗೆ ಬಳ್ಳಾರಿ ಜಿಲ್ಲಾ ಪಂಚಾಯತ್‌ನ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯಲ್ಲಿ ಮಾನ್ಯ ಶಾಸಕರುಗಳ ಅಭಿಪ್ರಾಯದಂತೆ ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರಗಳನ್ನು ಸ್ಥಳಾಂತರಿಸಲು ಅನುಮೋದನೆ ನೀಡಿರುತ್ತಾರೆ.

ಡಾ: :ಡಿ.ಎಂ. ನಂಜುಂಡಪ್ಪನವರ ಪ್ರಾದೇಶಿಕ ಅಸಮತೋಲನಾ ವರದಿಯನ್ವಯ ಬಳ್ಳಾರಿ ಜಿಲ್ಲೆ ಹಿಂದುಳಿದ ಜಿಲ್ಲೆಯಾಗಿರುತ್ತದೆ. ಹೊಸಪೇಟೆ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಯಲ್ಲಿನ ಸಹಾಯಕ ನಿರ್ದೇಶಕರ ಹುದ್ದೆ ರದ್ದಾದ ಕಾರಣ ಅಲ್ಲಿ ಹೆಚ್ಚಿನ ಕಾರ್ಯಒತ್ತಡ ಇರುವುದಿಲ್ಲ. ಸದರಿ ಯೋಜನೆಯಲ್ಲಿನ ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರಗಳನ್ನು ಹುದ್ದೆಗಳೊಂದಿಗೆ ಸ್ಥಳಾಂತರಿಸುವುದರಿಂದ ಪಶುವೈದ್ಯಕೀಯ ಸಂಸ್ಥೆಗಳಿಲ್ಲದ ಗ್ರಾಮಗಳಿಗೆ ಪಶುವೈದ್ಯಕೀಯ ಸೇವೆಯನ್ನು ಒದಗಿಸಬಹುದಾಗಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶದ ರೈತಾಪಿ ವರ್ಗಕ್ಕೆ ಹಾಗೂ ಜಾನುವಾರುಗಳ ಚಿಕಿತ್ಸೆಗಾಗಿ ಅನುಕೂಲವಾಗುವುದಲ್ಲದೇ ಕುರಿ ತಳಿ ಸಂವರ್ಧನೆ/ಸಂರಕ್ಷಣೆಗೂ ಅನುಕೂಲವಾಗುತ್ತದೆ. ಉದ್ದೇಶಿತ ಸ್ಥಳಾಂತರದಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಬೀಳುವುದಿಲ್ಲ. ಈ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರ ಸ್ಥಳೀಯ ಶಾಸಕರ ಅಭಿಪ್ರಾಯ ಹಾಗೂ ಜಿಲ್ಲಾ ಪಂಚಾಯತ್ ನ ಅನುಮೋದನೆಯಂತೆ, ಹೊಸಪೇಟೆ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಯ ಸಹಾಯಕ ನಿರ್ದೇಶಕರ ಹುದ್ದೆ ರದ್ದಾಗಿರುವುದರಿಂದ ಸದರಿ ಯೋಜನೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರಗಳನ್ನು ಮಂಜೂರಾದ ಹುದ್ದೆಗಳೊಂದಿಗೆ ಅದೇ ಜಿಲ್ಲೆಯ ಪಶುವೈದ್ಯಕೀಯ ಸಂಸ್ಥೆಗಳಿಲ್ಲದ ಹಾಗೂ ಅವಶ್ಯಕತೆ ಇರುವ ಗ್ರಾಮಗಳಿಗೆ ಸ್ಥಳಾಂತರಿಸಲು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಹೊಸಪೇಟೆ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಯಲ್ಲಿನ ಸಹಾಯಕ ನಿರ್ದೇಶಕರ ಹುದ್ದೆ ರದ್ದಾದ ಪ್ರಯುಕ್ತ ಸದರಿ ಯೋಜನೆ ಅಡಿ ಕಾರ್ಯನಿರ್ವಹಿಸುತ್ತಿರುವ ಕೆಳಕಂಡ ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರಗಳನ್ನು ಅಂಕಣ-3ರಲ್ಲಿ ನಮೂದಿಸಿರುವ ಸ್ಥಳಕ್ಕೆ ಅಂಕಣ-4ರಲ್ಲಿ ನಮೂದಿಸಿರುವ ಹುದ್ದೆಗಳೊಂದಿಗೆ ಸ್ಥಳಾಂತರಿಸಿ ಆದೇಶಿಸಿದೆ.

ಕ್ರ.ಸಂ	ಕೇಂದ್ರ ಹಾಗೂ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳ	ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರಗಳನ್ನು ಸ್ಥಳಾಂತರಿಸಿದ ಸ್ಥಳ	ಸ್ಥಳಾಂತರಿಸಿದ ಹುದ್ದೆ ಹೆಸರು ಹಾಗೂ ಹುದ್ದೆಗಳ ಸಂಖ್ಯೆ
1	ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರ ಹೊಸಪೇಟೆ ಬಳ್ಳಾರಿ ಜಿಲ್ಲೆ	ಹೊಸೂರು ಹೊಸಪೇಟೆ ತಾಲ್ಲೂಕು ಬಳ್ಳಾರಿ ಜಿಲ್ಲೆ	ಪಶುವೈದ್ಯಕೀಯ ಪರೀಕ್ಷಕ- 01 ಡಿ- ದರ್ಜೆ -02
2	ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರ, ಮರಿಯಮ್ಮನಹಳ್ಳಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ	ಡಣಾನಾಯಕನಕೆರೆ ಹೊಸಪೇಟೆ ತಾಲ್ಲೂಕು ಬಳ್ಳಾರಿ ಜಿಲ್ಲೆ	ಪಶುವೈದ್ಯಕೀಯ ಪರೀಕ್ಷಕ- 01 ಡಿ- ದರ್ಜೆ -02
3	ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರ ತೋರಣಗಲ್, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ	ತಾರಾನಗರ, ಸಂಡೂರು ತಾಲ್ಲೂಕು ಬಳ್ಳಾರಿ ಜಿಲ್ಲೆ	ಪಶುವೈದ್ಯಕೀಯ ಪರೀಕ್ಷಕ- 01 ಡಿ- ದರ್ಜೆ -02
4	ಕುರಿ ಮತ್ತು ಉಣ್ಣೆ ವಿಸ್ತರಣಾ ಕೇಂದ್ರ ಕುಡತಿನಿ ಬಳ್ಳಾರಿ ಜಿಲ್ಲೆ	ಹರಗಿನಡೋಣಿ, ಬಳ್ಳಾರಿ ತಾಲ್ಲೂಕು ಬಳ್ಳಾರಿ ಜಿಲ್ಲೆ	ಪಶುವೈದ್ಯಕೀಯ ಪರೀಕ್ಷಕ- 01 ಡಿ- ದರ್ಜೆ -02

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1963

ಎಂ.ಪಿ. ನಾಗರಾಜ

ಪೀಠಾಧಿಕಾರಿ-2, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಪಶುಸಂಗೋಪನೆ-ಎ)

I-F-3-(★)

ವಸತಿ ಸಚಿವಾಲಯ

ವಿಷಯ : ನಿರ್ಮಲಜ್ಯೋತಿ 2ನೇ ಹಂತದ ಕಾಮಗಾರಿಗಳಿಗೆ 2009–10ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ:ವಇ 26 ಕೊಮಂಲೆ 07, ಬೆಂಗಳೂರು, ದಿನಾಂಕ:7.1.2008.
2. ಸರ್ಕಾರದ ಆದೇಶ ಸಂಖ್ಯೆ:ವಇ 26 ಕೊಮಂಲೆ 07, ಬೆಂಗಳೂರು, ದಿನಾಂಕ:29.3.2008.
3. ಆಯುಕ್ತರು, ಕಕೊನಿಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಕೊನಿಮ/ಲೆಪಶಾ/ಅನುದಾನ: ನಿಜ್ಯೋ:2:2008–09, ದಿನಾಂಕ:28.8.2008.
4. ಸರ್ಕಾರದ ಆದೇಶ ಸಂಖ್ಯೆ: ವಇ 26 ಕೊಮಂಲೆ 07, ಬೆಂಗಳೂರು, ದಿನಾಂಕ:4.9.2008
5. ಸರ್ಕಾರದ ಆದೇಶ ಸಂಖ್ಯೆ: ವಇ 26 ಕೊಮಂಲೆ 07, ಬೆಂಗಳೂರು, ದಿನಾಂಕ:15.1.2009
6. ಆಯುಕ್ತರು, ಕಕೊನಿಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಕೊನಿಮ/ಲೆಪಶಾ/ಅನಧಾನ:ನಿಜ್ಯೋ:2:2009–10/114, ದಿನಾಂಕ:20.5.2009

ಪ್ರಸ್ತಾವನೆ:

ನಿರ್ಮಲ ಜ್ಯೋತಿ ಯೋಜನೆಯನ್ನು ರೂ. 40.00 ಕೋಟಿಗಳಿಗೆ ಸೀಮಿತಗೊಳಿಸಿ ಸ್ಥಗಿತಗೊಳಿಸಬೇಕೆಂಬ ಷರತ್ತಿನೊಂದಿಗೆ ರೂ. 36.39 ಕೋಟಿ ಹಾಗೂ ಆನಂತರದ ಆಯುಕ್ತರ ಕೋರಿಕೆ /ಪ್ರಸ್ತಾವನೆ ಮೇರೆಗೆ ರೂ. 3.61 ಕೋಟಿ ಒಟ್ಟು 40.00 ಕೋಟಿ ಹಣವನ್ನು ಮೇಲೆ ಓದಲಾದ ಕ್ರಮ ಸಂಖ್ಯೆ(1) ಮತ್ತು (2)ರ ಆದೇಶದನ್ವಯ ಮಂಡಳಿಗೆ ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಆಯುಕ್ತರು 2008–09ನೇ ಸಾಲಿನ ಆಯವ್ಯಯದಲ್ಲಿ ನಿರ್ಮಲ ಜ್ಯೋತಿ ಕಾಮಗಾರಿಗಳಿಗೆ ರೂ. 2000.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಅಲ್ಲದೆ ಕಾಮಗಾರಿಗಳು ಪ್ರಗತಿಯಲ್ಲಿರುವುದರಿಂದ ರೂ. 1000.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಸಲ್ಲಿಸಿದ ಪ್ರಸ್ತಾವನೆಗೆ, ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ 1ನೇ ಮತ್ತು 2ನೇ ತ್ರೈಮಾಸಿಕ ಸೇರಿ ಒಟ್ಟು 1000.00 ಲಕ್ಷಗಳ ಅನುದಾನವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ ಅವರ ಆರ್ಥಿಕ ಅಧಿಕಾರ ವ್ಯಾಪ್ತಿಯಲ್ಲಿ ಬಿಡುಗಡೆ ಮಾಡಲಾಗಿರುತ್ತದೆ. ಕ್ರಮ ಸಂಖ್ಯೆ (5)ರನ್ವಯ 3ನೇ ಮತ್ತು 4ನೇ ತ್ರೈಮಾಸಿಕ ಕಂತಾಗಿ ಒಟ್ಟು ರೂ. 1000.00 ಲಕ್ಷಗಳನ್ನು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರಲ್ಲಿ ಮಂಡಳಿಯ ಆಯುಕ್ತರು ಈಗಾಗಲೇ ಸದರಿ ಯೋಜನೆಯ ಕೆಲವು ನಗರಗಳಲ್ಲಿ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿದ್ದು, ಇನ್ನು ಕೆಲವು ನಗರಗಳಲ್ಲಿ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಹಾಗೂ ನಿರ್ಮಲ ಜ್ಯೋತಿ ಯೋಜನೆ ಹಂತ–2 ರ ಕಾಮಗಾರಿಗಳನ್ನು ಮೇ–2009ರೊಳಗೆ ಭೌತಿಕವಾಗಿ ಪೂರ್ಣಗೊಳಿಸಿ ಅಂತಿಮ ಬಿಲ್ಲುಗಳನ್ನು ಪಾವತಿಸುವ ಸಲುವಾಗಿ 2009–10ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಮೊತ್ತ ರೂ. 1100 ಲಕ್ಷಗಳನ್ನು ಮಂಡಳಿಗೆ ಲೆಕ್ಕಶೀರ್ಷಿಕೆ 2217–04–191–2–02 ಕೊಳಚೆ ಸುಧಾರಣೆಯಡಿಯಲ್ಲಿ ಬಿಡುಗಡೆ ಮಾಡಲು ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.,

ಸರ್ಕಾರದ ಆದೇಶ ಸಂಖ್ಯೆ:ವಇ 26 ಕೊಮಂಲೆ 2007, ಬೆಂಗಳೂರು, ದಿನಾಂಕ:11ನೇ ಆಗಸ್ಟ್, 2009

ನಿರ್ಮಲ ಜ್ಯೋತಿ ಯೋಜನೆಯ 2ನೇ ಹಂತ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸುವ ಸಲುವಾಗಿ ರೂ. 3.66 ಕೋಟಿ (ಮೂರು ಕೋಟಿ ಅರವತ್ತಾರು ಲಕ್ಷಗಳು ಮಾತ್ರ) ಅನುದಾನವನ್ನು 2009–10ನೇ ಸಾಲಿನ ಆಯವ್ಯಯದಲ್ಲಿ ಕೊಳಚೆ ಸುಧಾರಣೆ ಯೋಜನೆಯ ಲೆಕ್ಕ ಶೀರ್ಷಿಕೆ 2217–04–191–2–02 (P) ಅಡಿಯಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಬಿಡುಗಡೆ ಮಾಡಲಾಗಿದೆ. ಈಗಾಗಲೇ ನಿರ್ಮಲ ಜ್ಯೋತಿ ಯೋಜನೆಯ ಅನುಷ್ಠಾನದಲ್ಲಿ ಹೊರಡಿಸಲಾಗಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಗುತ್ತಿಗೆದಾರರಿಗೆ ಅಂತಿಮ ಪಾವತಿ ಮಾಡುವ ಮುನ್ನ 3rd Party Inspection ಮಾಡಿಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಈ ಮೊತ್ತವನ್ನು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ವಸತಿ ಇಲಾಖೆಯ ಉಪ ಕಾರ್ಯದರ್ಶಿಯವರ ಮೇಲು ಸಹಿ ಪಡೆದ ನಂತರ ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಎಫ್‌ಡಿ 377 ವೆಚ್ಚ–9/2009, ದಿನಾಂಕ:24.7.2009ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ.ಆರ್. ನಾಗರಾಜ

ಪೀಠಾಧಿಕಾರಿ–4, ವಸತಿ ಇಲಾಖೆ

ಪಿ.ಆರ್. 2005

ENERGY SECRETARIAT

Sub: Extension of time limit to implement 5.06 MW wind power project in favour M/s Marudhavel Industries Limited-reg.

Read:
1. Government Order No.DE 26 NCE 1999 dated:13.5.2009.
2. Show Cause Notice No:EN 449 NCE 2008 dated 27.12.2008.
3. Letter received from M/s Marudhavel Industries Limited vide No:MAIL/CTA/2008-09 dated:6.1.2009.
4. Government letter No. EN 449 NCE 2008 dated:9.4.2009.
5. Letter No. KRED /08/MIL/2009/1973 dated:9/17.6.2009 received from the Managing Director Karnataka Renewable Energy Development Limited, Bangalore.

PREAMBLE:

In Government Order read at (1) above, sanction has been accorded for the establishment of 5.06 MW wind power capacity to M/s Marudhavel Industries Limited at Madanayakanahalli, Arisinagundi wind zone.

Show Cause Notice read at (2) above was issued to M/s Marudhavel Industries Limited for no action was taken for the implementation of the above project and show Cause why action should not be taken to cancel the project and requested to reply for the show cause notice within 7 days from the date of receipt of the notice.

In the letter read at (3) above. M/s Marudhavel Industries Limited has furnished a reply to the Show Causes Notice stating that the progress done in the implementation of the project.

In the Government letter read at (4) above, KREDL has been asked to give its opinion on the reply furnished by M/s Marudhavel Industries Limited.

In the letter read at (5) above, the Managing Director, Karnataka Renewable Energy Development Limited, Bangalore has recommended for the extention of time limit upto the end of December 2009 for the implementation of the project.

The proposal has been examined in detail and hence, the following Order.

Government Order No. EN 449 NCE 2008, Bangalore, Dated:14th August, 2009

Government accords approval for the extension of time limit to implement 5.06 MW wind power capacity to M/s Marudhavel Industries Limited at Madanayakanahalli, Arisingundi wind zone upto 31st December 2009.

Government has got the power to cancel/modify this Order.

The other terms and conditions of the original allotment order shall be inforce.

By order and in the name of Governor of Karnataka

P.R. 2007

S.J. SAMPATH KUMAR
Under Secretary to Government
Energy Department

Sub: Transfer of 2.4 MW Wind Power Capacity in favour of M/s Cepco Industries Private Limited –reg.

Read:
1. Government Order No. EN:398:NCE:2005 dated 20.4.2006.
2. Government Order No. EN:209 NCE:2006 dated:26.5.2006.
3. Government Order No. EN:146 NCE:2007 dated 17.5.2007
4. Letter No. KRED /08/CEPCO-EIL/2009/2405 dated 4/6.8.2009 received from the Managing Director, Karnataka Renewable Energy Development Limited, Bangalore.

PREAMBLE:

In the Government order read at (1) and (2) above, sanction has been accorded for implementation of 261.61 MW capacity Wind Power Project at different locations of Belgaum and Gadag Districts in favour of M/s Enercon India Limited.

In the Government Order read at (3) above, sanction has been accorded for enhancement of the allotted wind power capacity from 32.2 MW to 86.4 MW [serial No. 2 and 4 G.O. read at (1)] and also for enhancement of allotted wind power capacity from 40.00 MW to 182.4 MW [serial No.9 G.O. read at (1)] above in favour of M/s Enercon India Limited.

The Managing Director, Karnataka Renewable Energy Development Limited, Bangalore in his letter read at (4) above has recommended to the Government for transfer of 2.4 MW Wind Power capacity from out of sub-capacity of 182.4 MW of M/s Enercon India Limited in favour of M/s Cepco Industries Private Limited at Beladadi Village, Gadag Taluk, Gadag District.

The proposal has been examined in detail and the following orders issued:

Government Order No:EN 443 NCE 2009, Bangalore, Dated:17th August, 2009

Government accords approval for transfer of 2.4 MW Wind Power capacity from out of sub-capacity of 182.4 MW of M/s Enercon India Limited in favour of M/s Cepco Industries Private Limited as detailed below:

Identified potential place is a plain area situated at about 6 Km on the South-West of Gadag Town and it comprises agriculture area. It has gentle elevation of about 650 to 763 mtrs. The entire are is covered in the following Geographical co-ordinates:
Latitude: 15°15'43-15°25'0"N
Longitude: 75°31'15"- 75°36'57" E
Ridgepeaks:672,659,687,679,674,709,703,758,764,763,750m Amsl.

→

Village	SN	Taluk/District	Extent (A-G)
Beladadi	185	Gadag/Gadag	1.10
Beladadi	186	Gadag/Gadag	1.10
Beladadi	171/1	Gadag/Gadag	1.10
		Total	3.30.

This Order issues subject to the following Conditions:

1. M/s Cepco Industries Private Limited shall execute an agreement with Government within 45 (forty five) days from the date of issue of this Order.
2. PPA is assigned to HESCOM. HESCOM shall execute the PPA with M/s Cepco Industries Private Limited within a period of one month.
3. The Government has got power to Cancel/modify this Order.

The other terms and conditions of the Government Order read at (1) above shall IPSO FACTO applicable.

By order and in the name of the Governor of Karnataka

S.J. SAMPATH KUMAR

Under Secretary to Government

Energy Department

P.R. 2008

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ಸೇರ್ಪಡೆ

ಸಂಖ್ಯೆ:ಅಪಜೀ 162 ಎಫ್ ಡಬ್ಲ್ಯೂಎಲ್ 2008, ಬೆಂಗಳೂರು, ದಿನಾಂಕ:24ನೇ ಆಗಸ್ಟ್, 2009

ಸರ್ಕಾರದ ಆದೇಶ ಸಂಖ್ಯೆ:ಅಪಜೀ 162 ಎಫ್ ಡಬ್ಲ್ಯೂಎಲ್ 2008 ದಿನಾಂಕ:5.6.2009 ರಲ್ಲಿ ಕಾಡು ಪ್ರಾಣಿಗಳಿಂದ ಬೆಳೆ ಹಾನಿಯಾದ ಪ್ರಕರಣಗಳಿಗೆ ಮಂಜೂರು ಮಾಡಬಹುದಾದ ಪರಿಹಾರ ಧನವನ್ನು ಪರಿಷ್ಕರಿಸಿ ತಿದ್ದುಪಡಿ ಮಾಡಿ ಹೊರಡಿಸಿದ ಆದೇಶದ ಕೊನೆಯ ಕಂಡಿಕೆಯಲ್ಲಿ" ಸದರಿ ಆದೇಶ ದಿನಾಂಕ:5.6.2009 ರಿಂದ ಜಾರಿಗೆ ಬರುವುದು" ಎಂಬುದನ್ನು ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2029

ಪಿ.ಆರ್. ಕಲಾವತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಇಂಧನ ಸಚಿವಾಲಯ

ವಿಷಯ : ಮೆ:ಶ್ರೀ ಪ್ರಭುಲಿಂಗೇಶ್ವರ ಶುಗರ್ಸ್ ಅಂಡ್ ಕೆಮಿಕಲ್ಸ್ ಲಿಮಿಟೆಡ್ ರವರ 17.5. ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಯೋಜನೆಯನ್ನು 38.45 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ :
1 ಸರ್ಕಾರಿ ಪತ್ರ ಸಂಖ್ಯೆ:ಡಿಇ 64 ಎನ್‌ಸಿಇ 97 ದಿನಾಂಕ:22.11.1997.
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/04/ಎಸ್‌ಪಿಎಸ್‌ಸಿಎಲ್/09/1703 ದಿನಾಂಕ: 29.4.2009/ 18.5.2009.
3. ಕ್ರೆಡಲ್ ಪತ್ರ ಸಂಖ್ಯೆ:ಕೆಆರ್‌ಇಡಿ/04/ಎಸ್‌ಪಿಎಸ್‌ಸಿಎಲ್/09/2331 ದಿನಾಂಕ:15./24.7.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ ಮೆ:ಶ್ರೀ ಪ್ರಭುಲಿಂಗೇಶ್ವರ ಶುಗರ್ಸ್ ಮಿಲ್ಸ್ ರವರಿಗೆ ಬಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸಿದ್ದಾಪುರ ಎಂಬಲ್ಲಿ .17.5 ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ(2) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:ಶ್ರೀ ಪ್ರಭುಲಿಂಗೇಶ್ವರ ಶುಗರ್ಸ್ ಅಂಡ್ ಕೆಮಿಕಲ್ಸ್ ಲಿಮಿಟೆಡ್ ಇವರಿಗೆ ಅನುಮತಿಸಲಾದ 17.5 ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಯೋಜನಾ ಘಟಕವನ್ನು 38.45 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಪತ್ರದಲ್ಲಿ ಕ್ರೆಡಲ್‌ನ ವ್ಯವಸ್ಥಾಪಕ ನಿರ್ದೇಶಕರು ಕೋರಿರುವ ಮಾಹಿತಿ/ವಿವರಗಳನ್ನು ನೀಡಿ ಮೆ: ಶ್ರೀ ಪ್ರಭುಲಿಂಗೇಶ್ವರ ಶುಗರ್ಸ್ ಅಂಡ್ ಕೆಮಿಕಲ್ಸ್ ಲಿಮಿಟೆಡ್ ಇವರಿಗೆ ಅನುಮತಿಸಲಾದ 17.5 ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಉತ್ಪಾದನಾ ಘಟಕವು ಈಗಾಗಲೇ 2001 ರಲ್ಲಿ ಕಾರ್ಯಾರಂಭ ಮಾಡಿದ್ದು, ಕಂಪನಿಯ ಕೋರಿಕೆಯನ್ನು ಪರಿಗಣಿಸುವಂತೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:

ಸರ್ಕಾರದ ಆದೇಶ ಸಂಖ್ಯೆ:ಇಎನ್ 354 ಎನ್ ಸಿಇ 2009, ಬೆಂಗಳೂರು, ದಿನಾಂಕ: 22ನೇ ಆಗಸ್ಟ್, 2009

ಮೆ:ಶ್ರೀ ಪ್ರಭುಲಿಂಗೇಶ್ವರ ಶುಗರ್ಸ್ ಅಂಡ್ ಕೆಮಿಕಲ್ಸ್ ಲಿಮಿಟೆಡ್ ಇವರಿಗೆ ಬಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸಿದ್ದಾಪುರ ಎಂಬಲ್ಲಿ ಅನುಮತಿಸಲಾದ ಸಹ ವಿದ್ಯುತ್ ಯೋಜನಾ ಘಟಕದ ಸಾಮರ್ಥ್ಯವನ್ನು 17.5 ಮೆಗಾ ವ್ಯಾಟ್ ನಿಂದ 38.45 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿದೆ.

ಓದಲಾದ (1)ರ ನಿರಾಕ್ಷೇಪಣಾ ಪತ್ರದಲ್ಲಿನ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2030

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

INFRASTRUCTURE DEVELOPMENT SECRETARIAT

Sub: Development of State Highway-132 (ie, Sangankallu-Moka Road in Bellary) on PPP mode.

Ref: 1. Govt Order No:ID/115/ITS/2008 Bangalore Dated17th July 2009.

2. Tender notification No:KSHIP/IDD/SH-132 MOKA/966 Dated 11th Aug 09

PREAMBLE:

1. The Government vide Government order dated 17th July 2009 has accorded "in-principle approval" to take up the Development of State Highway-132(i.e, Sangankallu-Moka Road-Bellary) on PPP mode.
2. As per the Govt order at ref-(1) above, Karnataka State Highways Improvement Project (KSHIP) is the nodal agency for carrying out the procurement activities. The 'authority' for this contract would be the Executive Engineer, PWP & IWT division, Bellary.
3. As per the notification, the bidders are to be facilitated to down load the bid documents from the e-portal from August 24, 2009 KSHIP has submitted the bid documents for approval so as to upload the approved documents in the e-portal website.

Government Order No:ID:115:ITS:2008, Bangalore, Dated:24th August 2009

The State Government is pleased to accord:

1. Approval to the RFP document for issue to bidders through the e-procurement process.
2. Approval to nominate Executive Engineer, PWP & IWT division, Bellary as 'authority' for the project; the authority will invite the bids.
3. Karnataka State Highways Improvement Project (KSHIP) would liaise with the 'authority' periodically and report to Infrastructure Development Department (IDD)
4. Approval to initiate land acquisition and identify the utilities to be relocated.

By order and in the name of Governor of Karnataka

P.R. 2033

K.S. VENUGOPAL

Under Secretary to Government

Infrastructure Development Department

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಬರುವ ಹಾಲ್ ದೊಡ್ಡೇರಿಯಿಂದ ಮಾರ್ಗ ಸ್ಟೀಲ್ ಫ್ಯಾಕ್ಟರಿ, ಜೋಡಿದೇವರಹಳ್ಳಿ, ದೊಡ್ಡ, ಆಲದಮರ ಗೇಟ್ ರಸ್ತೆ–11 ಕಿ.ಮೀ. ಎಂ.ಡಿ.ಆರ್.–30 ರಸ್ತೆಯನ್ನು ಗ್ರಾಮೀಣ ರಸ್ತೆಯನ್ನಾಗಿ ಕೆಳದರ್ಜೆಗೊಳಿಸುವ ಬಗ್ಗೆ.

ಓದಲಾಗಿದೆ : ಮಾನ್ಯ ಶಾಸಕರು, ಶಿರಾ ವಿಧಾನಸಭಾ ಕ್ಷೇತ್ರ ಇವರ ಪತ್ರ ದಿನಾಂಕ:24.8.2009.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಮಾನ್ಯ ಶಾಸಕರು, ಶಿರಾ ವಿಧಾನಸಭಾ ಕ್ಷೇತ್ರ ಇವರು ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಬರುವ ಹಾಲ್ ದೊಡ್ಡೇರಿಯಿಂದ ಮಾರ್ಗ ಸ್ಟೀಲ್ ಫ್ಯಾಕ್ಟರಿ, ಜೋಡಿದೇವರಹಳ್ಳಿ, ದೊಡ್ಡ ಆಲದಮರ ಗೇಟ್ ರಸ್ತೆ–11 ಕಿಮೀ, ಎಂ.ಡಿ.ಆರ್.–30 ರಸ್ತೆಯು ಪೂರ್ಣ ಡಾಂಬರ್ ಇಲ್ಲದೆ ಕೆಲವು ಭಾಗಗಳಲ್ಲಿ ಮಣ್ಣಿನ ರಸ್ತೆ, ಜಲ್ಲಿ ರಸ್ತೆ ಇದ್ದು, ಈ ರಸ್ತೆಯು ಗ್ರಾಮೀಣ ರಸ್ತೆಯಂತಿದ್ದು, ಈ ಮಾರ್ಗ ಬರುವ ಅನೇಕ ಹಳ್ಳಿಗಳ ರಸ್ತೆಯು ಹದಗೆಟ್ಟಿರುವುದರಿಂದ, ಈ ರಸ್ತೆಯನ್ನು ಗ್ರಾಮೀಣ ರಸ್ತೆಯನ್ನಾಗಿ ಕೆಳದರ್ಜೆಗೊಳಿಸಿ ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನೆ ಅಡಿಯಲ್ಲಿ ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಅನುವು ಮಾಡಿಕೊಡುವಂತೆ ಕೋರಿರುತ್ತಾರೆ.

ಮಾನ್ಯ ಶಾಸಕರ ಕೋರಿಕೆಯನ್ನು ಪರಿಶೀಲಿಸಲಾಗಿದ್ದು, ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಲೋಇ 511 ಸಿಆರ್‌ಎಂ 2009, ಬೆಂಗಳೂರು, ದಿನಾಂಕ:25ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಬರುವ ಹಾಲ್ ದೊಡ್ಡೇರಿಯಿಂದ ಮಾರ್ಗ ಸ್ಟೀಲ್ ಫ್ಯಾಕ್ಟರಿ, ಜೋಡಿದೇವರಹಳ್ಳಿ, ದೊಡ್ಡ ಆಲದಮರ ಗೇಟ್ ರಸ್ತೆ–11 ಕಿ.ಮೀ. ಎಂ.ಡಿ.ಆರ್–30

ರಸ್ತೆಯನ್ನು ಗ್ರಾಮೀಣ ರಸ್ತೆಯನ್ನಾಗಿ ಕೆಳದರ್ಜೆಗೊಳಿಸಿ (Denotify) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಗೆ ವರ್ಗಾಯಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2063

ಎಸ್.ಆರ್. ರೇವಣ್ಣ

ಸರ್ಕಾರದ ಅಧೀನ ಕಾರ್ಯದರ್ಶಿ

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

(ಸಂಪರ್ಕ)

ಕಂದಾಯ ಸಚಿವಾಲಯ

ವಿಷಯ : ಪ್ರವಾಹ ಪೀಡಿತ ಗ್ರಾಮಗಳನ್ನು ಸ್ಥಳಾಂತರಿಸಲು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :

1 ಜಿಲ್ಲಾಧಿಕಾರಿಗಳಿಂದ ಬಂದಿರುವ ಬೇಡಿಕೆ ಪತ್ರಗಳು

2. ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 1 ಟಿಎಸ್‌ವೈ 2008 ದಿ:26.2.08.

3. ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 1 ಟಿಎಸ್‌ವೈ 2008 ದಿ:31.3.08

4. ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 1 ಟಿಎಸ್‌ವೈ 2008 (ಭಾ–1) ದಿ:16.8.08

5. ಜಿಲ್ಲಾಧಿಕಾರಿಗಳು, ಗದಗ್ ಜಿಲ್ಲೆ ಇವರ ಅ.,ಸ.ಪತ್ರ ಸಂ:ಭೂಸ್ವಾಧೀನ/ಇತರೆ, ವಹಿ–32/2007–08, ದಿ:22.5.2009.

ಪ್ರಸ್ತಾವನೆ:

2007ನೇ ಸೆಪ್ಟೆಂಬರ್ ಮಾಹೆಯಲ್ಲಿ ಬಿದ್ದ ಭಾರಿ ಮಳೆಯಿಂದ ಬಾಗಲಕೋಟೆ, ಧಾರವಾಡ, ಗದಗ್ ಜಿಲ್ಲೆಗಳಲ್ಲಿ 30 ಗ್ರಾಮಗಳು ಪ್ರವಾಹದಿಂದ ತೀವ್ರ ಹಾನಿಗೊಂಡಿದ್ದು, ಈ ಗ್ರಾಮಗಳನ್ನು ಹಂತ ಹಂತವಾಗಿ ಸ್ಥಳಾಂತರಿಸಲು ನಿರ್ಣಯಿಸಿ, ಒಂದನೇ ಹಂತದಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಆದೇಶದಂತೆ ಬಾಗಲಕೋಟೆ ಜಿಲ್ಲೆಗೆ ರೂ. 475.88 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿನ ಆದೇಶದಂತೆ 2ನೇ ಹಂತದಲ್ಲಿ ಗದಗ್ ಜಿಲ್ಲೆಗೆ ಹೊಳೆಮಣ್ಣೂರು ಮತ್ತು ಕುರ್ಲಗೇರಿ ಗ್ರಾಮಗಳನ್ನು ಸ್ಥಳಾಂತರಿಸಲು ರೂ. 100.00 ಲಕ್ಷ ಮತ್ತು ಧಾರವಾಡ ಜಿಲ್ಲೆಗೆ ಅರಹಟ್ಟಿ ಮತ್ತು ಕೊಂಗವಾಡ ಗ್ರಾಮಗಳನ್ನು ಸ್ಥಳಾಂತರಿಸಲು 108 ಲಕ್ಷ ರೂ.ಗಳ ಅನುದಾನವನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ಸರ್ಕಾರದ ಆದೇಶದಲ್ಲಿ ಧಾರವಾಡ ಜಿಲ್ಲೆಗೆ ರೂ. 189.50 ಲಕ್ಷ ಹಾಗೂ ಗದಗ್ ಜಿಲ್ಲೆಗೆ ರೂ. 610.50 ಲಕ್ಷ ಅನುದಾನವನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಬಿಡುಗಡೆಮಾಡಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ (5)ರಲ್ಲಿನ ಪತ್ರದಲ್ಲಿ ಜಿಲ್ಲಾಧಿಕಾರಿಗಳು ಗದಗ್ ಜಿಲ್ಲೆ ಇವರು ಹೊಳೆ ಮಣ್ಣೂರು ಮತ್ತು ಕುರ್ಲಗೇರಿ ಗ್ರಾಮಗಳನ್ನು ಸ್ಥಳಾಂತರಿಸಲು ಹೆಚ್ಚುವರಿಯಾಗಿ ರೂ. 434.84 ಲಕ್ಷ ಬಿಡುಗಡೆ ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಧಾರವಾಡ, ಗದಗ್ ಮತ್ತು ಬಾಗಲಕೋಟೆ ಜಿಲ್ಲೆಯ 30 ಗ್ರಾಮಗಳನ್ನು ಸ್ಥಳಾಂತರಿಸಲು ತಗಲುವ ವೆಚ್ಚ ಒಟ್ಟು ರೂ. 13195.27 ಲಕ್ಷಗಳನ್ನು ಸಿಆರ್‌ಎಫ್ ಅಡಿಯಲ್ಲಿ ಬಿಡುಗಡೆಮಾಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರವು ಪತ್ರ ಸಂಖ್ಯೆ:48–3/2008–DM-III ದಿನಾಂಕ:6.6.2008ರಲ್ಲಿ CRF /NCCF ಮೊತ್ತ ದಿಂದ ತುರ್ತು ಪರಿಹಾರ ನೀಡಲು ಮಾತ್ರವೆಚ್ಚ ಮಾಡಬಹುದಾಗಿದೆ. ಆದರೆ ಗ್ರಾಮಗಳ ಸ್ಥಳಾಂತರಕ್ಕೆ ಅವಕಾಶ ಇರುವುದಿಲ್ಲವೆಂದು ತಿಳಿಸಿರುತ್ತದೆ. ಮತ್ತು ಈ ಪ್ರಸ್ತಾವನೆಗೆ ಹಣವನ್ನು ರಾಜ್ಯ ಯೋಜನೆಯಲ್ಲಿ ಸೇರಿಸಿ ಯೋಜನೆ ಆಯೋಗದಿಂದ ಪಡೆಯುವಂತೆ ತಿಳಿಸಿರುತ್ತದೆ. ಆರ್ಥಿಕ ಇಲಾಖೆಯು ಸಹ ಈ ಅನುದಾನವನ್ನು ಯೋಜನೆಯಲ್ಲಿ ಸೇರಿಸುವಂತೆ ಯೋಜನಾ ಇಲಾಖೆಯನ್ನು ಕೋರುವಂತೆ ತಿಳಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಮೇಲಿನ 3 ಜಿಲ್ಲೆಗಳ ಒಟ್ಟು 30 ಗ್ರಾಮಗಳನ್ನು ಸ್ಥಳಾಂತರಿಸುವ ಪ್ರಸ್ತಾವನೆಗೆ ಅನುದಾನ ಬಿಡುಗಡೆ ಮಾಡುವಂತೆ ಕೋರಿ, ಯೋಜನಾ ಇಲಾಖೆಗೆ ಕಳುಹಿಸಿಕೊಡಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಹೊಳೆಮಣ್ಣೂರು ಮತ್ತು ಕುರ್ಲಗೇರಿ ಗ್ರಾಮಗಳನ್ನು ಸ್ಥಳಾಂತರಿಸಲು ಗದಗ್ ಜಿಲ್ಲಾಧಿಕಾರಿಗಳು ರೂ. 434.84 ಲಕ್ಷ ಅನುದಾನ ಬಿಡುಗಡೆ ಮಾಡುವಂತೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಜಿಲ್ಲಾಧಿಕಾರಿಗಳು ರಸ್ತೆ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು NREGA ಯೋಜನೆಯಲ್ಲಿ ಕೈಗೊಳ್ಳುವುದು ಸೂಕ್ತವೆಂದು ತೀರ್ಮಾನಿಸಿದೆ. ಆಸ್ಪತ್ರೆ ಕಟ್ಟಡವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ, ಶಾಲಾ ಕಟ್ಟಡವನ್ನು ಸರ್ವಶಿಕ್ಷಣ ಅಭಿಯಾನ ಯೋಜನೆಯಡಿ ನಿರ್ಮಿಸಲು ಕ್ರಮಕೈಗೊಳ್ಳಬಹುದೆಂದು ತೀರ್ಮಾನಿಸಿದೆ. ಉಳಿದ ಹೆಚ್ಚುವರಿ ವೆಚ್ಚಕ್ಕಾಗಿ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲು ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಕಂಇ 1 ಟಿಎಸ್ ವೈ 2008, ಬೆಂಗಳೂರು, ದಿನಾಂಕ:22ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಗದಗ್ ಜಿಲ್ಲೆಯಲ್ಲಿ ಹೊಳೆ ಮಣ್ಣೂರು ಮತ್ತು ಕುರ್ಲಗೇರಿ ಗ್ರಾಮಗಳನ್ನು ಸ್ಥಳಾಂತರಿಸಲು ಜಿಲ್ಲಾಧಿಕಾರಿಗಳು, ಗದಗ್ ಜಿಲ್ಲೆ, ಇವರಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ರೂ. 100.00 ಲಕ್ಷ (ರೂ. ಒಂದು ನೂರು ಲಕ್ಷ ಮಾತ್ರ) ಗಳನ್ನು ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಪಿ.ಡಿ. ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು 2009-10ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2245-02-110-0-01-100 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಎಫ್‌ಡಿ 629 ವೆಚ್ಚ-7/2009 ದಿನಾಂಕ:18.7.2009ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2065 **ರಾಮಚಂದ್ರಯ್ಯ**

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಮತ್ತು ಸೇವೆಗಳು-2)

ವಿಷಯ : ಶ್ರೀಮತಿ ಭಾರತಿ ಹೊಳ್ಳಿಕೇರಿ, 2005ನೇ ತಂಡ ಪ್ರಸ್ತುತ ತಹಶೀಲ್ದಾರ್, ಸೇಡಂ ತಾಲ್ಲೂಕು ಇವರು ನೀಡಿರುವ ರಾಜೀನಾಮೆಯನ್ನು ಅಂಗೀಕರಿಸುವ ಕುರಿತು.

ಓದಲಾಗಿದೆ : 1 ದಿನಾಂಕ:22.6.2006ರ ಅಧಿಸೂಚನೆ ಸಂಖ್ಯೆ:ಕಂಇ 110 ಎಎಸ್‌ಡಿ 2006.

2. ಅಧಿಕೃತ ಜ್ಞಾಪನ ಸಂಖ್ಯೆ:ಕಂಇ 135 ಎಎಸ್‌ಡಿ 2006, ದಿನಾಂಕ:25.8.2006.

3. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 266 ಎಎಸ್‌ಡಿ 2007, ದಿನಾಂಕ:15.10.2007.

4. ಶ್ರೀಮತಿ ಭಾರತಿ ಹೊಳ್ಳಿಕೇರಿ, ತಹಶೀಲ್ದಾರ್, ಸೇಡಂ ಇವರ ಮನವಿ ದಿನಾಂಕ:26.8.2009.

ಪ್ರಸ್ತಾವನೆ:

ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು 1977ರ ಅಡಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ಸಂಖ್ಯೆ: ಇ(1) 41/2005-06/ PSC, Dt: 4.5.2006 ರನ್ವಯ ಆಯ್ಕೆಗೊಂಡ 2005ನೇ ಸಾಲಿನ 40 ಅಭ್ಯರ್ಥಿಗಳನ್ನು ಮೇಲೆ ಓದಲಾದ ಕ್ರಸಂ (1)ರ ದಿನಾಂಕ:22.6.2006ರ ಸರ್ಕಾರದ ಅಧಿಸೂಚನೆಯಲ್ಲಿ ತಹಶೀಲ್ದಾರ್, ಗ್ರೂಪ್-ಬಿ ಹುದ್ದೆಗೆ ಪರಿವೀಕ್ಷಣೆಯ ಮೇಲೆ ನೇಮಿಸಲಾಗಿತ್ತು. ಸದರಿ ಅಧಿಸೂಚನೆಯಲ್ಲಿ ಪರೀಕ್ಷಾರ್ಥ ತಹಶೀಲ್ದಾರರಾಗಿ ನೇಮಕಗೊಂಡ (ಕ್ರ.ಸಂ. 15) ಶ್ರೀಮತಿ ಭಾರತಿ ಹೊಳ್ಳಿಕೇರಿ ಇವರು ದಿನಾಂಕ:23.6.2006ರಂದು ಕಂದಾಯ ಇಲಾಖೆಯಲ್ಲಿ ಪರೀಕ್ಷಾರ್ಥ ತಹಶೀಲ್ದಾರ್ ಹುದ್ದೆಗೆ ಹಾಜರಾಗಿರುತ್ತಾರೆ.

ಉಲ್ಲೇಖ (2)ರ ಅಧಿಕೃತ ಜ್ಞಾಪನದಲ್ಲಿ ಪರೀಕ್ಷಾರ್ಥ ತಹಶೀಲ್ದಾರರುಗಳಿಗೆ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಲಾಗಿತ್ತು. ನಂತರ ಜಿಲ್ಲಾ ಮಟ್ಟದ ತರಬೇತಿಗಾಗಿ ಶ್ರೀಮತಿ ಭಾರತಿ ಹೊಳ್ಳಿಕೇರಿ ಇವರನ್ನು ರಾಯಚೂರು ಜಿಲ್ಲೆಗೆ ನಿಯೋಜಿಸಲಾಗಿತ್ತು.

ಉಲ್ಲೇಖ (3)ರ ಅಧಿಸೂಚನೆಯಲ್ಲಿ ಶ್ರೀಮತಿ ಭಾರತಿ ಹೊಳ್ಳಿಕೇರಿ ಇವರನ್ನು ಪುರಸಭಾ ತಹಶೀಲ್ದಾರ್, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು ಜಿಲ್ಲೆ ಇಲ್ಲಿನ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ. ಪ್ರಸ್ತುತ ಶ್ರೀಮತಿ ಭಾರತಿ ಹೊಳ್ಳಿಕೇರಿ, ತಹಶೀಲ್ದಾರ್, ಸೇಡಂ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇವರು ಉಲ್ಲೇಖ (4), ದಿನಾಂಕ: 26.8.2009ರಲ್ಲಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ, ತಮಗೆ ಐ.ಪಿ.ಎಸ್. ಸಿವಿಲ್ ಸೇವೆಗೆ ಆಯ್ಕೆಗೊಂಡಿರುವುದರಿಂದ ಸದರಿ ತಹಶೀಲ್ದಾರ್ ಹುದ್ದೆಗೆ ರಾಜೀನಾಮೆಯನ್ನು ನೀಡುತ್ತಿರುವುದಾಗಿ ಹಾಗೂ ಈ ರಾಜೀನಾಮೆಯನ್ನು ಅಂಗೀಕರಿಸಬೇಕೆಂದು ಶ್ರೀಮತಿ ಭಾರತಿ ಹೊಳ್ಳಿಕೇರಿ ತಹಶೀಲ್ದಾರ್, ಸೇಡಂ ಇವರು ಕೋರಿರುತ್ತಾರೆ.

ಸದರಿ ತಹಶೀಲ್ದಾರರ ರಾಜೀನಾಮೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 496 ಎಎಸ್‌ಡಿ 2009, ಬೆಂಗಳೂರು, ದಿನಾಂಕ:26ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಭಾರತಿ ಹೊಳ್ಳಿಕೇರಿ, 2005ನೇ ತಂಡ, ಪ್ರಸ್ತುತ ತಹಶೀಲ್ದಾರ್, ಸೇಡಂ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇವರು ತಹಶೀಲ್ದಾರ್ ಗುಂಪು–ಬಿ ಹುದ್ದೆಗೆ ಸಲ್ಲಿಸಿರುವ ಬೇಷರತ್ ರಾಜೀನಾಮೆಯನ್ನು ದಿನಾಂಕ:26.8.2009ರಿಂದ ಜಾರಿಗೆ ಬರುವಂತೆ ಅಂಗೀಕರಿಸಿ, ಕಂದಾಯ ಇಲಾಖೆಯ ಗುಂಪು–ಬಿ ತಹಶೀಲ್ದಾರ್ ಹುದ್ದೆಯಿಂದ ಬಿಡುಗಡೆಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2066

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು–3)

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲಾ ಸಹಾಯಕ ನಿರ್ದೇಶಕರ ಕಛೇರಿಗೆ ಪೀಠೋಪಕರಣ ಖರೀದಿಸಲು ಅನುದಾನ ನೀಡುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರ ಪತ್ರ ಸಂಖ್ಯೆ:ಕಸನಿ :66:ದಾಸ್ತಾನು:2008–09, ದಿನಾಂಕ:28.5.2009 ಮತ್ತು 17.7.2009.

ಪ್ರಸ್ತಾವನೆ:

ಮೇಲೆ ಓದಲಾದ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರ ದಿನಾಂಕ:28.5.2009 ಮತ್ತು 17.7.2009ರ ಪತ್ರಗಳಲ್ಲಿ ಬಾಗಲಕೋಟೆ ಜಿಲ್ಲಾ ಸಹಾಯಕ ನಿರ್ದೇಶಕರ ಕಛೇರಿಗೆ ಪೀಠೋಪಕರಣ ಖರೀದಿಸಲು 2008–09ನೇ ಸಾಲಿನಲ್ಲಿ ಹಣದ ಲಭ್ಯತೆ ಹಾಗೂ ಕಾಲಾವಕಾಶದ ಕೊರತೆಯಿಂದ ಪ್ರಸ್ತಾವನೆ ಸಲ್ಲಿಸಲು, ಸಾಧ್ಯವಾಗಿರುವುದಿಲ್ಲವೆಂದು, ಪ್ರಸ್ತುತ 2009–10ನೇ ಸಾಲಿನ ಆಯವ್ಯಯದಲ್ಲಿ ರೂ. 1,28,733.00ಗಳನ್ನು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಾಗಲಕೋಟೆ ಜಿಲ್ಲೆ ಇವರಿಗೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 61 ಕಸನಿ 2009, ಬೆಂಗಳೂರು, ದಿನಾಂಕ:27ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲಾ ಸಹಾಯಕ ನಿರ್ದೇಶಕರ ಕಛೇರಿಗೆ ಪೀಠೋಪಕರಣ ಖರೀದಿಸಲು ರೂ. 1,28,733.00 ಗಳನ್ನು (ರೂಪಾಯಿ ಒಂದು ಲಕ್ಷ ಇಪ್ಪತ್ತೆಂಟು ಸಾವಿರದ ಏಳುನೂರ ಮೂವತ್ತು ಮೂರು ಮಾತ್ರ) ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಾಗಲಕೋಟೆ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲು ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರಿಗೆ ಸರ್ಕಾರದ ಅನುಮತಿ ನೀಡಲಾಗಿದೆ.

ಈ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ಅದರ ನಿಯಮಗಳು 2000ನ್ನು ಅನುಸರಿಸಿ ಕ್ರಮ ವಹಿಸುವುದು. ಹಾಗೂ ಪೀಠೋಪಕರಣಗಳನ್ನು ಖರೀದಿಸುವ ಬಗ್ಗೆ ಬಿಲ್ಲನ್ನು ಸರ್ಕಾರದ ಮಾಹಿತಿಗಾಗಿ ಕಳುಹಿಸಿಕೊಡುವುದು.

ಈ ವೆಚ್ಚವನ್ನು 2009–10ನೇ ಸಾಲಿನ ಲೆಕ್ಕಶೀರ್ಷಿಕೆ 2205–00–001–0–01–059 (ಯೋಜನೆ) ಇದರಡಿ ಭರಿಸತಕ್ಕದ್ದು.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಶಿಇ 1815/ಐಎಫ್(ಬಿ&ಎ) 2009 ದಿನಾಂಕ:14.8.2009ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2067

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

(ಆಡಳಿತ ಕನ್ನಡ)

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : 2009–10ನೇ ಸಾಲಿನಲ್ಲಿ ಪ್ರಧಾನ ಲೆಕ್ಕಶೀರ್ಷಿಕೆ 5054 ರ ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ 2ನೇ ತ್ರೈಮಾಸಿಕ ಕಂತನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ : 1 ಸರ್ಕಾರದ ಆದೇಶ ಸಂಖ್ಯೆ:ಲೋಇ 59 ಇಎಪಿ 2008, ಬೆಂಗಳೂರು, ದಿನಾಂಕ:22.6.2009

2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಪತ್ರ ಸಂಖ್ಯೆ:ಕರಅನಿನಿ/ವ್ಯ.ನಿ./2009–10/ದಿನಾಂಕ:16.7.2009.

ಪ್ರಸ್ತಾವನೆ:

2009-10ನೇ ಸಾಲಿಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಲೆಕ್ಕಶೀರ್ಷಿಕೆ 5054-80-190-0-01-132 (ಯೋಜನೆ) ಅಡಿಯಲ್ಲಿ ಬಂಡವಾಳ ಕಾಮಗಾರಿಗಳಿಗಾಗಿ ರೂ. 225.00 ಕೋಟಿಗಳನ್ನು ಮತ್ತು ಲೆಕ್ಕಶೀರ್ಷಿಕೆ 5054-80-190-0-01-133 (ಯೋಜನೆ) ಅಡಿಯಲ್ಲಿ ವಿಶೇಷ ಅಭಿವೃದ್ಧಿ ಯೋಜನೆಗಾಗಿ ರೂ., 100.00 ಕೋಟಿಗಳನ್ನು ಒದಗಿಸಲಾಗಿದ್ದು ಒಟ್ಟು ರೂ. 325.00 ಕೋಟಿಗಳ ಅನುದಾನ ಒದಗಿಸಲಾಗಿದೆ.

ಉಲ್ಲೇಖಿತ (1)ರ ದಿನಾಂಕ:22.6.2009ರ ಸರ್ಕಾರಿ ಆದೇಶದಲ್ಲಿ ರೂ. 51.55 ಕೋಟಿ ರೂ.ಗಳನ್ನು ಮೊದಲನೇ ತ್ರೈಮಾಸಿಕದ ಅವಧಿಗೆ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ.

ಉಲ್ಲೇಖಿತ (2)ರ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಇವರ ಪತ್ರದಲ್ಲಿ ಸದರಿ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ 2009ರ ಮಾಹೆಗಳ ಅಂತ್ಯಕ್ಕೆ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಬಾಕಿ ಇರುವ ಬಿಲ್ಲುಗಳನ್ನು ಪಾವತಿಸಲು 81.25 ಕೋಟಿ ರೂ.ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಲೋಇ 59 ಇಎಪಿ 2008, ಬೆಂಗಳೂರು, ದಿನಾಂಕ: 18ನೇ ಆಗಸ್ಟ್, 2009

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಕೈಗೊಂಡು ಪ್ರಗತಿಯಲ್ಲಿರುವ ಕಾಮಗಾರಿಗಳ ಬಾಕಿ ಬಿಲ್ಲುಗಳ ಪಾವತಿಗಾಗಿ 2009-10ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 5054-80-190-0-01-132 (ಯೋಜನೆ) ಇದರ ಅಡಿಯಲ್ಲಿ ಬಂಡವಾಳ ವೆಚ್ಚಕ್ಕಾಗಿ 56.25 ಕೋಟಿ ರೂ.ಗಳನ್ನು (ಐವತ್ತಾರು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮಾತ್ರ) ಎರಡನೇ ತ್ರೈಮಾಸಿಕ ಅವಧಿಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲಾಗಿದೆ.

ಮುಂದುವರೆದು, ನಿಗಮವು 56.25 ಕೋಟಿ ರೂ.ಗಳ (ಐವತ್ತಾರು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮಾತ್ರ) ಬಿಲ್ಲನ್ನು ಕೆ.ಎಫ್.ಸಿ 17(ಸಿ)4 ರಲ್ಲಿನಂತೆ ಮಹಾಲೇಖಪಾಲರಿಂದ (ಎ ಅಂಡ್ ಇ) ಆಥರೈಸೇಷನ್ ಇಲ್ಲದೆಯೇ ಮನ್ನಣೆ ಮಾಡುವುದು; ಹಾಗೂ ಸದರಿ ಬಿಲ್ಲಿನ ಮೊತ್ತಕ್ಕೆ ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ ಇವರ ಮೇಲುರುಜು ಮಾಡಿಸಿ, ಈ ಬಿಲ್ಲನ್ನು (ಸ್ವೀಕೃತದ ರಶೀತಿ) ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿಂದ ಡ್ರಾ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ:ಲೋಇ 665 ಆಕೋ-1/09 ದಿನಾಂಕ:18.8.2009 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2082

ಎಂ. ದೇವಿಪ್ರಸಾದ್

ಸರ್ಕಾರದ ಅಧೀನ ಕಾರ್ಯದರ್ಶಿ

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ

(ಇಎಪಿ)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ತಿದ್ದುಪಡಿ

ಸಂಖ್ಯೆ:ಲಾ 45 ಎಲ್‌ಸಿಎಲ್ 2009, ಬೆಂಗಳೂರು, ದಿನಾಂಕ:28ನೇ ಆಗಸ್ಟ್, 2009

ಸರ್ಕಾರದ ಆದೇಶ ಸಂಖ್ಯೆ:ಲಾ 45 ಎಲ್‌ಸಿಎಲ್ 2009 ದಿನಾಂಕ:9.7.2009ರ ಆದೇಶ ಭಾಗದ ಕಂಡಿಕೆ (1)ರಲ್ಲಿ ಲೆಕ್ಕ ಶೀರ್ಷಿಕೆ 2014-00-800-1-03-059 (ಯೋಜನೆ) ಎಂದು ನಮೂದಿಸಿರುವುದನ್ನು "ಲೆಕ್ಕಶೀರ್ಷಿಕೆ ಸಂಖ್ಯೆ:2014-00-114-0-03-104" (Lawyers welfare fund) ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಸರ್ಕಾರದ ಆದೇಶದ ಕಂಡಿಕೆ 2ರಲ್ಲಿ ನಮೂದಿಸಿರುವ "ರಿಜಿಸ್ಟ್ರಾರ್ ಜನರಲ್ ಕರ್ನಾಟಕ ಉಚ್ಚ ನ್ಯಾಯಾಲಯ" ಎನ್ನುವ ಬದಲಾಗಿ "ಅಡ್ವೋಕೇಟ್ ಜನರಲ್, ಕರ್ನಾಟಕ ಬೆಂಗಳೂರು" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2068

ಸಿ.ಎಂ. ಹೂಗಾರ

ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರು (ಆಡಳಿತ) ಹುದ್ದೆಯನ್ನು ಅಪರ ನಿರ್ದೇಶಕರು (ಆಡಳಿತ) ಎಂದು ತಾತ್ಕಾಲಿಕವಾಗಿ ಪದನಾಮೀಕರಿಸುವ ಬಗ್ಗೆ.

ಓದಲಾಗಿದೆ : 1 ಅಧಿಸೂಚನೆ ಸಂಖ್ಯೆ:ಸಿಆಸುಇ 104 ಆಸೇವ 2009, ದಿನಾಂಕ:11.6.09.

2. ಪತ್ರಸಂಖ್ಯೆ:ತೋಇ:ಆ:ಸಿ:ವಿನಿ1:28:09–10ದಿನಾಂಕ:23/24–06–09–ತೋಟಗಾರಿಕೆನಿರ್ದೇಶಕರಿಂದ

3. ಕಡತ ಸಂಖ್ಯೆ:ಕೃತೋಇ 216 ತೋಇವಿ 2009

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಅಧಿಸೂಚನೆ ದಿನಾಂಕ:11.6.09 ರಲ್ಲಿ ಶ್ರೀ ಎಸ್. ತಹಸೀನ್ ಅಹಮದ್, ಕೆ.ಎ.ಎಸ್. "(ಆಯ್ಕೆ ಶ್ರೇಣಿ) ಅಧಿಕಾರಿ, ಇವರನ್ನು ಜಂಟಿ ನಿರ್ದೇಶಕರು, ತೋಟಗಾರಿಕೆ ಇಲಾಖೆಗೆ ನೇಮಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ತೋಟಗಾರಿಕೆ ನಿರ್ದೇಶಕರು, ಪ್ರಸ್ತುತ ತೋಟಗಾರಿಕೆ ಇಲಾಖೆಯಲ್ಲಿ ಜಂಟಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಎಸ್. ತಹಸೀನ್ ಅಹಮದ್, ಕೆ.ಎ.ಎಸ್ ಇವರ ವೇತನ ಶ್ರೇಣಿಯು ರೂ. 24450–31800 ಆಗಿದ್ದು, ಇವರ ವೇತನವು ತೋಟಗಾರಿಕೆಯ ಅಪರ ನಿರ್ದೇಶಕರ ವೇತನ ಶ್ರೇಣಿ (ರೂ 22125–30300) ಗಿಂತಲೂ ಹೆಚ್ಚಾಗಿರುತ್ತದೆ. ಆದುದರಿಂದ, ಸದರಿಯವರ ಪದನಾಮವನ್ನು ಅಪರ ನಿರ್ದೇಶಕರು (ಆಡಳಿತ) ಎಂದು ಪದನಾಮೀಕರಿಸುವಂತೆ ಕೋರಿರುತ್ತಾರೆ. ಮೇಲೆ ಕ್ರಮಸಂಖ್ಯೆ (3)ರ ಕಡತದಲ್ಲಿ, ಶ್ರೀ ಎಸ್. ತಹಸೀನ್ ಅಹಮದ್ ರವರ ವೇತನವು ತೋಟಗಾರಿಕೆಯ ಅಪರ ನಿರ್ದೇಶಕರ ವೇತನ ಶ್ರೇಣಿಗಿಂತಲೂ ಹೆಚ್ಚಾಗಿರುವುದರಿಂದ, ಇಲಾಖೆಯಲ್ಲಿ ನಿರ್ದೇಶಕರ ನಂತರದ ಹುದ್ದೆಯು ಅಪರ ನಿರ್ದೇಶಕರ ಹುದ್ದೆಯಾಗಿದ್ದು, ಶ್ರೀ ಎಸ್. ತಹಸೀನ್ ಅಹಮದ್, ಕೆ.ಎ.ಎಸ್ ರವರು ಈ ಹುದ್ದೆಯಲ್ಲಿರುವ ತನಕ ಜಂಟಿ ನಿರ್ದೇಶಕರು (ಆಡಳಿತ) ಹುದ್ದೆಯ ಪದನಾಮವನ್ನು ಅಪರ ನಿರ್ದೇಶಕರು (ಆಡಳಿತ), ತೋಟಗಾರಿಕೆ ಇಲಾಖೆ ಎಂದು ತಾತ್ಕಾಲಿಕವಾಗಿ ಉನ್ನತೀಕರಿಸಲು ತೋಟಗಾರಿಕೆ ಇಲಾಖೆಯು ಸಹಮತಿ ನೀಡಿದೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 371 ಆಸೇಇ 09, ಬೆಂಗಳೂರು, ದಿನಾಂಕ:27ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಎಸ್. ತಹಸೀನ್ ಅಹಮದ್, ಕೆ.ಎ.ಎಸ್. (ಆಯ್ಕೆ ಶ್ರೇಣಿ) ಅಧಿಕಾರಿ, ಹಾಲಿ ಜಂಟಿ ನಿರ್ದೇಶಕರು (ಆಡಳಿತ), ತೋಟಗಾರಿಕೆ ಇಲಾಖೆ, ಬೆಂಗಳೂರು ಇವರ ಪದನಾಮವನ್ನು ದಿನಾಂಕ:15.6.09 ರಿಂದಲೇ ಜಾರಿಗೆ ಬರುವಂತೆ ಈ ಅಧಿಕಾರಿಯು ಈ ಹುದ್ದೆಯಲ್ಲಿ ಮುಂದುವರೆಯುವವರೆಗೆ ಅಪರ ನಿರ್ದೇಶಕರು (ಆಡಳಿತ), ತೋಟಗಾರಿಕೆ ಇಲಾಖೆ ಎಂದು ತಾತ್ಕಾಲಿಕವಾಗಿ ಪದನಾಮೀಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2070

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–2)

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಕೃಷಿ ಇಲಾಖೆಯ ಅಪರ ಕಾರ್ಯದರ್ಶಿ (ಆಹಾರ ಸಂಸ್ಕರಣೆ) ಹುದ್ದೆಗೆ ಪೂರಕ ಸಿಬ್ಬಂದಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : 1 ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 330 ಸಅಸೇ 2009 ದಿನಾಂಕ:19.6.2009.

2. ಅಧಿಸೂಚನೆ ಸಂಖ್ಯೆ:ಸಿಆಸುಇ 76 ಸೇಇಮು 2009 ದಿನಾಂಕ:19.6.2009.

3. ಕಡತ ಸಂಖ್ಯೆ:ಸಿಆಸುಇ 84 ಆಶೀಸೆ 09

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ:19.6.2009ರ ಆದೇಶದಲ್ಲಿ ಕೃಷಿ ಇಲಾಖೆಯಲ್ಲಿ ವೇತನ ಶ್ರೇಣಿ ರಹಿತ ಅಪರ ಕಾರ್ಯದರ್ಶಿ (ಆಹಾರ ಸಂಸ್ಕರಣೆ) ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಅಪರ ಕಾರ್ಯದರ್ಶಿ (ಆಹಾರ ಸಂಸ್ಕರಣೆ) ಹುದ್ದೆಗೆ ಡಾ:ಜಿ.ಕೆ. ವಸಂತಕುಮಾರ್, ಇವರನ್ನು ನೇಮಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ(3)ರಲ್ಲಿ ಓದಲಾದ ಕಡತದಲ್ಲಿ ಅಪರ ಕಾರ್ಯದರ್ಶಿ ಹುದ್ದೆಗೆ ಲಭ್ಯವಿರುವ ಪೂರಕ ಸಿಬ್ಬಂದಿ ಹುದ್ದೆಯನ್ನು ಸೃಜಿಸುವಂತೆ ಕೋರಲಾಗಿದೆ. ಈ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 330 ಸಲಸೇ 2009, ಬೆಂಗಳೂರು, ದಿನಾಂಕ:29ನೇ ಆಗಸ್ಟ್, 2009

ಕರ್ನಾಟಕ ಸರ್ಕಾರ ಸಚಿವಾಲಯದ ಕೃಷಿ ಇಲಾಖೆಯಲ್ಲಿನ ಸರ್ಕಾರದ ಅಪರ ಕಾರ್ಯದರ್ಶಿ (ಆಹಾರ ಸಂಸ್ಕರಣೆ) ಯವರ ಆಪ್ತ ಶಾಖೆಗೆ ಈ ಕೆಳಕಂಡ ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಲಾಗಿದೆ.

ಕ್ರ.ಸಂ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಪತ್ರಾಂಕಿತ ಆಪ್ತಸಹಾಯಕ/ಶೀಘ್ರಲಿಪಿಗಾರ	01 ಹುದ್ದೆ
2	ಕಿರಿಯ ಸಹಾಯಕ	01 ಹುದ್ದೆ
3	ದಲಾಯತ್	01 ಹುದ್ದೆ

ಈ ಮೇಲ್ಕಂಡ ಹುದ್ದೆಗಳನ್ನು ಮರು ಹೊಂದಾಣಿಕೆ ಮೂಲಕ (By Re-deployment) ಭರ್ತಿ ಮಾಡಲು ಸೂಚಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 976 ವೆಚ್ಚ 12/2009, ದಿನಾಂಕ:17.8.2009ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2071

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

ತಿದ್ದುಪಡಿ ಆದೇಶ

ಸಂಖ್ಯೆ:ಸಿಆಸುಇ 378 ಆಸೇಇ 09, ಬೆಂಗಳೂರು, ದಿನಾಂಕ:25ನೇ ಆಗಸ್ಟ್, 2009

ವಿಷಯ : 2005ನೇ ಸಾಲಿನ ಕೆ.ಎ.ಎಸ್ (ಸಮೂಹ-ಎ) (ಕಿರಿಯ ಶ್ರೇಣಿ) ಪರೀಕ್ಷಾರ್ಥಿಗಳ ಜನ್ಮದಿನಾಂಕವನ್ನು ಒಪ್ಪಿಕೊಳ್ಳುವ ಬಗ್ಗೆ-ಆದೇಶ.

ಓದಲಾಗಿದೆ : 1 ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 88 ಅಸೇವ 2006, ದಿ:27.6.06.

2. ಸರ್ಕಾರಿ ಆದೇಶ ಸಂಖ್ಯೆಸಿಆಸುಇ 378 ಆಸೇಇ 08, ಬೆಂಗಳೂರು ದಿ:27.6.09

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 378 ಆಸೇಇ 08, ದಿನಾಂಕ:27.6.09 ರಲ್ಲಿನ ಕ್ರಮ ಸಂಖ್ಯೆ 16ರಲ್ಲಿನ ಶ್ರೀಮತಿ ಕೆ.ಎಂ. ಗಾಯಿತ್ರಿ ಪರಿಷತ್ ಕಾರ್ಯದರ್ಶಿ, ಮೈಸೂರು ಮಹಾನಗರ ಪಾಲಿಕೆ, ಮೈಸೂರು ರವರ ಜನ್ಮ ದಿನಾಂಕ-ಕಲಂನಲ್ಲಿನ ದಿನಾಂಕ:20.4.74 (ಇಪ್ಪತ್ತು-ನಾಲ್ಕು-ಎಪ್ಪತ್ತನಾಲ್ಕು) ಎಂಬುದರ ಬದಲಾಗಿ, ದಿನಾಂಕ:24.4.74 (ಇಪ್ಪತ್ತನಾಲ್ಕು -ನಾಲ್ಕು-ಎಪ್ಪತ್ತನಾಲ್ಕು) ಎಂದು ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2072

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

ಸೇರ್ಪಡೆ

ಸಂಖ್ಯೆ:ಸಿಆಸುಇ 119 ವಿಮಾಆ 2009, ಬೆಂಗಳೂರು, ದಿನಾಂಕ:24ನೇ ಆಗಸ್ಟ್, 2009

ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆಗಳ ಅನುಮೋದನಾ ಸಮಿತಿ ರಚಿಸುವ ಬಗ್ಗೆ ಹೊರಡಿಸಿರುವ ದಿನಾಂಕ:1.12.2008ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 37 ವಿಮಾಆ 2008ರ ಆದೇಶದಲ್ಲಿನ ಕ್ರಮ ಸಂಖ್ಯೆ 10ರ ನಂತರ "ಕ್ರಮಸಂಖ್ಯೆ 11 ಪ್ರೊ ದೇಬಬ್ರತ್ ದಾಸ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು" ಎಂದು ಸೇರ್ಪಡೆ ಮಾಡಿ ಓದಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2073

ಜಿ.ಎಸ್. ಪ್ರಸನ್ನಕುಮಾರ

ಪೀಠಾಧಿಕಾರಿ-1, ಇ-ಆಡಳಿತ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಸು)

ಶಿಕ್ಷಣ ಸಚಿವಾಲಯ

ವಿಷಯ : ಕೇಂದ್ರ ಪುರಸ್ಕೃತ ಯೋಜನೆಯಾದ ಐ.ಸಿ.ಟಿ–ಫೇಸ್–3 ಯೋಜನೆಯಡಿಯಲ್ಲಿ 1763 ಸರ್ಕಾರಿ ಹಾಗೂ 2633 ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಗಣಕ ಹಾಗೂ ಗಣಕಾಧಾರಿತ ಶಿಕ್ಷಣವನ್ನು ಜಾರಿಗೊಳಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ : 1 ಕೇಂದ್ರ ಸರ್ಕಾರದ ಪತ್ರ ಸಂಖ್ಯೆ ಎಫ್ 11–25/2008, ದಿನಾಂಕ:19.2.2009.

2. ಸರ್ಕಾರದ ಆದೇಶ ಸಂಖ್ಯೆ ಇಡಿ:8:ಎಂ.ಪಿ.ಇ. 2009, ದಿನಾಂಕ:29.5.2009.

3. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆರವರ ಪತ್ರ ಸಂಖ್ಯೆ ಇ.ಟಿ.ಡಿ. (4) ಐ.ಸಿ.ಟಿ. ಫೇಸ್–3–34/ದಿನಾಂಕ:27.8.2009.

ಪ್ರಸ್ತಾವನೆ

(1) ಮೇಲೆ ಓದಲಾದ (1)ರ ಕೇಂದ್ರ ಸರ್ಕಾರದ ಪತ್ರದಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಾದ ಐ.ಸಿ.ಟಿ–ಫೇಸ್ 3 ಯೋಜನೆಯಡಿಯಲ್ಲಿ 1763 ಸರ್ಕಾರಿ ಹಾಗೂ 2633 ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಗಣಕ ಹಾಗೂ ಗಣಕಾಧಾರಿತ ಶಿಕ್ಷಣವನ್ನು ಜಾರಿಗೊಳಿಸಲು 3150.00 ಲಕ್ಷರೂಗಳನ್ನು ಬಿಡುಗಡೆ ಮಾಡಿದ್ದು, ಅದನ್ನು ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ.

(2) ಮೇಲೆ ಓದಲಾದ (3)ರ ಪತ್ರದಲ್ಲಿ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆರವರು, ಕೇಂದ್ರ ಪುರಸ್ಕøತ ಯೋಜನೆಯಾದ ಐ.ಸಿ.ಟಿ–ಫೇಸ್ 3ಯೋಜನೆಯಡಿಯಲ್ಲಿ 1763 ಸರ್ಕಾರಿ ಹಾಗೂ 2633 ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಗಣಕ ಹಾಗೂ ಗಣಕಾಧಾರಿತ ಶಿಕ್ಷಣವನ್ನು ಜಾರಿಗೊಳಿಸಲು 2009–10ನೇ ಸಾಲಿಗೆ ರಾಜ್ಯದ ಪಾಲು 25.00ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

(3) ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಇಡಿ:238:ಎಂ.ಸಿ.ಡಿ 2009 ಬೆಂಗಳೂರು, ದಿನಾಂಕ:26ನೇ ಆಗಸ್ಟ್, 2009

[ಇಡಿ:106:ಸ್ವೀಮರ(ಯುನಿಕ್) 2009, ದಿನಾಂಕ:26.8.2009]

(4) 2009–10ನೇ ಸಾಲಿಗೆ ಲೆಕ್ಕಶೀರ್ಷಿಕೆ 2202–02–109–0–14–059[ಯೋಜನೆ] ಅಡಿಯಲ್ಲಿ ನಿಗದಿಯಾಗಿರುವ 25.00ಕೋಟಿರೂಪಾಯಿಗಳ [ಇಪ್ಪತ್ತೈದು ಕೋಟಿ ರೂಪಾಯಿಗಳು ಮಾತ್ರ] ಮಿತಿಯೊಳಗೆ ಕೇಂದ್ರ ಪುರಸ್ಕೃತ ಯೋಜನೆಯಾದ ಐ.ಸಿ.ಟಿ–ಫೇಸ್ 3 ಯೋಜನೆಯಡಿಯಲ್ಲಿ ರಾಜ್ಯದಲ್ಲಿರುವ 2633 ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಗಣಕ ಹಾಗೂ ಗಣಕಾಧಾರಿತ ಶಿಕ್ಷಣವನ್ನು ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಬೆಂಗಳೂರು ಇವರ ಮೂಲಕ ಅನುಷ್ಠಾನಗೊಳಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿದೆ.

(5) ಈ ಯೋಜನೆಯಡಿಯಲ್ಲಿ ಗಣಕಗಳ ಖರೀದಿ ಮತ್ತು ತಾಂತ್ರಿಕ ಸಲಹೆ ಇತ್ಯಾದಿಗಳನ್ನು ಖಾಸಗಿ ಸಂಸ್ಥೆಗಳಿಂದ ಪಡೆಯುವಾಗ ಕ.ಸಾ.ಸಂ.ಪಾ.ಕಾಯ್ದೆ 1999 ನಿಯಮಗಳು 2000 ಪಾಲಿಸತಕ್ಕದ್ದು, ಹಾಗೂ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸಿ ಕಾರ್ಯ ಕ್ರಮವನ್ನು ಅನುಷ್ಠಾನಗೊಳಿಸತಕ್ಕದ್ದು.

(6) ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಮೊದಲು ಇ-ಆಡಳಿತ ಇಲಾಖೆಯಡಿಯ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಉನ್ನತಾಧಿಕಾರ ಸಮಿತಿಯ ಅನುಮೋದನೆಯನ್ನು ಪಡೆಯತಕ್ಕದ್ದು. ನಿಗದಿಯಾಗಿರುವ ಅನುದಾನದಲ್ಲಿ ಇಲಾಖೆಯ ಎಂ.ಪಿಕ್‌ನಲ್ಲಿ ನಿಗದಿಗೊಳಿಸಿರುವಂತೆ ಮೊದಲನೆಯ ಮತ್ತು ಎರಡನೆಯ ತ್ರೈಮಾಸಿಕ ಅನುದಾನವನ್ನು ಸೆಳೆಯಲು ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಇವರಿಗೆ ಅನುಮೋದನೆ ನೀಡಿದೆ.

(7) ಈ ಆದೇಶವನ್ನು ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಗಳು ಕ್ರಮವಾಗಿ ತಮ್ಮ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 1014 ವೆಚ್ಚ 8/09/ದಿನಾಂಕ:8.7.2009 ಮತ್ತು ಅನಧಿಕೃತ ಟಿಪ್ಪಣಿ ಸಂಖ್ಯೆ ಪಿಡಿ 60 ಎಂ & ಎಫ್ 2009/ ದಿನಾಂಕ:14.7.2009ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2074

ಐ.ಎಫ್. ಮಾಗಿ

ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ [ಯೋಜನೆ]

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಭದ್ರತಾ ವ್ಯವಸ್ಥೆಯನ್ನು ನೀಡುವ ಸಂಬಂಧ ವಿಶೇಷ ಕಾರ್ಯನಿರತಪಡೆ ಮತ್ತು ಜಾಗೃತದಳ ಶಾಖೆಗೆ ಹೆಚ್ಚುವರಿ ಪೊಲೀಸ್ ಸಿಬ್ಬಂದಿಗಳನ್ನು ನೇಮಿಸಲು ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ : 1 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರ, ಪತ್ರ ಸಂಖ್ಯೆ:ಬೆಂಅಪಾ/ಆ/ಸಿವಿ/ಉಕಾ-1/1355/2009-10, ದಿನಾಂಕ:31.12.2008 ಮತ್ತು 9.6.2009.

2. ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ ಪತ್ರ ಸಂಖ್ಯೆ:ಸಿಬ್ಬಂದಿ-6/01/2009-10, ದಿನಾಂಕ:5.5.2009.

ಮೇಲೆ ಓದಲಾದ ಉಲ್ಲೇಖ (1) ದಿನಾಂಕ:31.12.2008ರ ಪತ್ರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ನಗರದಲ್ಲಿ ದಿನಾಂಕ:25.7.2008ರಂದು ಸಂಭವಿಸಿದ ಸರಣಿ ಬಾಂಬ್‌ಸ್ಫೋಟ ಹಾಗೂ ಇತ್ತೀಚಿಗೆ ಮುಂಬೈ ಬಾಂಬ್‌ಸ್ಫೋಟದ ಹಿನ್ನೆಲೆಯಲ್ಲಿ ಸರ್ಕಾರದ ವಿವಿಧ ಕಛೇರಿಗಳ ಭದ್ರತ ವ್ಯವಸ್ಥೆಯನ್ನು ಬಲಗೊಳಿಸುವುದು ಅನಿವಾರ್ಯವಾಗಿದ್ದು, ಅದರಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸಹ ಸಾರ್ವಜನಿಕ ಸಂಪರ್ಕವಿರುವ ಪ್ರಮುಖ ಕಛೇರಿಗಳಲ್ಲಿ ಒಂದಾಗಿದ್ದು, ಪ್ರಾಧಿಕಾರದ ಕಛೇರಿಯ ಭದ್ರತಾ ವ್ಯವಸ್ಥೆಗೆ ಅಮೂಲಾಗ್ರ ಪರಿವೀಕ್ಷಣೆಗೆ 32 ಹೆಚ್ಚುವರಿ ಪೊಲೀಸ್ ಸಿಬ್ಬಂದಿ (ಶಸ್ತ್ರಪಡೆ) ಅವಶ್ಯಕತೆ ಇರುವುದಾಗಿ, ಈ ಬಗ್ಗೆ ದಿನಾಂಕ:6.11.2008ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ: 591/08ರಲ್ಲಿ ಚರ್ಚಿಸಿ, ಈ ಕೆಳಕಂಡ ಹೆಚ್ಚುವರಿ ಹುದ್ದೆಗಳನ್ನು ಸೃಜಿಸಿ ಪೊಲೀಸ್ ಇಲಾಖೆಯಿಂದ ಎರವಲು ಸೇವೆ ಮೇರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪಡೆಯಲು ಮಂಜೂರಾತಿ ನೀಡಬೇಕೆಂದು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

1	ಪೊಲೀಸ್ ಇನ್ಸ್‌ಪೆಕ್ಟರ್	01 ಹುದ್ದೆ
2	ಪೊಲೀಸ್ ಸಬ್ ಇನ್ಸ್ ಪೆಕ್ಟರ್	02 ಹುದ್ದೆ
3	ಪೊಲೀಸ್ ಅಸಿಸ್ಟೆಂಟ್ ಸಬ್ ಇನ್ಸ್ ಪೆಕ್ಟರ್	02 ಹುದ್ದೆ
4	ಪೊಲೀಸ್ ಮುಖ್ಯ ಪೇದೆಗಳು	02 ಹುದ್ದೆ
5	ಪೊಲೀಸ್ ಪೇದೆಗಳು (ಸಿವಿಲ್)	08 ಹುದ್ದೆ
6	ಪೊಲೀಸ್ ಪೇದೆಗಳು (ಸಶಸ್ತ್ರ)	17 ಹುದ್ದೆ

ಸದರಿ ಹುದ್ದೆಗಳನ್ನು ನಿಯೋಜನೆ ಮೇರೆಗೆ ಭರ್ತಿ ಮಾಡುವ ಬಗ್ಗೆ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರು ಉಲ್ಲೇಖ (2)ರ ಪತ್ರದಲ್ಲಿ ಸದರಿ ಹುದ್ದೆಗಳಿಗೆ ನಿಯೋಜಿಸುವ ಪೂರ್ವದಲ್ಲಿ ಹುದ್ದೆಗಳನ್ನು ಪ್ರಾಧಿಕಾರದಲ್ಲಿ ಸೃಜಿಸಿದ ಆದೇಶದ ಪ್ರತಿಯನ್ನು ಕೋರಲಾಗಿರುತ್ತದೆ. ಅಂತೆಯೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ:

ಸರ್ಕಾರದ ಆದೇಶ ಸಂಖ್ಯೆ:ನಅಇ 12 ಬೆಂಅಸೇ 2009, ಬೆಂಗಳೂರು, ದಿನಾಂಕ:26ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭದ್ರತೆಯನ್ನು ಹೆಚ್ಚಿಸುವ ಸಲುವಾಗಿ ಈ ಕೆಳಕಂಡ 32 ಹುದ್ದೆಗಳನ್ನು ಹೆಚ್ಚುವರಿಯಾಗಿ ಸೃಜಿಸಿ ಒಂದು ವರ್ಷದ ಅವಧಿಗೆ ಪೊಲೀಸ್ ಇಲಾಖೆಯಿಂದ ನಿಯೋಜನೆ ಮೇರೆಗೆ ತುಂಬಲು ಮಂಜೂರಾತಿ ನೀಡಲಾಗಿದೆ.

1	ಪೊಲೀಸ್ ಇನ್ಸ್‌ಪೆಕ್ಟರ್	01 ಹುದ್ದೆ
2	ಪೊಲೀಸ್ ಸಬ್ ಇನ್ಸ್ ಪೆಕ್ಟರ್	02 ಹುದ್ದೆ
3	ಪೊಲೀಸ್ ಅಸಿಸ್ಟೆಂಟ್ ಸಬ್ ಇನ್ಸ್ ಪೆಕ್ಟರ್	02 ಹುದ್ದೆ
4	ಪೊಲೀಸ್ ಮುಖ್ಯ ಪೇದೆಗಳು	02 ಹುದ್ದೆ
5	ಪೊಲೀಸ್ ಪೇದೆಗಳು (ಸಿವಿಲ್)	08 ಹುದ್ದೆ
6	ಪೊಲೀಸ್ ಪೇದೆಗಳು (ಸಶಸ್ತ್ರ)	17 ಹುದ್ದೆ
	ಒಟ್ಟು	32 ಹುದ್ದೆಗಳು

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಎಫ್‌ಡಿ 357 ವೆಚ್ಚ-9/09, ದಿನಾಂಕ:24.6.2009ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2075

ಎಂ.ಎಸ್. ಪ್ರೇಮಚಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಮೈಸೂರು ವಿಮಾನ ನಿಲ್ದಾಣದ 2ನೇ ಹಂತದ ಅಭಿವೃದ್ಧಿ ಕುರಿತಂತೆ ಸಾಧ್ಯಾತಾ ವರದಿಯನ್ನು ತಯಾರಿಸಲು ಐಡೆಕ್‌ಗೆ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1 ಮುಖ್ಯ ಕಾರ್ಯಾಚರಣೆ ಅಧಿಕಾರಿ, ಐಡೆಕ್ ರವರ ದಿನಾಂಕ:22.7.2009ರ ಪತ್ರ

2. ಸರ್ಕಾರದ ಸಮ ಸಂಖ್ಯೆಯ ಪತ್ರ ದಿನಾಂಕ:1.8.2009

3. ದಿನಾಂಕ:5.8.2009ರ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಐಡೆಕ್‌ರವರ ಪತ್ರ

ಪ್ರಸ್ತಾವನೆ:

ಮೈಸೂರು ವಿಮಾನ ನಿಲ್ದಾಣದ 2ನೇ ಹಂತದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಧ್ಯಾತಾ ವರದಿಯನ್ನು ಸಂಚಾರ, ಮಾಹಿತಿ, ವೆಚ್ಚ, ಆದಾಯ, ಆರ್ಥಿಕ ವಿಶ್ಲೇಷಣೆಗಳನ್ನೊಳಗೊಂಡಂತೆ ತಯಾರಿಸಲು ಅಂದಾಜು ರೂ. 9.98 ಲಕ್ಷಗಳನ್ನು ಬಿಡುಗಡೆ ಮಾಡಲು ಓದಲಾದ 1ರ ಪತ್ರದಲ್ಲಿ ಕೋರಲಾಗಿದೆ.

ಮೇಲೆ ಓದಲಾದ (2)ರಲ್ಲಿನ ಸರ್ಕಾರದ ಪತ್ರದಲ್ಲಿ ಸದರಿ ಸಾಧ್ಯಾತಾ ವಿಶ್ಲೇಷನಾ ವರದಿಯ ವೆಚ್ಚವನ್ನು ಆದೇಶ ಸಂ.ಮೂಅಇ 57 ಮೂಇವಿ 07ರಲ್ಲಿ ಈಗಾಗಲೇ ಐಡೆಕ್‌ಗೆ ಬಿಡುಗಡೆ ಮಾಡಲಾದ ರೂ. 200.00 ಲಕ್ಷಗಳಲ್ಲಿ ಭರಿಸಲು ಸೂಚಿಸಲಾಗಿತ್ತು.

ಮೇಲೆ ಓದಲಾದ (3)ರ ದಿನಾಂಕ:5.8.09ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಐಡೆಕ್‌ರವರು, ಈ ಮೊತ್ತವನ್ನು ಸದರಿ ಆದೇಶದಲ್ಲಿ ಬಿಡುಗಡೆ ಮಾಡಿರುವ ಮೊತ್ತದಿಂದ ಭರಿಸಲು ಸಾಧ್ಯವಿಲ್ಲದಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡುತ್ತಾ ಸಂಚಾರ ಅಧ್ಯಯನ ಹಾಗೂ ಪ್ರಾಥಮಿಕ ವೆಚ್ಚ ಮತ್ತು ಯೋಜನೆಯ ಕಾರ್ಯಸಾಧ್ಯಾತಾ ವಿಶ್ಲೇಷಣೆಯನ್ನು ಕೈಗೊಳ್ಳಲು ತಲಾ ರೂ. 4.99ಲಕ್ಷಗಳಂತೆ ಒಟ್ಟು 9.98ಲಕ್ಷಗಳನ್ನು ಬಿಡುಗಡೆ ಮಾಡಲು ಪುನಃ ಕೋರಿರುತ್ತಾರೆ.

ಐಡೆಕ್ ನೀಡಿರುವ ಸಮರ್ಥನೆಗಳ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಮೂಅಇ 179 ರಾಅವಿ 2009, ಬೆಂಗಳೂರು, ದಿನಾಂಕ:29ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೈಸೂರು ವಿಮಾನ ನಿಲ್ದಾಣದ 2ನೇ ಹಂತದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಂಚಾರ ಅಧ್ಯಯನ ಹಾಗೂ ಪ್ರಾಥಮಿಕ ವೆಚ್ಚ ಮತ್ತು ಯೋಜನೆಯ ಕಾರ್ಯಸಾಧ್ಯಾತಾ ವಿಶ್ಲೇಷಣೆಯನ್ನು ಕೈಗೊಳ್ಳಲು ಒಟ್ಟು 9.98 ಲಕ್ಷಗಳನ್ನು ಐಡೆಕ್‌ಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2. ಈ ಮೊತ್ತವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 3451-00-090-106-059 ಇತರೆ ಖರ್ಚು ಇದರಲ್ಲಿ ಒದಗಿಸಿರುವ ಮೊತ್ತದಿಂದ ಭರಿಸತಕ್ಕದ್ದು.

3. ಈ ಮೊತ್ತವನ್ನು ಚೀಫ್ ಫೈನಾನ್ಷಿಯಲ್ ಆಫೀಸರ್ ಮತ್ತು ಕಂಪನಿ ಕಾರ್ಯದರ್ಶಿ, ಐಡೆಕ್ ಇವರು ಪೇಯೀಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ತೆಗೆಯಲು ಅನುಮತಿಸಿದೆ.

4. ಈ ಆದೇಶವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಸರ್ಕಾರದ ಆದೇಶ ಸಂ. ಎಫ್‌ಡಿ 01 ಟಿಎಫ್ ಪಿ 08 ದಿನಾಂಕ:16.5.2008ರಲ್ಲಿ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2076

ಎನ್. ಮಂಜುಳಗೀತ

ಸರ್ಕಾರದ ಅಧೀನ ಕಾರ್ಯದರ್ಶಿ

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು, ಬೆನಕನ ಹಳ್ಳಿ ಸೈಟ್-2 ಹತ್ತಿರ ದೊಡ್ಡಹಳ್ಳಕ್ಕೆ ಅಡ್ಡಲಾಗಿ ಹತ್ತಿರ ಬ್ಯಾರೇಜ್ ಸಹಿತ ಸೇತುವೆ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ : 1 ಸರ್ಕಾರದ ಆದೇಶ ಸಂಖ್ಯೆ: ಸನೀಇ 15 ಮಸಾವಿ ಭಾಗ-1 (2) 2009 ದಿನಾಂಕ 16.02.2009.

2. ದಿನಾಂಕ: 17.07.2009ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ: ಮುಇಂ /ಸನೀ(ಉ)ವ /ಬಿಜೆಪಿ /ಪಿಬಿ-9 /ಬೆನಕನ ಹಳ್ಳಿ ಸೈಟ್-2 ಬಿಸಿಬಿ/2009-10 /4232,

3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ(ದಕ್ಷಿಣ)ವಲಯ, ಬೆಂಗಳೂರುರವರ ದಿನಾಂಕ 16/07/09ರ ಪತ್ರ ಸಂಖ್ಯೆ:ಮುಸದ/ಆಪ್ತಶಾಖೆ/ಟೆಂಡರ್/08-09/ 1986.

ಪ್ರಸ್ತಾವನೆ:

ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು, ಬೆನಕನ ಹಳ್ಳಿ ಸೈಟ್-2 ಹತ್ತಿರ ದೊಡ್ಡಹಳ್ಳಕ್ಕೆ ಅಡ್ಡಲಾಗಿ ಹತ್ತಿರ ಬ್ಯಾರೇಜ್ ಸಹಿತ ಸೇತುವೆ ನಿರ್ಮಾಣ ಕಾಮಗಾರಿಯ 185.00ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 16/02/09ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದ್ವಿಲಕೋಟೆ ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	ರಾಜ್ಯ ಟೆಂಡರ್ ಬುಲೆಟಿನ್	31.01.2009
2	ಸಂಯುಕ್ತ ಕರ್ನಾಟಕ ದಿನಪತ್ರಿಕೆ	04.02.2009
3	ವಿಜಯ ಕರ್ನಾಟಕ ದಿನಪತ್ರಿಕೆ	13.02.2009

ಈ ಟೆಂಡರ್ ಕರೆಗೆ ಪ್ರತಿಕ್ರಯಿಸಿ ಖಾಲಿ ಟೆಂಡರ್ ಫಾರಂ ಪಡೆದ 4 ಜನ ಗುತ್ತಿಗೆದಾರರ ಪೈಕಿ ನಿಗದಿತ ದಿನದಂದು ಇಬ್ಬರು ಗುತ್ತಿಗೆದಾರರು ಮಾತ್ರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ತಾಂತ್ರಿಕ ಬಿಡ್ ಅನ್ನು ದಿನಾಂಕ 15/06/09ರಂದು ತೆರೆಯಲಾಗಿ ಇಬ್ಬರು ಗುತ್ತಿಗೆದಾರರ ಟೆಂಡರುಗಳು ಅರ್ಹವಾಗಿದ್ದು, ಅವರ ಆರ್ಥಿಕ ಬಿಡ್‌ಗಳನ್ನು ದಿನಾಂಕ 26/06/09ರಂದು ತೆರೆಯಲಾಗಿದೆ. ಆರ್ಥಿಕ ಬಿಡ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ 1,70,71,555/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ				ರೂ 1,66,49,802/-
ಕ್ರಸಂ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ	ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1	ಜಿ. ಮಸ್ತಾನಯ್ಯ	2,01,42,654/-	17.99 ಹೆಚ್ಚು	20.98 ಹೆಚ್ಚು
2	ಎ.ಎಸ್. ಪಾಟೀಲ	2,03,76,728/-	19.36 ಹೆಚ್ಚು	22.38 ಹೆಚ್ಚು

ಮೇಲ್ಕಂಡಂತೆ ಕ್ರ.ಸಂ:1ರಲ್ಲಿರುವ ಶ್ರೀ ಜಿ. ಮಸ್ತಾನಯ್ಯ, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ರೂ. 2,01,42,654-00ಗಳು ಅತಿ ಕಡಿಮೆ ಮೊತ್ತವಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 20.98ರಷ್ಟು ಹೆಚ್ಚಾಗಿದೆ. ಈ ಕಾಮಗಾರಿಯನ್ನು ತಕ್ಷಣವೇ ಕೈಗೊಳ್ಳುವ ಅಗತ್ಯವಿದ್ದುದರಿಂದ, ದಿನಾಂಕ 15/07/09ರಂದು ನಡೆದ ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯಲ್ಲಿ ಸಮಿತಿಯ ಅಧ್ಯಕ್ಷರ ಅನುಮತಿಯೊಂದಿಗೆ ಟೆಂಡರ್‌ನ್ನು ಪರಿಶೀಲಿಸಲಾಗಿದ್ದು, ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,66,49,802-00ಗಳ ಮೇಲೆ ಶೇಕಡ 14.90ರಷ್ಟು ಹೆಚ್ಚಿನ ದರಗಳಿಗೆ ಅಂದರೆ

ರೂ.1,91,30,622–00ಗಳಿಗೆ ಕಾಮಗಾರಿಯನ್ನು ಶ್ರೀ ಜಿ. ಮಸ್ತಾನಯ್ಯ, 1ನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು ಇವರಿಗೆ ವಹಿಸಲು ಸಮಿತಿಯು ತೀರ್ಮಾನಿಸಿರುವುದಾಗಿ ತಿಳಿಸಿ ಟೆಂಡರ್‌ನ್ನು ಅಂಗೀಕರಿಸಲು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ದಿನಾಂಕ 15/07/09ರ ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ನಡವಳಿಗಳನ್ನು ಮೇಲೆ 3ರಲ್ಲಿ ಓದಲಾದ ಪತ್ರದೊಂದಿಗೆ ಸ್ವೀಕರಿಸಲಾಗಿದ್ದು, ನಡವಳಿಗಳನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 52 ಅಪಿಬಂ 2009, ಬೆಂಗಳೂರು, ದಿನಾಂಕ 14ನೇ ಆಗಸ್ಟ್ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು, ಬೆನಕನ ಹಳ್ಳಿ ಸೈಟ್–2 ಹತ್ತಿರ ದೊಡ್ಡಹಳ್ಳಕ್ಕೆ ಅಡ್ಡಲಾಗಿ ಹತ್ತಿರ ಬ್ಯಾರೇಜ್ ಸಹಿತ ಸೇತುವೆ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ. 1,66,49,802–00ಗಳ ಮೇಲೆ ಶೇಕಡ 14.90ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,91,30,622–00ಗಳಿಗೆ (ಒಂದು ಕೋಟಿ ತೊಂಬತ್ತೊಂದು ಲಕ್ಷದ ಮುವತ್ತು ಸಾವಿರದ ಅರವತ್ತೆರಡು ರೂ.ಗಳು ಮಾತ್ರ) ಶ್ರೀ ಜಿ. ಮಸ್ತಾನಯ್ಯ, 1ನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2041

ಕೆ.ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಿಷಯ : ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕು, ಮಾಚಕನೂರು ಹತ್ತಿರ ಘಟಪ್ರಭಾ ನದಿಗೆ ಅಡ್ಡಲಾಗಿ ಹೆಬ್ಬಾಳ ಗ್ರಾಮಗಳ ಹತ್ತಿರ ಸೇತುವೆ ಸಹಿತ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ :
1 ಸರ್ಕಾರದ ಆದೇಶ ಸಂಖ್ಯೆ:ಸನೀಇ 118 ಅಪಿಬಂ 2008 ದಿನಾಂಕ 17.01.2009.
2. ದಿನಾಂಕ: 17.07.2009ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ: ಮುಇಂ /ಸನೀ(ಉ)ವಲಯ /ಬಿಜೆಪಿ /ಎಇ–6 /2009–10 /4231
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ(ದಕ್ಷಿಣ)ವಲಯ, ಬೆಂಗಳೂರು ರವರ ದಿನಾಂಕ16.07.2009ರ ಪತ್ರ ಸಂಖ್ಯೆ: ಮುಸದ/ ಆಪ್ತಶಾಖೆ/ ಟೆಂಡರ್/ 08–09/1726.

ಪ್ರಸ್ತಾವನೆ:

ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕು, ಮಾಚಕನೂರು ಹತ್ತಿರ ಘಟಪ್ರಭಾ ನದಿಗೆ ಅಡ್ಡಲಾಗಿ ಹೆಬ್ಬಾಳ ಗ್ರಾಮಗಳ ಹತ್ತಿರ ಸೇತುವೆ ಸಹಿತ ಬ್ಯಾರೇಜ್ ನಿರ್ಮಾಣ ಕಾಮಗಾರಿಯ 609.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 17.01.2009ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದ್ವಿಲಕೋಟೆ ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	ರಾಜ್ಯ ಟೆಂಡರ್ ಬುಲೆಟಿನ್	ದಿ:31/01/09
2	ಸಂಯುಕ್ತ ಕರ್ನಾಟಕ ದಿನಪತ್ರಿಕೆ	ದಿ:04/02/09
3	ವಿಜಯ ಕರ್ನಾಟಕ ದಿನಪತ್ರಿಕೆ	ದಿ:13/02/09

ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ ಖಾಲಿ ಟೆಂಡರ್ ಫಾರಂ ಪಡೆದ 7 ಜನ ಗುತ್ತಿಗೆದಾರರ ಪೈಕಿ ನಿಗದಿತ ದಿನದಂದು ಇಬ್ಬರು ಗುತ್ತಿಗೆದಾರರು ಮಾತ್ರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ತಾಂತ್ರಿಕ ಬಿಡ್ ಅನ್ನು ದಿನಾಂಕ 15/06/09ರಂದು ತೆರೆಯಲಾಗಿ ಇಬ್ಬರು ಗುತ್ತಿಗೆದಾರರ ಟೆಂಡರುಗಳು ಅರ್ಹವಾಗಿದ್ದು, ಅವರ ಆರ್ಥಿಕ ಬಿಡ್‌ಗಳನ್ನು

ದಿನಾಂಕ 26/06/09ರಂದು ತೆರೆಯಲಾಗಿದೆ. ಆರ್ಥಿಕ ಬಿಡ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ 5,65,40,872/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ				ರೂ 5,43,85,558/-
ಕ್ರಸಂ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ	ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1	ಜಿ. ಶಂಕರ	6,75,24,423/-	19.42 ಹೆಚ್ಚು	24.15 ಹೆಚ್ಚು
2	ಮೆ. ಅಮೃತಾ ಕನ್ಸಟ್ರಕ್ಷನ್	6,92,27,706/-	22.44 ಹೆಚ್ಚು	27.29 ಹೆಚ್ಚು

ಮೇಲ್ಕಂಡಂತೆ ಕ್ರ.ಸಂ:1ರಲ್ಲಿರುವ ಶ್ರೀ ಜಿ. ಶಂಕರ, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ರೂ.6,75,24,423-00ಗಳು ಅತಿ ಕಡಿಮೆ ಮೊತ್ತವಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 24.15ರಷ್ಟು ಹೆಚ್ಚಾಗಿದೆ. ಈ ಕಾಮಗಾರಿಯನ್ನು ತಕ್ಷಣವೇ ಕೈಗೊಳ್ಳುವ ಅಗತ್ಯವಿದ್ದುದರಿಂದ, ದಿನಾಂಕ 15/07/09ರಂದು ನಡೆದ ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯಲ್ಲಿ ಸಮಿತಿಯ ಅಧ್ಯಕ್ಷರ ಅನುಮತಿಯೊಂದಿಗೆ ಟೆಂಡರ್‌ನ್ನು ಪರಿಶೀಲಿಸ ಲಾಗಿದ್ದು, ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಂತೆ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ.5,43,85,558-00ಗಳ ಮೇಲೆ ಶೇಕಡ 14.90ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.6,24,89,006-00ಗಳಿಗೆ ಕಾಮಗಾರಿಯನ್ನು ಶ್ರೀ ಜಿ. ಶಂಕರ, 1ನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು ಇವರಿಗೆ ವಹಿಸಲು ಸಮಿತಿಯು ತೀರ್ಮಾನಿಸಿರುವುದಾಗಿ ತಿಳಿಸಿ ಟೆಂಡರ್‌ನ್ನು ಅಂಗೀಕರಿಸಲು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ದಿನಾಂಕ 15/07/09ರ ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ನಡವಳಿಗಳನ್ನು ಮೇಲೆ 3ರಲ್ಲಿ ಓದಲಾದ ಪತ್ರದೊಂದಿಗೆ ಸ್ವೀಕರಿಸಲಾಗಿದ್ದು, ನಡವಳಿಗಳನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 54 ಅಪಿಬಂ 2009, ಬೆಂಗಳೂರು, ದಿನಾಂಕ 12ನೇ ಆಗಸ್ಟ್ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕು, ಮಾಚಕನೂರು ಹತ್ತಿರ ಘಟಪ್ರಭಾ ನದಿಗೆ ಅಡ್ಡಲಾಗಿ ಹೆಬ್ಬಾಳ ಗ್ರಾಮಗಳ ಹತ್ತಿರ ಸೇತುವೆ ಸಹಿತ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ. 5,43,85,558/-ಗಳ ಮೇಲೆ ಶೇಕಡ 14.90ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 6,24,89,006/-ಗಳಿಗೆ (ಆರು ಕೋಟಿ ಇಪ್ಪತ್ನಾಲ್ಕು ಲಕ್ಷದ ಎಂಬತ್ತೊಂಬತ್ತು ಸಾವಿರದ ಆರು ರೂ.ಗಳು ಮಾತ್ರ) ಶ್ರೀ ಜಿ. ಶಂಕರ, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

4. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
5. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
6. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2044

ಕೆ.ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಿಷಯ : ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಗುಡ್ಡದ ಹೊಸಹಳ್ಳಿ ಹತ್ತಿರ ಮಲ್ಲಿಗೆ ಹಳ್ಳಕ್ಕೆ ಅಡ್ಡಲಾಗಿ ಸೇತುವೆ ಸಹಿತ ಬಂದಾರ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ : 1 ಸರ್ಕಾರದ ಆದೇಶ ಸಂಖ್ಯೆ: ಸನೀಇ 02 ನಯೋಕಾ 2009 ದಿನಾಂಕ 05.02.2009

2. ದಿನಾಂಕ 20.06.2009ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ: ಮುಸದ/ತಾಂ.3/ಸ.ಇಂ–8/ಶಿವಮೊಗ್ಗ/2009/2439.

3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ(ದಕ್ಷಿಣ)ವಲಯ, ಬೆಂಗಳೂರು ರವರ ದಿನಾಂಕ 16.07.2009ರ ಪತ್ರ ಸಂಖ್ಯೆ: ಮುಸದ/ ಆಪ್ತಶಾಖೆ/ ಟೆಂಡರ್/ 08–09/1726.

ಪ್ರಸ್ತಾವನೆ:

ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಗುಡ್ಡದ ಹೊಸಹಳ್ಳಿ ಹತ್ತಿರ ಮಲ್ಲಿಗೆ ಹಳ್ಳಕ್ಕೆ ಅಡ್ಡಲಾಗಿ ಸೇತುವೆ ಸಹಿತ ಬಂದಾರ ನಿರ್ಮಾಣ ಕಾಮಗಾರಿಯ 20.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 05.02.2009ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಶಿವಮೊಗ್ಗ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	ಜಿಲ್ಲಾ ಟೆಂಡರ್ ಬುಲೆಟಿನ್ ದಿನಾಂಕ	31.01.2009
2	ಪ್ರಜಾವಾಣಿ ದಿನಪತ್ರಿಕೆಯಲ್ಲಿ	07.02.2009

ಈ ಟೆಂಡರ್ ಕರೆಗೆ ಪ್ರತಿಕ್ರಯಿಸಿ ಖಾಲಿ ಟೆಂಡರ್ ಫಾರಂ ಪಡೆದ ಏಕೈಕ ಗುತ್ತಿಗೆದಾರರು ಮಾತ್ರ ನಿಗದಿತ ದಿನದಂದು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ಟೆಂಡರ್ ಅನ್ನು ದಿನಾಂಕ 02/03/09ರಂದು ತೆರೆಯಲಾಗಿದೆ. ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				**ರೂ. 19,79,344/–**
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ				**ರೂ 19,72,768/–**
ಕ್ರಸಂ	**ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್**	**ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ**	**ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ**	**ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ**
1	**ಟಿ.ಬಿ.ಜಗದೀಶ, 1ನೇ ದರ್ಜೆ ಗುತ್ತಿಗೆದಾರರು,**	**23,21,371/–**	**17.29 ಹೆಚ್ಚು**	**17.67 ಹೆಚ್ಚು**

ಮೇಲ್ಕಂಡಂತೆ ಕ್ರಸಂ:1ರಲ್ಲಿರುವ ಶ್ರೀ ಟಿ.ಬಿ.ಜಗದೀಶ, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ರೂ. 23,21,371/–ಗಳು ಏಕೈಕ ಟೆಂಡರ್‌ದಾರರಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 17.67ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 15/07/09ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 19,72,768–00ಗಳ ಮೇಲೆ ಶೇಕಡ 14.00ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.22,48,955–00ಗಳಿಗೆ ಕಾಮಗಾರಿಯನ್ನು ಶ್ರೀ ಟಿ.ಬಿ.ಜಗದೀಶ, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 41 ಅಪಿಬಂ 2009, ಬೆಂಗಳೂರು, ದಿನಾಂಕ 22ನೇ ಜುಲೈ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಗುಡ್ಡದ ಹೊಸಹಳ್ಳಿ ಹತ್ತಿರ ಮಲ್ಲಿಗೆ ಹಳ್ಳಕ್ಕೆ ಅಡ್ಡಲಾಗಿ ಸೇತುವೆ ಸಹಿತ ಬಂದಾರ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ. 19,72,768–00ಗಳ ಮೇಲೆ ಶೇಕಡ 14.00ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.22,48,955–00ಗಳಿಗೆ (ಇಪ್ಪತ್ತೆರಡು ಲಕ್ಷದ ನಲವತ್ತೆಂಟು ಸಾವಿರದ ಒಂಬೈನೂರ ಐವತ್ತೈದು ರೂ.ಗಳು ಮಾತ್ರ) ಶ್ರೀ ಟಿ.ಬಿ.ಜಗದೀಶ, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

7. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
8. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
9. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2046

ಕೆ.ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಿಷಯ : ಗುಲಬರ್ಗಾ ಜಿಲ್ಲೆ, ಶಹಾಪುರ ತಾಲ್ಲೂಕು, ಮನಗನಾಳ ಗ್ರಾಮದ ಹತ್ತಿರ ಸೇತುವೆ ಸಹಿತ ಬಾಂದಾರ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ :

1 ಸರ್ಕಾರದ ಆದೇಶ ಸಂಖ್ಯೆ:ಸನೀಇ 02 ನಯೋಕಾ 2009 ದಿನಾಂಕ 05.02.2009

2. ದಿನಾಂಕ 25.06.2009ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜೆಪಿ/ಎಇ–5/2009–10/3702.

3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ(ದಕ್ಷಿಣ)ವಲಯ, ಬೆಂಗಳೂರು ರವರ ದಿನಾಂಕ 16.07.2009ರ ಪತ್ರ ಸಂಖ್ಯೆ: ಮುಸದ/ ಆಪ್ತಶಾಖೆ/ ಟೆಂಡರ್/ 08–09/1726.

ಪ್ರಸ್ತಾವನೆ:

ಗುಲಬರ್ಗಾ ಜಿಲ್ಲೆ, ಶಹಾಪುರ ತಾಲ್ಲೂಕು, ಮನಗನಾಳ ಗ್ರಾಮದ ಹತ್ತಿರ ಸೇತುವೆ ಸಹಿತ ಬಾಂದಾರ ನಿರ್ಮಾಣ ಕಾಮಗಾರಿಯ 49.99 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 05.02.2009ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	**ಕರ್ನಾಟಕ ರಾಜ್ಯ ಪತ್ರ ದಿನಾಂಕ**	**19.02.2009**
2	**ಜಿಲ್ಲಾ ಟೆಂಡರ್ ಬುಲೆಟಿನ್ ದಿನಾಂಕ**	**21.02.2009**
3	**ಪ್ರಜಾವಾಣಿ ಕನ್ನಡ ದಿನಪತ್ರಿಕೆಯಲ್ಲಿ**	**20.02.2009**
4	**ಕನ್ನಡಪ್ರಭ ಕನ್ನಡ ದಿನಪತ್ರಿಕೆಯಲ್ಲಿ**	**21.02.2009**

ಈ ಟೆಂಡರ್ ಕರೆಗೆ ಪ್ರತಿಕ್ರಯಿಸಿ ಖಾಲಿ ಟೆಂಡರ್ ಫಾರಂ ಪಡೆದ 4 ಜನ ಗುತ್ತಿಗೆದಾರರ ಪೈಕಿ ನಿಗದಿತ ದಿನದಂದು ಇಬ್ಬರು ಗುತ್ತಿಗೆದಾರರು ಮಾತ್ರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ಟೆಂಡರ್ ಅನ್ನು ದಿನಾಂಕ 06/05/09ರಂದು ತೆರೆಯಲಾಗಿ ಇಬ್ಬರು ಗುತ್ತಿಗೆದಾರರ ಟೆಂಡರುಗಳು ಅರ್ಹವಾಗಿದ್ದು, ಗುತ್ತಿಗೆದಾರರು ಟೆಂಡರಿನಲ್ಲಿ ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	**ರೂ. 49,54,144/–**
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ	**ರೂ 51,57,511/–**

ಕ್ರಸಂ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ	ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1	ಯಂಕಪ್ಪ ಚಂದ್ರಾಯ, 1ನೇ ದರ್ಜೆ ಗುತ್ತಿಗೆದಾರರು,	61,92,200/-	24.99 ಹೆಚ್ಚು	20.06 ಹೆಚ್ಚು
2	ಸುದರ್ಶನ ನಾಯಕ್, 1ನೇ ದರ್ಜೆ ಗುತ್ತಿಗೆದಾರರು	66,87,382/-	34.98 ಹೆಚ್ಚು	29.66 ಹೆಚ್ಚು

ಮೇಲ್ಕಂಡಂತೆ ಕ್ರ.ಸಂ:1ರಲ್ಲಿರುವ ಶ್ರೀ ಯಂಕಪ್ಪ ಚಂದ್ರಾಯ, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ರೂ. 61,92,200/–ಗಳು ಅತಿ ಕಡಿಮೆ ಮೊತ್ತವಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 20.06ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 15/07/09ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 51,57,511–00ಗಳ ಮೇಲೆ ಶೇಕಡ 14.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.59,05,350–00ಗಳಿಗೆ ಕಾಮಗಾರಿಯನ್ನು ಶ್ರೀ ಯಂಕಪ್ಪ ಚಂದ್ರಾಯ, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 35 ಅಪಿಬಂ 2009, ಬೆಂಗಳೂರು, ದಿನಾಂಕ 22ನೇ ಜುಲೈ, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲಬರ್ಗಾ ಜಿಲ್ಲೆ, ಶಹಾಪುರ ತಾಲ್ಲೂಕು, ಮನಗನಾಳ ಗ್ರಾಮದ ಹತ್ತಿರ ಸೇತುವೆ ಸಹಿತ ಬಾಂದಾರ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ. 57,57,511–00ಗಳ ಮೇಲೆ ಶೇಕಡ 14.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.59,05,350–00ಗಳಿಗೆ (ಐವತ್ತೊಂಬತ್ತು ಲಕ್ಷದ ಐದು ಸಾವಿರದ ಮುನ್ನೂರ ಐವತ್ತು ರೂ.ಗಳು ಮಾತ್ರ) ಶ್ರೀ ಯಂಕಪ್ಪ ಚಂದ್ರಾಯ, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

10. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
11. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
12. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2051

ಕೆ.ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಿಷಯ : ಗುಲಬರ್ಗಾ ಜಿಲ್ಲೆ ಹಾಗೂ ತಾಲ್ಲೂಕಿನ ಮೇಳಕುಂದಾ ಕೆರೆ ಹಾಗೂ ಕಾಲುವೆ ಅಭಿವೃದ್ಧಿ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ :
1 ಸರ್ಕಾರದ ಆದೇಶ ಸಂಖ್ಯೆ: ಸನೀಇ 15 ಮಸಾವಿ 2009 ದಿನಾಂಕ 30.01.2009
2. ದಿನಾಂಕ 25.06.2009ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜೆಪಿ/ಎಇ–5/2009–10/3690.
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ(ದಕ್ಷಿಣ)ವಲಯ, ಬೆಂಗಳೂರು ರವರ ದಿನಾಂಕ 16.07.2009ರ ಪತ್ರ ಸಂಖ್ಯೆ: ಮುಸದ/ ಆಪ್ತಶಾಖೆ/ ಟೆಂಡರ್/ 08–09/1726.

ಪ್ರಸ್ತಾವನೆ:

ಗುಲಬರ್ಗಾ ಜಿಲ್ಲೆ, ಶಹಾಪುರ ತಾಲ್ಲೂಕು, ಮನಗನಾಳ ಗ್ರಾಮದ ಹತ್ತಿರ ಬಿ.ಸಿ.ಬಿ ನಿರ್ಮಾಣ ಕಾಮಗಾರಿಯ 45.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 30.01.2009ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	ಕರ್ನಾಟಕ ರಾಜ್ಯ ಪತ್ರ ದಿನಾಂಕ	26.02.2009
2	ಜಿಲ್ಲಾ ಟೆಂಡರ್ ಬುಲೆಟಿನ್ ದಿನಾಂಕ	21.02.2009
3	ಕನ್ನಡಪ್ರಭ ಕನ್ನಡ ದಿನಪತ್ರಿಕೆಯಲ್ಲಿ	28.02.2009

ಈ ಟೆಂಡರ್ ಕರೆಗೆ ಪ್ರತಿಕ್ರಯಿಸಿ ಖಾಲಿ ಟೆಂಡರ್ ಫಾರಂ ಪಡೆದ 6 ಜನ ಗುತ್ತಿಗೆದಾರರ ಪೈಕಿ ನಿಗದಿತ ದಿನದಂದು ಮೂವರು ಗುತ್ತಿಗೆದಾರರು ಮಾತ್ರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ಟೆಂಡರ್ ಅನ್ನು ದಿನಾಂಕ 06/05/09ರಂದು ತೆರೆಯಲಾಗಿ ಇಬ್ಬರು ಗುತ್ತಿಗೆದಾರರ ಟೆಂಡರುಗಳು ಮಾತ್ರ ಅರ್ಹವಾಗಿದ್ದು, ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 44,26,422/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ				ರೂ 42,02,560/-
ಕ್ರ.ಸಂ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ	ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1	ಎಸ್.ಐ.ಡೊಣ್ಣೂರ, 1ನೇ ದರ್ಜೆ ಗುತ್ತಿಗೆದಾರರು,	53,09,159/-	19.94 ಹೆಚ್ಚು	26.33 ಹೆಚ್ಚು
2	ರಿಯಾಜುದ್ದೀನ ಪಟೇಲ, 1ನೇ ದರ್ಜೆ ಗುತ್ತಿಗೆದಾರರು	57,39,138/-	29.65 ಹೆಚ್ಚು	36.56 ಹೆಚ್ಚು

Sri Bhimappa G. Jattennavar, I Addl. City Civil and Sessions Judge, Bangalore, has been granted Earned Leave for the following periods.

1. For 10 days from 18.5.2009 to 27.5.2009 (bdi) with permission to prefix General Holiday on 17.5.2009, on Private Affairs.
2. For 9 days from 22.6.2009 to 30.6.2009 with permission to prefix General Holiday 21.6.2009, on Medical Grounds.
3. For 8 days from 3.7.2009 to 10.7.2009 with permission to suffix General Holidays on 11.7.2009 and 12.7.2009, on Medical Grounds.

The VI Addl. City Civil and Sessions Judge, Bangalore, has been placed in additional charge of the I Addl. City Civil and Sessions Judge, Bangalore, during the above mentioned period from 17.5.2009 to 27.5.2009.

The XVIII Addl. City Civil and Sessions Judge, Bangalore, has been placed in additional charge of the I Addl .City Civil and Sessions Judge, Bangalore, during the above mentioned periods from 21.6.2009 to 30.6.2009 and 3.7.2009 to 12.7.2009.

Sri .Bhimappa G. Jattennavar, I Addl. City Civil and Sessions Judge, Bangalore, is re-posted to the same post on expiry of respective leave periods.

By order of the High Court

P.R. 1305 Deputy Registrar

HIGH COURT OF KARNATAKA

NOTIFICATION

No. GOB (I) 101/2009, Bangalore, Dated: 16th September, 2009

The Civil Judge (Sr. Dn) and JMFC., Sindgi, is concurrently appointed as the Civil Judge (Sr. Dn) and JMFC., Indi, during the Maternity leave period of Smt. Suvarna K. Mirji, Civil Judge (Sr. Dn) and JMFC., Indi, from 18.09.2009 till the officer resumes her duty.

By order of the High Court

P.R. 1306 Deputy Registrar

PERSONNEL AND ADMINISTRATIVE REFORMS SECRETARIAT

NOTIFICATION

No. DPAR 386 SAS 2009, Bangalore, Dated: 14th September, 2009

The services of Sri C.M. Shirol, IAS (KN-94), Managing Director, Mysore Sugar Company Limited, Bangalore, is withdrawn from the Commerce & Industries Department, with immediate effect and posted until further orders as Regional Commissioner, Belgaum, in the existing vacancy.

By Order and in the name of the Governor of Karnataka,

K.G. ANANTHA

P.R. 1307 Under Secretary to Government,

Department of Personnel and Administrative Reforms (Services-I)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 254 ಸಅಸೇ 2009, ಬೆಂಗಳೂರು, ದಿನಾಂಕ: 11ನೇ ಸೆಪ್ಟೆಂಬರ್, 2009.

ಶ್ರೀ ಡಿ.ಎನ್. ಪಾಟೀಲ್, ನಿವೃತ್ತ ಸೀನಿಯರ್ ಆಡಿಟ್ ಆಫೀಸರ್, (ಮಹಾಲೇಖಪಾಲರ ಕಛೇರಿ), ನಂ. 100/11, "ಸುರಭಿ ಅಪಾರ್ಟ್‌ಮೆಂಟ್ಸ್ "ಎ.ಜಿ.ಎಸ್. ಲೇಔಟ್, 4ನೇ ಕ್ರಾಸ್, ನ್ಯೂ ಬಿ.ಇ.ಎಲ್. ರಸ್ತೆ, ಆರ್.ಎಂ.ವಿ–ಎರಡನೇ ಹಂತ, ಬೆಂಗಳೂರು–560054, ಇವರನ್ನು ಕರ್ನಾಟಕ ಸರ್ಕಾರದ ಸಚಿವಾಲಯದ ಆರ್ಥಿಕ ಇಲಾಖೆಯ ಉಪ ನಿಯಂತ್ರಕರು (ಲೆಕ್ಕ ಪತ್ರ ನಿರ್ವಹಣೆ) ಹುದ್ದೆಯಲ್ಲಿ ಮಾಸಿಕ ರೂ. 20, 000/– ಗಳ ಸಂಭಾವನೆಯೊಂದಿಗೆ ಸಮಾಲೋಚಕರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮೂರು ತಿಂಗಳ ಅವಧಿಗೆ ಒಪ್ಪಂದದ ಆಧಾರದ ಮೇರೆಗೆ ನೇಮಿಸಲಾಗಿದೆ.

ಇವರ ಒಪ್ಪಂದ ನೇಮಕಾತಿಯ ಷರತ್ತು ಹಾಗೂ ನಿಬಂಧನೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1309 ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 255 ಪಿಐಎಂ 2009, ಬೆಂಗಳೂರು, ದಿನಾಂಕ: 31ನೇ ಆಗಸ್ಟ್, 2009.

ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಯಾದ ಡಾ:ಹರೀಶ್ ಬಾಬು ಸಿ. ಇವರನ್ನು ವೈದ್ಯರು ದರ್ಜೆ-1 (ಪ್ರಕೃತಿ ಚಿಕಿತ್ಸೆ ಮತ್ತು ಯೋಗ) ಹುದ್ದೆಗೆ ವೇತನ ಶ್ರೇಣಿ ರೂ. 14050-25050 ಯಲ್ಲಿ ಖಾಯಂಪೂರ್ವ ಸೇವಾವಧಿ ಮೇರೆಗೆ ಹಂಗಾಮಿಯಾಗಿ ಶ್ರೀ ಜಯಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆ, ಬೆಂಗಳೂರು ಇಲ್ಲಿ ಶ್ರೀ ವಿ.ಪಿ. ಸತೀಶ್, ವೈದ್ಯರು ದರ್ಜೆ-1 (ಪ್ರಕೃತಿ ಚಿಕಿತ್ಸೆ) ರವರ ವರ್ಗಾವಣೆಯಿಂದ ತೆರವಾದ ಜಾಗಕ್ಕೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೇಮಕ ಮಾಡಲಾಗಿದೆ.

1. ಈ ಅಧಿಸೂಚನೆಯನ್ನು ನೋಂದಣಿ ಅಂಚೆಯಲ್ಲಿ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಅಭ್ಯರ್ಥಿಯು ಆಯುಷ್ ನಿರ್ದೇಶನಾಲಯ, ಬೆಂಗಳೂರು-560009 ಇಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಹಾಜರಾಗದಿದ್ದಲ್ಲಿ ನೇಮಕಾತಿಯು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 18(3)ರನ್ವಯ ಯಾವುದೇ ಸೂಚನೆಯಿಲ್ಲದೇ ತಂತಾನೇ ರದ್ದಾಗುವುದು.
2. ನೇಮಕಾತಿ ಹೊಂದಿದ ಅಭ್ಯರ್ಥಿಯು 2 ವರ್ಷಗಳ ಕಾಲ ಖಾಯಂಪೂರ್ವ ಸೇವಾವಧಿಗೆ ಒಳಪಟ್ಟಿರುತ್ತಾರೆ. ಸದರಿ ಅವಧಿಯಲ್ಲಿ ವೈದ್ಯರು ದರ್ಜೆ-1 ಹುದ್ದೆಗೆ ನಿಗದಿಪಡಿಸಲಾಗಿರುವ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು.
3. ಅಭ್ಯರ್ಥಿಯು ಕೆಲಸಕ್ಕೆ ಹಾಜರಾಗುವಾಗ ಎಲ್ಲಾ ಮೂಲ ದಾಖಲೆಗಳನ್ನು ಅಂದರೆ, ನೇಮಕಗೊಂಡ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯ ಪ್ರಮಾಣ ಪತ್ರ, ಜನ್ಮದಿನಾಂಕದ ದಾಖಲೆ, ಮೀಸಲಾತಿ ಆಧಾರದ ಮೇಲೆ ಆಯ್ಕೆಯಾದ ಅಭ್ಯರ್ಥಿಯಾಗಿದ್ದಲ್ಲಿ ಮೀಸಲಾತಿ ಪ್ರಮಾಣ ಪತ್ರ ಇತ್ಯಾದಿಗಳನ್ನು ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಬೆಂಗಳೂರು-560009 ಇವರ ಮುಂದೆ ಹಾಜರುಪಡಿಸತಕ್ಕದ್ದು. ಇವರ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ವರದಿ ಮಾಡಿಸಿಕೊಂಡ ನಂತರ ಇವರನ್ನು ನೇಮಿಸಿರುವ ಜಾಗಕ್ಕೆ ವರದಿ ಮಾಡಿಕೊಳ್ಳಲು ನಿರ್ದೇಶಕರು ಸೂಚಿಸುವುದು.
4. ಈ ಅಭ್ಯರ್ಥಿಯ ನೇಮಕಾತಿಯು ಪ್ರಸ್ತುತ ಚಾಲ್ತಿಯಲ್ಲಿರುವ ಮತ್ತು ಕಾಲ-ಕಾಲಕ್ಕೆ ಹೊರಡಿಸುವ ಎಲ್ಲಾ ಸಂಬಂಧಪಟ್ಟ ನಿಯಮಗಳಿಗೆ ಒಳಪಟ್ಟಿರುತ್ತದೆ.
5. ಅಭ್ಯರ್ಥಿಯು ಸೇವೆಗೆ ವರದಿ ಮಾಡಿಕೊಳ್ಳುವ ಸಂದರ್ಭದಲ್ಲಿ ನಿಷ್ಠಾ ಪ್ರಮಾಣ ವಚನವನ್ನು ಸ್ವೀಕರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1310

ಎನ್. ಮಹಾಲಕ್ಷ್ಮಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಕ್ರಮಾಂಕ : ಇಡಿ 238 ಯುಕೆವಿ 2009, ಬೆಂಗಳೂರು, ದಿನಾಂಕ: 14ನೇ ಸೆಪ್ಟೆಂಬರ್, 2009.

ಡಾ:ಎಸ್.ಬಿ. ಹಿಂಚಗೇರಿ, ಬಯೋಕೆಮಿಸ್ಟ್ರಿ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇವರನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಸಚಿವರ ಹುದ್ದೆಗೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ. ಶ್ರೀ ವಿ. ರಂಗಸ್ವಾಮಿ, ಭಾ.ಅ.ಸೇ., ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇವರ ಸೇವೆಯನ್ನು ಸಿ.ಆ.ಸು. ಇಲಾಖೆಗೆ ಹಿಂದಿರುಗಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1311

ಬಿ.ಎಸ್. ಜಾಪಾಲಿ
ಸರ್ಕಾರದ ಉಪ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಲಾ 89 ಎಲ್ಎಜಿ 2009, ಬೆಂಗಳೂರು, ದಿನಾಂಕ: 11ನೇ ಸೆಪ್ಟೆಂಬರ್, 2009.

ಶ್ರೀ ಪಿ. ತಿಪ್ಪೇರುದ್ರಪ್ಪ, ಸಹಾಯಕ ಆಡಳಿತಾಧಿಕಾರಿ, ಅಡ್ವೋಕೇಟ್ ಜನರಲ್ ಕಚೇರಿ, ಬೆಂಗಳೂರು, ಇವರ ಸೇವೆಯನ್ನು ಕಾರ್ಯ ನಿರ್ವಾಹಣ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಶಿರಗುಪ್ಪ, ಹುದ್ದೆಗೆ ನೇಮಿಸುವ ಸಲುವಾಗಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಶಕ್ಕೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1312

ಇ. ಶಿವಾನಂದ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಕ್ರಮಾಂಕ :ಇಡಿ 74 ಯುಡಿವಿ 2009, ಬೆಂಗಳೂರು, ದಿನಾಂಕ: 14ನೇ ಸೆಪ್ಟೆಂಬರ್, 2009.

ಪ್ರೋ ಡಿ. ಶಿವಲಿಂಗಯ್ಯ ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1313

ಬಿ.ಎಸ್. ಜಾಪಾಲಿ

ಸರ್ಕಾರದ ಉಪ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು)

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಅಧಿಸೂಚನೆ ಸಂಖ್ಯೆ:ವಾಕೈ 135 ಕೈಸೇವಿ 2009, ಬೆಂಗಳೂರು, ದಿನಾಂಕ: 15ನೇ ಸೆಪ್ಟೆಂಬರ್, 2009.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಈ ಕೆಳಕಂಡ ಜಂಟಿ ನಿರ್ದೇಶಕರುಗಳನ್ನು ಅವರುಗಳ ಹೆಸರುಗಳ ಮುಂದೆ ಸೂಚಿಸಿರುವ ಹುದ್ದೆಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ನೇಮಿಸಿದೆ.

ಕ್ರ.ಸಂ.	ಅಧಿಕಾರಿಗಳ ಹೆಸರು ಕಾರ್ಯನಿರ್ವಹಿಸುತ್ತಿರುವ ಹುದ್ದೆ ಮತ್ತು ಸ್ಥಳ ಶ್ರೀಯುತರು	ವರ್ಗಾವಣೆ ಮಾಡಿ ನೇಮಿಸಲಾದ ಹುದ್ದೆ ಮತ್ತು ಸ್ಥಳ
1	ಟಿ. ಹೊನ್ನೂರಪ್ಪ, ಜಂಟಿ ನಿರ್ದೇಶಕರು, ನಿಯೋಜನೆ ಮೇರೆಗೆ ಯೋಜನಾ ನಿರ್ದೇಶಕರು, ಡಿಆರ್‌ಡಿಎ, ಜಿಲ್ಲಾ ಪಂಚಾಯತ್, ಶಿವಮೊಗ್ಗ	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಇವರ ಸೇವೆಯನ್ನು ಹಿಂಪಡೆದು ನಿಯೋಜನೆ ಮೇರೆಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಚರ್ಮೋದ್ಯಮ ಅಭಿವೃದ್ಧಿ ನಿಗಮ, ಬೆಂಗಳೂರು (ಖಾಲಿ ಹುದ್ದೆಗೆ)
2	ನಾಗರಾಜ್ ಸಿ. ಚವ್ಹಾಣ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿತ್ರದುರ್ಗ	ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆ (ಖಾಲಿ ಹುದ್ದೆಗೆ)
3	ಪಿ. ಪ್ರಭುದೇವ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬಾಗಲಕೋಟೆ	ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ, ಚಿತ್ರದುರ್ಗ (ಶ್ರೀ ನಾಗರಾಜ್ ಸಿ. ಚವ್ಹಾಣ್, ಇವರ ವರ್ಗಾವಣೆಯಿಂದ ಖಾಲಿಯಾಗುವ ಹುದ್ದೆಗೆ)
4	ಎಂ.ಎಲ್. ಹಾಲಳ್ಳಿ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಚೂರು	ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ, ಬಾಗಲಕೋಟೆ (ಶ್ರೀ ಪಿ. ಪ್ರಭುದೇವ್ ಇವರ ವರ್ಗಾವಣೆಯಿಂದ ಖಾಲಿಯಾಗುವ ಹುದ್ದೆಗೆ)

ಕ್ರ.ಸಂ.	ಅಧಿಕಾರಿಗಳ ಹೆಸರು ಕಾರ್ಯನಿರ್ವಹಿಸುತ್ತಿರುವ ಹುದ್ದೆ ಮತ್ತು ಸ್ಥಳ ಶ್ರೀಯುತರು	ವರ್ಗಾವಣೆ ಮಾಡಿ ನೇಮಿಸಲಾದ ಹುದ್ದೆ ಮತ್ತು ಸ್ಥಳ
5	ಎ.ಬಿ. ಪರಡ್ಡಿ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ	ನಿಯೋಜನೆ ಮೇರೆಗೆ ಜಂಟಿ ನಿರ್ದೇಶಕರು ಕೆ.ಹೆಚ್.ಡಿ.ಸಿ. ಹುಬ್ಬಳ್ಳಿ (ಶ್ರೀ ಮಾಲತೇಶ್ ಜೀವಣ್ಣವರ್ ಇವರ ವರ್ಗಾವಣೆಯಿಂದ ಖಾಲಿಯಾಗುವ ಹುದ್ದೆಗೆ)
6	ಮಾಲತೇಶ್ ಜೀವಣ್ಣವರ್, ಜಂಟಿ ನಿರ್ದೇಶಕರು, ನಿಯೋಜನೆ ಮೇರೆಗೆ ಕೆ.ಹೆಚ್.ಡಿ.ಸಿ. ಹುಬ್ಬಳ್ಳಿ	ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ, ಧಾರವಾಡ (ಖಾಲಿ ಹುದ್ದೆಗೆ)
7	ಎಂ.ವಿ. ಹೇಮಂತಕುಮಾರ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಗಳೂರು	ಜಂಟಿ ನಿರ್ದೇಶಕರು ನಿಯೋಜನೆ ಮೇರೆಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು (ಶ್ರೀ ಅಬ್ದುಲ್ ಅಜೀಜ್ ಇವರ ವರ್ಗಾವಣೆಯಿಂದ ಖಾಲಿಯಾಗುವ ಹುದ್ದೆಗೆ)
8	ಅಬ್ದುಲ್ ಅಜೀಜ್ ಜಂಟಿ ನಿರ್ದೇಶಕರು, ನಿಯೋಜನೆ ಮೇರೆಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು	ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಗಳೂರು (ಶ್ರೀ ಎಂ.ವಿ. ಹೇಮಂತಕುಮಾರ್, ಇವರ ವರ್ಗಾವಣೆಯಿಂದ ಖಾಲಿಯಾಗುವ ಹುದ್ದೆಗೆ)
9	ಆರ್.ಐ. ಕುಂಬಾರ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಗದಗ್	ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ (ಶ್ರೀ ಎ.ಬಿ. ಪರಡ್ಡಿ, ಇವರ ವರ್ಗಾವಣೆಯಿಂದ ತೆರವಾಗಲಿರುವ ಹುದ್ದೆಗೆ)
10	ಎನ್.ಎಸ್. ಚಂದ್ರಶೇಖರ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಾಮರಾಜನಗರ	ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರು (ಶ್ರೀ ಎಂ. ಶಿವಶಂಕರ್, ಇವರ ವರ್ಗಾವಣೆಯಿಂದ ಖಾಲಿಯಾಗುವ ಹುದ್ದೆಗೆ)
11	ಎಂ. ಶಿವಶಂಕರ್ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರು	ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಾಮರಾಜನಗರ (ಶ್ರೀ ಎನ್.ಎಸ್. ಚಂದ್ರಶೇಖರ್, ಇವರ ವರ್ಗಾವಣೆಯಿಂದ ಖಾಲಿಯಾಗುವ ಹುದ್ದೆಗೆ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1314

ಬಿ.ಸಿ. ಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)

ಅಧಿಸೂಚನೆ

ಸಂಖ್ಯೆ:ವಾಕೈ 194 ಕೈಸೇವಿ 2009, ಬೆಂಗಳೂರು, ದಿನಾಂಕ: 17ನೇ ಸೆಪ್ಟೆಂಬರ್, 2009.

ಶ್ರೀ ಹೆಚ್.ಕೆ. ರುದ್ರಪ್ಪ, ಉಪ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ (ನೇಮಕಾತಿ ನಿರೀಕ್ಷಣೆಯಲ್ಲಿ) ಇವರನ್ನು ನಿಯೋಜನೆ ಮೇರೆಗೆ ಹಾವೇರಿ ನಗರ ಸಭೆ ಆಯುಕ್ತರ ಹುದ್ದೆಗೆ ನೇಮಿಸಲು ಇವರ ಸೇವೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಗರಾಭಿವೃದ್ಧಿ ಇಲಾಖೆಯ ವಶಕ್ಕೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1315

ಬಿ.ಸಿ. ಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)

PERSONNEL AND ADMINISTRATIVE REFORMS SECRETARIAT

NOTIFICATION

No. DPAR 182 SFP 2009, Bangalore, Dated: 17th September, 2009

Sri Manoj Kumar Tripathi, IFS (KN-2000), Deputy Conservator of Forests & Project Officer (e-Procurement), DPAR (e-Governance), Bangalore is transferred with immediate effect and posted until further orders as Deputy Conservator of Forests, Wild Life Division, Madikeri, Kodagu District in the existing vacancy.

Sri K.T. Hanumanthappa, IFS (KN-2005), Deputy Conservator of Forests, Forest Mobile Squad, Sirsi, Uttara Kannada District is transferred with immediate effect and posted until further orders as Deputy Conservator of Forests, Project Tiger, Bandipura Wild Life Division, Bandipura, Chamarajanagara District in the existing vacancy.

By Order and in the name of the Governor of Karnataka,

ASHOK P. ATRE

P.R. 1316

Under Secretary to Government,

Department of Personnel and Administrative Reforms (Services-IV)

HIGH COURT OF KARNATAKA

NOTIFICATION

GOB (I) 313/2009, Bangalore, Dated: 15th September, 2009

PART-I

In exercise of the powers vested under sub-section (2) of Section 12 of the Code of Criminal Procedure, 1973 (Central Act No. 2/1974), the High Court of Karnataka hereby appoints the Civil Judges (Sr. Dn) mentioned in Column No. 2 as Addl. Chief Judicial Magistrates for the District mentioned in Column No. 3 for the periods mentioned in Column No. 4 during Dasara Vacation 2009.

Sl. No.	Designation	District	Period	
			From	To
1	I. Addl Civil Judge (Sr. Dn), Bangalore Rural District Bangalore	Bangalore Rural	29.9.09	1.10.09
2	Civil Judge (Sr. Dn.) Ron	Gadag	22.9.09	1.10.09
3	Addl. Civil Judge (Sr. Dn) and JMFC., Haveri	Haveri	27.9.09	1.10.09
4	I Addl. Civil Judge (Sr. Dn.) and CJM, Kolar	Kolar	22.9.09	1.10.09
5	Addl. Civil Judge (Sr. Dn.)., Ramanagara	Ramanagara	22.9.09	1.10.09

PART-II

In exercise of the powers conferred under Section 9(5) of the Code of Criminal Procedure, 1973, the Civil Judges (Sr.Dn) mentioned in Column No. 2 of the above table are hereby directed to dispose of any urgent application which is, or may be, made or pending before the District Judge of the District Courts mentioned in Column No. 3 of the above table, during Dasara Vacation of 2009.

By order of the High Court,

P.R. 1294

P. KRISHNA BHAT

Registrar (Judicial)

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಅಕ್ಟೋಬರ್ ೮, ೨೦೦೯ (ಆಶ್ವಯುಜ ೧೬, ಶಕ ವರ್ಷ ೧೯೩೧)	ಸಂಚಿಕೆ ೪೦

ಭಾಗ–೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ–1, ಬಳ್ಳಾರಿ

ಪ್ರಕರಣ ಸಂಖ್ಯೆ: ಕಾನಪ:141:09/627, ದಿನಾಂಕ:28ನೇ ಆಗಸ್ಟ್, 2009

ಅರ್ಜಿದಾರರು:

1) ಶ್ರೀಮತಿ ಕೌಸರ್ ಗಂ:ಲೇಟ್ ಹೊನ್ನೂರ್‌ವಲಿ, ವಯಸ್ಸು:23 ವರ್ಷ (ಮೃತನ ಹೆಂಡತಿ)

2) ಶ್ರೀಮತಿ ಫಾತಿಮ ಗಂ: ಹೊನ್ನೂರ ಸಾಬ್ ವಯಸ್ಸು:55 ವರ್ಷ, (ಮೃತನ ತಾಯಿ)

3) ಶ್ರೀ ಷಾಹಿನ್ ತಂ: ಲೇಟ್ ಹೊನ್ನೂರ್ ಸಾಬ್, ವಯಸ್ಸು:14 ವರ್ಷ (ಮೃತನ ಸಹೋದರಿ)

ಎಲ್ಲರ ವಾಸ: ಕೋನಸಾಗರ ಗ್ರಾಮ, ಮೊಣಕಾಲ್ಮೂರು (ತಾ) ಚಿತ್ರದುರ್ಗ ಜಿಲ್ಲೆ, ಹಾಲಿವಾಸ, ರೂಪನಗುಡಿ ರಸ್ತೆ, ಬಳ್ಳಾರಿ.

ವಿರುದ್ಧ

ಪ್ರತಿವಾದಿಗಳು:

1) ಬಿ.ಎಸ್. ನೂರ್ ಮಹಮ್ಮದ್ ತಂ: ಸಯ್ಯದ್ ಮೆಹಬೂಬ್, ಟ್ರ್ಯಾಕ್ಟರ್ ಮಾಲೀಕರು ವಾಹನ ಸಂಖ್ಯೆ:ಎಪಿ–02:ಯು:3944 ಚಿತ್ತವಾಡಿಗ, ಹೊಸಪೇಟೆ (ತಾ) ಬಳ್ಳಾರಿ (ಜಿ)

2) ಶ್ರೀಮತಿ ಜಯಲಕ್ಷ್ಮಿ ಗಂ: ಹೊನ್ನೂರಪ್ಪ ಟ್ರೈಲರ್, ನಂ.ಕೆಎ–16:2126ರ ಮಾಲೀಕರು ಅಂದ್ರಾಳ್ ಪೋಸ್ಟ್, ಬಳ್ಳಾರಿ ಪ್ರಸ್ತುತ ಶಾಧಿಮಹಲ್, ಹೊಸಪೇಟೆ.

3) ವಿಭಾಗೀಯ ವ್ಯವಸ್ಥಾಪಕರು, ಮೆ: ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ಲಿ., ಬಳ್ಳಾರಿ.

4) ವಿಭಾಗೀಯ ವ್ಯವಸ್ಥಾಪಕರು, ಐಸಿಐಸಿಐ ಲೋಂಬೋರ್ಡ್ ಮೋಟಾರ್ ಇನ್ಸೂರೆನ್ಸ್, ಡಬಲ್‌ರೋಡ್, ಬಳ್ಳಾರಿ.

ಪ್ರಕಟಣೆ

ಸದರಿ 1 ರಿಂದ 3ನೇ ಅರ್ಜಿದಾರರೆಲ್ಲರೂ ಮೃತ ಹೊನ್ನೂರವಲಿಗೆ ಹೆಂಡತಿ, ತಾಯಿ ಹಾಗೂ ಸಹೋದರಿಯಾಗಬೇಕೆಂದು, ವಾರಸುದಾರರು ಹಾಗೂ ಅವಲಂಬಿತರೆಂದು ತಿಳಿಸಿ ಸದರಿ ಮೃತನು 23.05.2009ರಂದು ಟ್ರಾಕ್ಟರ್ ಟ್ರೈಲರ್ ವಾಹನ ಸಂಖ್ಯೆ: ಎಪಿ–02:ಯು–3944 ಮತ್ತು ಕೆಎ–16:2126ರಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದಾಗ ಅಪಘಾತ ಸಂಭವಿಸಿ ತೀವ್ರ ಗಾಯಗೊಂಡು ಸ್ಥಳದಲ್ಲಿ ಮೃತಪಟ್ಟಿರುತ್ತಾನೆಂದು, ಮೃತನು 24 ವರ್ಷದವನಿದ್ದು ತಿಂಗಳಿಗೆ 5000–00 ರೂ.ಗಳನ್ನು ಪ್ರತಿವಾದಿಗಳಿಂದ ಪಡೆಯುತ್ತಿದ್ದನೆಂದು, ಈಗ ಆತನ ಮರಣದಿಂದ ತಮ್ಮ ಜೀವನ ಸಾಗುವುದು ತುಂಬಾ ಕಷ್ಟಕರವಾಗಿರುತ್ತದೆಂದು ತಿಳಿಸಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಈ ಸಂಬಂಧವಾಗಿ ಬೇರೆ ಯಾರಾದರೂ ಮೃತನ ಅವಲಂಬಿತರು, ವಾರಸುದಾರರೆಂದು ಪರಿಗಣಿಸಬೇಕೆಂದು ಕೋರಿದಲ್ಲಿ ಅಂತಹವರು ಕರ್ನಾಟಕ ರಾಜ್ಯಪತ್ರದಲ್ಲಿ, ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಣೆಗೊಂಡ 30 ದಿನಗಳೊಳಗಾಗಿ ಅಂತಹವರು ಆಕ್ಷೇಪಣೆಗಳನ್ನು ಸಲ್ಲಿಸತಕ್ಕದ್ದು. ಅವಧಿಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಸಿ.ಹೆಚ್. ಹಿರೇಗೌಡರ್

ಕಾರ್ಮಿಕಾಧಿಕಾರಿ ಮತ್ತು ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಬಳ್ಳಾರಿ ಉಪವಿಭಾಗ–1, ಬಳ್ಳಾರಿ.

III -F1 -(O)

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-1, ಬಳ್ಳಾರಿ

ಪ್ರಕರಣ ಸಂಖ್ಯೆ: ಕಾನಪ:209:09/625, ದಿನಾಂಕ:28ನೇ ಆಗಸ್ಟ್, 2009

ಅರ್ಜಿದಾರರು:

1) ಶ್ರೀಮತಿ ವೈಜಯಂತಿ ದೇವಿ, ಗಂ: ಸತೇಂದ್ರಸಿಂಗ್, ವಯಸ್ಸು:50 ವರ್ಷ, ವೃತ್ತಿ: ಏನೂ ಇಲ್ಲ, (ಮೃತನ ತಂದೆ)

2) ಶ್ರೀ ಸತೇಂದ್ರ ಸಿಂಗ್ ತಂ: ಪರಮೇಶ್ವರ ಸಿಂಗ್, ವಯಸ್ಸು: 55ವರ್ಷ, ವೃತ್ತಿ: ಏನೂ ಇಲ್ಲ, (ಮೃತನ ತಾಯಿ) ಈರ್ವರ ವಾಸ: ಸಣಸಿಗ್ರಾಮ, ಔರಂಗಾಬಾದ್, ಪ್ರಸ್ತುತ ವಾಸ: ಕುಡಿತಿನಿ ಗ್ರಾಮ, ಬಳ್ಳಾರಿ ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು:

1) ದಿ ಮ್ಯಾನೇಜಿಂಗ್ ಡೈರೆಕ್ಟರ್, ಮೆ: ಪವಮಾನ ಇಸ್ಪಾಟ್ ಪ್ರೈ.ಲಿ., ತಿಮ್ಮಲಾಪುರ ರಸ್ತೆ, ಕುಡಿತಿನಿ ಗ್ರಾಮ, ಬಳ್ಳಾರಿ (ತಾ) (ಜಿ).

2) ದಿ ಡಿವಿಜನಲ್ ಮ್ಯಾನೇಜರ್ ಮೆ: ಓರಿಯಂಟಲ್ ಇನ್ಶೂರೆನ್ಸ್ ಕಂ.ಲಿ., ಬಳ್ಳಾರಿ.

ಪ್ರಕಟಣೆ

1ನೇ ಅರ್ಜಿದಾರಳು ವೈಜಯಂತಿ ದೇವಿ, 2ನೇ ಅರ್ಜಿದಾರ ಸತೇಂದ್ರಸಿಂಗ್ ಇವರು ರಾಹುಲ್‌ಸಿಂಗ್‌ನ ತಂದೆ-ತಾಯಿಗಳೆಂದು, ಶಾಸನಬದ್ಧ ವಾರಸುದಾರರು ಹಾಗೂ ಅವಲಂಬಿತರೆಂದು ತಿಳಿಸುತ್ತಾ ರಾಹುಲ್‌ಸಿಂಗ್‌ನು ದಿನಾಂಕ:01.04.2009 ರಂದು ಕರ್ತವ್ಯದ ಮೇಲಿದ್ದಾಗ ಅಪಘಾತ ಸಂಭವಿಸಿ 22 ಅಡಿ ಎತ್ತರದಿಂದ ಕೆಳಗೆ ಬಿದ್ದು ತೀವ್ರ ಗಾಯಗೊಂಡಿದ್ದು ಕೂಡಲೇ ದಾನಮ್ಮ ಆಸ್ಪತ್ರೆ, ಬಳ್ಳಾರಿಯಲ್ಲಿ ತುರ್ತು ಚಿಕಿತ್ಸೆ ಪಡೆದು ಅವರ ಸಲಹೆ ಮೇರೆಗೆ ಬೆಂಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದಾಗ ಮೃತಪಟ್ಟಿರುತ್ತಾನೆಂದು, ಮೃತನಿಗೆ 1ನೇ ಪ್ರತಿವಾದಿ ತಿಂಗಳಿಗೆ 4000-00 ರೂ. ಕೊಡುತ್ತಿದ್ದರೆಂದು ಈಗ ಆತನು ಇಲ್ಲದೆ ತಮ್ಮಗಳ ಜೀವನ ಕಷ್ಟಕರವಾಗಿರುತ್ತದೆಂದು ತಿಳಿಸಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಈ ಸಂಬಂಧವಾಗಿ ಸಾರ್ವಜನಿಕರಿಗೆ ಹಾಗೂ ಸಂಬಂಧೀಕರಿಗೆ ತಿಳಿಸುವುದೇನೆಂದರೆ ಸದರಿ ಮೃತನ ಸಂಬಂಧೀಕರು, ವಾರಸುದಾರರೆಂದು ಯಾರಾದರೂ ಪರಿಗಣಿಸಬೇಕೆಂದಲ್ಲಿ ಅಂತಹವರು ಈ ಪ್ರಕಟಣೆಯು ಈ ನ್ಯಾಯಾಲಯದ ನಾಮಫಲಕದಲ್ಲಿ, ಕರ್ನಾಟಕ ರಾಜ್ಯ ಸರ್ಕಾರ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ 30 ದಿನಗಳೊಳಗಾಗಿ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಸಿ.ಹೆಚ್. ಹಿರೇಗೌಡರ್
ಕಾರ್ಮಿಕಾಧಿಕಾರಿ ಮತ್ತು ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಬಳ್ಳಾರಿ ಉಪವಿಭಾಗ-1, ಬಳ್ಳಾರಿ.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-1, ಬಳ್ಳಾರಿ

ಪ್ರಕರಣ ಸಂಖ್ಯೆ: ಕಾನಪ:215:09/623-24, ದಿನಾಂಕ:28ನೇ ಆಗಸ್ಟ್, 2009

ಅರ್ಜಿದಾರರು:

1) ಶ್ರೀಮತಿ ಸುಜಾತ, ಗಂ:ಲೇಟ್ ಮಲ್ಲಿ ಅಲಿಯಾಸ್ ಮಲ್ಲಿಕಾರ್ಜುನ, ವಯಸ್ಸು:20 ವರ್ಷ, ವೃತ್ತಿ: ಗೃಹಿಣಿ (ಮೃತನ ಹೆಂಡತಿ)

2) ಮೈನರ್ ಕೃಷ್ಣ ತಂ: ಲೇಟ್ ಮಲ್ಲಿ ಅಲಿಯಾಸ್ ಮಲ್ಲಿಕಾರ್ಜುನ, ವಯಸ್ಸು:01 ವರ್ಷ, (ಮೃತನ ಮಗ)

3) ಶ್ರೀ ಹನುಮಂತ ತಂ:ಸಿದ್ಧಪ್ಪ, ವಯಸ್ಸು:50 ವರ್ಷ, ವೃತ್ತಿ: ಏನೂ ಇಲ್ಲ, (ಮೃತನ ತಂದೆ)

4) ಶ್ರೀಮತಿ ಪಾರ್ವತಿ ಗಂ: ಹನುಮಂತ, ವಯಸ್ಸು: 45 ವರ್ಷ, ವೃತ್ತಿ: ಗೃಹಿಣಿ (ಮೃತನ ತಾಯಿ)

ಎಲ್ಲರವಾಸ: ಶಾತವಾಹನ ಫ್ಯಾಕ್ಟರಿರಸ್ತೆ, ಬೊಮ್ಮನಹಾಳ ಗ್ರಾಮ, ರಾಯದುರ್ಗ (ತಾ) ಅನಂತಪುರ (ಜಿ).

ವಿರುದ್ಧ

ಪ್ರತಿವಾದಿಗಳು:

1) ಶಿವರುದ್ರಗೌಡ ತಂ:ಶಿವಪ್ಪಗೌಡ, ಟ್ರಾಕ್ಟರ್ ಟ್ರೈಲರ್ ಮಾಲೀಕರು, ವಾಹನ ಸಂಖ್ಯೆ: ಎಪಿ-02:ಜಿ-3934, ಬೊಮ್ಮನಹಾಳ ಗ್ರಾಮ, ರಾಯದುರ್ಗ (ತಾ) ಅನಂತಪುರ ಜಿಲ್ಲೆ (ಎ.ಪಿ.)

2) ವಿಭಾಗೀಯ ವ್ಯವಸ್ಥಾಪಕರು, ಮೆ: ಓರಿಯಂಟಲ್ ಇನ್ಶೂರೆನ್ಸ್ ಕಂ.ಲಿ., ಬಳ್ಳಾರಿ.

ಪ್ರಕಟಣೆ

ಶ್ರೀಮತಿ ಸುಜಾತ ಗಂ:ಲೇಟ್ ಮಲ್ಲಿ ಅಲಿಯಾಸ್ ಮಲ್ಲಿಕಾರ್ಜುನ, 2ನೇ ಅರ್ಜಿದಾರ ಮೈನರ್ ಕೃಷ್ಣ, 3 ಮತ್ತು 4ನೇ ಅರ್ಜಿದಾರರಾದ ಹನುಮಂತ, ಶ್ರೀಮತಿ ಪಾರ್ವತಿ ಇವರುಗಳು ತಾವು ಮೃತ ಮಲ್ಲಿ ಅಲಿಯಾಸ್ ಮಲ್ಲಿಕಾರ್ಜುನನ ಶಾಸನಬದ್ಧ ವಾರಸುದಾರರು, ಅವಲಂಬಿತರು ಹಾಗೂ ಹೆಂಡತಿ, ಮಕ್ಕಳು ತಂದೆ-ತಾಯಿಗಳಾಗಬೇಕೆಂದು, ಮೃತ ಮಲ್ಲಿ ಅಲಿಯಾಸ್ ಮಲ್ಲಿಕಾರ್ಜುನ ದಿನಾಂಕ:04.04.2009ರಂದು 1ನೇ ಪ್ರತಿವಾದಿಗಳಲ್ಲಿ ಕೂಲಿಯಾಗಿ ಕೆಲಸ ಮಾಡುತ್ತಿದ್ದಾಗ ವಿದ್ಯುತ್ ಕಂಬದ ವೈಯರ್ ಬಡಿದು ಸ್ಥಳದಲ್ಲಿ ಮೃತಪಟ್ಟಿರುತ್ತಾನೆಂದು, ಅಪಘಾತಪೂರ್ವದಲ್ಲಿ ಆತನು ಆರೋಗ್ಯವಾಗಿದ್ದು, 25 ವರ್ಷದವನಿದ್ದು, ತಿಂಗಳಿಗೆ ವೇತನ 5000-00 ರೂ. ಪಡೆಯುತ್ತಿದ್ದು ತನ್ನ ಹಾಗೂ ನಮ್ಮಗಳ ಜೀವನ ನಿರ್ವಹಣೆ ಮಾಡುತ್ತಿದ್ದನು. ಈಗ ಆತನಿಲ್ಲದೆ ತಮ್ಮಗಳ ಜೀವನ ಸಾಗುವುದು ತುಂಬಾ ಕಷ್ಟಕರವೆಂದು ತಿಳಿಸಿ ನಷ್ಟ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ ಈ ಸಂಬಂಧವಾಗಿ ಯಾರಾದರೂ ವಾರಸುದಾರರು, ಅವಲಂಬಿತರೆಂದು ಪರಿಗಣಿಸಬೇಕೆಂದು ಕೋರಿ ಆಕ್ಷೇಪಣೆ ಸಲ್ಲಿಸುವುದಾದರೆ ಅಂತಹವರು ಈ ನ್ಯಾಯಾಲಯದ ನಾಮಫಲಕದಲ್ಲಿ, ಕರ್ನಾಟಕ ರಾಜ್ಯ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಗೊಂಡ 30 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ಅವಧಿಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಸಿ.ಹೆಚ್. ಹಿರೇಗೌಡರ್

ಪಿ.ಆರ್.833

ಕಾರ್ಮಿಕಾಧಿಕಾರಿ ಮತ್ತು ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಬಳ್ಳಾರಿ ಉಪವಿಭಾಗ-1, ಬಳ್ಳಾರಿ.

ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ

ಪ್ರಕರಣ ಸಂಖ್ಯೆ: ಡಬ್ಲ್ಯೂಸಿಎ:ಎಸ್ಆರ್-105:2009, ದಿನಾಂಕ:12ನೇ ಆಗಸ್ಟ್, 2009

ಅರ್ಜಿದಾರರು:		ಪ್ರತಿವಾದಿಗಳು:
ಶ್ರೀ ಸೋಮನಾಥ ತಂದೆ ಬಸವಂತ ಕೋಳಿ ಮತ್ತು ಇನ್ನೊಬ್ಬರು, ತಾ:ಬ.ಬಾಗೇವಾಡಿ, ಜಿಲ್ಲೆ: ಬಿಜಾಪುರ.	ವಿರುದ್ಧ	1) ಶ್ರೀ ರೈಸ ಇಬ್ರಾಹಿಂ ಬಿರಾಜದಾರ, ಸಾ:ಕುಡಲ, ಪೋಸ್ಟ್ ಬನ್ನೂರ, ಜಿಲ್ಲೆ: ಸೊಲಾಪುರ. 2) ದಿ ಮ್ಯಾನೇಜರ್, ರಿಪ್ರೆಸೆಂಟೆಡ್‌ಬಾಯ ಶ್ರೀ ರಾಮ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂ.ಲಿ., ಬಿಜಾಪುರ.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ಈರಣ್ಣ ತಂದೆ ಸೋಮನಾಥ ಕೋಳಿ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:08.06.2009 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತನ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಜಿ. ಸಿದ್ಧಲಿಂಗಪ್ಪ ಆಲೂರು

ಕಾರ್ಮಿಕ ಪರಿಹಾರ ಆಯುಕ್ತರು, ಉಪವಿಭಾಗ-2,
ಬಿಜಾಪುರ ಜಿಲ್ಲೆ, ಬಿಜಾಪುರ.

ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ

ಪ್ರಕರಣ ಸಂಖ್ಯೆ: ಡಬ್ಲ್ಯೂಸಿಎ:ಎಸ್ಆರ್-109:2009, ದಿನಾಂಕ:17ನೇ ಆಗಸ್ಟ್, 2009

ಅರ್ಜಿದಾರರು:		ಪ್ರತಿವಾದಿಗಳು:
ಶ್ರೀಮತಿ ಶಖೀಲಾ ಗಂಡ ರಫೀಕ್ ಅಹ್ಮದ ಜಮಾದಾರ ಮತ್ತು ಇತರರು, ಸಾ: ಮಿರಡೆಗಲ್ಲಿ, ಬಿಜಾಪುರ ಮತ್ತು ಇತರರು.	ವಿರುದ್ಧ	1) ಶ್ರೀ ಗಿರೀಶ ತಂದೆ ಈರಪ್ಪ ಸುರಪುರ, ಸಾ:ಸುರಪುರ ಬಿಲ್ಡಿಂಗ್, ನಾಲಬಂದ ಚೌಕ್, ಬಿಜಾಪುರ. 2) ದಿ ಡಿವಿಜನಲ್ ಮ್ಯಾನೇಜರ್, ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂ.ಲಿ., ಬಿಜಾಪುರ.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ರಫಿಕ್ ಅಹ್ಮದ ತಂದೆ ಜಂಗ್ಲಿಸಾಬ ಜಮಾದಾರ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:02.08.2009 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತನ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಜಿ. ಸಿದ್ದಲಿಂಗಪ್ಪ ಆಲೂರು
ಕಾರ್ಮಿಕ ಪರಿಹಾರ ಆಯುಕ್ತರು, ಉಪವಿಭಾಗ-2,
ಬಿಜಾಪುರ ಜಿಲ್ಲೆ, ಬಿಜಾಪುರ.

ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2,
ಬಿಜಾಪುರ ಜಿಲ್ಲೆ, ಬಿಜಾಪುರ

ಪ್ರಕರಣ ಸಂಖ್ಯೆ: ಡಬ್ಲ್ಯೂಸಿಎ:ಎಸ್ಆರ್-110:2009, ದಿನಾಂಕ:18ನೇ ಆಗಸ್ಟ್, 2009

ಅರ್ಜಿದಾರರು:		**ಪ್ರತಿವಾದಿಗಳು:**
ಶ್ರೀಮತಿ ಶಂಕ್ರವ್ವ ಗಂಡ ಶ್ರೀಮಂತ ಕೆಂಗನಾಳ ಸಾ: ಶಿಕಾರಖಾನಾ, ಬಿಜಾಪುರ ಮತ್ತು ಇತರರು.	**ವಿರುದ್ಧ**	1) ಶ್ರೀ ಮಲ್ಲಿಕಾರ್ಜುನ ತಂದೆ ಚಂದ್ರಶೇಖರ ಕೆಂಗನಾಳ, ಸಾ: ಹೊನ್ನಳ್ಳಿ, ತಾ: ಇಂಡಿ, ಜಿಲ್ಲೆ: ಬಿಜಾಪುರ. 2) ದಿ ಮ್ಯಾನೇಜರ್, ಲಿಗಲ್ ಶ್ರೀರಾಮ ಜನರಲ್ ಇನ್ಸೂರೆನ್ಸ್ ಕಂ.ಲಿ., ಬಿಜಾಪುರ-01.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ಶ್ರೀಮಂತಭೀಮರಾಯ ಕೆಂಗನಾಳ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:24.06.2009 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತನ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಜಿ. ಸಿದ್ದಲಿಂಗಪ್ಪ ಆಲೂರು
ಕಾರ್ಮಿಕ ಪರಿಹಾರ ಆಯುಕ್ತರು, ಉಪವಿಭಾಗ-2,
ಬಿಜಾಪುರ ಜಿಲ್ಲೆ, ಬಿಜಾಪುರ.

ಪಿ.ಆರ್.838

ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2,
ಬಿಜಾಪುರ ಜಿಲ್ಲೆ, ಬಿಜಾಪುರ

ಪ್ರಕರಣ ಸಂಖ್ಯೆ: ಡಬ್ಲ್ಯೂಸಿಎ:ಎಸ್ಆರ್-111:2009, ದಿನಾಂಕ:19ನೇ ಆಗಸ್ಟ್, 2009

ಅರ್ಜಿದಾರರು:		**ಪ್ರತಿವಾದಿಗಳು:**
ದೊಮನಿ ದೇವಿ ಗಂಡ: ಲಾಲನರಾಮ ಉರ್ಫ್ ಬಚ್ಚು ರಬಿದಾಸ ಮತ್ತು ಇತರರು, ಸಾ: ಸೈದಾಪುರ ಮಕದುಮಬಾಬಾ, ಪಿ.ಎಸ್. ಪಾರಸಿ, ಜಿಲ್ಲೆ: ಅರವಾಲ.	**ವಿರುದ್ಧ**	1) ದಿ ಮ್ಯಾನೇಜಿಂಗ್ ಡೈರೆಕ್ಟರ್, ಧುಧ ಪಂಡರಿ ಕ್ಯಾಟಲ್ ಫೀಡ ಪಾರ್ಕ್, ಬಾರಸಿ ಜಾಮಗಾಂವ ಬಾರಸಿ ರೋಡ್, ಜಿಲ್ಲೆ: ಸೋಲಾಪುರ.

2) ದಿ ಮ್ಯಾನೇಜಿಂಗ್ ಡೈರೆಕ್ಟರ್, ಸೋಲಾಪುರ ಜಿಲ್ಲೆ, ಸಹಕಾರಿ ಧೂಡ ಉತ್ಪಾದಕ ಮತ್ತು ಪ್ರಕ್ರಿಯಾ ಸಂಘ ಲಿ., ಸೋಲಾಪುರ.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ಲಾಲನರಾಮ ಉರ್ಫ್ ಬಚ್ಚು ರಬಿದಾಸ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:02.06.2006 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತನ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಜಿ. ಸಿದ್ಧಲಿಂಗಪ್ಪ ಆಲೂರು
ಕಾರ್ಮಿಕ ಪರಿಹಾರ ಆಯುಕ್ತರು, ಉಪವಿಭಾಗ-2,
ಬಿಜಾಪುರ ಜಿಲ್ಲೆ, ಬಿಜಾಪುರ.

ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-II, ವಿಜಾಪುರ ಜಿಲ್ಲೆ, ವಿಜಾಪುರ

ಪ್ರಕರಣ ಸಂಖ್ಯೆ: ಡಬ್ಲ್ಯೂಸಿಎ:ಎಸ್‌ಆರ್-113:09, ದಿನಾಂಕ:28ನೇ ಆಗಸ್ಟ್ 2009

ಅರ್ಜಿದಾರರು:		**ಪ್ರತಿವಾದಿಗಳು:**
ಶ್ರೀಮತಿ ಶರಣವ್ವ ಗಂಡ ದೇವಲಪ್ಪ ಹರಿಜನ ಮತ್ತು ಇತರರು, ಸಾ: ಚಿಕಆಸಂಗಿ, ತಾ:ಬ.ಬಾಗೇವಾಡಿ.	**ವಿರುದ್ಧ**	1) ಶ್ರೀ ಅಸೀಫ್ ಎನ್. ಸೇಟ, ಸಾ: ಮೆ: ಸೇಟ ಟ್ರಾನ್ಸ್‌ಪೋರ್ಟ್, ಕಾರ್ಪೋರೇಷನ ಪಿ.ಬಿ.ರೋಡ್, ಬೆಳಗಾವ. 2) ದಿ ಬ್ರ್ಯಾಂಚ್ ಮ್ಯಾನೇಜರ್, ನ್ಯಾಷನಲ್ ಇನ್ಸೂರೆನ್ಸ್ ಕಂ.ಲಿ., ಬಿಜಾಪುರ.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ರಾಜೇಶ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:27.05.2009 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತನ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ಪರಿಹಾರ ಆಯುಕ್ತರು, ಉಪವಿಭಾಗ- II,
ಬಿಜಾಪುರ ಜಿಲ್ಲೆ, ಬಿಜಾಪುರ.

ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-II, ವಿಜಾಪುರ ಜಿಲ್ಲೆ, ವಿಜಾಪುರ

ಪ್ರಕರಣ ಸಂಖ್ಯೆ: ಡಬ್ಲ್ಯೂಸಿಎ:ಎಸ್ಆರ್-116:09, ದಿನಾಂಕ:28ನೇ ಆಗಸ್ಟ್, 2009

ಅರ್ಜಿದಾರರು:		**ಪ್ರತಿವಾದಿಗಳು:**
ಶ್ರೀ ವೆಂಕಪ್ಪ ತಂದೆ ಸಿರಗಪ್ಪ ಉಪ್ಪಾರ ಮತ್ತು ಇತರರು, ಸಾ: ಸುಗೂರ, ತಾ: ಸುರಪುರ ಜಿಲ್ಲೆ: ಗುಲಬರ್ಗಾ.	ವಿರುದ್ಧ	1) ಶ್ರೀ ಮಹಿಬೂಬಲಿ ತಂದೆ ಅತಾವುಲ್ಲಾ ರಹಿಮಾನ ದಖನಿ, ಸಾ: ಸೋರಾಪುರ, ಜಿಲ್ಲೆ: ಗುಲಬರ್ಗಾ. 2) ದಿ ಮ್ಯಾನೇಜರ್, ಲಿಗಲ್ ಶ್ರೀರಾಮ ಜನರಲ್ ಇನ್ಸೂರೆನ್ಸ್ ಕಂ.ಲಿ., ಬೆಂಗಳೂರು.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ಬಾಲಕೃಷ್ಣ ತಂದೆ ವೆಂಕಪ್ಪ ಉಪ್ಪಾರ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:24.07.2009 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತನ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ಪರಿಹಾರ ಆಯುಕ್ತರು, ಉಪವಿಭಾಗ- II,
ಪಿ.ಆರ್.839 ಬಿಜಾಪುರ ಜಿಲ್ಲೆ, ಬಿಜಾಪುರ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರ ಕಛೇರಿ, ಬೆಂಗಳೂರು ಪ್ರಾಂತ, ಚಾಮರಾಜಪೇಟೆ, ಬೆಂಗಳೂರು-560 018

ಕ್ರ.ಸಂ.ಜೆಆರ್‌ಬಿ:ಎಲ್‌ಕ್ಯೂಡಿ-58-2-ಎಲ್ಎಂಸಿ-07-08, ದಿನಾಂಕ:2ನೇ ಮೇ, 2009

ವಿಷಯ: ಸಮಾಪನೆಗೊಂಡಿರುವ ತುಂಗ ಮೀನುಗಾರರ ಸಹಕಾರ ಸಂಘ ನಿ., ನೆಲ್ಲಿಸರ, ತೀರ್ಥಹಳ್ಳಿ ತಾಲ್ಲೂಕು ಈ ಸಂಘವನ್ನು ಪುನಃಶ್ಚೇತನಗೊಳಿಸುವ ಬಗ್ಗೆ.

ಉಲ್ಲೇಖ:1) ಈ ಕಛೇರಿಯ ಆದೇಶದ ಸಂಖ್ಯೆ: ಜೆಆರ್‌ಬಿ/ಎಲ್‌ಕ್ಯೂಡಿ/58/2 ಎಲ್ಎಂಸಿ/2007-08, ದಿನಾಂಕ:04.04.2008.

2) ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಇವರ ಪತ್ರದ ಸಂಖ್ಯೆ: ಡಿಆರ್‌ಎಸ್/ಸಮಾಪನೆ/38/2008-09, ದಿನಾಂಕ:21.03.2009.

ಪ್ರಸ್ತಾವನೆ:

ತುಂಗ ಮೀನುಗಾರರ ಸಹಕಾರ ಸಂಘ ನಿ., ನೆಲ್ಲಿಸರ, ತೀರ್ಥಹಳ್ಳಿ ತಾಲ್ಲೂಕು ಈ ಸಂಘವು ಸಂಖ್ಯೆ: ಡಿಆರ್‌ಎಸ್/ನೋಂದಣಿ/32499/2004-05, ದಿನಾಂಕ:22.12.2004 ರಂದು ನೋಂದಣಿಯಾಗಿದ್ದು, ತೀರ್ಥಹಳ್ಳಿ ತಾಲ್ಲೂಕಿಗೆ ಕಾರ್ಯಕ್ಷೇತ್ರವು ಸೀಮಿತವಾಗಿರುತ್ತದೆ. ಈ ಸಂಘವು ನೋಂದಣಿಯಾದ ಉಪನಿಯಮಗಳ ಉದ್ದೇಶಗಳಿಗನುಗುಣವಾಗಿ ಕಾರ್ಯನಿರ್ವಹಿಸದೆ ಸ್ಥಗಿತಗೊಂಡಿದೆಯೆಂದು ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಇವರ ವರದಿಯ ಮೇರೆಗೆ ಸದರಿ ಸಂಘವನ್ನು ಉಲ್ಲೇಖ (1) ರ ಈ ಕಛೇರಿಯ ಆದೇಶದಲ್ಲಿ ಸಮಾಪನೆಗೊಳಿಸಲಾಗಿತ್ತು.

ಉಲ್ಲೇಖ (2)ರ ಪತ್ರದಲ್ಲಿ ಸಹಕಾರ ಸಂಘಗಳ ಉಪನಿಬಂಧಕರು, ಸಮಾಪನಾಧಿಕಾರಿಯಾದ ತೀರ್ಥಹಳ್ಳಿ ಸಹಕಾರ ಅಭಿವೃದ್ಧಿ ಅಧಿಕಾರಿಯವರು ಅಧಿಕಾರ ವಹಿಸಿಕೊಂಡಿದ್ದು, ಸಮಾಪನಾ ನಡವಳಿಕೆಯನ್ನು ನಿರ್ವಹಿಸುವ ಸಂದರ್ಭದಲ್ಲಿ ಈ ಸಂಘದ ಸದಸ್ಯರು ದಿನಾಂಕ:25.11.2008 ರಂದು ಸಭೆ ಸೇರಿ ಸಂಘವನ್ನು ನಡೆಸಿಕೊಂಡು ಹೋಗಲು ಸಂಘವನ್ನು ಪುನಃಶ್ಚೇತನಗೊಳಿಸಲು ಕೋರಿರುವುದರಿಂದ ಸಮಾಪನಾಧಿಕಾರಿಯವರು ಅವರ ಕೋರಿಕೆಯನ್ನು ಪರಿಗಣಿಸಿ ಸಂಘವನ್ನು ಪುನಃಶ್ಚೇತನಗೊಳಿಸುವುದು ಸೂಕ್ತವೆಂದು ತೀರ್ಮಾನಿಸಿ ಈ ಬಗ್ಗೆ ದಿನಾಂಕ:15.01.2009ರಂದು ಸಮಾಪನಾ ನಡವಳಿಯಲ್ಲಿ ತೀರ್ಮಾನಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಉಪನಿಬಂಧಕರ ವರದಿಯ ಮೇರೆಗೆ ಸದರಿ ಸಂಘವನ್ನು ಪುನಃಶ್ಚೇತನಗೊಳಿಸಲು ತೀರ್ಮಾನಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(3) ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಕ್ರಮಾಂಕ:ಸಿಎಂಡಬ್ಲ್ಯೂ/69/ಸಿಎಲ್ಎಂ/2001, ದಿನಾಂಕ:21.11.2001 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಸಿ.ಎಸ್. ವೀರೇಶ್, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು, ಆದ ನಾನು ತುಂಗಾ ಮೀನುಗಾರರ ಸಹಕಾರ ಸಂಘ ನಿ., ನೆಲ್ಲಿಸರ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಈ ಸಂಘವನ್ನು ಸಮಾಪನೆಗೊಳಿಸಿ ಹೊರಡಿಸಿದ್ದ ಆದೇಶ ಸಂಖ್ಯೆ: ಜೆಆರ್‌ಬಿ/ ಸಮಾಪನೆ/58/2/ಎಲ್ಎಂಸಿ/2007-08, ದಿನಾಂಕ:04.04.2008ನ್ನು ರದ್ದುಪಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಸದರಿ ಸಂಘವನ್ನು ಪುನಃಶ್ಚೇತನಗೊಳಿಸಿರುತ್ತೇನೆ.

ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಇವರು ಸದರಿ ಸಂಘದ ಆಡಳಿತ ಮಂಡಳಿ ರಚನೆಗೆ ಅಗತ್ಯ ಕ್ರಮವಿಡುವುದು ಹಾಗೂ ಚುನಾಯಿತರಾಗುವ ಆಡಳಿತ ಮಂಡಳಿಯು ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಾರಂಭಿಸಿ ಈ ಬಗ್ಗೆ 6 ತಿಂಗಳ ಒಳಗೆ ವರದಿ ನೀಡಲು ಆದೇಶಿಸಿದೆ.

ಈ ಆದೇಶವನ್ನು ನನ್ನ ಸ್ವಸಹಿ ಹಾಗೂ ಕಛೇರಿ ಮೊಹರಿನೊಂದಿಗೆ ದಿನಾಂಕ:02.05.2009ರಂದು ಹೊರಡಿಸಿರುತ್ತೇನೆ.

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು,
ಪಿ.ಆರ್.429 ಬೆಂಗಳೂರು ಪ್ರಾಂತ, ಬೆಂಗಳೂರು.

ಸಹಕಾರ ಇಲಾಖೆ

ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕರಾಜ್ಯ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052 ರವರ ನಡವಳಿಗಳು

ವಿಷಯ: ಶ್ರೀಮತಿ ಅಶ್ವಿನಿ ಬಿ.ವಾಡಕರ, ದ್ವಿತೀಯ ದರ್ಜೆ ಸಹಾಯಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಶಿರಸಿ ಉಪವಿಭಾಗ, ಶಿರಸಿ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957 ರನ್ವಯ ಶಿಸ್ತು ಕ್ರಮ-ದಂಡನೆ ವಿಧಿಸುವ ಕುರಿತು.

ಉಲ್ಲೇಖ:1) ಸಹಕಾರ ಸಂಘಗಳ ಉಪ ನಿಬಂಧಕರು, ಉತ್ತರ ಕನ್ನಡ ಜಿಲ್ಲೆ, ಕಾರವಾರ ರವರ ಆದೇಶ ಸಂಖ್ಯೆ: ಡಿಆರ್‌ಎನ್/ಇಎಸ್‌ಟಿ/ಸಿಆರ್-82/ಇಸಿಸಿ/2004-05, ದಿನಾಂಕ:01.12.2004.

2) ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಳಗಾವಿ ಪ್ರಾಂತ, ಬೆಳಗಾವಿ ಇವರ ಪತ್ರಸಂಖ್ಯೆ: ಜೆಆರ್‌ಎಲ್/ಸಿ/197/ಇಸಿಸಿ/2003-04, ದಿನಾಂಕ:24.11.2008.

3) ಇದೇ ಸಮ ಸಂಖ್ಯೆಯ ದಿನಾಂಕ:03.01.2009ರ ಈ ಪ್ರಾಧಿಕಾರದ ತಿಳುವಳಿಕೆ ಪತ್ರ.

4) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿರಸಿ ಉಪವಿಭಾಗ, ಶಿರಸಿ ಇವರ ಪತ್ರ ಸಂಖ್ಯೆ: ಸನಿ-21/ಸಿಬ್ಬಂದಿ/ಇಸಿಸಿ/ಸಿಆರ್-98/2008-09, ದಿನಾಂಕ:23.03.2009.

ಪ್ರಸ್ತಾವನೆ:

ಶ್ರೀಮತಿ ಅಶ್ವಿನಿ ಬಿ.ವಾಡಕರ, ದ್ವಿತೀಯ ದರ್ಜೆ ಸಹಾಯಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಶಿರಸಿ ಉಪವಿಭಾಗ, ಶಿರಸಿ ದಿನಾಂಕ:11.08.2003 ರಿಂದ ಕಛೇರಿ ಕೆಲಸಕ್ಕೆ ಅನಧಿಕೃತ ಗೈರು ಹಾಜರಾಗಿ ಉಳಿದ ದುರ್ನಡತೆಗಾಗಿ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರನ್ವಯ ಮೂಲ ಶಿಸ್ತು ಪ್ರಾಧಿಕಾರವಾಗಿ ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ಕನ್ನಡ ಜಿಲ್ಲೆ, ಕಾರವಾರ ರವರು ಉಲ್ಲೇಖ (1)ರನ್ವಯ ಇಲಾಖಾ ವಿಚಾರಣೆಗೆ ಆದೇಶಿಸಿ, ಇವರಿಗೆ ಸೂಕ್ತ ದಂಡನೆ ವಿಧಿಸುವ ಸಲುವಾಗಿ ವಿಚಾರಣಾ ಪ್ರಾಧಿಕಾರದಿಂದ ಪಡೆದ ವಿಚಾರಣಾ ವರದಿಯು ಉಲ್ಲೇಖ (2)ರ ಪತ್ರದ ಮೂಲಕ ಈ ಪ್ರಾಧಿಕಾರಕ್ಕೆ ಸಲ್ಲಿಸಲ್ಪಟ್ಟಿದೆ.

ಆರೋಪಿ ಸರ್ಕಾರಿ ನೌಕರರ ವಿರುದ್ಧ ಶಿಸ್ತು ಪ್ರಾಧಿಕಾರವು ಹೂಡಿದ ಆರೋಪ ಇಂತಿದೆ:

ಶ್ರೀಮತಿ ಅಶ್ವಿನಿ ಬಿ.ವಾಡಕರ, ದ್ವಿತೀಯ ದರ್ಜೆ ಸಹಾಯಕರು ಇವರು ದಿನಾಂಕ:11.08.2003 ರಿಂದ ಅನಧಿಕೃತ ಗೈರು ಹಾಜರಾಗಿರುವ ಕಾರಣ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957 ರನ್ವಯ ಶಿಸ್ತಿನ ಕ್ರಮಕ್ಕೆ ಹೊಣೆಗಾರರಾಗಿರುವರು.

ಇಲಾಖಾ ವಿಚಾರಣೆ ನಡೆಸಲು ಮೂಲ ಶಿಸ್ತು ಪ್ರಾಧಿಕಾರವು ನೇಮಕ ಮಾಡಿದ ವಿಚಾರಣಾ ಪ್ರಾಧಿಕಾರವಾದ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕಾರವಾರ ಉಪವಿಭಾಗ, ಕಾರವಾರ ಇವರು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957 ರನ್ವಯ ನಡೆಸಿದ ವಿಚಾರಣೆಗೆ ಆರೋಪಿ ಸರ್ಕಾರಿ ನೌಕರರು ಹಾಜರಾಗದೆ ಸತತವಾಗಿ ಗೈರು ಹಾಜರಾದ ಕಾರಣ ಇಲಾಖಾ ವಿಚಾರಣೆಯಲ್ಲಿ ಭಾಗವಹಿಸಲು ಇವರಿಗೆ ಆಸಕ್ತಿ

ಇಲ್ಲವೆಂದು ವಿಚಾರಣಾ ಪ್ರಾಧಿಕಾರವು ಮನಗಂಡು ಇವರ ವಿರುದ್ಧ ಹೂಡಿದ ಆರೋಪವು ಸಾಭೀತಾಗಿರುವುದಾಗಿ ನಿರ್ಣಯಕ್ಕೆ ಬಂದಿರುತ್ತದೆ.

ಆರೋಪಿ ಸರ್ಕಾರಿ ನೌಕರರಾದ ಶ್ರೀಮತಿ ಅಶ್ವಿನಿ ಬಿ.ವಾಡಕರ, ಇವರು ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕರಾಗಿ ನೇಮಕ ಹೊಂದಿ ದಿನಾಂಕ:19.01.2001 ರಿಂದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಶಿರಸಿ ಉಪವಿಭಾಗ, ಶಿರಸಿ ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇವರ ಪರೀಕ್ಷಾ ಪೂರ್ವ ಅವಧಿ ಘೋಷಿತವಾಗಿರುವುದಿಲ್ಲ. ಇವರು ದಿನಾಂಕ:29.03.2003 ರಿಂದ ದಿನಾಂಕ: 10.08.2003 ರವರೆಗೆ ಪ್ರಸೂತಿ ರಜೆಯ ನಂತರ ದಿನಾಂಕ:11.08.2003 ರಂದು ಕಛೇರಿ ಕೆಲಸಕ್ಕೆ ಹಾಜರಾಗದೆ ಸತತವಾಗಿ ಗೈರು ಹಾಜರಾಗಿ ಉಳಿದಿರುತ್ತಾರೆ. ವಿಚಾರಣಾ ನಡವಳಿಗಳಲ್ಲಿ ಪಾಲ್ಗೊಳ್ಳಲು ವಿಚಾರಣಾ ಪ್ರಾಧಿಕಾರವು ಇವರಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಇವರು ವಿಚಾರಣೆಗೆ ಹಾಜರಾಗದೆ ಇರುವುದು ಕಂಡುಬಂದಿದೆ. ಇದರಿಂದಾಗಿ ವಿಚಾರಣೆಯಲ್ಲಿ ಭಾಗವಹಿಸಲು ಇವರಿಗೆ ಆಸಕ್ತಿ ಇಲ್ಲವೆಂದು ಪರಿಗಣಿಸಿ ಆರೋಪವು ಸಾಬೀತಾಗಿರುವುದಾಗಿ ವಿಚಾರಣಾ ಪ್ರಾಧಿಕಾರವು ಅನಿವಾರ್ಯವಾಗಿ ಏಕಪಕ್ಷೀಯವಾಗಿ ಕೈಗೊಂಡ ನಿರ್ಣಯವನ್ನು ಸಹಮತಿಸಿದೆ.

ಆರೋಪಿ ಸರ್ಕಾರಿ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957 ರನ್ವಯ ಸೂಕ್ತ ದಂಡನೆಯನ್ನು ವಿಧಿಸುವ ಮುನ್ನ ವಿಚಾರಣಾ ವರದಿಯ ಮೇಲೆ ಅಹವಾಲನ್ನು ಪಡೆಯಲು ಉಲ್ಲೇಖ (3)ರ ತಿಳುವಳಿಕೆ ಪತ್ರದೊಂದಿಗೆ ವಿಚಾರಣಾ ವರದಿಯ ಪ್ರತಿಯನ್ನು ಇವರಿಗೆ ಒದಗಿಸಿ 15 ದಿನಗಳ ಕಾಲಾವಕಾಶವನ್ನು ನೀಡಲಾಗಿತ್ತು. ಈ ತಿಳುವಳಿಕೆ ಪತ್ರವನ್ನು ಮತ್ತು ವಿಚಾರಣಾ ವರದಿಯ ಪ್ರತಿಯನ್ನು ಆರೋಪಿ ಸರ್ಕಾರಿ ನೌಕರರ ಪರವಾಗಿ ಇವರ ತಾಯಿ ಶ್ರೀಮತಿ ಅಹಲ್ಯ ವಾಡಕರ ಇವರಿಗೆ ದಿನಾಂಕ:19.03.2009ರಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿರಸಿ ಉಪವಿಭಾಗ, ಶಿರಸಿ ಇವರ ಮೂಲಕ ಜಾರಿ ಆಗಿ ಉಲ್ಲೇಖ (4)ರಂತೆ ಸ್ವೀಕೃತಿ ಸಲ್ಲಿಸಲ್ಪಟ್ಟಿದೆ.

ವಿಚಾರಣಾ ವರದಿಯ ಮೇಲೆ ಅಹವಾಲನ್ನು ಲಿಖಿತದಲ್ಲಿ ಸಲ್ಲಿಸಲು ಆರೋಪಿ ಸರ್ಕಾರಿ ನೌಕರರಿಗೆ ಸಾಕಷ್ಟು ಕಾಲಾವಕಾಶ ನೀಡಲಾಗಿದ್ದರೂ ಇವರಿಂದ ಯಾವುದೇ ಅಹವಾಲು ಸ್ವೀಕೃತವಾಗಿರುವುದಿಲ್ಲ. ಆರೋಪಿ ಸರ್ಕಾರಿ ನೌಕರರ ವಿರುದ್ಧ ಹೂಡಿರುವ ಆರೋಪವು ಗಂಭೀರ ಸ್ವರೂಪದ್ದಾಗಿದ್ದು, ಈ ಆರೋಪವು ವಿಚಾರಣೆಯಲ್ಲಿ ಸಾಭೀತಾಗಿರುವುದರಿಂದ ಮತ್ತು ಆರೋಪಿ ಸರ್ಕಾರಿ ನೌಕರರ ತಮ್ಮ ಅಹವಾಲನ್ನು ಸಲ್ಲಿಸಲು ವಿಫಲರಾದ್ದರಿಂದ ಇವರಿಗೆ ಕಠಿಣ ದಂಡನೆ ವಿಧಿಸಲು ನಿರ್ಧರಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಆದೇಶ

ಸಂಖ್ಯೆ: ಸಿಬ್ಬಂದಿ/23/ಇಸಿಸಿ/2008-09, ದಿನಾಂಕ:19ನೇ ಮೇ, 2009

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮ 9(2) (ಸಿ) ರಡಿ ಪ್ರದತ್ತವಾದ ಅಧಿಕಾರದನ್ವಯ ಡಿ.ಎನ್. ನಾಯಕ್, ಭಾ.ಆ.ಸೇ. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಆದ ನಾನು ಶ್ರೀಮತಿ ಅಶ್ವಿನಿ ಬಿ.ವಾಡಕರ, ದ್ವಿತೀಯ ದರ್ಜೆ ಸಹಾಯಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಶಿರಸಿ ಉಪವಿಭಾಗ, ಶಿರಸಿ ಇವರಿಗೆ ಇದೇ ನಿಯಮಾವಳಿಗಳ ನಿಯಮ 8(vii) ರನ್ವಯ ಸರ್ಕಾರಿ ಸೇವೆಯಿಂದ ತೆಗೆದು ಹಾಕುವ ದಂಡನೆಯನ್ನು ವಿಧಿಸಿ ಆದೇಶಿಸಿದ್ದೇನೆ. ಗೈರು ಹಾಜರಾಗಿರುವ ಅವಧಿಗೆ ವೇತನ ಪಡೆಯಲು ಅವರು ಅರ್ಹರಿರುವುದಿಲ್ಲವೆಂದು ಕೂಡ ಆದೇಶಿಸಲಾಗಿದೆ.

ಡಿ.ಎನ್. ನಾಯಕ್
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಪಿ.ಆರ್.454

ಅರಣ್ಯ ಇಲಾಖೆ

ಅರಣ್ಯ ಕ್ಷೇತ್ರ ನಿರ್ಧಾರಾಧಿಕಾರಿಗಳ ಕಾರ್ಯಲಯ ಬಳ್ಳಾರಿ.

ಸಂಖ್ಯೆ:ಎಫ್.ಎ.ಎಫ್/ ಎಫ್.ಓ.ಆರ್/ಆರ್.ಇ.ಎಸ್/ಸಿ.ಆರ್/9(ಎ)/86-87, ದಿನಾಂಕ:1ನೇ ಸೆಪ್ಟೆಂಬರ್, 2009

(ಫಾರಂ-2-ಕಾಯ್ದೆ 15)

ಘೋಷಣೆ

1963ನೇ ಇಸವಿಯ ಕರ್ನಾಟಕ ಅರಣ್ಯ ಅಧಿನಿಯಮದ (5) ನೇ ಪ್ರಕರಣದ ಮೇರೆಗೆ ಘೋಷಣೆ.

ದಿನಾಂಕ : 01.09.2009

ಸಂಖ್ಯೆ:ಎಫ್.ಎಫ್.ಡಿ./29/ಎಫ್.ಎ.ಎಫ್/84 ಕರ್ನಾಟಕ ಸರ್ಕಾರವು ಈ ಕೆಳಗೆ ನಮೂದಿಸಿದ. ಸರಹದ್ದಿನಂತೆ 30565.05 ಹೆಕ್ಟೇರ್ಸ್ ಅರಣ್ಯ ಕ್ಷೇತ್ರವನ್ನು ರಕ್ಷಿತ ಅರಣ್ಯವನ್ನಾಗಿ ಮಾಡಲು ಅಧಿಸೂಚನೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ಕ್ರ. ಸಂ.	ಬ್ಲಾಕ್	ಜಿಲ್ಲೆ	ತಾಲ್ಲೂಕು	ಗ್ರಾಮ	ಕ್ಷೇತ್ರ ವಿಸ್ತೀರ್ಣ (ಹೆಕ್ಟರ್‌ನಲ್ಲಿ)	ಸರ್ವೆ ನಂ
1.	ರಾಮಮಲ್ಯೆ (R.M. Block)	ಬಳ್ಳಾರಿ	ಸಂಡೂರು	ರಾಮಘಡ	7769.85	–
2.	ಸ್ವಾಮಿ ಮಲ್ಯೆ (S.M. Block)	ಬಳ್ಳಾರಿ	ಸಂಡೂರು	ಧರ್ಮಾಪುರ, ಲಕ್ಷ್ಮೀಪುರ, ಹುಲಿಕುಂಟೆ, ಬುಜಂಗನಗರ, ನರಸಿಂಗಪುರ, ರಂಜಿತ್‌ಪುರ, ಮುದ್ದಲಘಟ್ಟಿ, ದೇವಗಿರಿ.	6996.22	–
3.	ದೋಣಿಮಲ್ಯೆ (D.M. Block)	ಬಳ್ಳಾರಿ	ಸಂಡೂರು	ತಾರಾನಗರ, ನಾರಾಯಾಪುರ, ರಂಜೀತ್‌ಪುರ, ವಿಠಲಾಪುರ, ನರಸಾಪುರ, ಬುಜಂಗನಗರ.	6733.98	–
4.	ನಾರ್ಥ ಈಸ್ಟ್ರನ್ (N.E. Block)	ಬಳ್ಳಾರಿ	ಸಂಡೂರು	ವೆಂಕಟಗಿರಿ, ಜೈಸಿಂಗಪುರ, ಮೇದರಹಳ್ಳಿ, ಎಮ್ಮಿಹಟ್ಟಿ, ಸಿದ್ದಾಪುರ, ರಾಧಾನಗರ, ಸುಶೀಲಾನಗರ, ದೌಲತ್‌ಪುರ, ಕೃಷ್ಣನಗರ, ಗಂಡಿಬಸಾಪುರ, ತಾರಾನಗರ.	9065.00	–

ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನೆಂದರೆ, ಕರ್ನಾಟಕ ಅರಣ್ಯ ಅಧಿನಿಯಮದ (5) ನೇ ಪ್ರಕರಣ ಮತ್ತು ಕರ್ನಾಟಕ ಅರಣ್ಯ ಅಧಿನಿಯಮದ (17) ನೇ ಪ್ರಕರಣದ ಅಂತಿಮ ಪ್ರಕಟಣೆಯ ಮಧ್ಯದಲ್ಲಿ.

1) ಈ ಅಧಿಸೂಚನೆಯಲ್ಲಿ ಸೂಚಿಸಿದ ಭೂಮಿಯಲ್ಲಿಯ ಒಡತನದ ಉತ್ತರಾಧಿಕಾರದ ಹಕ್ಕು ಅನುದಾನ, ಮಾರಾಟ, ಅಡವು ಪಡೆದಿದ್ದ ವ್ಯಕ್ತಿಯೊಂದಿಗೆ ಅಥವಾ ಸರಕಾರದೊಂದಿಗೆ ಮಾಡಿ ಕೊಳ್ಳಲಾದ ಲಿಖಿತ ಒಪ್ಪಂದದ ಮೂಲಕವಾಗಲಿ ಒಡೆತನದ ಹಕ್ಕನ್ನು ಪಡೆದವರನ್ನುಳಿದು ಇನ್ನು ಮುಂದೆ ಮೇಲೆ ಹೇಳಿದ ಜಮೀನಿನಲ್ಲಿ ಯಾವುದೇ ಭಾಗವನ್ನು, ಯಾವುದೇ ತರಹದ, ಒಡೆತನದ ಅಧಿಕಾರವನ್ನು ನಡೆಸಬಾರದೆಂದು ಸಂಬಂಧಪಟ್ಟ ಜನರಿಗೆ ತಿಳಿಸಲಾಗಿದೆ.

2) ಈ ಭೂಮಿಯ ಮೇಲೆ ಮರಗಳನ್ನು ಬೆಳೆಸುವುದಾಗಲಿ. ಹೊಸಮನೆಗಳನ್ನು ಕಟ್ಟುವುದಾಗಲಿ ಮಾಡಬಾರದು.

3) ವ್ಯವಸಾಯಕ್ಕಾಗಿ ಅಥವಾ ಮತ್ತಾವುದೇ ಉದ್ದೇಶಕ್ಕಾಗಿ ಈ ಭೂಮಿಯ ಪ್ರದೇಶವನ್ನು ಸ್ವಚ್ಛ ಮಾಡಬಾರದು.

4) ಈ ಭೂಮಿಯ ಮೇಲಿರತಕ್ಕಂತಹ ಮರಗಳನ್ನು ಉತ್ಪಾದನೆ ಅಥವಾ ವ್ಯಾಪಾರದ ಸಲುವಾಗಿ ಕದಿಯಬಾರದು.

5) ರಾಜ್ಯ ಸರ್ಕಾರದ ಪರವಾನಗಿ ಇಲ್ಲದೆ ಈ ಜಮೀನಿನಲ್ಲಿ ಪಟ್ಟಾವನ್ನಾಗಲಿ ಒಡೆತನದ ಹಕ್ಕನ್ನಾಗಲಿ ಮಂಜೂರು ಮಾಡಬಾರದು ಹಾಗೂ ಸರ್ಕಾರದ ಪರವಾನಗಿ ಇಲ್ಲದೇ ಪ್ರತಿಯೊಂದು ಪಟ್ಟಾ ಅಥವಾ ಒಡೆತನದ ಹಕ್ಕನ್ನು ಮಂಜೂರು ಮಾಡಬಾರದು ಹಾಗೂ ಸರ್ಕಾರ ಪರವಾನಗಿ ಇಲ್ಲದೇ ಪ್ರತಿಯೊಂದು ಪಟ್ಟಾ ಅಥವಾ ಒಡೆತನದ ಹಕ್ಕನ್ನು ಮಂಜೂರು ಮಾಡಿದ್ದಲ್ಲಿ ಅವೆಲ್ಲವುಗಳು ರದ್ದಾಗುತ್ತದೆ.

6) ಈ ಘೋಷಣೆಯಲ್ಲಿ ನಮೂದಿಸಿದ ಜಮೀನಿನಲ್ಲಿ ಅಥವಾ ಆ ಜಮೀನಿನ ಯಾವುದೇ ಸೀಮಿತ ಭಾಗದಲ್ಲಿ ಯಾವುದೇ ತರಹದ ಒಡೆತನ ಹಕ್ಕು ಅಥವಾ ಅರಣ್ಯ ಉತ್ಪನ್ನಗಳ ಬಗ್ಗೆ ತಕರಾರನ್ನು ಸಿವಿಲ್ ಕೋರ್ಟ ವಿಚಾರಣೆ ನಡೆಸಲು ನಿಷೇಧಿಸಲಾಗಿದೆ.

ಮೇಲೆ ಕಾಣಿಸಿದ ಅಧಿಸೂಚನೆಯನ್ನು ಶಾಮೀಲಾದ ಅಥವಾ ತಲುಪಿದ ಮೂರು ತಿಂಗಳ ಒಳಗಾಗಿ ಹಿತಾರ್ಥವುಳ್ಳ ವ್ಯಕ್ತಿಗಳನ್ನು ತಮ್ಮ ಹಿತಾಸಕ್ತಿಯಿಂದ ಸ್ವರೂಪಗಳನ್ನು ವಿವರವಾಗಿ ತೋರಿಸುವ ಲಿಖಿತ ಅರ್ಜಿಯನ್ನು ಖುದ್ದಾಗಿ ಅಧಿಕೃತ ಕಾಗದ ಪತ್ರಗಳೊಂದಿಗೆ ಬಳ್ಳಾರಿ ಅರಣ್ಯ ಕ್ಷೇತ್ರ ನಿರ್ಧಾರಣಾಧಿಕಾರಿಗಳ ಸಮ್ಮುಖದಲ್ಲಿ ಮಂಡಿಸತಕ್ಕದ್ದು.

ತಮ್ಮ ಒಡೆತನದ ಹಕ್ಕು ಹಿತಾಸಕ್ತಿಗಳ ಬಗ್ಗೆ ಮೇಲೆ ಕಾಣಿಸಿದ ಅವಧಿಯಲ್ಲಿ ಅರ್ಜಿ ಸಲ್ಲಿಸದಿದ್ದ ಪಕ್ಷದಲ್ಲಿ ಈ ಭೂಮಿಯನ್ನು ರಕ್ಷಿತ ಅರಣ್ಯ ಕ್ಷೇತ್ರವೆಂದು ಕರ್ನಾಟಕ ಸರ್ಕಾರದ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗುವುದು.

ಅಧಿಸೂಚನೆ ಪ್ರಕಟವಾದ ಮೇಲೆ ಒಡೆತನದ ಹಕ್ಕುಗಳೆಲ್ಲವೂ ರದ್ದಾಗುವುದೆಂದು ಈ ಮೂಲಕ ಸಂಬಂಧಪಟ್ಟ ಜನರಿಗೆ ತಿಳಿಸಲಾಗುವುದು / ತಿಳಿಸಲಾಗಿದೆ.

ಈ ಪ್ರಕಟಣೆಯು ದಿನಾಂಕ:01.09.2009 ರಂದು ನನ್ನ ಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಅರಣ್ಯ ಕ್ಷೇತ್ರ ನಿರ್ಧಾರಾಧಿಕಾರಿಗಳು,
ಬಳ್ಳಾರಿ.

ಪಿ.ಆರ್.887

ಕರ್ನಾಟಕ ವಿಧಾನಸಭೆ

ವಿಧಾನಸಭೆಯ ಸಚಿವಾಲಯ, ಅಂಚೆ ಪೆಟ್ಟಿಗೆ ನಂ.5074, ವಿಧಾನಸೌಧ, ಬೆಂಗಳೂರು-560 233

ಸಂಖ್ಯೆ: ವಿಸಸ/ಶಾರಶಾ/24/ಸಿಎ/2008-09, ಬೆಂಗಳೂರು, ದಿನಾಂಕ:29ನೇ ಆಗಸ್ಟ್, 2009

ವಿಷಯ: ವಿಧಾನಸಭಾ ಸದಸ್ಯರ ವಿಳಾಸದ ಬದಲಾವಣೆ.

ಧಾರವಾಡ ವಿಧಾನಸಭಾ ಕ್ಷೇತ್ರದ ಮಾನ್ಯ ಸದಸ್ಯರಾದ ಶ್ರೀಮತಿ ಸೀಮಾ ಅಶೋಕ ಮಸೂತಿ ಅವರು ಕೆಳಕಂಡಂತೆ ತಮ್ಮ ವಿಳಾಸವನ್ನು ಬದಲಾಯಿಸಿರುತ್ತಾರೆ.

ಶ್ರೀಮತಿ ಸೀಮಾ ಅಶೋಕ ಮಸೂತಿ,
ವಿಧಾನಸಭಾ ಸದಸ್ಯರು, "ಸಾಯಿ ಕೃಪ", ನಂ.33, 3ನೇ ಅಡ್ಡರಸ್ತೆ, ಶ್ಯಾಂಬವಿ ಕಾಲೋನಿ, ಗಾಂಧಿನಗರ,
ಧಾರವಾಡ-580004.

ಆದಕಾರಣ, ಮಾನ್ಯ ಸದಸ್ಯರಿಗೆ ಇನ್ನು ಮುಂದೆ ಕಳುಹಿಸಲಾಗುವ ಎಲ್ಲಾ ಕಾಗದ ಪತ್ರಗಳನ್ನು ಮೇಲ್ಕಂಡ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ಕೋರಲು ನಿರ್ದೇಶಿತನಾಗಿದ್ದೇನೆ.

ಕೆ.ಸಿ. ಗೋಪಿಕೃಷ್ಣ
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

ಪಿ.ಆರ್.882

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ಅಧಿಸೂಚನೆ

ಸಂಖ್ಯೆ: ಡಿಪಿಎಆರ್ 11 ಹೆಚ್‌ಹೆಚ್‌ಎಲ್ 2009, ಬೆಂಗಳೂರು, ದಿನಾಂಕ:3ನೇ ಸೆಪ್ಟೆಂಬರ್, 2009

ಡಾ: ವೈ.ಎಸ್. ರಾಜಶೇಖರ ರೆಡ್ಡಿ, ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು, ದಿನಾಂಕ:02.09.2009 ರಂದು ನಿಧನರಾದ ವಿಷಯವನ್ನು ರಾಜ್ಯ ಸರ್ಕಾರವು ತೀವ್ರ ಸಂತಾಪದಿಂದ ಈ ಮೂಲಕ ಪ್ರಕಟಿಸಿದೆ.

ದಿವಂಗತರ ಗೌರವಾರ್ಥವಾಗಿ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಕಛೇರಿಗಳಿಗೂ ಮತ್ತು ಎಲ್ಲಾ ಶಾಲಾ ಕಾಲೇಜುಗಳಿಗೂ (ಅನುದಾನ ಪಡೆಯುವ ಎಲ್ಲಾ ವಿದ್ಯಾಸಂಸ್ಥೆಗಳೂ ಸೇರಿದಂತೆ) ದಿನಾಂಕ:04.09.2009ರಂದು ರಜೆ ಘೋಷಿಸಲಾಗಿದೆ. ಅಲ್ಲದೇ, ದಿನಾಂಕ:03.09.2009 ರಿಂದ 04.09.2009ರವರೆಗೆ ರಾಜ್ಯಾದ್ಯಂತ ಶೋಕವನ್ನು ಆಚರಿಸಲಾಗುವುದು. ಈ ಅವಧಿಯಲ್ಲಿ ಯಾವುದೇ ಅಧಿಕೃತ ಸಾರ್ವಜನಿಕ ಸಮಾರಂಭಗಳು, ಮನರಂಜನಾ ಕಾರ್ಯಕ್ರಮಗಳು ಇರುವುದಿಲ್ಲ. ಹಾಗೂ ನಿಯತವಾಗಿ ರಾಷ್ಟ್ರಧ್ವಜವನ್ನು ಹಾರಿಸಲಾಗುವ ಸರ್ಕಾರದ ಎಲ್ಲಾ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಅರ್ಧ ಮಟ್ಟದಲ್ಲಿ ಹಾರಿಸಲಾಗುವುದು.

ಸದರಿ ಆದೇಶವು ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ ಆಕ್ಟ್ 1881ರ ಪ್ರಕಾರವೂ ಕೂಡ ಸಾರ್ವಜನಿಕ ರಜೆ ಎಂದು ಘೋಷಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ.ವಿ. ರಾಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸು ಇಲಾಖೆ, (ರಾಜ್ಯ ಶಿಷ್ಟಾಚಾರ-1)

ಪಿ.ಆರ್.879

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು ರವರ ಕಛೇರಿ

ಆದೇಶದ ಉದ್ಧೃತ ಭಾಗ

ಕಛೇರಿ ಆದೇಶ ಸಂಖ್ಯೆ:28:2009-10, ದಿನಾಂಕ:31ನೇ ಆಗಸ್ಟ್, 2009

ವಿಷಯ: ಶ್ರೀ ಬಿ. ಸುರೇಶ್, ಅರಣ್ಯ ರಕ್ಷಕ, ತಳವಾರ ಗಸ್ತು, ಆಲ್ದೂರು ವಲಯ ಇವರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವ ಮೂಲಕ ಕರ್ತವ್ಯ ಲೋಪ ಎಸಗಿದ್ದು, ಶಿಸ್ತುಕ್ರಮ ಜರುಗಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಆದೇಶ ಸಂಖ್ಯೆ:38/2007-08, ದಿನಾಂಕ:18.09.2007.
2) ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಎ2.ಸಿಬ್ಬಂದಿ: ವಿವ: 39: 2005-06, ದಿನಾಂಕ:27.12.2007.
3) ಹಿರಿಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮೂಡಿಗೆರೆ ಉಪವಿಭಾಗ, ಮೂಡಿಗೆರೆ ಇವರ ಪತ್ರ ಸಂಖ್ಯೆ:1116/2008-09, ದಿನಾಂಕ:18.02.2009.

4) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ-1958, ನಿಯಮ 108.

5) ಕೆ.ಸಿ.ಎಸ್. (ಸಿ.ಸಿ.ಎ.) 1957, ನಿಯಮ 8(vii) ಹಾಗೂ 14.

6) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ:18:ಸೇಇವಿ:2001, ಬೆಂಗಳೂರು, ದಿನಾಂಕ:14.09.2001.

7) ಕರ್ನಾಟಕ ರಾಜ್ಯಪತ್ರ ಪ್ರಕಟಣೆ ದಿನಾಂಕ:02.07.2009.

ಪ್ರಸ್ತಾವನೆ:

ಚಿಕ್ಕಮಗಳೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ ಆಲ್ದೂರು ವಲಯದ ತಳವಾರ ಗಸ್ತಿನಲ್ಲಿ ಅರಣ್ಯ ರಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಬಿ.ಸುರೇಶ್ ಇವರು ದಿನಾಂಕ:09.08.2006 ರಿಂದ ದಿನಾಂಕ:17.09.2007ರ ವರೆಗೆ ಸರ್ಕಾರಿ ಕೆಲಸಕ್ಕೆ ಅನಧಿಕೃತವಾಗಿ ಗೈರು ಹಾಜರಾದ ಬಗ್ಗೆ ಉಲ್ಲೇಖ (1)ರಲ್ಲಿ ಸದರಿ ನೌಕರರನ್ನು ಸರ್ಕಾರಿ ಕೆಲಸ ಕಾರ್ಯಗಳಿಂದ ಅಮಾನತುಪಡಿಸಿದ್ದು, ಹಾಗೇ ಉಲ್ಲೇಖ (2) ರಲ್ಲಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳಲು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮೂಡಿಗೆರೆ ಉಪವಿಭಾಗ, ಮೂಡಿಗೆರೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ವಲಯ ಅರಣ್ಯಾಧಿಕಾರಿ, ಖಾಸಗಿ ನಾಟಾಗಳ ಛಾಪಾ ಘಟಕ, ಚಿಕ್ಕಮಗಳೂರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ಆರೋಪಿತ ನೌಕರರಿಗೆ ವಿಚಾರಣಾಧಿಕಾರಿ ಹಾಗೂ ಅರಣ್ಯ ಸಂರಕ್ಷಣಾಧಿಕಾರಿ, ಮೂಡಿಗೆರೆ ಉಪವಿಭಾಗ, ಮೂಡಿಗೆರೆ ಇವರು ಕ್ರಮವಾಗಿ ದಿನಾಂಕ:26.02.2008 ಹಾಗೂ 13.03.2008ರಂದು 2 ಬಾರಿ ವಿಚಾರಣೆಗೆ ಹಾಜರಾಗುವಂತೆ ನೊಂದಾಯಿತ ಅಂಚೆ ಮುಖಾಂತರ ನೋಟೀಸ್ ಜಾರಿ ಮಾಡಲಾಗಿ, "Party Not Found" ಎಂಬ ಷರಾದೊಂದಿಗೆ ವಾಪಾಸು ಬಂದಿರುತ್ತದೆ. ನಂತರದಲ್ಲಿ ಆರೋಪಿತ ನೌಕರರಿಗೆ 3ನೇ ನೋಟೀಸ್‌ನ್ನು ವನಪಾಲಕ, ಸಾರಗೋಡು ಶಾಖೆ, ಸಾರಗೋಡು ಇವರ ಮುಖಾಂತರ ಜಾರಿಗೊಳಿಸಲು ನಿರ್ದೇಶನ ನೀಡಿದ್ದು, ಅದರಂತೆ ವನಪಾಲಕರು ನೋಟೀಸನ್ನು ಆರೋಪಿತ ನೌಕರರಿಗೆ ದಿನಾಂಕ:21.04.2008ರಂದು ಜಾರಿ ಮಾಡಿದ್ದು, ನೋಟೀಸ್ ಪಡೆದರೂ ಸಹಾ, ಆರೋಪಿತ ನೌಕರರು ವಿಚಾರಣೆಗೆ ಹಾಜರಾಗಿರುವುದಿಲ್ಲ. ನಂತರ 4ನೇ ನೋಟೀಸನ್ನು ಜಾರಿಗೊಳಿಸುವ ಸಲುವಾಗಿ ನೌಕರರ ಸ್ವಗ್ರಾಮವಾದ ಸಕ್ರೆಬೈಲ್, ಶಿವಮೊಗ್ಗ ತಾಲ್ಲೂಕು ಹಾಗೂ ಜಿಲ್ಲೆ ಇಲ್ಲಿಗೆ ವನಪಾಲಕರು ತೆರಳಿ ವಿಚಾರಿಸಲಾಗಿ, ಅವರ ತಾಯಿ ಹಾಗೂ ಅವರ ತಮ್ಮ ಸದರಿಯವರು ಈಗ ಇಲ್ಲಿ ವಾಸವಾಗಿರುವುದಿಲ್ಲ, ಮೈಸೂರಿನಲ್ಲಿ ವಾಸವಾಗಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ದಿನಾಂಕ:14.08.2008ರಂದು ಇಲಾಖಾ ವಿಚಾರಣೆ ಇದ್ದು, ವಿಚಾರಣೆಗೆ ಹಾಜರಾಗಲು ತಿಳಿಸುವಂತೆ ಅವರ ತಾಯಿಗೆ ತಿಳಿಸಿ, ನೋಟೀಸ್‌ನ್ನು ಅವರ ತಾಯಿಗೆ ನೀಡಿ ಸ್ವೀಕೃತಿ ಪಡೆಯಲಾಗಿರುತ್ತದೆ. ನಂತರ ದಿನಾಂಕ:28.08.2008ರಂದು ಸದರಿ ವನಪಾಲಕರು ಆರೋಪಿತ ನೌಕರರ ಪತ್ತೆಗಾಗಿ ಸ್ವಗ್ರಾಮಕ್ಕೆ ತೆರಳಿ, ವಿಚಾರಿಸಲಾಗಿ, ಅಲ್ಲಿ ನೌಕರರು ಇರಲಿಲ್ಲ. ಮನೆಯಲ್ಲಿ ಅವರ ತಾಯಿ ಹಾಗೂ ಅವರ ತಮ್ಮ ಮಾತ್ರ ಇದ್ದು, ಅವರನ್ನು ವಿಚಾರಿಸಲಾಗಿ, ಆರೋಪಿತ ನೌಕರರು ಈಗ ಇಲ್ಲಿ ವಾಸವಾಗಿರುವುದಿಲ್ಲ. ಮೈಸೂರಿನಲ್ಲಿ ಇರುತ್ತಾರೆ ಎಂದು ತಿಳಿಸಿರುತ್ತಾರೆ. ದಿನಾಂಕ:10.09.2008ರಂದು ಇಲಾಖಾ ವಿಚಾರಣೆ ಇದ್ದು, ವಿಚಾರಣೆಗೆ ಹಾಜರಾಗಲು ತಿಳಿಸುವಂತೆ ಅವರ ತಾಯಿಗೆ ತಿಳಿಸಿ, ನೋಟೀಸನ್ನು ಅವರ ತಾಯಿಗೆ ನೀಡಿ ಸ್ವೀಕೃತಿ ಪಡೆಯಲಾಗಿರುತ್ತದೆ.

ನಂತರದಲ್ಲಿ ದಿನಾಂಕ:01.12.2008ರಂದು ವನಪಾಲಕರು, ಸಾರಗೋಡು ಶಾಖೆ ಇವರು ಆರೋಪಿತ ನೌಕರರ ಸ್ವಗ್ರಾಮಕ್ಕೆ ಅಂತಿಮವಾಗಿ ತೆರಳಿ, ಅವರ ವಾಸದ ಮನೆ ಆವರಣದಲ್ಲಿ ಕಾರ್ಯದರ್ಶಿ, ಗ್ರಾಮ ಪಂಚಾಯಿತಿ, ಗಾಜನೂರು ಇವರ ಹಾಗೂ ಗ್ರಾಮದ ಮುಖ್ಯಸ್ಥರ ಸಮಕ್ಷಮ ಸ್ಥಳ ಮಹಜರ್ ಜರುಗಿಸಿದ್ದು, ಅದರಲ್ಲಿ ಆರೋಪಿತ ನೌಕರರ ತಮ್ಮ ಶ್ರೀ ಶಿವಣ್ಣ ಇವರು ಹಾಜರಿದ್ದು, ನನ್ನ ಅಣ್ಣನಾದ ಶ್ರೀ ಬಿ.ಸುರೇಶ್ ಇವರು ಇಲ್ಲಿ ವಾಸವಾಗಿರುವುದಿಲ್ಲ. ಅವರ ಹೆಂಡತಿ, ಮಕ್ಕಳೊಂದಿಗೆ ಕೊಡಗು ಜಿಲ್ಲೆಯ ಗೋಣಿಕೊಪ್ಪದಲ್ಲಿ ಇರುತ್ತಾರೆ, ಕಳೆದ 8 ತಿಂಗಳಿಂದ ಸ್ವಗ್ರಾಮಕ್ಕೆ ಬಂದಿಲ್ಲವೆಂದು ತಿಳಿಸಿರುತ್ತಾರೆ. ಅಲ್ಲದೆ ಸದರಿ ನೌಕರರ ಸರಿಯಾದ ವಿಳಾಸವಾಗಲಿ, ದೂರವಾಣಿ ಸಂಖ್ಯೆಯಾಗಲಿ ತನಗೆ ತಿಳಿದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಮುಂದುವರೆದು ವಿಚಾರಣಾಧಿಕಾರಿಯವರು ಆರೋಪಿತ ನೌಕರರ ಪತ್ತೆಗಾಗಿ ಆರಕ್ಷಕ ನಿರೀಕ್ಷಕರು, ತುಂಗಾನಗರ ಪೊಲೀಸ್ ಠಾಣೆ, ಶಿವಮೊಗ್ಗ ಇವರಿಗೆ ದೂರು ದಾಖಲಿಸಲು ಹೋದ ಸಮಯದಲ್ಲಿ, ಸದರಿಯವರು ಪ್ರಾರಂಭಿಕ ದೂರನ್ನು ಆಲ್ದೂರು ಪೊಲೀಸ್ ಠಾಣೆಯಲ್ಲಿ ದಾಖಲಿಸಬೇಕೆಂಬುದಾಗಿ ಸಲಹೆ ನೀಡಿದ ಮೇರೆಗೆ, ಆಲ್ದೂರು ಪೊಲೀಸ್ ಠಾಣೆಯಲ್ಲಿ ಆರೋಪಿತ ನೌಕರರ ಪತ್ತೆಗಾಗಿ ದೂರು ದಾಖಲಾಗಿಸಲಾಗಿದ್ದು, ಈವರೆಗೂ ನೌಕರರ ಸುಳಿವು ಸಿಕ್ಕಿರುವುದಿಲ್ಲ ಎಂಬುದಾಗಿ ಉಲ್ಲೇಖ (3)ರಲ್ಲಿ ವಿಚಾರಣಾಧಿಕಾರಿಗಳು ಹಾಗೂ ಹಿರಿಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮೂಡಿಗೆರೆ ಉಪವಿಭಾಗ, ಮೂಡಿಗೆರೆ ಇವರು ವರದಿ ಸಲ್ಲಿಸಿರುತ್ತಾರೆ ಅಲ್ಲದೆ ಆರೋಪಿತ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಬಹುದಾಗಿ ಶಿಫಾರಸ್ಸು ಮಾಡಿರುತ್ತಾರೆ.

ಆದ್ದರಿಂದ ಈ ಪ್ರಕರಣದಲ್ಲಿ ಆರೋಪಿತ ನೌಕರರಾದ ಶ್ರೀ ಬಿ.ಸುರೇಶ್ ಇವರು ದಿನಾಂಕ:09.08.2006 ರಿಂದ ಈ ದಿನಾಂಕದವರೆಗೂ ಸರ್ಕಾರಿ ಕೆಲಸಕ್ಕೆ ಅನಧಿಕೃತ ಗೈರು ಹಾಜರಾಗಿದ್ದು, ಇದರಿಂದ ಸದರಿಯವರಿಗೆ ವಹಿಸಲಾದ ತಳವಾರ ಗಸ್ತಿನ ವ್ಯಾಪ್ತಿಯಲ್ಲಿ ಬರುವ ಅರಣ್ಯ/ ಮೀಸಲು ಅರಣ್ಯದ ರಕ್ಷಣೆ, ಮರಗಳ ಅಕ್ರಮ ಕಡಿತಲೆ, ಒತ್ತುವರಿ ನಿಯಂತ್ರಣ ಹಾಗೂ

ಇನ್ನಿತರೆ ಅರಣ್ಯೇತರ ಚಟುವಟಿಕೆಗಳನ್ನು ನಿಯಂತ್ರಿಸುವಲ್ಲಿ ಕಿಂಚಿತ್ತು ಆಸಕ್ತಿ ಹಾಗೂ ಜವಾಬ್ದಾರಿಯನ್ನು ವಹಿಸಿಕೊಳ್ಳದೆ, ಬೇಜವಾಬ್ದಾರಿಯಿಂದ ವರ್ತಿಸಿ, ಇಲಾಖೆಯಿಂದ ನೀಡಲಾದ ಯಾವುದೇ ನೋಟೀಸ್‌ಗಳಿಗೆ ಲಿಖಿತವಾಗಿ ಉತ್ತರಿಸದೆ, ಕರ್ತವ್ಯಲೋಪ ಎಸಗಿರುತ್ತಾರೆ.

ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಸದರಿ ಆಪಾದಿತ ಸರ್ಕಾರಿ ನೌಕರ ದಿನಾಂಕ:09.08.2006 ರಿಂದ ಈವರೆಗಿನ ಗೈರು ಹಾಜರಿಯಿಂದಾಗಿ ತಳವಾರ ಗಸ್ತಿನ ಕಾರ್ಯ ನಿರ್ವಹಣೆ ಕಷ್ಟಸಾಧ್ಯವಾಗಿರುವುದರಿಂದ, ಆರೋಪಿತ ನೌಕರರಿಗೆ ಪುನಃ ಕರ್ತವ್ಯದ ಮೇಲೆ ಹಿಂದಿರುಗಲು ಪತ್ರಿಕಾ ಪ್ರಕಟಣೆ ಹಾಗೂ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆ ಹೊರಡಿಸುವಂತೆ ದಿನಾಂಕ:26.03.2009 ರಲ್ಲಿ ಸಂಬಂಧಪಟ್ಟ ಇಲಾಖೆಗೆ ಕೋರಿದ್ದು, ಆ ಪ್ರಕಾರ ಪತ್ರಿಕಾ ಪ್ರಕಟಣೆಗೊಂಡಿರುತ್ತದೆ. ಅದೇ ರೀತಿ ದಿನಾಂಕ:02.07.2009ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಗೊಂಡಿರುತ್ತದೆ.

ಕರ್ನಾಟಕ ಅರಣ್ಯ ಸಂಹಿತೆ, 1976– ಅನುಚ್ಛೇದ 125 ರಲ್ಲಿ ಅರಣ್ಯ ರಕ್ಷಕರ ಜವಾಬ್ದಾರಿಗಳನ್ನು ವಿವರಿಸಲಾಗಿದ್ದು, ಅದರಂತೆ ಕೇಂದ್ರ ಸ್ಥಾನದಲ್ಲಿ ವಾಸವಿದ್ದು, ಗಸ್ತಿನ ವ್ಯಾಪ್ತಿಯಲ್ಲಿ ಬರುವ ಅರಣ್ಯ ಸಂಪತ್ತಿನ ಸಂರಕ್ಷಣೆ, ಅರಣ್ಯ ಒತ್ತುವರಿ ತಡೆಗಟ್ಟುವಿಕೆ, ವನ್ಯಪ್ರಾಣಿಗಳ ಸಂರಕ್ಷಣೆ, ಅರಣ್ಯ ಅಪರಾಧಗಳ ತಡೆಗಟ್ಟುವಿಕೆ ಹಾಗೂ ಯಾವುದೇ ಅರಣ್ಯೇತರ ಚಟುವಟಿಕೆಗಳಿಗೆ ಅವಕಾಶ ನೀಡದಿರುವುದು ಅವರ ಆದ್ಯ ಕರ್ತವ್ಯವಾಗಿರುತ್ತದೆ. ಶ್ರೀ ಬಿ. ಸುರೇಶ್, ಅರಣ್ಯ ರಕ್ಷಕ ಇವರು ತಮ್ಮ ಹುದ್ದೆಯ ಪ್ರಾಥಮಿಕ ಜವಾಬ್ದಾರಿಗಳನ್ನು ಮರೆತು, ಕರ್ತವ್ಯ ನಿರ್ಲಕ್ಷತೆ ತೋರಿರುತ್ತಾರೆ. ಅಲ್ಲದೆ ಸದರಿಯವರ ಗೈರು ಹಾಜರಿಗೆ ಸಂಬಂಧಿಸಿದಂತೆ ಇಷ್ಟೆಲ್ಲಾ ಬೆಳವಣಿಗೆಗಳು ನಡೆದರೂ, ಯಾವುದೇ ನೋಟೀಸ್‌ಗಳಿಗೆ ವಿವರಣೆ ನೀಡುವ ಕನಿಷ್ಟ ಆಸಕ್ತಿ ತೋರಿಸದೇ ಇರುವ ಮೂಲಕ, ಅಶಿಸ್ತಿನಿಂದ ನಡೆದುಕೊಂಡಿರುತ್ತಾರೆ.

ಈ ಪ್ರಕರಣದ ಇಲಾಖಾ ವಿಚಾರಣೆ ಹಾಗೂ ನಂತರದ ಬೆಳವಣಿಗೆಯ ಎಲ್ಲಾ ಪ್ರಕ್ರಿಯೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿಯವರ ಕರ್ತವ್ಯ ನಿರ್ಲಕ್ಷತೆ ಹಾಗೂ ಅನಧಿಕೃತ ಗೈರು ಹಾಜರಿಯು ಸಾಬೀತಾಗಿದ್ದು, ಇವರು ಇಲಾಖಾ ಕಾಯ್ದೆ, ಕಾನೂನುಗಳನ್ನು ಉಲ್ಲಂಘಿಸಿರುವುದರಿಂದ, ಇಲಾಖೆಯಲ್ಲಿ ಒಂದು ಜವಾಬ್ದಾರಿಯುತ ಹುದ್ದೆಯಾದ ಅರಣ್ಯ ರಕ್ಷಕರ ಹುದ್ದೆಯಲ್ಲಿ ಮುಂದುವರೆಯಲು ಅನರ್ಹರೆಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಶ್ರೀ ಬಿ. ಸುರೇಶ್, ಅರಣ್ಯ ರಕ್ಷಕ (ಪ್ರಸ್ತುತ ಅಮಾನತ್ತಿನಲ್ಲಿರುವ), ತಳವಾರ ಗಸ್ತು, ಆಲ್ದೂರು ವಲಯ, ಆಲ್ದೂರು ಇವರ ಮೇಲಿನ ದೋಷಾರೋಪಣಾ ಪಟ್ಟಿಯಲ್ಲಿ ಮಾಡಿರುವ ಆರೋಪಗಳು ಸಾಬೀತಾಗಿರುವುದರಿಂದ, ಅಲ್ಲದೆ ಸದರಿಯವರಿಗೆ ಇಲಾಖೆಯಲ್ಲಿ ಮುಂದುವರೆಯುವ ಬಗ್ಗೆ ಸಾಕಷ್ಟು ಅವಕಾಶಗಳು ನೀಡಿದರೂ ಸಹಾ, ಸದರಿಯವರು ಕರ್ತವ್ಯದ ಮೇಲೆ ಪುನಃ ಹಾಜರಾಗಿರುವುದಿಲ್ಲವಾದ್ದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ, 1958– ನಿಯಮ, 108, ಕೆ.ಸಿ.ಎಸ್. (ಸಿ.ಸಿ.ಎ.) 1957, ನಿಯಮ 8(vii) ಹಾಗೂ 14 ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ:18:ಸೇಇವಿ:2001, ಬೆಂಗಳೂರು, ದಿನಾಂಕ:14.09.2001ರ ಆದೇಶದ ಪ್ರಕಾರ ಶ್ರೀ ಬಿ. ಸುರೇಶ್, ಅರಣ್ಯ ರಕ್ಷಕ (ಪ್ರಸ್ತುತ ಅಮಾನತ್ತಿನಲ್ಲಿರುವ), ತಳವಾರ ಗಸ್ತು, ಆಲ್ದೂರುವಲಯ, ಆಲ್ದೂರು ಇವರನ್ನು ಇಲಾಖೆಯಲ್ಲಿ ಅರಣ್ಯ ರಕ್ಷಕ ಹುದ್ದೆಯಲ್ಲಿ ಮುಂದುವರೆಯಲು ಅನರ್ಹರೆಂದು ಪರಿಗಣಿಸಿ, ಶ್ರೀ ಕೆ.ಹೆಚ್. ನಾಗರಾಜ್, ಭಾ.ಅ.ಸೇ., ಶಿಸ್ತು ಪ್ರಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು ಆದ ನಾನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ತೆಗೆದುಹಾಕಿರುತ್ತೇನೆ ಹಾಗೂ ಸದರಿಯವರ ದಿನಾಂಕ:09.08.2006 ರಿಂದ ಈವರೆಗಿನ ಅನಧಿಕೃತ ಗೈರು ಹಾಜರಿಯ ಅವಧಿಯನ್ನು "ಕರ್ತವ್ಯವಲ್ಲದ ಅವಧಿ" ಎಂದು ಪರಿಗಣಿಸಿ, ಆದೇಶ ಹೊರಡಿಸಿದೆ.

ಕೆ.ಹೆಚ್. ನಾಗರಾಜ್, ಭಾ.ಅ.ಸೇ.
ಶಿಸ್ತು ಪ್ರಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ಪಿ.ಆರ್.880

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್/259/2008–09, ದಿನಾಂಕ:9ನೇ ಜುಲೈ, 2009

ಉಪಸ್ಥಿತರು: ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು		**ಪ್ರತಿವಾದಿ / ಆರೋಪಿ**
ಆರಕ್ಷಕ ಉಪ ನಿರೀಕ್ಷಕರು, ನಂಜನಗೂಡು ಗ್ರಾಮಾಂತರ ಠಾಣೆ, ನಂಜನಗೂಡು.	**ವಿರುದ್ಧ**	ಸಿದ್ದರಾಜು ಮತ್ತು ಕೃಷ್ಣ ಬೂಕಳ್ಳಿ ಗ್ರಾಮ, ನಂಜನಗೂಡು ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:28.02.2008 ರಂದು ಬೆಳಿಗ್ಗೆ 10:30 ಗಂಟೆಯ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ, ಇವರು ನಂಜನಗೂಡು ತಾಲ್ಲೂಕು, ಬಸವಪುರ ಸರ್ಕಾರಿ ಶಾಲೆಯ ಹತ್ತಿರ ಕೆಎ-01/ಎಲ್-7568 ನೋಂದಣಿ ಸಂಖ್ಯೆಯ ಟಿ.ವಿ.ಎಸ್.ಎಕ್ಸ್‌ಲ್-50 ವಾಹನದಲ್ಲಿ ಅಕ್ರಮವಾಗಿ 17.280 ಲೀ. ಓರಿಜಿನಲ್ ಚಾಯ್ಸ್ ವಿಸ್ಕಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತು ಮಾಡಿ, ಮೇಲ್ಕಂಡ ವಾಹನ, ಆರೋಪಿ ಮತ್ತು ಮದ್ಯವನ್ನು ನಂಜನಗೂಡು ಗ್ರಾಮಾಂತರ ಠಾಣೆಯ ಆರಕ್ಷಕ ಉಪ ನಿರೀಕ್ಷಕರಿಗೆ ಹಾಜರುಪಡಿಸಿ, ಠಾಣಾ ಪ್ರಕರಣ ಸಂಖ್ಯೆ: 75/2008 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 34, 38(ಎ), 39ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿ, ಈ ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:05.11.2008 ರಂದು ಕೋರಿರುತ್ತಾರೆ. ಅಂತೆಯೇ ಅದೇ ದಿನದಂದು ನಂಜನಗೂಡು ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಗಾಗಿ ಮೈಸೂರು (ಪೂರ್ವ) ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಈ ಪ್ರಾಧಿಕಾರದಿಂದ ದಿನಾಂಕ:05.11.2008ರಂದು ಪತ್ರ ಬರೆಯಲಾಗಿದ್ದು, ಇದಕ್ಕೆ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ. ಸದರಿ ವಾಹನಕ್ಕೆ ಸಂಬಂಧಪಟ್ಟ ಆರೋಪಿಗಳಾಗಲೀ/ವಾಹನ ಮಾಲೀಕರಾಗಲೀ ವಾಹನ ಬಿಡುಗಡೆಗಾಗಿ ಇದುವರೆವಿಗೂ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕ ಅಬಕಾರಿ ಕಾಯಿದೆ ಕಲಂ 34, 38(ಎ), 39ರ ಅಡಿಯಲ್ಲಿ ಪತ್ತೆ ಹಚ್ಚುವ ಅಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಗಳು ತಮ್ಮ ಮೇಲೆ ಇರತಕ್ಕಂತ ಜವಾಬ್ದಾರಿ / ಹೊಣೆಗಾರಿಕೆಯನ್ನು ಇದುವರೆವಿಗೂ ಪ್ರಾಧಿಕಾರದ ಮುಂದೆ ಹಾಜರಾಗಿ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (16) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/259/2008-09, ದಿನಾಂಕ:9ನೇ ಜುಲೈ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) (2) ರಡಿಯಲ್ಲಿ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ಉಪ ನಿರೀಕ್ಷಕರು, ನಂಜನಗೂಡು ಗ್ರಾಮಾಂತರ ಠಾಣೆ, ನಂಜನಗೂಡು ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ: 75/2008, ದಿನಾಂಕ:28.02.2008 ರಂದು ವಶಪಡಿಸಿಕೊಂಡ ಕೆಎ-01/ಎಲ್-7568 ನೋಂದಣಿ ಸಂಖ್ಯೆಯ ಟಿ.ವಿ.ಎಸ್.ಎಕ್ಸಲ್-50 ವಾಹನ ಮತ್ತು 17.280 ಲೀ. ಮದ್ಯವನ್ನು (ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಜುಲೈ ತಿಂಗಳ 9ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ.ಮಂಜುನಾಥ್
ಡೆಪ್ಯೂಟಿ ಕಮೀಷನರ್ ಎಕ್ಸೈಸ್ ಹಾಗೂ
ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.874

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್/216/2008-09, ದಿನಾಂಕ:9ನೇ ಜುಲೈ, 2009

ಉಪಸ್ಥಿತರು: ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು		ಪ್ರತಿವಾದಿ / ಆರೋಪಿ
ಆರಕ್ಷಕ ಉಪ ನಿರೀಕ್ಷಕರು, ಉದಯಗಿರಿ, ಪೊಲೀಸ್ ಠಾಣೆ, ಮೈಸೂರು.	ವಿರುದ್ಧ	1) ಅಪ್ಸರ್ ಅಹಮ್ಮದ್ ಬಿನ್ ಅಬ್ದುಲ್ ರೆಹಮಾನ್ 2) ಸುಹೇಲ್ ಖಾನ್ ಬಿನ್ ಸಲಾಮ್ ಪಾಷಾ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:13.09.2008 ರಂದು ಮಧ್ಯಾಹ್ನ 12:15 ಗಂಟೆಯ ಸಮಯದಲ್ಲಿ ಗರುಡ-16ರ ಸಹಾಯಕ ಆರಕ್ಷಕ ಉಪ ನಿರೀಕ್ಷಕರು ಮತ್ತು ಸಿಬ್ಬಂದಿಯವರು, ಮೈಸೂರು ನಗರ, ಉದಯಗಿರಿ, ರಾಜೀವ್ ನಗರ 1ನೇ ಹಂತ, 7ನೇ ಕ್ರಾಸ್, ಮನೆ ನಂ.1194ರ ಅಪ್ಸರ್ ಅಹಮ್ಮದ್ ರವರ ಮನೆಯ ಮುಂದೆ ಕೆಎಲ್-10/ಜಿ-1814 ನೋಂದಣಿ ಸಂಖ್ಯೆಯ ಆಟೋ ರಿಕ್ಷಾ ವಾಹನವನ್ನು ಸುತ್ತುವರಿದು, ಸದರಿ ಆಟೋ ಚಾಲಕನನ್ನು ವಿಚಾರ ಮಾಡುತ್ತಿದ್ದಾಗ, ಮನೆಯಿಂದ ಒಬ್ಬ ವ್ಯಕ್ತಿಯು ಹೊರಗೆ ಬಂದು ಕೆಎ-09/ಕ್ಯೂ-9013 ನೋಂದಣಿ ಸಂಖ್ಯೆಯ ಬಜಾಜ್ ಸ್ಕೂಟರ್ ವಾಹನದಲ್ಲಿ ಹೋಗಲು ಪ್ರಯತ್ನಿಸುತ್ತಿದ್ದಾಗ ಆತನನ್ನು ಹಿಡಿದು ವಿಚಾರಿಸಲಾಗಿ, ಅಪ್ಸರ್ ಅಹಮ್ಮದ್ ಬಿನ್ ಅಬ್ದುಲ್ ರೆಹಮಾನ್, ನಂ.1194, 7ನೇ ಕ್ರಾಸ್, ರಾಜೀವ್‌ನಗರ, ಮೈಸೂರು ಎಂದು ತಿಳಿಸಿದ್ದು, ಆಟೋ ಓಡಿಸುತ್ತಿದ್ದವನನ್ನು ವಿಚಾರ ಮಾಡಲಾಗಿ, ಸುಹೇಲ್ ಖಾನ್ ಬಿನ್ ಸಲಾಮ್ ಪಾಷಾ, ಉಸ್ಥಾನಿಯ ಮಸೀದಿ ಹಿಂಭಾಗ, ಸುಲ್ತಾನ್ ರಸ್ತೆ, ಗೌಸಿಯ ನಗರ, ಮೈಸೂರು ಎಂದು ತಿಳಿಸಿದ್ದು, ಆಟೋವನ್ನು ಪರಿಶೀಲಿಸಲಾಗಿ 35 ಲೀ. ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಕ್ಯಾನ್‌ನಲ್ಲಿ ಬ್ಲೆಂಡ್ ಮದ್ಯವಿದ್ದು ಅಲ್ಲದೇ 40 ಖಾಲಿ ಕ್ವಾಟರ್ ಬಾಟಲ್‌ಗಳು ಕಂಡುಬಂದಿದ್ದು, ನಂತರ ಮನೆಯ ಒಳಗೆ ಪ್ರವೇಶ ಮಾಡಿ ನೋಡಲಾಗಿ, 35 ಲೀ. ಸಾಮರ್ಥ್ಯದ 2 ಬಿಳಿ ಪ್ಲಾಸ್ಟಿಕ್ ಕ್ಯಾನ್‌ಗಳು ಇದ್ದು, 1ರಲ್ಲಿ ಬ್ಲೆಂಡ್ ಮದ್ಯ ತುಂಬಿದ್ದು, ಮತ್ತೊಂದರಲ್ಲಿ ಕಾಲುಭಾಗ ಬ್ಲೆಂಡ್ ಮದ್ಯವಿರುತ್ತದೆ. ಅಲ್ಲದೇ ಓರಿಜಿನಲ್ ಚಾಯ್ಸ್ ವಿಸ್ಕಿ ಲೇಬಲ್‌ಗಳು, ಮುಚ್ಚಳಗಳನ್ನು ಹೊಂದಿದ್ದ ಆರೋಪಕ್ಕಾಗಿ 2 ವಾಹನಗಳು ಮತ್ತು ಅಬಕಾರಿ ವಸ್ತುಗಳನ್ನು ಜಪ್ತು ಮಾಡಿ, ಮೊಕದ್ದಮೆ ಸಂಖ್ಯೆ: 175/2008 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 34, 38(ಎ)ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿ, ಈ ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:16.09.2008 ರಂದು ಕೋರಿರುತ್ತಾರೆ. ಅಂತೆಯೇ ದಿನಾಂಕ:26.09.2008 ರಂದು ಮೈಸೂರು ವಲಯ ನಂ.1, ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ವಾಹನಗಳ ಮಾಲೀಕತ್ವದ ವಿವರವುಳ್ಳ 'ಬಿ' ವಹಿಗಾಗಿ ಸಂಬಂಧಪಟ್ಟ ಸಾರಿಗೆ ಪ್ರಾಧಿಕಾರಕ್ಕೆ ಈ ಪ್ರಾಧಿಕಾರದಿಂದ ದಿನಾಂಕ:26.09.2008 ರಂದು ಪತ್ರ ಬರೆಯಲಾಗಿದ್ದು, ಇದುವರೆವಿಗೂ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ. ವಾಹನ ಮಾಲೀಕರಾಗಲೀ/ಆರೋಪಿಗಳಾಗಲೀ ವಾಹನಗಳ ಬಿಡುಗಡೆಗಾಗಿ ಇದುವರೆವಿಗೂ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕ ಅಬಕಾರಿ ಕಾಯಿದೆ ಕಲಂ 34, 38(ಎ)ರ ಅಡಿಯಲ್ಲಿ ಪತ್ತೆ ಹಚ್ಚುವ ಅಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಗಳು ತಮ್ಮ ಮೇಲೆ ಇರತಕ್ಕಂತ ಜವಾಬ್ದಾರಿ / ಹೊಣೆಗಾರಿಕೆಯನ್ನು ಇದುವರೆವಿಗೂ ಪ್ರಾಧಿಕಾರದ ಮುಂದೆ ಹಾಜರಾಗಿ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ.

(v) In cases where the dealer has opted for printing of the form by the LVO or VSO, the C Form declarations sought by the dealer would be printed by the LVO or VSO concerned. Subject to payment of the prescribed fee, such forms would be dispatched to the dealer within three working days from the day of his successful request. Any dealer wishing to collect the C Form declarations personally should indicate his preference for such mode of delivery at the time of filling in his request for their issue in the website. Such dealer can collect the declarations from the jurisdictional LVO or VSO on the fourth working day.

PRADEEP SINGH KHAROLA

PR-897

Commissioner of Commercial Taxes in Karnataka, Bangalore.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-1, ಕಾರ್ಮಿಕ ಭವನ, ಐಟಿಐ ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29

ಸಂಖ್ಯೆ: ಡಬ್ಲ್ಯೂಸಿಎ/ಎಫ್‌ಸಿ/ಸಿಆರ್-09/09, ದಿನಾಂಕ:5ನೇ ಸೆಪ್ಟೆಂಬರ್, 2009

ಅರ್ಜಿದಾರರು:

1) ಶ್ರೀಮತಿ ಜಿ. ಸೌಭಾಗ್ಯ, W/o ಲೇಟ್: ಬಿ. ವಿಜಯಕುಮಾರ್, 30 ವರ್ಷ.
2) ಕು: ಎ.ವಿ. ಕುಸುಮ D/o ಲೇಟ್ ಎ.ಬಿ. ವಿಜಯಕುಮಾರ್, 11 ವರ್ಷ.
3) ಮಾಸ್ಟರ್ ಎ.ವಿ. ಲೋಕ್‌ನರೇಶ್, S/o ಲೇಟ್:ಎ.ಬಿ. ವಿಜಯಕುಮಾರ್, 6 ವರ್ಷ.
4) ಬಸವರಾಜಪ್ಪ S/o ಲೇಟ್ ನೀಲಕಂಠೇಗೌಡ ಎ.ಎಸ್. ವರ್ಷ 70.
5) ಶ್ರೀಮತಿ ಗೌರಮ್ಮ W/o ಬಸವರಾಜಪ್ಪ 65- ವರ್ಷ, ಅತ್ತೂರು ವಿಲೇಜ್, ಹೊಸಕೋಟೆ (ತಾ), ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು:

1) ವೆಂಕಟೇಶ್ S/o ಲಾ. ಮುನಿಶಾಮಪ್ಪ, ಮೇಜರ್ ಚಿಕ್ಕನಲ್ಲೂರಹಳ್ಳಿ ವಿಲೇಜ್, ಬೇಗೂರು (ಪೋ), ಹೊಸಕೋಟೆ (ತಾ), ಬೆಂಗಳೂರು ಗ್ರಾಮಾಂತರ ಜಿಲ್ಲೆ.
2) ದಿ ಓರಿಯಂಟಲ್ ಇನ್ಸೂರೆನ್ಸ್ ಕಂ.ಲಿ., ಡಿವಿಜನಲ್ ಆಫೀಸ್ ನಂ.2, ಖೆಸಿ ಬಿಲ್ಡಿಂಗ್ ನಂ.3, 1ನೇ ಮಹಡಿ, 1ನೇ ಕ್ರಾಸ್, ಗಾಂಧಿನಗರ, ಬೆಂಗಳೂರು-09.

ಪ್ರಕಟಣೆ

ಈ ಮೇಲೆ ನಮೂದಿಸಿರುವ ಅರ್ಜಿದಾರರು ತಾವು ಮೃತ ಶ್ರೀ ಎ.ಬಿ. ವಿಜಯಕುಮಾರ್ ಇವರ ಅವಲಂಬಿತರೆಂದು, ಮೃತನು 1ನೇ ಪ್ರತಿವಾದಿ ಬಳಿ ಚಾಲಕ ಕೆಲಸ ಮಾಡುವಾಗ, ಕೆಲಸದ ವೇಳೆಯಲ್ಲಿ ಹಾಗೂ ಕೆಲಸದ ಕಾರಣದಿಂದ ಉಂಟಾದ ಅಪಘಾತದಲ್ಲಿ ದಿನಾಂಕ:01.06.2008 ಮರಣ ಹೊಂದಿರುತ್ತಾರೆ ಎಂದು, ಈ ಸಂಬಂಧ ತಮಗೆ ಕಾಯ್ದೆಯ ಅನುಸಾರ ಪ್ರತಿವಾದಿಗಳಿಂದ ಬರತಕ್ಕ ಪರಿಹಾರವನ್ನು ಕೊಡಿಸಬೇಕೆಂದು ಈ ನ್ಯಾಯಾಲಯದ ಮುಂದೆ ಬೇಡಿಕೆ ಅರ್ಜಿ ಸಲ್ಲಿಸಿರುತ್ತಾರೆ.

ಆದ ಕಾರಣ ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಬೇಡಿಕೆ ಅರ್ಜಿಯ ಬಗ್ಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೇ ಹಾಗೂ ಮೇಲೆ ನಮೂದಿಸಿರುವ ಅರ್ಜಿದಾರರಲ್ಲದೇ, ತಾವೂ ಸಹಾ ಮೃತನ ನಿಜವಾದ "ಅವಲಂಬಿತರು" ಎಂದು ಪರಿಗಣಿಸಲು ಕೇಳಿಕೊಳ್ಳುವುದಾದರೇ, ಅಂತಹವರು ಈ ಪ್ರಕಟಣೆಯು ಈ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 (ಮೂವತ್ತು) ದಿವಸದೊಳಗಾಗಿ ತಮ್ಮ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆಗಳಾಗಲಿ ಅಥವಾ ಅರ್ಜಿಗಳಾಗಲಿ ಬಾರದೇ ಇದ್ದಲ್ಲಿ, ಮೇಲ್ಕಂಡ ಅರ್ಜಿದಾರರ ಬೇಡಿಕೆ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು ಹಾಗೂ ಕಾರ್ಮಿಕ ಅಧಿಕಾರಿ, ಉಪವಿಭಾಗ-1, ಬೆಂಗಳೂರು.

ಪಿ.ಆರ್.877

ಅಧಿಕಾರಯುತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ಇವರ ನ್ಯಾಯಾಲಯದಲ್ಲಿ

ಡಿ.ಟಿ.ಸಿ.ಆರ್. ನಂ. 82/2008–09 ದಿನಾಂಕ:26ನೇ ಜೂನ್, 2009

ಪೊಲೀಸ್ ಉಪ ನಿರೀಕ್ಷಕರು, ಪಂಚನಹಳ್ಳಿ ಪೊಲೀಸ್ ಠಾಣೆ ಇವರ ಕ್ರೈಂ ನಂ.28/2008, ದಿನಾಂಕ:11.05.2008

ಉಪಸ್ಥಿತರು: ಕೆ.ಸಿ. ಹರಿದಾಸ್

ಅಧಿಕಾರಯುತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.

ಫಿರ್ಯಾದುದಾರರು	**ಆಪಾದಿತರು**
ಪೊಲೀಸ್ ಉಪ ನಿರೀಕ್ಷಕರು, ಪಂಚನಹಳ್ಳಿ ಪೋಲಿಸ್ ಠಾಣೆ.	ರಮೇಶ್ ಬಿನ್ ದೇವೇಂದ್ರಪ್ಪ ಮತ್ತು ಇತರರು

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:11.05.2008 ರಂದು ಸಂಜೆ ಸುಮಾರು 7.30 ಗಂಟೆ ಸಮಯದಲ್ಲಿ ಪೊಲೀಸ್ ಉಪ ನಿರೀಕ್ಷಕರು, ಪಂಚನಹಳ್ಳಿ ಪೊಲೀಸ್ ಠಾಣೆ ಇವರು ಸಿಬ್ಬಂದಿ ಮತ್ತು ಪಂಚಾಯ್ತಿದಾರರೊಂದಿಗೆ, ಪಂಚನಹಳ್ಳಿ–ಹೊಸದುರ್ಗಾ ರಸ್ತೆಯಲ್ಲಿರುವ ಸರ್ಕಾರಿ ಹೊಸ ಆಸ್ಪತ್ರೆ ಕಟ್ಟಡದ ಮುಂಭಾಗ ಗಸ್ತು ನಿರ್ವಹಿಸುತ್ತಿದ್ದಾಗ, ಪಂಚನಹಳ್ಳಿ ಕಡೆಯಿಂದ ಒಂದು ಮೋಟಾರ್ ಬೈಕ್‌ನಲ್ಲಿ ಇಬ್ಬರು ವ್ಯಕ್ತಿಗಳು ಒಂದು ತುಂಬಿದ ಗೋಣಿಚೀಲವನ್ನು ಇಟ್ಟುಕೊಂಡು ಬರುತ್ತಿರುವುದನ್ನು ಗಮನಿಸಿ, ಅನುಮಾನದ ಮೇರೆಗೆ ತಡೆದು ನಿಲ್ಲಿಸಿ ತಪಾಸಣೆ ಮಾಡಲಾಗಿ ಗೋಣಿಚೀಲದಲ್ಲಿ 180 ಮಿಲಿಯ 48 ಸೀಸೆ ರಾಜಾವಿಸ್ಕಿ ಬಾಟಲಿಗಳು ಇದ್ದು ಇವುಗಳ ಸಾಗಾಣಿಕೆಗೆ ಸಂಬಂಧಿಸಿದಂತೆ ವಾಹನದಲ್ಲಿದ್ದ ವ್ಯಕ್ತಿಗಳಾದ ರಮೇಶ್ ಬಿನ್ ದೇವೇಂದ್ರಪ್ಪ, ನಿಡುವಳ್ಳಿ ಗ್ರಾಮ, ಸಿಂಗಟಗೆರೆ ಹೋಬಳಿ, ಕಡೂರು ತಾಲ್ಲೂಕು ಮತ್ತು ಇನ್ನೊಬ್ಬ ವ್ಯಕ್ತಿ ಆನಂದ ಬಿನ್ ರಾಮಣ್ಣ, ನಿಡುವಳ್ಳಿ ಗ್ರಾಮ, ಸಿಂಗಟಗೆರೆ ಹೋಬಳಿ, ಕಡೂರು ತಾಲ್ಲೂಕು ಇವರುಗಳು ಯಾವುದೇ ಅಧಿಕೃತ ರಹದಾರಿ ಪತ್ರಗಳನ್ನಾಗಲಿ ಅಥವಾ ದಾಖಲಾತಿ ಪತ್ರಗಳನ್ನಾಗಲಿ ಹಾಜರುಪಡಿಸದೆ ಇದ್ದುದರಿಂದ, ಅಕ್ರಮವಾದುದೆಂದು ದೃಢಪಡಿಸಿಕೊಂಡು, ಸ್ಥಳದಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ, ದೊರೆತ ಮದ್ಯವನ್ನು ವಾಹನ ಸಂಖ್ಯೆ: ಕೆಎ–18–ಜೆ–2057 (ಹಿರೋಹೊಂಡಾ ಮೋಟಾರ್ ಸೈಕಲ್) ರೊಂದಿಗೆ ಸರ್ಕಾರದ ವಶಕ್ಕೆ ಅಮಾನತ್ತುಪಡಿಸಿಕೊಂಡು ಆರೋಪಿಗಳನ್ನು ದಸ್ತಗಿರಿಗೊಳಿಸಿ ಕ್ರೈಂ ನಂ.28/2008 ರಲ್ಲಿ ಪ್ರಕರಣವನ್ನು ದಾಖಲಿಸಿ ವಶಪಡಿಸಿಕೊಂಡ ವಾಹನ ಮತ್ತು ಮದ್ಯವನ್ನು ಮುಂದಿನ ವಿಲೇವಾರಿ ಕುರಿತು ಈ ಪ್ರಾಧಿಕಾರದ ಅನುಮತಿ ಪಡೆದು ಅಬಕಾರಿ ನಿರೀಕ್ಷಕರು, ಕಡೂರು ವಲಯ ಇವರಿಗೆ ಹಸ್ತಾಂತರಿಸಿರುತ್ತಾರೆ.

ವಶಪಡಿಸಿಕೊಂಡ ವಾಹನ ಹಾಗೂ ಮದ್ಯಕ್ಕೆ ಸಂಬಂಧಿಸಿದಂತೆ ಈ ಪ್ರಾಧಿಕಾರವು ಮುಟ್ಟುಗೋಲಿನ ನಡವಳಿಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ಅಡಿಯಲ್ಲಿ ಪ್ರಾರಂಭಿಸಿ ವಾಹನದ ಮಾಲೀಕತ್ವದ ಹಾಗೂ ಮೌಲ್ಯದ ವಿವರಗಳನ್ನು ನೀಡುವಂತೆ ಕೋರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಚಿಕ್ಕಮಗಳೂರು ಇವರಿಗೆ ಪತ್ರ ಬರೆದು ನಡವಳಿಗಳನ್ನು ಮುಂದುವರೆಸಲಾಯಿತು.

ವಾಹನವು ಜಪ್ತಾಗಿ ಸುಮಾರು ಒಂದು ವರ್ಷ ಕಳೆದರೂ ಈ ಅವಧಿಯಲ್ಲಿ ವಾಹನದ ಕಾನೂನು ಬದ್ಧ ವಾರಸುದಾರರಾಗಲಿ ಅಥವಾ ವಾಹನದ ಮಾಲೀಕರಾಗಲೀ ಯಾರೊಬ್ಬರು ಪ್ರಾಧಿಕಾರದ ಮುಂದೆ ಹಾಜರಾಗಿ ಅಧಿಕೃತ ದಾಖಲಾತಿ ಪತ್ರಗಳೊಂದಿಗೆ ಹಕ್ಕು ಸಾಧಿಸದೆ ಇದ್ದುದರಿಂದ, ಅಂತಿಮವಾಗಿ ವಾಹನದ ಮಾಲೀಕರಿಗೆ ಪ್ರಾಧಿಕಾರದ ಮುಂದೆ ಅಧಿಕೃತ ದಾಖಲಾತಿಗಳೊಂದಿಗೆ ಹಾಜರಾಗಿ ಪ್ರಾಧಿಕಾರಕ್ಕೆ ಲಿಖಿತ ಮನವಿ ಸಲ್ಲಿಸಿ ವಾಹನದ ಮೇಲೆ ಹಕ್ಕು ಸಾಧಿಸಲು ಏಳು ದಿನಗಳ ಕಾಲಾವಕಾಶ ನೀಡಿ, “ಸಂಬಂಧಿಸಿದವರ ತಿಳುವಳಿಕೆಗಾಗಿ” ಪತ್ರಿಕಾ ಪ್ರಕಟಣೆ ನೀಡಲಾಗಿದ್ದು, ಪತ್ರಿಕಾ ಪ್ರಕಟಣೆ ದಿನಾಂಕ:10.06.2009 ರಂದು ರಾಜ್ಯ ಮಟ್ಟದ ದಿನಪತ್ರಿಕೆಯಾದ ವಿಜಯ ಕರ್ನಾಟಕ ಮತ್ತು ಜಿಲ್ಲಾ ಮಟ್ಟದ ದಿನಪತ್ರಿಕೆಯಾದ ಜನಮಿತ್ರ ಪತ್ರಿಕೆಯಲ್ಲಿ ಪ್ರಚಾರಗೊಂಡಿರುತ್ತದೆ. ಪ್ರಚಾರಗೊಂಡ ನಂತರದಲ್ಲೂ ವಾಹನದ ಮಾಲೀಕರು ಪ್ರಾಧಿಕಾರದ ಮುಂದೆ ಹಾಜರಾಗಿ ಲಿಖಿತ ಮನವಿಯನ್ನು ಸಲ್ಲಿಸಿರುವುದಿಲ್ಲ.

ಮೊಕದ್ದಮೆಯ ನಡವಳಿಗೆ ಸಂಬಂಧಿಸಿದಂತೆ ಸಹಾಯಕ ಅಭಿಯೋಗ ನಿರ್ದೇಶಕರ ಅಭಿಪ್ರಾಯ ಪಡೆಯಲಾಯಿತು. ಸಹಾಯಕ ಅಭಿಯೋಗ ನಿರ್ದೇಶಕರು ತಮ್ಮ ಅಭಿಪ್ರಾಯದಲ್ಲಿ ಮೊಕದ್ದಮೆಯ ಕೃತ್ಯವು ವಾಹನದ ಮಾಲೀಕರ ಗಮನಕ್ಕೆ ಬಂದು ನಡೆದ ಕೃತ್ಯವಾಗಿರುವುದರಿಂದ ವಾಹನವು ಜಪ್ತಾದಾಗಿನಿಂದ ಈವರೆವಿಗೂ ದೀರ್ಘಕಾಲಾವಧಿಯ ಸಮಯದಲ್ಲಿ ಪ್ರಾಧಿಕಾರದ ಮುಂದೆ ಅಧಿಕೃತ ದಾಖಲಾತಿ ಪತ್ರಗಳೊಂದಿಗೆ ತಾವಾಗಲೀ ಅಥವಾ ತಮ್ಮ ನ್ಯಾಯವಾದಿಗಳ ಮುಖಾಂತರವಾಗಲೀ ಹಾಜರಾಗದೇ ಇರುವುದರಿಂದ ಇವರು ಮೊಕದ್ದಮೆಯ ಕೃತ್ಯದಲ್ಲಿ ಭಾಗಿಯಾಗಿರುವುದು ಸ್ಪಷ್ಟವಾಗಿರುವುದರಿಂದ ವಾಹನವನ್ನು ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 43(ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಅಭಿಪ್ರಾಯ ಪಟ್ಟಿರುತ್ತಾರೆ.

III -F7-B/B

ಲಭ್ಯವಿದ್ದ ದಾಖಲೆಗಳು ಹಾಗೂ ಆಧಾರಗಳನ್ನು ಗಮನಿಸಿದಾಗ ಸಹಾಯಕ ಅಭಿಯೋಗ ನಿರ್ದೇಶಕರ ವಾದವನ್ನು ಪುರಸ್ಕರಿಸಲು ಯೋಗ್ಯವೆಂದು ಪ್ರಾಧಿಕಾರಕ್ಕೆ ಮನವರಿಕೆಯಾಗುತ್ತದೆ. ಕಾರಣ, ವಾಹನದ ಮಾಲೀಕರು ಪ್ರಾಸಿಕ್ಯೂಷನ್ ಮಾಡಿರುವ ಆರೋಪಗಳನ್ನು ಅಲ್ಲಗಳೆಯಲು ಸಂಪೂರ್ಣ ನಿರ್ಲಕ್ಷರಾಗಿರುವುದರಿಂದ ಅಲ್ಲದೆ ಕಲಂ 43ರ ಅಡಿಯಲ್ಲಿ, ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳೊಳಗಾಗಿ ಆರೋಪಿ ಇಲ್ಲದ ಅಥವಾ ಆರೋಪಿ ಪತ್ತೆಯಾಗದೇ ಇದ್ದಲ್ಲಿ ಮತ್ತು ವಶಪಡಿಸಿಕೊಂಡ ಸ್ವತ್ತುಗಳು ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 43ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಬಾದ್ಯವಾಗಿದ್ದಲ್ಲಿ, ಯಾರೋಬ್ಬರು ಸದರಿ ಸ್ವತ್ತುಗಳು ಕಾನೂನು ಬದ್ಧವಾಗಿವೆ ಎಂಬ ಸಾಕ್ಷ್ಯಧಾರಗಳನ್ನು ಹಾಜರುಪಡಿಸದೇ ಇದ್ದಲ್ಲಿ ಅಂತಹವುಗಳನ್ನು ಕಲಂ 43(ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳ ಬಹುದಾಗಿದ್ದು, ಮೊಕದ್ದಮೆಯ ಶೀಘ್ರ ವಿಲೇವಾರಿ ದೃಷ್ಟಿ, ಸರ್ಕಾರದ ರಾಜಸ್ವದ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಈ ಮೊಕದ್ದಮೆಯನ್ನು ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 43(ಸಿ) ಅಡಿಯಲ್ಲಿ ನಡವಳಿಗಳನ್ನು ಜರುಗಿಸಿ ಇತ್ಯರ್ಥಗೊಳಿಸುವುದು ಸಮಂಜಸವೆಂದು ಮನವರಿಕೆಯಾದ ಕಾರಣ ಕೆಳಕಂಡ ಆದೇಶ.

"ಆದೇಶ"

ಕೆ.ಸಿ. ಹರಿದಾಸ್, ಅಧಿಕಾರಯುತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 43(ಬಿ) ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ಉಪ ನಿರೀಕ್ಷಕರು, ಪಂಚನಹಳ್ಳಿ ಪೊಲೀಸ್ ಠಾಣೆ, ಇವರ ಕ್ರೈಂ ನಂ.28/2008, ದಿನಾಂಕ:11.05.2008ರಲ್ಲಿ ವಶಪಡಿಸಿಕೊಳ್ಳಲಾದ ವಾಹನ ಸಂಖ್ಯೆ: ಕೆಎ-18-ಜೆ-2057 (ಹಿರೋಹೊಂಡ ಬೈಕ್) ಹಾಗೂ ಮದ್ಯದ ಪೈಕಿ ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಉಳಿದ 8.460 ಲೀಟರ್ ಮದ್ಯವನ್ನು ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 43(ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ 26ನೇ ಜೂನ್, 2009 ರಂದು ಬೆರಳಚ್ಚುಗಾರರಿಗೆ ಉಖ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚಿಸಿದ ನಂತರ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಯಲ್ಲಿ ಬರುತ್ತದೆ.

ಅಧಿಕಾರಯುತ ಅಧಿಕಾರಿ ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್
ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.

ಪಿ.ಆರ್.653

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್/221/2008-09, ದಿನಾಂಕ:9ನೇ ಜುಲೈ, 2009

ಉಪಸ್ಥಿತರು: ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು	ವಿರುದ್ಧ	ಪ್ರತಿವಾದಿ/ಆರೋಪಿ
ಆರಕ್ಷಕ ಉಪ ನಿರೀಕ್ಷಕರು, ಹುಲ್ಲಹಳ್ಳಿ ಪೊಲೀಸ್ ಠಾಣೆ, ನಂಜನಗೂಡು ತಾಲ್ಲೂಕು.		ರವಿ ಬಿನ್ ಚಿನ್ನಸ್ವಾಮಿ, ಮಾದಪುರ ಗ್ರಾಮ, ನಂಜನಗೂಡು ತಾಲ್ಲೂಕು

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:14.10.2008 ರಂದು ಮಧ್ಯಾಹ್ನ 11:30 ಗಂಟೆಯ ಸಮಯದಲ್ಲಿ ಆರಕ್ಷಕ ಉಪ ನಿರೀಕ್ಷಕರು, ಹುಲ್ಲಹಳ್ಳಿ ಪೊಲೀಸ್ ಠಾಣೆ, ನಂಜನಗೂಡು ತಾಲ್ಲೂಕು, ಇವರು ನಂಜನಗೂಡು ತಾಲ್ಲೂಕು, ಶಿರಮಳ್ಳಿ ಗೇಟ್ ಬಳಿ ಕೆಎ-09/ವಿ-8613 ನೋಂದಣಿ ಸಂಖ್ಯೆಯ ಟಿ.ವಿ.ಎಸ್.ಎಕ್ಸ್‌ಲ್ ವಾಹನದಲ್ಲಿ ಅಕ್ರಮವಾಗಿ 8.640 ಲೀ. ಒರಿಜಿನಲ್ ಚಾಯ್ಸ್ ವಿಸ್ಕಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತು ಮಾಡಿ, ಠಾಣಾ ಪ್ರಕರಣ ಸಂಖ್ಯೆ: 17/2008 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿ, ಈ ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:20.10.2008 ರಂದು ಕೋರಿರುತ್ತಾರೆ. ಅಂತೆಯೇ ದಿನಾಂಕ:21.10.2008 ರಂದು ನಂಜನಗೂಡು ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಗಾಗಿ ಮೈಸೂರು (ಪೂರ್ವ) ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಈ ಪ್ರಾಧಿಕಾರದಿಂದ ದಿನಾಂಕ:21.10.2008ರಂದು ಪತ್ರ ಬರೆಯಲಾಗಿದ್ದು, ಇದಕ್ಕೆ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ. ಸದರಿ ವಾಹನಕ್ಕೆ ಸಂಬಂಧಪಟ್ಟ ಆರೋಪಿಗಳಾಗಲೀ/ವಾಹನ ಮಾಲೀಕರಾಗಲೀ ವಾಹನ ಬಿಡುಗಡೆಗಾಗಿ ಇದುವರೆವಿಗೂ ಯಾವುದೇ

ಪ್ರಯತ್ನ ನಡೆಸಿರುವುದಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕ ಅಬಕಾರಿ ಕಾಯಿದೆ ಕಲಂ 32, 34ರ ಅಡಿಯಲ್ಲಿ ಪತ್ತೆ ಹಚ್ಚುವ ಅಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಗಳು ತಮ್ಮ ಮೇಲೆ ಇರತಕ್ಕಂತ ಜವಾಬ್ದಾರಿ / ಹೊಣೆಗಾರಿಕೆಯನ್ನು ಇದುವರೆವಿಗೂ ಪ್ರಾಧಿಕಾರದ ಮುಂದೆ ಹಾಜರಾಗಿ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (9) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ.

ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/221/2008-09, ದಿನಾಂಕ:9ನೇ ಜುಲೈ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) (2) ರಡಿಯಲ್ಲಿ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ಉಪ ನಿರೀಕ್ಷಕರು, ನಂಜನಗೂಡು ಗ್ರಾಮಾಂತರ ಠಾಣೆ, ನಂಜನಗೂಡು ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ: 17/2008, ದಿನಾಂಕ:14.10.2008 ರಂದು ವಶಪಡಿಸಿಕೊಂಡ ಕೆಎ-09/ವಿ-8613 ನೋಂದಣಿ ಸಂಖ್ಯೆಯ ಟಿ.ವಿ.ಎಸ್.ಎಕ್ಸಲ್ ಸೂಪರ್ ವಾಹನ ಮತ್ತು 8.640 ಲೀ. ಮದ್ಯವನ್ನು (ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಜುಲೈ ತಿಂಗಳ 9ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ.ಮಂಜುನಾಥ್
ಡೆಪ್ಯೂಟಿ ಕಮೀಷನರ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.919

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್/92/2008-09, ದಿನಾಂಕ:9ನೇ ಜುಲೈ, 2009

ಉಪಸ್ಥಿತರು: ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು	ವಿರುದ್ಧ	ಪ್ರತಿವಾದಿ/ಆರೋಪಿ
ಆರಕ್ಷಕ ಉಪ ನಿರೀಕ್ಷಕರು, ಜಯಪುರ ಪೊಲೀಸ್ ಠಾಣೆ, ಮೈಸೂರು.		ರಾಜೇಶ್ ಬಿನ್ ಲೇ॥ ಬಸವರಾಜು, ಮಾರ್ಬಳ್ಳಿ ಗ್ರಾಮ, ಮೈಸೂರು ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:22.08.2007 ರಂದು ಸಂಜೆ 04:00 ಗಂಟೆಯ ಸಮಯದಲ್ಲಿ ಆರಕ್ಷಕ ಉಪ ನಿರೀಕ್ಷಕರು, ಜಯಪುರ ಪೊಲೀಸ್ ಠಾಣೆ, ಮೈಸೂರು ತಾಲ್ಲೂಕು, ಇವರು ಮೈಸೂರು ತಾಲ್ಲೂಕು, ಮೈಸೂರು ಕಡೆಯಿಂದ ಉದ್ಬೂರಿಗೆ ಹೋಗುವ ರಸ್ತೆಯಲ್ಲಿ ಕೆಎ-09/ಆರ್-316 ನೋಂದಣಿ ಸಂಖ್ಯೆಯ ಹೀರೋ ಪುಕ್ ವಾಹನದಲ್ಲಿ ಅಕ್ರಮವಾಗಿ 17.280 ಲೀ. ವಿವಿಧ ಮಾದರಿಯ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತು ಮಾಡಿ, ಮೊಕದ್ದಮೆ ಸಂಖ್ಯೆ: 72/2008 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 34ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಪ್ರಕರಣ ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿ, ಈ ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:28.08.2008 ರಂದು ಕೋರಿರುತ್ತಾರೆ. ಅಂತೆಯೇ ಅದೇ ದಿನದಂದು ಮೈಸೂರು ವಲಯ ನಂ.3ರ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಗಾಗಿ ಮೈಸೂರು ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಈ ಪ್ರಾಧಿಕಾರದಿಂದ ದಿನಾಂಕ:28.08.2008 ಮತ್ತು 27.11.2008 ರಂದು ಪತ್ರ ಬರೆಯಲಾಗಿದ್ದು, ಇದಕ್ಕೆ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ. ಸದರಿ ವಾಹನಕ್ಕೆ ಸಂಬಂಧಪಟ್ಟ ಆರೋಪಿಗಳಾಗಲೀ/ವಾಹನ ಮಾಲೀಕರಾಗಲೀ ವಾಹನ ಬಿಡುಗಡೆಗಾಗಿ ಇದುವರೆವಿಗೂ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕ ಅಬಕಾರಿ ಕಾಯಿದೆ ಕಲಂ 34ರ ಅಡಿಯಲ್ಲಿ ಪತ್ತೆ ಪಚ್ಚುವ ಅಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಗಳು ತಮ್ಮ ಮೇಲೆ ಇರತಕ್ಕಂತ ಜವಾಬ್ದಾರಿ / ಹೊಣೆಗಾರಿಕೆಯನ್ನು ಇದುವರೆವಿಗೂ ಪ್ರಾಧಿಕಾರದ ಮುಂದೆ ಹಾಜರಾಗಿ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (22) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/92/2008-09, ದಿನಾಂಕ:9ನೇ ಜುಲೈ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) (2) ರಡಿಯಲ್ಲಿ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ನಿರೀಕ್ಷಕರು, ಮಂಡಿ ಪೊಲೀಸ್ ಠಾಣೆ, ಮೈಸೂರು ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:72/2008, ದಿನಾಂಕ:22.08.2007 ರಂದು ವಶಪಡಿಸಿಕೊಂಡ ಕೆಎ-09/ಆರ್-316 ನೋಂದಣಿ ಸಂಖ್ಯೆಯ ಹೀರೋ ಪುಕ್ ವಾಹನವನ್ನು (ಈ ಪ್ರಕರಣದಲ್ಲಿ ಜಪ್ತಾದ ಮಾದಕ ದ್ರವ್ಯಗಳನ್ನು ಪ್ರತ್ಯೇಕ ಆದೇಶದಲ್ಲಿ ಮುಟ್ಟುಗೋಲು ಹಾಕಿ ಕೊಂಡು ಆದೇಶ ಹೊರಡಿಸಲಾಗಿದೆ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಜುಲೈ ತಿಂಗಳ 9ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ.ಮಂಜುನಾಥ್
ಡೆಪ್ಯೂಟಿ ಕಮೀಷನರ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.920

ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಠಾಣಾಧಿಕಾರಿ, ದೇವರ ಜೀವನಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ನಗರ

ವಾರಸುದಾರರಿಲ್ಲದ ಮಾಲು ಮತ್ತು ವಾಹನಗಳ ವಿವರ

Sl. No.	Cr. No. & C.Miss No.	P.F. Number	Type of Vehicle etc.,	Reg.No.Chassis No. and Engine No.
1.	392/98 U/S 98 K.P.Act.	188/08	Bajaj pulsar block colour	KA-03-EL-8049 Cha No. MD2DIIDIIZZNCII36841 Eng No. DHGBNH74987
2.	392/98 U/S 98 K.P. Act	188/08	TVS Victor block colour	KA-03-AC-7868 Cha No. MD625AF1061K34232 Eng No.OF1K61546460
3.	81/09 U/S 98 K.P.Act	40/09	Honda Active white colour	KA-03-EA-1989 Cha No.ME4JF085F48477073 Eng No.JFO8E0490521

Sl. No.	Cr. No. & C.Miss No.	P.F. Number	Type of Vehicle etc.,	Reg.No.Chassis No. and Engine No.
4.	81/09 U/S 98 K.P. Act	40/09	Suzuki feiro silver colour	KA-02-EA-7462 Cha No. M1204F133319 Eng No.M1204M135144
5.	59/09 U/S 98 K.P.Act	30/09	Hundai Santro Car red colour	KA-50-M-1889 Cha No. MALAC51HX6M839990 Eng No. G4HG6M803745
6.	59/09 U/S 98 K.P.Act	31/09	Hundai Santro Car Silver colour	KA-01-MB-7383 Cha No. MALAB51HP6M837905 Eng No. G4HG6M805515
7.	186/09 U/S 98 K.P. Act	86/09	Suzuki samurai block colour	KA-04-H-3183 Cha No.7703F775169 Eng No.7703M820968
8.	199/09 U/S 98 K.P. Act	91/09	Hero Honda orange colour	KA-06-L-4601 Cha No.02J20C02723 Eng No.02II18M14050
9.	199/09 U/S 98 K.P.Act	91/09	TVS Star City red colour	KA-06-EN-5518 Cha No. MD625KF5761A44892 Eng No.AF5A61155139
10.	199/09 U/S 98 K.P. Act	91/09	Hero Honda Fashion red colour	KA-06-W-8201 Cha No.06B09C34087 Eng No.06B08M23194
11.	199/09 U/S 98 K.P. Act	91/09	TVS Scooty White colour	KA-05-EC-2374 Cha No.K00AK379111 Eng No.K00AM373850
12.	199/09 U/S 98 K.P. Act	91/09	Kenitic Honda block colour	KA-02-W-8772 Cha No.NIFAG887064 Eng No.NIEQG882374
13.	C-Miss No. 261/09	59/09	Hero Honda Splender block colour	KA-04-F-4651 Cha No.00L20F22677 Eng No.00L18F21768
14.	C-Miss No.159/09	34/09	Bajaj chethak green colour	KA-04-Q-7597 Cha No.06F96B64302 Eng No.06M96871357
15.	C-Miss No.284/09	66/09	Hero Honda red colour	KA-04-S-5395 Cha No. NIL Eng No.961112F03270
16.	C-miss No.285/09	67/09	Auto Rickshaw block colour	KA-05-B-7182 Cha No.24FBJM05936 Eng No.AEMBJM12607
17.	C-Miss No.286/09	68/09	TVS Scooty block colour	KA-03-U-7048 Cha No.K97GF119496 Eng No.KA97GM121161

Sl. No.	Cr. No. & C.Miss No.	P.F. Number	Type of Vehicle etc.,	Reg.No.Chassis No. and Engine No.
18.	C-Miss No.286/09	68/09	Bajaj chethak blue colour	KA-02-Q-8331 Cha No.06F95J08896 Eng No.NIL
19.	331/08 U/S 98 K.P. Act	146/08	TVS Scooty blue colour	KA-03-7048 Cha No.K97GF119496 Eng No.K97GM121161
20.	362/08 U/S 98 K.P.Act	170/08	Kenitic Honda block colour	KA-05-Y-3323 Cha No.NIL Eng No.885489NIEQH
21.	C-Miss No.49/09	16/09	H.P. Laptop computer block colour	-
22.	81/09 U/S 98 K.P.Act	39/09	2 Car stireo company name nil	-
23.	81/09 U/S 98 K.P. Act	39/09	2 L.C.D. Player Company name nil	-

ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು
ಠಾಣಾಧಿಕಾರಿ, ದೇವರ ಜೀವನಹಳ್ಳಿ
ಪೊಲೀಸ್ ಠಾಣೆ, ಬೆಂಗಳೂರು ನಗರ.

ಪಿ.ಆರ್.907

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್‌ರವರ ಕಛೇರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ಅಧಿಸೂಚನೆ

ಸಂಖ್ಯೆ: ಅ.ಕಾ.ಅ.ಉ.ಆ.ಮಾ.ಹ/17/2009–10, ದಿನಾಂಕ:16ನೇ ಜುಲೈ, 2009

ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಕಛೇರಿಯ ಮತ್ತು ಅಧೀನ ಕಛೇರಿಗಳಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 5(1), 5(2), 19(1)ರ ಪ್ರಕಾರ 'ಸಾರ್ವಜನಿಕ ಮಾಹಿತಿ ಅಧಿಕಾರಿ', 'ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ' ಮತ್ತು 'ಮೇಲ್ಮನವಿ ಪ್ರಾಧಿಕಾರಗಳನ್ನು' ಈ ಕೆಳಕಂಡಂತೆ ನೇಮಕ ಮಾಡಿ ಅಧಿಸೂಚನೆ ಹೊರಡಿಸಿದೆ.

ಕ್ರ. ಸಂ.	ಕಛೇರಿ ಹೆಸರು	ಮಾಹಿತಿ ಪಡೆಯುವ ಹಕ್ಕು ಕಾಯಿದೆ 2005ರ ಸೆಕ್ಷನ್ 5(1)ರ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಪಡೆಯುವ ಹಕ್ಕು ಕಾಯಿದೆ 2005ರ ಸೆಕ್ಷನ್ 5(2)ರ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಪಡೆಯುವ ಹಕ್ಕು ಕಾಯಿದೆ 2005ರ ಸೆಕ್ಷನ್ 19(1)ರ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಮೇಲ್ಮನವಿ ಪ್ರಾಧಿಕಾರಿ
1.	ಅಬಕಾರಿ ಉಪ ಆಯುಕ್ತರ ಕಛೇರಿ, ಶಿವಮೊಗ್ಗ ಜಿಲ್ಲೆ.	ಅಬಕಾರಿ ಉಪ ಅಧೀಕ್ಷಕರು ಅಬಕಾರಿ ಉಪ ಆಯುಕ್ತರ ಕಛೇರಿ, ಶಿವಮೊಗ್ಗ ಜಿಲ್ಲೆ.	ಅಬಕಾರಿ ನಿರೀಕ್ಷಕರು ಅಬಕಾರಿ ಉಪ ಆಯುಕ್ತರ ಕಛೇರಿ, ಶಿವಮೊಗ್ಗ ಜಿಲ್ಲೆ.	ಅಬಕಾರಿ ಉಪ ಆಯುಕ್ತರು ಅಬಕಾರಿ ಉಪ ಆಯುಕ್ತರ ಕಛೇರಿ, ಶಿವಮೊಗ್ಗ ಜಿಲ್ಲೆ.
2.	ಅಬಕಾರಿ ಉಪ ಅಧೀಕ್ಷಕರ ಕಛೇರಿ, ಶಿವಮೊಗ್ಗ ಉಪವಿಭಾಗ.	ಅಬಕಾರಿ ನಿರೀಕ್ಷಕರು ಶಿವಮೊಗ್ಗ ಉಪವಿಭಾಗ.	ಅಬಕಾರಿ ಉಪ ನಿರೀಕ್ಷಕರು ಶಿವಮೊಗ್ಗ ಉಪವಿಭಾಗ	ಅಬಕಾರಿ ಉಪ ಅಧೀಕ್ಷಕರು ಶಿವಮೊಗ್ಗ ಉಪವಿಭಾಗ.
3.	ಅಬಕಾರಿ ಉಪ ಅಧೀಕ್ಷಕರ ಕಛೇರಿ, ತೀರ್ಥಹಳ್ಳಿ ಉಪವಿಭಾಗ.	ಅಬಕಾರಿ ನಿರೀಕ್ಷಕರು ತೀರ್ಥಹಳ್ಳಿ ಉಪವಿಭಾಗ	ಅಬಕಾರಿ ಉಪ ನಿರೀಕ್ಷಕರು ತೀರ್ಥಹಳ್ಳಿ ಉಪವಿಭಾಗ.	ಅಬಕಾರಿ ಉಪ ಅಧೀಕ್ಷಕರು ತೀರ್ಥಹಳ್ಳಿ ಉಪವಿಭಾಗ

ಕ್ರ. ಸಂ.	ಕಛೇರಿ ಹೆಸರು	ಮಾಹಿತಿ ಪಡೆಯುವ ಹಕ್ಕು ಕಾಯಿದೆ 2005ರ ಸೆಕ್ಷನ್ 5(1)ರ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಪಡೆಯುವ ಹಕ್ಕು ಕಾಯಿದೆ 2005ರ ಸೆಕ್ಷನ್ 5(2)ರ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಪಡೆಯುವ ಹಕ್ಕು ಕಾಯಿದೆ 2005ರ ಸೆಕ್ಷನ್ 19(1)ರ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಮೇಲ್ಮನವಿ ಪ್ರಾಧಿಕಾರಿ
4.	ಅಬಕಾರಿ ಉಪ ಅಧೀಕ್ಷಕರ ಕಛೇರಿ, ಸಾಗರ ಉಪವಿಭಾಗ.	ಅಬಕಾರಿ ನಿರೀಕ್ಷಕರು, ಸಾಗರ ಉಪವಿಭಾಗ.	ಅಬಕಾರಿ ಉಪ ನಿರೀಕ್ಷಕರು, ಸಾಗರ ಉಪವಿಭಾಗ.	ಅಬಕಾರಿ ಉಪ ಅಧೀಕ್ಷಕರು, ಸಾಗರ ಉಪವಿಭಾಗ.
5.	ಅಬಕಾರಿ ನಿರೀಕ್ಷಕರ ಕಛೇರಿ, ಶಿವಮೊಗ್ಗ ವಲಯ ನಂ.1	ಅಬಕಾರಿ ನಿರೀಕ್ಷಕರು, ಶಿವಮೊಗ್ಗ ವಲಯ ನಂ.1	ಅಬಕಾರಿ ಉಪ ನಿರೀಕ್ಷಕರು, ಶಿವಮೊಗ್ಗ ವಲಯ ನಂ.1	ಅಬಕಾರಿ ಉಪ ಅಧೀಕ್ಷಕರು, ಶಿವಮೊಗ್ಗ ಉಪವಿಭಾಗ.
6.	ಅಬಕಾರಿ ನಿರೀಕ್ಷಕರ ಕಛೇರಿ, ಶಿವಮೊಗ್ಗ ವಲಯ ನಂ.2	ಅಬಕಾರಿ ನಿರೀಕ್ಷಕರು, ಶಿವಮೊಗ್ಗ ವಲಯ ನಂ.2	ಅಬಕಾರಿ ಉಪ ನಿರೀಕ್ಷಕರು, ಶಿವಮೊಗ್ಗ ವಲಯ ನಂ.2	ಅಬಕಾರಿ ಉಪ ಅಧೀಕ್ಷಕರು, ಶಿವಮೊಗ್ಗ ಉಪವಿಭಾಗ.
7.	ಅಬಕಾರಿ ನಿರೀಕ್ಷಕರ ಕಛೇರಿ, ಭದ್ರಾವತಿ ವಲಯ.	ಅಬಕಾರಿ ನಿರೀಕ್ಷಕರು, ಭದ್ರಾವತಿ ವಲಯ.	ಅಬಕಾರಿ ಉಪ ನಿರೀಕ್ಷಕರು, ಭದ್ರಾವತಿ ವಲಯ.	ಅಬಕಾರಿ ಉಪ ಅಧೀಕ್ಷಕರು, ಶಿವಮೊಗ್ಗ ಉಪವಿಭಾಗ.
8.	ಅಬಕಾರಿ ನಿರೀಕ್ಷಕರ ಕಛೇರಿ, ಶಿಕಾರಿಪುರ ವಲಯ.	ಅಬಕಾರಿ ನಿರೀಕ್ಷಕರು, ಶಿಕಾರಿಪುರ ವಲಯ.	ಅಬಕಾರಿ ಉಪ ನಿರೀಕ್ಷಕರು, ಶಿಕಾರಿಪುರ ವಲಯ.	ಅಬಕಾರಿ ಉಪ ಅಧೀಕ್ಷಕರು, ಸಾಗರ ಉಪವಿಭಾಗ.
9.	ಅಬಕಾರಿ ನಿರೀಕ್ಷಕರ ಕಛೇರಿ, ಸಾಗರ ವಲಯ.	ಅಬಕಾರಿ ನಿರೀಕ್ಷಕರು, ಸಾಗರ ವಲಯ.	ಅಬಕಾರಿ ಉಪ ನಿರೀಕ್ಷಕರು, ಸಾಗರ ವಲಯ.	ಅಬಕಾರಿ ಉಪ ಅಧೀಕ್ಷಕರು, ಸಾಗರ ಉಪವಿಭಾಗ.
10.	ಅಬಕಾರಿ ನಿರೀಕ್ಷಕರ ಕಛೇರಿ, ಸೊರಬ ವಲಯ.	ಅಬಕಾರಿ ನಿರೀಕ್ಷಕರು, ಸೊರಬ ವಲಯ.	ಅಬಕಾರಿ ಉಪ ನಿರೀಕ್ಷಕರು, ಸೊರಬ ವಲಯ.	ಅಬಕಾರಿ ಉಪ ಅಧೀಕ್ಷಕರು, ಸಾಗರ ಉಪ ವಿಭಾಗ.
11.	ಅಬಕಾರಿ ನಿರೀಕ್ಷಕರ ಕಛೇರಿ, ತೀರ್ಥಹಳ್ಳಿ ವಲಯ.	ಅಬಕಾರಿ ನಿರೀಕ್ಷಕರು, ತೀರ್ಥಹಳ್ಳಿ ವಲಯ.	ಅಬಕಾರಿ ಉಪ ನಿರೀಕ್ಷಕರು, ತೀರ್ಥಹಳ್ಳಿ ವಲಯ.	ಅಬಕಾರಿ ಉಪ ಅಧೀಕ್ಷಕರು, ತೀರ್ಥಹಳ್ಳಿ ಉಪವಿಭಾಗ.
12.	ಅಬಕಾರಿ ನಿರೀಕ್ಷಕರ ಕಛೇರಿ, ಹೊಸನಗರ ವಲಯ.	ಅಬಕಾರಿ ನಿರೀಕ್ಷಕರು, ಹೊಸನಗರ ವಲಯ.	ಅಬಕಾರಿ ಉಪ ನಿರೀಕ್ಷಕರು, ಹೊಸನಗರ ವಲಯ.	ಅಬಕಾರಿ ಉಪ ಅಧೀಕ್ಷಕರು, ತೀರ್ಥಹಳ್ಳಿ ಉಪವಿಭಾಗ.

ಡೆಪ್ಯೂಟಿ ಕಮೀಷನರ್ ಆಫ್
ಎಕ್ಸೈಜ್, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

ಪಿ.ಆರ್.908

ಕೃಷಿ ಇಲಾಖೆ

ಜಿಲ್ಲಾ ಪಂಚಾಯತ್, ದಾವಣಗೆರೆ

ಜಂಟಿ ಕೃಷಿ ನಿರ್ದೇಶಕರ ಕಛೇರಿ, ದಾವಣಗೆರೆ

ನಂ.ಸಿಬ್ಬಂದಿ-2/ಅ.ಗೈ.ಹಾ./ವಿ.ವ-17/09-10/2397-03, ದಿನಾಂಕ:31ನೇ ಜುಲೈ, 2009

ವಿಷಯ: ಶ್ರೀ ಎಮ್.ಸಿ. ಗಣಾಚಾರಿ, ಗ್ರೂಪ್ 'ಡಿ' ನೌಕರರು, ಜಂಟಿ ಕೃಷಿ ನಿರ್ದೇಶಕರ ಕಛೇರಿ, ದಾವಣಗೆರೆ ಇವರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿ ಬಗ್ಗೆ.

ಉಲ್ಲೇಖ:1) ಈ ಕಛೇರಿ ಮೆಮೊ ಸಂ:ಸಿ-2/ಎಂ.ಸಿ.ಗ/ಸಿ.ಆರ್.17/08-09/3 3269, ದಿನಾಂಕ:27.09.2008.

2) ಈ ಕಛೇರಿಯ ಪತ್ರದ ಸಂಖ್ಯೆ: ಸಿಬ್ಬಂದಿ-2/ಎಂ.ಸಿ.ಗ./'ಡಿ' ನೌಕರ/ಸಿ.ಆರ್-17/08-09/3958-60 ದಿನಾಂಕ:21.10.2008 ಹಿರಿಯ ಸಹಾಯಕ ನಿರ್ದೇಶಕರು, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ, ದಾವಣಗೆರೆ ಇವರ ಮೂಲಕ ಪ್ರಕಟಣೆ (ಜನತಾವಾಣಿ ಸ್ಥಳೀಯ ಪತ್ರಿಕೆ ಪ್ರಕಟಣೆ ದಿನಾಂಕ:15.11.2008ರಲ್ಲಿ ಪ್ರಕಟವಾಗಿರುತ್ತದೆ. ಮತ್ತು ವಿಜಯ ಕರ್ನಾಟಕ ಪತ್ರಿಕೆ ದಿನಾಂಕ:06.11.2008ರಂದು ಪ್ರಕಟವಾಗಿರುತ್ತದೆ)

3) ಈ ಕಛೇರಿಯ ನೋಟೀಸ್-1 ದಿನಾಂಕ:29/30.01.2009.

4) ಈ ಕಛೇರಿಯ ಆದೇಶ ಸಂಖ್ಯೆ: ಸಿಬ್ಬಂದಿ-2/ವಿವ-17/ಎಂ.ಸಿ.ಗ./'ಡಿ'/ವಾ.ಬ.ಗೈ./6314-18/08-09, ದಿನಾಂಕ:26.02.03.2009/02.03.2009.

5) ಈ ಕಛೇರಿಯ ನೋಟೀಸ್-2 ದಿನಾಂಕ:26/28.03.2009.

6) ಈ ಕಛೇರಿಯ ನೋಟೀಸ್-3 ದಿನಾಂಕ:01/02.06.2009.

7) ಈ ಕಛೇರಿಯ ಪ್ರಕಟಣೆ ದಿನಾಂಕ:25.07.2009.

8) ಈ ಕಛೇರಿ ಟಿಪ್ಪಣಿ ಮತ್ತು ಆದೇಶ ದಿನಾಂಕ:31.07.2009.

ಪ್ರಸ್ತಾವನೆ:

ಶ್ರೀ ಎಂ.ಸಿ. ಗಣಾಚಾರಿ ತಂದೆ ಚಂದ್ರಶೇಖರಯ್ಯ ಗಣಾಚಾರಿ, 'ಡಿ' ದರ್ಜೆ ನೌಕರರು ಇವರು ಈ ಕಛೇರಿಯಲ್ಲಿ 'ಡಿ' ದರ್ಜೆ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ಇಲಾಖಾ ಆದೇಶ ಸಂಖ್ಯೆ: ಸಿ-2/'ಡಿ'/ಸ್ಥ.ನಿ/64/08-09 ದಿನಾಂಕ:30.08.2008ರ ಆದೇಶದ ಮೇರೆಗೆ ಸ್ಥಳ ನಿಯುಕ್ತಿಗೊಂಡು ಈ ಕಛೇರಿಯಲ್ಲಿ ದಿನಾಂಕ:01.09.2008ರ ಪೂರ್ವಾಹ್ನ ಕರ್ತವ್ಯಕ್ಕೆ ಹಾಜರಾಗಿದ್ದರು.

ಶ್ರೀ ಎಂ.ಸಿ. ಗಣಾಚಾರಿ (ಮಂಜುನಾಥಯ್ಯ, ಚಂದ್ರಶೇಖರಯ್ಯ ಗಣಾಚಾರಿ) ಇವರು ದಿನಾಂಕ:16.09.2008 ರಿಂದ 27.09.2008 (ಮುಂದುವರೆದಿದೆ) ರವರೆಗೂ ಕಛೇರಿಯ ದೈನಂದಿನ ಕೆಲಸಗಳಿಗೆ ಅನಧಿಕೃತ ಗೈರು ಹಾಜರಾಗಿದ್ದು, ಕರ್ತವ್ಯಕ್ಕೆ ಹಾಜರಾಗುವಂತೆ ಉಲ್ಲೇಖ (1)ರ ಮೆಮೊದಲ್ಲಿ ನೋಂದಾಯಿಸಿದ ಅಂಚೆ ಸ್ವೀಕೃತಿ ಸಹಿತ ನೌಕರರ ಖಾಯಂ ವಿಳಾಸ ಹೊಸ ಯಲ್ಲಾಪುರ, ಮುಂಡೋಣಿ (ಬಡಾವಣೆ), ಧಾರವಾಡ-1 ಇಲ್ಲಿಗೆ ಕಳುಹಿಸಲಾಗಿತ್ತು, ನೊಂದಣಿ ಪತ್ರವು ನೌಕರರಿಗೆ ಜಾರಿಯಾಗದೆ ಅಂಚೆ ಕಛೇರಿ ಮೂಲಕ ಈ ಕಛೇರಿಗೆ ವಾಪಾಸ್ಸು ಬಂದಿರುತ್ತದೆ. (ಇದನ್ನು ದಾಖಲೆ-1 ಎಂದು ಗುರುತಿಸಿದೆ).

ಉಲ್ಲೇಖ (2)ರ ಪತ್ರದಲ್ಲಿ ಕಛೇರಿಯ ನೌಕರರ ಗೈರು ಹಾಜರಿ ದಿನಾಂಕ:16.09.2008 ರಿಂದ 21.10.2008 (ಮುಂದುವರೆದಿದೆ) ರವರೆಗೆ ಗೈರು ಹಾಜರಾದ ಬಗ್ಗೆ ಹಿರಿಯ ಸಹಾಯಕ ನಿರ್ದೇಶಕರು, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ, ದಾವಣಗೆರೆ ಇವರಿಗೆ ನೀಡಿ ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ ಹಾಗೂ ಸ್ಥಳೀಯ ಪತ್ರಿಕೆಯೊಂದರಲ್ಲಿ ಪ್ರಕಟಿಸುವಂತೆ ಕೋರಲಾಗಿ, ಸದರಿಯವರು ವಿಜಯ ಕರ್ನಾಟಕ ದಿನಪತ್ರಿಕೆ ದಿನಾಂಕ:6.11.2008 ಮತ್ತು ಸ್ಥಳೀಯ ದಿನಪತ್ರಿಕೆಯಾದ ಜನತಾವಾಣಿಯಲ್ಲಿ ದಿನಾಂಕ:05.11.2008ರಲ್ಲಿ ಪ್ರಕಟ ಪಡಿಸಿದ್ದು ಶ್ರೀ ಎಂ.ಸಿ. ಗಣಾಚಾರಿ 'ಡಿ' ದರ್ಜೆ ಆದ ನೀವು ಸೇವೆಗೆ ಹಾಜರಾಗದಿದ್ದಲ್ಲಿ ಸೇವೆಯಿಂದ ವಜಾಮಾಡಲು ಕ್ರಮಕೈಗೊಳ್ಳಲಾಗುವುದೆಂದು ಪ್ರಕಟಿಸಲಾಗಿದೆ. ಪತ್ರದ ಪ್ರತಿಯನ್ನು ನಿಮ್ಮ ಸ್ವಂತ ವಿಳಾಸಕ್ಕೆ ನೊಂದಣಿ ಅಂಚೆ ಪಾವತಿಯೊಂದಿಗೆ ಕಳುಹಿಸಲಾಗಿದ್ದು ಪತ್ರವು ಸ್ವೀಕೃತವಾಗದೆ ಈ ಕಛೇರಿಗೆ ವಾಪಾಸು ಬಂದಿರುತ್ತದೆ (ದಾಖಲೆ-2 ಎಂದು ಗುರುತಿಸಿದೆ.) ನೀವು ದಿನಾಂಕ:05.11.2008ರಂದು ಹಾಜರಾಗಿ 12.01.2009 ರವರೆಗೆ ಕರ್ತವ್ಯ ನಿರ್ವಹಿಸಿದ್ದನ್ನು ಕಛೇರಿಯು ನಿಮ್ಮ ಕೋರಿಕೆ ಮೇರೆಗೆ ಪರಿಗಣಿಸಲಾಗಿತ್ತು.

ಆದಾಗ್ಯೂ ದಿನಾಂಕ:13.01.2009 ರಿಂದ 29.01.2009ರವರೆಗೆ ಪುನಃ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವುದು ನಿಮ್ಮ ಗೈರು ಹಾಜರಿ ಬಗ್ಗೆ ಕಛೇರಿಯು ನೋಟೀಸ್-1 ದಿನಾಂಕ:29.01.2009ರ ಮೂಲಕ ನಿಮ್ಮ ಸ್ವಂತ ವಿಳಾಸಕ್ಕೆ ಕಳುಹಿಸಲಾಗಿತ್ತು. ಅಲ್ಲದೆ ಅನಧಿಕೃತ ಗೈರು ಹಾಜರಿಯನ್ನು ಕಛೇರಿಯು ದಿನಾಂಕ:26.02.2009ರ ಆದೇಶದಲ್ಲಿ ನಿಮ್ಮ ಗೈರು ಹಾಜರಿ ದಿನಾಂಕ:16.09.2008 ರಿಂದ 04.11.2008ರವರೆಗೆ "ಅನಧಿಕೃತ ಗೈರುಹಾಜರಿ ಎಂದು" ಪರಿಗಣಿಸಿ, ದಂಡನೆ ವಿಧಿಸಿ, ಖಾಯಂ ಆಗಿ ಮೂರು ವಾರ್ಷಿಕ ಬಡ್ತಿಗಳನ್ನು ತಡೆಹಿಡಿದು ನಿಮ್ಮ ಸೇವಾ ಪುಸ್ತಕದಲ್ಲಿ ದಾಖಲಿಸಿ, ನಿಮಗೂ ಸಹ ಮಾಹಿತಿ ನೀಡಲಾಗಿತ್ತು. ಆದಾಗ್ಯೂ ನೀವು ಈ ಕಛೇರಿಯ ಯಾವುದೇ ನಿರ್ದೇಶನಗಳನ್ನು ಗಣನೆಗೆ ತೆಗೆದುಕೊಳ್ಳದೆ ಪುನಃ ದಿನಾಂಕ:13.01.2009 ರಿಂದ 31.01.2009 ಹಾಗೂ ದಿನಾಂಕ:07.02.2009 ರಿಂದ 25.02.2009ರವರೆಗೆ ಅನಧಿಕೃತ ಗೈರು ಹಾಜರಾಗಿದ್ದು, ನೋಟೀಸ್-2 ದಿನಾಂಕ:26/28.03.2009ರಲ್ಲಿ ನೊಂದಾಯಿಸಿದ ಅಂಚೆ ಮುಖಾಂತರ ವಾಸಸ್ಥಳ ದಾವಣಗೆರೆ, ಸ್ವವಿಳಾಸ ಧಾರವಾಡ ಮತ್ತು ಗದಗ, ವಿಳಾಸಗಳಿಗೆ ಕಳುಹಿಸಲಾದ ಪತ್ರಗಳು ಈ ಕಛೇರಿಗೆ ಹಿಂತಿರುಗಿ ಬಂದಿರುತ್ತವೆ. (ಇದನ್ನು ದಾಖಲೆ-3 ಎಂದು ಗುರುತಿಸಿದೆ).

ಕಛೇರಿಯ ನೋಟೀಸ್-3 ದಿನಾಂಕ:01.06.2009ರಲ್ಲಿ ಪುನಃ ನೀವು 16.03.2009 ರಿಂದ 01.06.2009 (ಮುಂದುವರೆದಿದೆ) ಗೈರು ಹಾಜರಾದ ಬಗ್ಗೆ ದಾವಣಗೆರೆ, ಧಾರವಾಡ ಮತ್ತು ಗದಗ ವಿಳಾಸಗಳಿಗೆ ಕಳುಹಿಸಿದ

ನೊಂದಾಯಿಸಿದ ಅಂಚೆ ಸ್ವೀಕೃತಿಯೊಂದಿಗೆ ನೋಟೀಸ್ ಕಳುಹಿಸಿ ನಿಮ್ಮನ್ನು ಸೇವೆಯಿಂದ ತೆಗೆದುಹಾಕುವ ದಂಡನೆಯನ್ನು ವಿಧಿಸುವ ಬಗ್ಗೆ ಸ್ಪಷ್ಟಪಡಿಸಲಾಗಿತ್ತು. ಇದರಲ್ಲಿ ಧಾರವಾಡಕ್ಕೆ ಕಳುಹಿಸಲಾಗಿದ್ದ ಪತ್ರವನ್ನು ಮಾತ್ರ ದಿನಾಂಕ:05.06.2009ರಲ್ಲಿ ಸ್ವೀಕರಿಸಿದ್ದು, ದಿನಾಂಕ:16.03.2009 ರಿಂದ ದಿನಾಂಕ:07.06.2009 ರವರೆಗೆ ಹಾಗೂ ದಿನಾಂಕ:11.06.2009 ರಿಂದ 23.07.2009 ರವರೆಗೆ (ಮುಂದುವರೆದಿದೆ) ಪುನಃ ಅನಧಿಕೃತ ಗೈರು ಹಾಜರಿಯಲ್ಲೇ ಉಳಿದಿರುತ್ತೀರಿ, ನೀವು ಈ ಕಛೇರಿಯ ಆದೇಶಗಳನ್ನು ಸಂಪೂರ್ಣ ನಿರ್ಲಕ್ಷಿಸಿ, ಕರ್ತವ್ಯ ಲೋಪ ಮಾಡಿರುವುದಲ್ಲದೇ ಕಛೇರಿ ಆದೇಶಗಳ ಉಲ್ಲಂಘನೆ ನಿರ್ಲಕ್ಷತನ ತೋರಿರುವುದು ಸ್ಪಷ್ಟವಾಗಿರುತ್ತದೆ. ಹಾಗೂ ಸಾಬೀತುಪಡಿಸಿದ್ದು ನಿಮ್ಮ ಉದಾಸೀನತೆ, ನಿರ್ಲಕ್ಷ ಮನೋಭಾವ ಕಛೇರಿಯ ಆದೇಶಗಳ ಉಲ್ಲಂಘನೆ, ಕರ್ತವ್ಯಲೋಪ, ಹಾಗೂ ಅನಧಿಕೃತ ಗೈರು ಹಾಜರಿ ಲಕ್ಷಣಗಳು ನಿಯಮಗಳ ವಿರುದ್ಧವಾಗಿರುತ್ತವೆ. ತನ್ನಿಮಿತ್ತ ಈ ಆದೇಶ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ ಶ್ರೀ ಎಂ.ಸಿ.ಗಣಾಚಾರಿ 'ಡಿ' ದರ್ಜೆ ನೌಕರರು, ಜಂಟಿ ಕೃಷಿ ನಿರ್ದೇಶಕರ ಕಛೇರಿ, ದಾವಣಗೆರೆ ಇವರು ಈ ಕಛೇರಿಯ ಕರ್ತವ್ಯಗಳಿಗೆ ದಿನಾಂಕ:16.03.2009 ರಿಂದ07.06.2009 (ಎರಡು ದಿನಗಳು ಸೇರಿ) ಹಾಗೂ ದಿನಾಂಕ:11.06.2009 ರಿಂದ 23.07.2009ರವರೆಗೆ (ಮುಂದುವರೆದಿದೆ) ಅನಧಿಕೃತ ಗೈರು ಹಾಜರಿ ಆಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳ-1957ರ ನಿಯಮ 8(VIII)ರ ಹಾಗೂ ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ 18 ಸೇಇವಿ 2001 ದಿನಾಂಕ:14.09.2001ರ ಕ್ರಮ ಸಂಖ್ಯೆ (2)ರ ನಿಯಮದ ವ್ಯಾಪ್ತಿಯಲ್ಲಿ ಕೆಳಗೆ ಸಹಿ ಮಾಡಿದವರಿಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಸಿ. ಗಣಾಚಾರಿ 'ಡಿ' ದರ್ಜೆ ನೌಕರರು ಇವರ ಅನಧಿಕೃತ ಗೈರು ಹಾಜರಿ ಸಾಬೀತು ಆಗಿರುವುದರಿಂದ ಡಾ: ಆರ್.ಜಿ. ಗೊಲ್ಲರ್, ಜಂಟಿ ಕೃಷಿ ನಿರ್ದೇಶಕರು, ದಾವಣಗೆರೆ ಆದ ನಾನು ಮೇಲ್ಕಾಣಿಸಿದ ನೌಕರರನ್ನು ದಿನಾಂಕ:31.07.2009ರ ಅಪರಾಹ್ನದಿಂದ ಜಾರಿಗೆ ಬರುವಂತೆ "ಸೇವೆಯಿಂದ ವಜಾ ಮಾಡಿ" ಆದೇಶಿಸಿರುತ್ತೇನೆ.

ಶ್ರೀ ಎಂ.ಸಿ. ಗಣಾಚಾರಿ 'ಡಿ' ದರ್ಜೆ ನೌಕರರು ಇವರು ಸೇವೆಯಿಂದ ವಜಾಗೊಂಡ ಬಗ್ಗೆ ಈ ಕಛೇರಿಯಲ್ಲಿರುವ ನೌಕರರ ಸೇವಾ ಪುಸ್ತಕದಲ್ಲಿ ದಾಖಲಿಸಿ ದೃಢೀಕರಿಸಿರುತ್ತೇನೆ.

ಡಾ: ಆರ್.ಜಿ. ಗೊಲ್ಲರ್
ಜಂಟಿ ಕೃಷಿ ನಿರ್ದೇಶಕರು,
ದಾವಣಗೆರೆ.

ಪಿ.ಆರ್.742

ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಕೊಪ್ಪಳ ಜಿಲ್ಲೆ, ಕೊಪ್ಪಳ

ಸಂಖ್ಯೆ: ಕಾಅಕೊ/ಕಾನಪ/ಮ.ಪ್ರ/ಸಂಖ್ಯೆ: 119, 2009

ಅರ್ಜಿದಾರರು:
1) ಶ್ರೀಮತಿ ಪಾರ್ವತಿ, ಗಂ:ದಿ: ಕನಕಪ್ಪ ಚಿಟ್ಟನಾಳ.
ವಯಸ್ಸು: 26 ವರ್ಷ, ಉ:ಕೂಲಿ,
ಸಾ:ನಗಲಾಪುರ, ತಾ: ಲಿಂಗಸೂಗುರ,
ಜಿ:ರಾಯಚೂರು, ಹಾಲಿವಸ್ತಿ: ತಳುವಗೇರಾ
ತಾ:ಕುಷ್ಟಗಿ, ಜಿ:ಕೊಪ್ಪಳ.

ವಿರುದ್ಧ

ಪ್ರತಿವಾದಿಗಳು:
1) ಶ್ರೀ ಜಗದೀಶ ಅಲಿಯಾಸ್ ಜಗದೀಶ್ ನಾಯ್ಡು ಅಲಿಯಾಸ್ ಜಗದೀಶ್‌ಕುಮಾರ್ ಪಿ. ತ: ಬುಡ್ಡಪ್ಪ, ವಯ:32 ವರ್ಷ, ಉ:ಕಂಟ್ರಾಕ್ಟರ್, ಮತ್ತು ಮಾಲೀಕರು ಮೆ:ಧೃವ ಅಶೋಸಿಯೇಟ್ಸ್, ನಂ.25/ಎ, ಹೆಚ್.ಎಂ.ಟಿ. ಮೈನ್ ರೋಡ್ ಮತ್ತಿಕೆರೆ, ಪೋ: ಬೆಂಗಳೂರು-54.

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಶ್ರೀ ಕನಕಪ್ಪ ಎಂಬುವವರು ಪ್ರತಿವಾದಿಯವರಲ್ಲಿ ಕೆಲಸ ನಿರ್ವಹಿಸುತ್ತಿರುವಾಗ ದಿನಾಂಕ:09.03.2009 ರಂದು ಕೆಲಸದಿಂದುಂಟಾದ ಅಪಘಾತದಿಂದ ಮೃತ/ ಗಾಯ/ ಹೊಂದಿರುತ್ತಾರೆ ಎಂದು ವಿವರಿಸುತ್ತಾ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923ರ ಅಡಿಯಲ್ಲಿ ಪರಿಹಾರ ಧನಕ್ಕಾಗಿ ಕೋರಿ ಅವಲಂಬಿತ ವಾರಸುದಾರರೆಂದು ಹೇಳಿಕೊಂಡು ಮೃತ ಕನಕಪ್ಪ ರಾದ ಶ್ರೀ:ಶ್ರೀಮತಿ ಪಾರ್ವತಿ W/o ಕನಕಪ್ಪ ಎಂಬುವವರು ಈ ನ್ಯಾಯಾಲಯಕ್ಕೆ ಅರ್ಜಿಯನ್ನ ಸಲ್ಲಿಸಿರುತ್ತಾರೆ.

ಆದ ಕಾರಣ ಈ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ತಾವೇನಾದರೂ ಅಥವಾ ತಾವೂ ಸಹ ಮೃತ/ ಗಾಯ ಹೊಂದಿದವರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ಸೂಚನಾಫಲಕದಲ್ಲಿ ಪ್ರದರ್ಶಿಸಿದ ಅಥವಾ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ಅಥವಾ ಸ್ಥಳೀಯ ದಿನ ಪತ್ರಿಕೆಯಲ್ಲಿ ಪ್ರಕಟಗೊಂಡ 30 ದಿನಗಳೊಳಗಾಗಿ ಆಕ್ಷೇಪಣೆ ಅಥವಾ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಮತ್ತು ಸದರಿ

ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಅಥವಾ ಅರ್ಜಿ ಬಾರದಿದ್ದಲ್ಲಿ ಸದರಿ ಅವಧಿ ಮುಗಿದ ನಂತರ ಮೇಲ್ಕಾಣಿಸಿದ ಅರ್ಜಿದಾರರ ಅರ್ಜಿಯನ್ನೇ ಮುಂದಿನ ವಿಚಾರಣೆಗಾಗಿ ತೆಗೆದುಕೊಳ್ಳಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಯಪಡಿಸಲಾಗಿದೆ.

ಜಿಲ್ಲಾ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಹಾಗೂ
ಕಾರ್ಮಿಕ ಅಧಿಕಾರಿ, ಕೊಪ್ಪಳ ಜಿಲ್ಲೆ, ಕೊಪ್ಪಳ.

ಪಿ.ಆರ್.841

ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ, (ಆಡಳಿತ), ಮೌ.ತೆ-3, ಬೆಂಗಳೂರು

ಸಂಖ್ಯೆ: ಜಂಆ(ಆ)/ ಡಿವಿಓ-3/ 09-10, ದಿನಾಂಕ:29ನೇ ಆಗಸ್ಟ್, 2008

ಕಳೆದುಕೊಂಡಿರುವ 'ಸಿ' ನಮೂನೆಗಳ ಬಗ್ಗೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ ಮೆ: ಕರೀಂ ಸ್ಟೀಲ್, ನಂ.15, ಎಂ.ಆರ್.ಆರ್. ಲೇನ್, ಬೆಂಗಳೂರು, ಟಿನ್ ಸಂಖ್ಯೆ: 29890093079 ಇವರು ಮೆ: ಅಪೆಕ್ಸ್ ಇಂಜಿನಿಯರಿಂಗ್ ಸರ್ವೀಸಸ್, ನಂ.212, ಖರ್ಬಂಡ ಪಾರ್ಕ್, ದ್ವಾರಕಾ ಹೋಟೇಲ್, ನಾಸಿಕ್-ಪೂನಾ ರಸ್ತೆ, ನಾಸಿಕ್-422011 ರವರು ಮಹಾರಾಷ್ಟ್ರ ರಾಜ್ಯದ ಮಾರಾಟ ತೆರಿಗೆ ಇಲಾಖೆಯಿಂದ ನೀಡಿದ್ದ ಸಿ ನಮೂನೆ ಸಂಖ್ಯೆ: MH07/0184547 ದಿನಾಂಕ:10.05.2007 ರೂ.1,27,265-00 ಮತ್ತು MH07/0510664 ದಿನಾಂಕ:09.07.2007 ರೂ.2,31,761-00 ಎಂಬ ಎರಡು ಹಾಳೆಗಳನ್ನು ಮೆ: ಕರೀಂ ಸ್ಟೀಲ್, ಟಿನ್ ಸಂಖ್ಯೆ:29890093079 ರವರು ಕಳೆದುಕೊಂಡಿರುತ್ತಾರೆ. ಕೇಂ.ಮಾ.ತೆ. ಕಾಯ್ದೆಯನ್ವಯ ಮೇಲೆ ತಿಳಿಸಿರುವ ಸಿ-ನಮೂನೆಗಳನ್ನು ರದ್ದುಗೊಳಿಸಲಾಗಿದೆ.

ಆದುದರಿಂದ, ಈ ಮೇಲ್ಕಂಡ ನಮೂನೆ-'ಸಿ' ಹಾಳೆಗಳನ್ನು ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಉಪಯೋಗಿಸಿದಲ್ಲಿ ಸರ್ಕಾರದ ರಾಜಸ್ವಕ್ಕೆ ಉಂಟಾಗುವ ನಷ್ಟಕ್ಕೆ ವೈಯುಕ್ತಿಕವಾಗಿ ಅವರೇ ಜವಾಬ್ದಾರರಾಗಿರುತ್ತಾರೆ.

ಬೆಂಗಳೂರು
ದಿನಾಂಕ:29.08.2009

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ಡಿ.ವಿ.ಓ-3, ಬೆಂಗಳೂರು.

ಪಿ.ಆರ್.842

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್/318/2008-09, ದಿನಾಂಕ:9ನೇ ಜುಲೈ, 2009

ಉಪಸ್ಥಿತರು:ಡಾ॥ ವೈ.ಮಂಜುನಾಥ್,

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು **ವಿರುದ್ಧ** **ಪ್ರತಿವಾದಿ / ಆರೋಪಿ**

ಆರಕ್ಷಕ ಉಪ ನಿರೀಕ್ಷಕರು,
ನಂಜನಗೂಡು ಗ್ರಾಮಾಂತರ ಠಾಣೆ,
ನಂಜನಗೂಡು.

1) ನಾರಾಯಣ ಬಿನ್ ತಿಮ್ಮೇಗೌಡ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:07.11.2008 ರಂದು ಬೆಳಿಗ್ಗೆ 11:30 ಗಂಟೆಯ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ, ಇವರು ನಂಜನಗೂಡು ತಾಲ್ಲೂಕು, ನಂಜನಗೂಡು-ಮೈಸೂರು ರಸ್ತೆ, ಮಲ್ಲನ ಮೂಲೆ ತಿರುವಿನಲ್ಲಿ ಕೆಎ-09/ಡಬ್ಲ್ಯೂ-853 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಸ್ಪ್ಲೆಂಡರ್ ವಾಹನದಲ್ಲಿ ಅಕ್ರಮವಾಗಿ 17.280 ಲೀ. ಓರಿಜಿನಲ್ ಚಾಯ್ಸ್ ಮತ್ತು ವಿಂಡ್ಸರ್ ವಿಸ್ಕಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತು ಮಾಡಿ, ಮೇಲ್ಕಂಡ ವಾಹನ, ಆರೋಪಿ ಮತ್ತು ಮದ್ಯವನ್ನು ನಂಜನಗೂಡು ಗ್ರಾಮಾಂತರ ಠಾಣೆಯ ಆರಕ್ಷಕ ಉಪ ನಿರೀಕ್ಷಕರಿಗೆ ಹಾಜರುಪಡಿಸಿ, ಠಾಣಾ ಪ್ರಕರಣ ಸಂಖ್ಯೆ: 352/2008 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 14, ರೀತ್ಯಾ ಅಪರಾಧವಾಗಿದ್ದು, ಕಲಂ 32, 34ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿ, ಈ ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:14.11.2008 ರಂದು ಕೋರಿರುತ್ತಾರೆ. ಅಂತೆಯೇ ದಿನಾಂಕ:18.12.2008 ರಂದು ನಂಜನಗೂಡು ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಗಾಗಿ ಮೈಸೂರು (ಪೂರ್ವ) ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಈ ಪ್ರಾಧಿಕಾರದಿಂದ ದಿನಾಂಕ:12.01.2009ರಂದು ಪತ್ರ ಬರೆಯಲಾಗಿದ್ದು, ಇದಕ್ಕೆ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ. ಈ

ಪ್ರಕರಣದಲ್ಲಿ ಜಪ್ತುಗೊಳಿಸಲಾದ ಮಾದಕ ದ್ರವ್ಯಗಳ ಪೈಕಿ, ಮಾದರಿ ತೆಗೆಯಲಾದ ಮದ್ಯವನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ, ದಿನಾಂಕ:09.02.2009ರ ವರದಿಯಲ್ಲಿ ಆಲ್ಕೋಹಾಲ್ ಅಂಶ ಪತ್ತೆಯಾಗಿರುತ್ತದೆ. ಪ್ರಮಾಣ ಶೇಕಡ 42.49 ವಿ/ವಿ ಇರುವುದಾಗಿ ತಜ್ಞರ ವರದಿಯಿಂದ ದೃಢಪಟ್ಟಿರುತ್ತದೆ. ನಂಜನಗೂಡು ವಲಯ ಅಬಕಾರಿ ಉಪ ನಿರೀಕ್ಷಕರು ದಿನಾಂಕ: 22.05.2009 ರಂದು ವರದಿಯನ್ನು ಸಲ್ಲಿಸಿ, ವಶಪಡಿಸಿಕೊಂಡ 17.280 ಲೀ. (ಮಾದರಿಯನ್ನು ಹೊರತು ಪಡಿಸಿ) ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ವರದಿ ಮಾಡಿರುತ್ತಾರೆ. ಈ ಬಗ್ಗೆ ಮೈಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರು ಶಿಫಾರಸ್ಸು ಮಾಡಿರುತ್ತಾರೆ. ಸದರಿ ವಾಹನಕ್ಕೆ ಸಂಬಂಧಪಟ್ಟ ಆರೋಪಿಗಳಾಗಲೀ/ವಾಹನ ಮಾಲೀಕರಾಗಲೀ ವಾಹನ ಬಿಡುಗಡೆಗಾಗಿ ಇದುವರೆವಿಗೂ ಯಾವುದೇ ಪ್ರಯತ್ನ ನಡೆದಿರುವುದಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕ ಅಭಕಾರಿ ಕಾಯಿದೆ ಕಲಂ 32, 34ರ ಅಡಿಯಲ್ಲಿ ಪತ್ತೆ ಹಚ್ಚುವ ಅಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಗಳು ತಮ್ಮ ಮೇಲೆ ಇರತಕ್ಕಂತ ಜವಾಬ್ದಾರಿ / ಹೊಣೆಗಾರಿಕೆಯನ್ನು ಇದುವರೆವಿಗೂ ಪ್ರಾಧಿಕಾರದ ಮುಂದೆ ಹಾಜರಾಗಿ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (8) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/318/2008-09, ದಿನಾಂಕ:9ನೇ ಜುಲೈ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) (2) ರಡಿಯಲ್ಲಿ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ಉಪ ನಿರೀಕ್ಷಕರು, ನಂಜನಗೂಡು ಗ್ರಾಮಾಂತರ ಠಾಣೆ, ನಂಜನಗೂಡು ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ: 352/2008, ದಿನಾಂಕ:07.11.2008 ರಂದು ವಶಪಡಿಸಿಕೊಂಡ ಕೆಎ-09/ಡಬ್ಲ್ಯೂ-853 ನೋಂದಣಿ ಸಂಖ್ಯೆಯ ಹಿರೋ ಹೋಂಡಾ ಸ್ಪ್ಲೆಂಡರ್ ವಾಹನ ಮತ್ತು 17.280 ಲೀ. ಮದ್ಯವನ್ನು (ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಜುಲೈ ತಿಂಗಳ 9ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ. ಮಂಜುನಾಥ್
ಡೆಪ್ಯೂಟಿ ಕಮೀಷನರ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.940

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್/258/2008-09, ದಿನಾಂಕ:9ನೇ ಜುಲೈ, 2009

ಉಪಸ್ಥಿತರು:ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು	**ವಿರುದ್ಧ**	**ಪ್ರತಿವಾದಿ / ಆರೋಪಿ**
ಆರಕ್ಷಕ ಉಪ ನಿರೀಕ್ಷಕರು, ನಂಜನಗೂಡು ಗ್ರಾಮಾಂತರ ಠಾಣೆ, ನಂಜನಗೂಡು.		ಸಿದ್ದನಾಯಕ ಬಿನ್ ಚಿಕ್ಕನಾಯಕ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:11.10.2008 ರಂದು ಸಂಜೆ 05:00 ಗಂಟೆಯ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ, ಇವರು ನಂಜನಗೂಡು ತಾಲ್ಲೂಕು, ನಂಜನಗೂಡು-ಗುಂಡ್ಲುಪೇಟೆ ರಸ್ತೆ, ಉಸ್ಸೂರು

ನಂಜಯ್ಯನ ಕಟ್ಟೆ ಪಾಲ' ಬಳಿ, ಸಿಎಂಎಂ-6516 ನೋಂದಣಿ ಸಂಖ್ಯೆಯ ಟಿ.ವಿ.ಎಸ್.ಎಕ್ಸೆಲ್ ವಾಹನದಲ್ಲಿ ಅಕ್ರಮವಾಗಿ 7.020 ಲೀ. ಒರಿಜಿನಲ್ ಚಾಯ್ಸ್ ಮತ್ತು ವಿಂಡ್ಸರ್ ವಿಸ್ಕಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತು ಮಾಡಿ, ಮೇಲ್ಕಂಡ ವಾಹನ, ಆರೋಪಿ ಮತ್ತು ಮದ್ಯವನ್ನು ನಂಜನಗೂಡು ಗ್ರಾಮಾಂತರ ಠಾಣೆಯ ಆರಕ್ಷಕ ಉಪ ನಿರೀಕ್ಷಕರಿಗೆ ಹಾಜರುಪಡಿಸಿ, ಠಾಣಾ ಪ್ರಕರಣ ಸಂಖ್ಯೆ: 331/2008 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 14, ರೀತ್ಯಾ ಅಪರಾಧವಾಗಿದ್ದು, ಕಲಂ 32, 34ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿ, ಈ ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 22.10.2008 ರಂದು ಕೋರಿರುತ್ತಾರೆ. ಅಂತೆಯೇ ದಿನಾಂಕ:05.11.2008 ರಂದು ನಂಜನಗೂಡು ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಗಾಗಿ ಮೈಸೂರು (ಪೂರ್ವ) ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಈ ಪ್ರಾಧಿಕಾರದಿಂದ ದಿನಾಂಕ:05.11.2008ರಂದು ಪತ್ರ ಬರೆಯಲಾಗಿದ್ದು, ಇದಕ್ಕೆ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ. ಸದರಿ ವಾಹನಕ್ಕೆ ಸಂಬಂಧಪಟ್ಟ ಆರೋಪಿಗಳಾಗಲೀ/ವಾಹನ ಮಾಲೀಕರಾಗಲೀ ವಾಹನ ಬಿಡುಗಡೆಗಾಗಿ ಇದುವರೆವಿಗೂ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕ ಅಬಕಾರಿ ಕಾಯಿದೆ ಕಲಂ 32, 34ರ ಅಡಿಯಲ್ಲಿ ಪತ್ತೆ ಹಚ್ಚುವ ಅಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಗಳು ತಮ್ಮ ಮೇಲೆ ಇರತಕ್ಕಂತ ಜವಾಬ್ದಾರಿ / ಹೊಣೆಗಾರಿಕೆಯನ್ನು ಇದುವರೆವಿಗೂ ಪ್ರಾಧಿಕಾರದ ಮುಂದೆ ಹಾಜರಾಗಿ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (9) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/258/2008-09, ದಿನಾಂಕ:9ನೇ ಜುಲೈ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) (2) ರಡಿಯಲ್ಲಿ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ಉಪ ನಿರೀಕ್ಷಕರು, ನಂಜನಗೂಡು ಗ್ರಾಮಾಂತರ ಠಾಣೆ, ನಂಜನಗೂಡು ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ: 331/2008, ದಿನಾಂಕ:11.10.2008 ರಂದು ವಶಪಡಿಸಿಕೊಂಡ ಸಿಎಂಎಂ-6516 ನೋಂದಣಿ ಸಂಖ್ಯೆಯ ಟಿ.ವಿ.ಎಸ್.ಎಕ್ಸಲ್ ವಾಹನ ಮತ್ತು 7.020 ಲೀ. ಮದ್ಯವನ್ನು (ಮಾದರಿ ಹೊರತುಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಜುಲೈ ತಿಂಗಳ 9ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ|| ವೈ. ಮಂಜುನಾಥ್
ಡೆಪ್ಯೂಟಿ ಕಮೀಷನರ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.937

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್/124/2008-09, ದಿನಾಂಕ:9ನೇ ಜುಲೈ, 2009

ಉಪಸ್ಥಿತರು:ಡಾ|| ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	**ವಿರುದ್ಧ**	**ಪ್ರತಿವಾದಿ / ಆರೋಪಿ**
ಆರಕ್ಷಕ ಉಪ ನಿರೀಕ್ಷಕರು, ವಿಜಯನಗರ ಪೊಲೀಸ್ ಠಾಣೆ, ಮೈಸೂರು.		ಸಾತಗಳ್ಳಿ ನಾರಾಯಣ ಮತ್ತು ಇತರರು

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:09.09.2008 ರಂದು ಸಂಜೆ 5:00 ಗಂಟೆಯ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ನಗರ, ಇವರು ಮೈಸೂರು ತಾಲ್ಲೂಕು, ಕೂರ್ಗಳ್ಳಿ / ಬೆಳವಾಡಿ ಗ್ರಾಮದ ಚಿಕನ್ ಮಾದಪ್ಪ ರವರ ಮನೆಯ ಮುಂಭಾಗವಿರುವ ಮನೆ ನಂ.503, ಕರುಣಾಲಯ ಮನೆಯಲ್ಲಿ ಅಕ್ರಮವಾಗಿ 8 ಕ್ಯಾನ್‌ಗಳು, 388.800 ಲೀ. ನಕಲಿ ಮದ್ಯ, ವಿವಿಧ ಕಂಪನಿಗೆ ಸೇರಿದ ನಕಲಿ ಸ್ಟಿಕ್ಕರ್ಸ್‌ಗಳು, ಮುಚ್ಚಳಗಳು ಹಾಗೂ 35 ಲೀ. ಸಾಮರ್ಥ್ಯದ 20 ಪ್ಲಾಸ್ಟಿಕ್ ಕ್ಯಾನ್‌ಗಳಲ್ಲಿ ಒಟ್ಟು 700 ಲೀ. ಬ್ಲೆಂಡ್ ಮದ್ಯವನ್ನು ದಾಸ್ತಾನು ಮಾಡಿದ್ದುದು ಅಲ್ಲದೇ ಸಿಆರ್‌ಎಲ್-9185 ನೋಂದಣಿ ಸಂಖ್ಯೆ ಮಾರುತಿ ಕಾರ್‌ನಲ್ಲಿ 17.180 ಲೀ. ಮದ್ಯವನ್ನು ಹೊಂದಿದ್ದು, ಅಲ್ಲದೇ ಇದರ ಪಕ್ಕ ಕೆಎ-09/ಜೆ-3362 ನೋಂದಣಿ ಸಂಖ್ಯೆಯ ಬಜಾಜ್ ಸ್ಕೂಟರ್ ವಾಹನ ನಿಲ್ಲಿಸಿದ್ದು, ಇವುಗಳನ್ನು ಹೊಂದಿ ಸಾಗಾಣಿಕೆ / ದಾಸ್ತಾನು ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಆರೋಪಿ ಮತ್ತು ಅಬಕಾರಿ ವಸ್ತುವನ್ನು ಜಪ್ತು ಮಾಡಿ, ಮೇಲ್ಕಂಡ ವಾಹನ, ಆರೋಪಿ ಮತ್ತು ಮದ್ಯವನ್ನು ಕೆ.ಆರ್. ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರಿಗೆ ಹಾಜರುಪಡಿಸಿ, ಮುಂದಿನ ಕ್ರಮ ಜರುಗಿಸಲು ಕೋರಿರುವ ಮೇರೆಗೆ ಮೊಕದ್ದಮೆ ಸಂಖ್ಯೆ: 210/2008 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 13(ಎಫ್), 34, 36, 38(ಎ)ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಪ್ರಕರಣ ದಾಖಲಿಸಿ, ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿ, ಈ ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:12.09.2008 ರಂದು ಕೋರಿರುತ್ತಾರೆ. ಅಂತೆಯೇ ಅದೇ ದಿನದಂದು ಮೈಸೂರು ವಲಯ ನಂ.2ರ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಗಾಗಿ ಹಾಸನ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಈ ಪ್ರಾಧಿಕಾರದಿಂದ ದಿನಾಂಕ:12.09.2008 ಮತ್ತು 27.11.2008 ರಂದು ಪತ್ರ ಬರೆಯಲಾಗಿದ್ದು, ಇದಕ್ಕೆ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ. ಸದರಿ ವಾಹನಗಳಿಗೆ ಸಂಬಂಧಪಟ್ಟ ಆರೋಪಿಗಳಾಗಲೀ/ವಾಹನ ಮಾಲೀಕರಾಗಲೀ ವಾಹನ ಬಿಡುಗಡೆಗಾಗಿ ಇದುವರೆವಿಗೂ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕರ್ನಾಟಕ ಅಬಕಾರಿ ಕಾಯಿದೆ ಕಲಂ 34, 36, 38(ಎ)ರ ಅಡಿಯಲ್ಲಿ ಪತ್ತೆ ಹಚ್ಚುವ ಅಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಗಳು ತಮ್ಮ ಮೇಲೆ ಇರತಕ್ಕಂತ ಜವಾಬ್ದಾರಿ / ಹೊಣೆಗಾರಿಕೆಯನ್ನು ಇದುವರೆವಿಗೂ ಪ್ರಾಧಿಕಾರದ ಮುಂದೆ ಹಾಜರಾಗಿ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (9) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/124/2008-09, ದಿನಾಂಕ:9ನೇ ಜುಲೈ, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) (2) ರಡಿಯಲ್ಲಿ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ಉಪ ನಿರೀಕ್ಷಕರು, ಕೆ.ಆರ್. ಪೊಲೀಸ್ ಠಾಣೆ, ಮೈಸೂರು ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ: 210/2008, ದಿನಾಂಕ:09.09.2008 ರಂದು ವಶಪಡಿಸಿಕೊಂಡ ಸಿಆರ್‌ಎಲ್-9185 ನೋಂದಣಿ ಸಂಖ್ಯೆ ಮಾರುತಿ ಕಾರ್ ಮತ್ತು ಕೆಎ-09/ಜೆ-3362 ನೋಂದಣಿ ಸಂಖ್ಯೆಯ ಬಜಾಜ್ ಚೇತಕ್ ಸ್ಕೂಟರ್ ವಾಹನವನ್ನು (ಈ ಪ್ರಕರಣದಲ್ಲಿ ಜಪ್ತಾದ ಮಾದಕ ದ್ರವ್ಯಗಳನ್ನು ಪ್ರತ್ಯೇಕ ಆದೇಶದಲ್ಲಿ ಮುಟ್ಟುಗೋಲು ಹಾಕಿ ಕೊಂಡು ಆದೇಶ ಹೊರಡಿಸಲಾಗಿದೆ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಜುಲೈ ತಿಂಗಳ 9ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ. ಮಂಜುನಾಥ್
ಡೆಪ್ಯೂಟಿ ಕಮೀಷನರ್ ಎಕ್ಸೈಸ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.936

REVENUE DEPARTMENT

PROPERTY ATTACHMENT NOTIFICATION

No.RD 52 AQB 2009 (ii), Bangalore, Dated:16th September, 2009

Whereas it has come to the notice of the Government that the Financial Establishment viz; M/s. Investech and Investech Builders and Developers Private Limited is involved in the fraudulent transactions,

Whereas, it has come to the notice of the Government that the above mentioned Financial Establishment has failed to return the deposits after maturity or on demand by the depositors and to pay interest or other assured benefits or to provide the service against such deposits,

Whereas, it has further come to the notice of the Government that the Board of Directors and other persons connected with the above mentioned Financial Establishment has acquired the landed and other immovable properties from and out of the deposits collected from the depositors,

Wherefore, it is expedient that the above mentioned Financial Establishment has acted detrimental to the interest of the depositors with an intention to defraud them and it has become necessary to protect the interest of the depositors of aforesaid financial establishment,

Now therefore, Government in exercise of the powers conferred under Sub-section (2) of Section (3) of the Karnataka Protection of interest of Depositors in financial establishments Act, 2004 attach the money and the properties belonging to M/s. Investech and Investech Builders and Developers Private Limited shown in the Annexure-I and II respectively,

Hence, all these properties and monies acquired by M/s. Investech and Investech Builders and Developers Private Limited have been attached and is declared that said monies and properties shall on publication of this order in the official gazette, shall forthwith, vest with the Competent Authority, who has been appointed by the Government, pending further orders from the special Court.

The earlier Notifications issued in this regard are hereby withdrawn.

By Order and in the name of the Governor of Karnataka,

M. Venkateshmurthy

Under Secretary to Government,

Revenue Department (LAQ-2).

ANNEXURE – I

SCHEDULE – I

Properties acquired by M/s Investech & Investech Builders & Developers Pvt. Ltd. from and our of the deposit collected fraudulently from the public

District : Bangalore

Taluk : BANGALORE SOUTH

Sl. No.	Description of the Property & Location, Khata No./ Assessment No/ Survey No.	Boundaries	Description of the Property / House No. / Plot No. and Present Holder of the Property	Approximate value Assessed
1.	Bangalore Mahanagara Palike, Ward No. 56, B.S.K. 2nd Stage, 9th Main Road, Site No. 1889, vacant site. Measurement - 60' x 90'	E : Road, W: Site No. 1884 N : Site No. 1890 S : Site No. 1888	B.N.G (U) J.N.R. 1196 /2005 – 06 dated 03.06.2005 Sanjaya Chakravarthi, C/o Chakravarthi Complex, Sajjan Rao Circle, Bangalore – 4	Approximate value per sqft Rs. 5000/- Total Amount Rs. 2.70 crores

Sl. No.	Description of the Property & Location, Khata No./ Assessment No/ Survey No.	Boundaries	Description of the Property / House No. / Plot No. and Present Holder of the Property	Approximate value Assessed
2.	Bangalore Mahanagara Palike, Ward No. 41, Old Site No. 51, New Corporation No. 51/1, 19th Main Road, 12th Cross Road, Gajendra Nagar, Avalahalli, dwelling house Measurement : :15' x 40' Old Sy No. 423/2, Katha No. 43/2	E :House No. 50, W :House No. 51 N : Road S : House No. 36	K.N.G.R. 6239 /2005 – 06 dated 04.06.2005 N. Suresh Krishnamurthy aged about 50, S/o Late Sri N. S. Krishnamurthy Reg. 377, 1st Floor, 7th Cross Road, 2nd Main Road, (Near Shanthi Sagar Hotel), Airport Road, Bangalore – 77	Approximate value per sqft Rs. 4500/- Total Amount Rs. 27,00,000/-
3.	Bangalore Mahanagara Palike, Ward No. 41, Old Site No. 50, New Corporation No. 50, 19th Main Road, 12th Cross Road, Gajendra Nagar, Avalahalli, dwelling house. Measurement : :30' x 45' 3 floors house. Katha No. 43/2	E : House No. 49, W : House No. 51 N : Road S : House No. 37	K.N.G.R. 6245 / 2005 – 06 dated 04.06.2005 N. Suresh Krishnamurthy aged about 50, S/o Late Sri N. S. Krishnamurthy Reg. 377, 1st Floor, 7th Cross Road, 2nd Main Road, (Near Shanthi Sagar Hotel), Airport Road, Bangalore – 77	Approximate value per sqft Rs. 6000/- Total Amount Rs. 81,00,000/-
4.	Bangalore Mahanagara Palike, Ward No. 41, Old Site No. 55, New Corporation No. 55, 19th Main Road, 12th Cross Road, Gajendra Nagar, Avlahalli, half built house. Measurement : :30' x 40' Old Sy No. 43/2, Katha No. 43/2	E :House No. 56, W :House No. 54 N : Old Building S : Road	K.N.G.R. 6237 / 2005 – 06 dated 04.06.2005 N. Suresh Krishnamurthy aged about 50, S/o Late Sri N. S. Krishnamurthy Reg. 377, 1st Floor, 7th Cross Road, 2nd Main Road, (Near Shanthi Sagar Hotel), Airport Road, Bangalore – 77	Approximate value per sqft Rs. 4500/- Total Amount Rs. 54,00,000/-
5.	H.S.R. Layout, 1st Sector, Site No. 28, Measurement : :30' x 40' Katha Certificate No./BDA/AOE/28-H.S.R.1/04-2005.	E : Road W : Site No. 37 N : Site No. 29 S : Site No. 27	B.N.G. (U) B.L.R. (S) 20977 / 2005 – 06 dated 27.03.2006 Smt M. Saraswathamma aged about 78, W/o Sri Makum Sathya Narayan Shetty "Sri Krishna" 4th Cross, K.R. Extension, Tumkur.	Approximate value per sqft Rs. 10000/- Total Amount Rs. 1.20 crores

Sl. No.	Description of the Property & Location, Khata No./ Assessment No/ Survey No.	Boundaries	Description of the Property / House No. / Plot No. and Present Holder of the Property	Approximate value Assessed
6	H.S.R. Layout, 6th Sector, Site No. 178/A, Measurement : :60' x 40' Katha Certificate No./BDA/AOE/28-H.S.R.1/04-2005.	E : Site No. 178 W : Site No. 179 N : Road S : Site No. 183	B.N.G. (U) B.L.R. (S) 7976 / 2006 – 07 dated 28.06.2006 Smt S. Savitha aged about 29, W/o Sri Rajesh No. 910, 4th Cross, B.T.M. 2nd Stage, Bangalore – 76	Approximate value per sqft Rs. 10000/- Total Amount Rs. 2.40 crores
7.	H.S.R. Layout, 7th Sector, Site No. 1671/A, Measurement : :60' x 40'	E : 80 feet road W : Site No. 1658/A N : Site No. 1672/A S : Site No. 1670/A	B.N.G. (U) B.L.R. (S) 17398 / 2006 – 07 dated 29.09.2006 Smt Pallavi Om Prakash, aged about 45, W/o Sri Om Prakash, "Jagruthi", No. 4, 'C' Service Road, 14th Cross, 1st Main Road, 5th Block, 6th Sector, H.S.R. Layout, Bangalore - 31	Approximate value per sqft Rs. 12500/- Total Amount Rs. 3.00 crores
8.	Hosakerehalli Grama Sy No. 101, 103, 104, 105, 106, Viswa Barathi House Building Co Operative Society Ltd. Bangalore Mahanagara Palike, Ward No. 54, 4th Phase, Girinagar, Site No. 1051, Measurement : 30' x 50'	E : Site No. 1050 W : Site No. 1052 N : Road S : Site No. 1026	B.N.G. (U) K. N.G.R. (S) 12922 / 2005 – 06 dated 29.08.2005 Smt D.V. Bhagya Lakshmamma, aged about 51, W/o Sri A.S. Rangegowda, No. 103, 1st Cross, K.S. Colony, R.K. Block, Thyagaraja Nagar, Bangalore – 29	Approximate value per sqft Rs. 4000/- Total Amount Rs. 60.00 lakhs

SCHEDULE – II

District : Bangalore

Taluk : BANGALORE NORTH

Sl. No.	Description of the Property and location, Khatha No. / Survey No. / Site No.	Boundaries	Description of the property - Present Holder of the Property	Approximate Value Assessed per Sqare Feet and Total Value
1.	Bangalore North, Yashavantha Pura Hobli, Herohalli Village, Khatha No. 2419, Survey No. 63, Site No.17, Measurements: Size 45' x 35'	East : By Road West : Site No. 24 North : Site No. 10 South : Road	B.M. Jayaram 15.09.2006 sold by Sri Ranga on GPA of original owner Smt. Veena Suresh	RS. 1000/-per Sft. Rs.15,75,000/-

Sl. No.	Description of the Property and location, Khatha No. / Survey No. / Site No.	Boundaries	Description of the property - Present Holder of the Property	Approximate Value Assessed per Sqare Feet and Total Value
2.	Bangalore North, Yashavantha Pura Hobli, Herohalli Village, Khatha No. 2420, Survey No. 63, Site No. 18 Measurements : Size 45' x 35'	East : By Road West : Site No. 23 North : Site No. 19 South : Site No.17	B.M. Jayaram 15.09.2006 sold by Sri Ranga on GPA of the original owner Smt. Veena Suresh	Rs. 1000/- per Sft. Rs.15,75,000/-
3.	Bangalore North Taluk, Kasaba Hobli, Dommalur, BBMP, Jeevan Bhima Nagar, Sub Division, Ward No.72. Site No. 3579, Measurements : Size 66' x 40'	East : By Road West :Site No. 3595 North :Site No. 3580 South:Site No. 3578	V. Ramesh, S/o Late V. A. Rangaswamy, No. D-1/147, Sathy Marg, Chanikyapuri – 100 021 Khatha No. 2672, 23.12.2005	Rs. 6000/- per Sft. Rs.1,58,40,000/-
4.	Bangalore North Taluk, Kasaba Hobli, Dommalur, BBMP, Jeevan Bhima Nagar, Sub Division, Ward No.72. Site No. 1083, Measurements : Size 80' x 50'	East : By Road West :Site No. 1084 North : By Road South : Site No. 1098 / 1099	Suresh Krishnamurthy, Smt. Veena Suresh, Ashwini Kumar residing at No. 377, 1st Floor, 5th Cross, Dommalur, Bangalore – 77 Khata No. 4842 on 27.12.2004	Rs. 15000/- per Sft. Rs.6,00,00, 000/-

M. Venkateshmurthy
Under Secretary to Government,
Revenue Department (LAQ-2).

ANNEXURE – II

Amount in cash retrieved & deposited by the Investigating Officer

Amount pertaining to	Amount in cash retrieved by the I.O.	Where it is deposited	
		Name of the Bank	A/c No.
M/s Investech and Investech Builders and Developers Pvt. Ltd.	Rs. 1,98,62,934.46	SBM, Lady Curzon Road, Shivaji Nagar, Bangalore (II ACMM Court)	105077

M. Venkateshmurthy
Under Secretary to Government,
Revenue Department (LAQ-2).

PR-941

III -F9-B/B

AMANATH CO-OPERATIVE BANK LTD., BRIGADE ROAD BRANCH, BANGALORE

FORM-7

RULE 38(2)(C)

Dispute No. JRD/UBF/1545/2004-2005

E.P.No.AR/RO (U/R441)/CEP/06/2009-10

ATTACHMENT OF IMMOVABLE PROPERTY

Amanath Co-operative Bank Ltd., Shivajinagar Branch, Bangalore has obtained an award/ decree in the mentioned dispute against M/s Hira Educational Trust, Represented by its Trustees (1) Mohammed Obedulla Sharieff, (2) Mrs. Jameela Sharieff, (3) Mr. Mohammed Hidayathaulla Sharieff, (4) Mr. Mohammed Abrarulla Sharieff, No.1, and 1/1 3rd Cross, 'E' Street, Bharthinagar, BMP Division No.77, Bangalore-560051 to recovery an amount of Rs.71,51,544-00 along with further intrest @ 17.5% + 2% Penal Intrest from 01.03.2007 which has not been paid by you. As the loanee you are due to the Bank a sum of Rs.88,83,399=10 as on 24.09.2009 along with further intrest and other charges from 25.09.2009. This notice is to inform you that the following immovable properties has been attached and if the entire amount due to the Bank is not repaid by you along with intrest and other charges within 10 days of Receipt of this notice the immovable properties which have been attached, shall be brought for auction/ sale as per KSC ACT AND RULE.

The Immovable property belonging to the loanees.

SCHEDULE

All that piece and parcel of No.1 and 1/1, 3rd Cross, 'E' Street, Bharathinagar, BMP Division No.77, Bangalore.

ITEM No.1:

No. 3, Old No.1/1, 3rd Cross 'E' Street, Bharathinagar, BMP Division No.77, Bangalore.

East by : 'E' Street, 3rd Cross,

West by : Pvt Property

North by : Corporation Lane

South by: Property No.1/36,

Measuring 15 feet by 20 ft (Area-330 Sq Ft.)

ITEM No.2:

Form No.1 Old No.36

East by : Property of Basha Saheb

West by : Pvt of Corporation Land,

North by : 3rd Cross "E" Street

South by: Private Property.

Measuring East 28.3 feet, West 7.00 feet 7 in + 21 feet 10 in North 21 feet, South 11 feet + 13 feet 6". Area 770.54 sq feet.

As per the order of the Assistant Registrar of
Co-operative Societies and
Sealed Quotations are invited from specialized, competent and eligible bidders for drilling of 15 borewells and providing protective covers in selected locations around Bangalore City.

The bid document (which is non-transferable) containing the information to be furnished and the terms and conditions is available for sale with the Director of MInes & Geology, Khanija Bhavan, Race Course Road, Bangalore – 560 001 from 5.10.2009 to 07.11.2009 on payment of a non-refundable fee of Rs.100/- + TAX (One Hundred plus Tax) in the form of demand draft drawn on any Nationalized/Scheduled Bank in favour of Director, Department of Mines & Geology, payable at Bangalore.

The quotations / Bids Should be accompanied by Bid Security of Rs.30,000/- (Thirty Thousand only) in the form of demand draft drawn on any Nationalized/Scheduled Bank in favour of Director, Department of Mines & Geology payable at Bangalore and valid up to 90 days from the date of opening the Bids.

Sealed quotations accompanied by the required Bid Security and complete in all respects should be deposited in the tender box kept in the office of Director Department of Mines & Geology, Khanija Bhavan, R.C.Road, Bangalore, on or Before 15.00 hours on 07.11.2009.

The Sealed quotations would be opened in the presence of bidders or their authorized representatives at 15.30 hours on 07.11.2009.

Director
Department of Mines & Geology

P.R. 824

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಕೊಡಗು ಜಿಲ್ಲೆ, ಕೊಡಗು

ಅಧಿಸೂಚನೆ

ಸಂ:ಸಿಬ್ಬಂದಿ(1)ಸಿಆರ್/285/2008-09, ಮಡಿಕೇರಿ, ದಿನಾಂಕ: 26ನೇ ಸೆಪ್ಟೆಂಬರ್ 2009

ಕೊಡಗು ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಮತ್ತು ಸರ್ಕಾರದಿಂದ ಭೂಮಿ ಕೇಂದ್ರಗಳಿಗೆ ಹೊಸದಾಗಿ ಸೃಜಿಸಲಾದ ಗ್ರಾಮಲೆಕ್ಕಿಗರ ಹುದ್ದೆಗಳು ಸೇರಿ ಒಟ್ಟು 33 (ಮೂವತ್ತಮೂರು) ಗ್ರಾಮಲೆಕ್ಕಿಗರನ್ನು ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಕರೆಯಲಾಗಿದೆ.

1. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30-10-2009 (ಕಚೇರಿ ವೇಳೆಯೊಳಗೆ)**
2. ಕನಿಷ್ಠ ವಯೋಮಿತಿ: ದಿನಾಂಕ:30-10-2009 ಕ್ಕೆ 18 ವರ್ಷ ಪ್ರಾಯವಾಗಿರಬೇಕು.
3. **ಗರಿಷ್ಠ ವಯೋಮಿತಿ:**
   ಪ.ಜಾ/ಪ.ಪಂ/ಪ್ರ ವರ್ಗ-1=40 ವರ್ಷ
   ಪ್ರವರ್ಗ, 2ಎ, 2ಬಿ, 3ಎ, 3ಬಿ=38 ವರ್ಷ
   ಸಾಮಾನ್ಯ ವರ್ಗ=35 ವರ್ಷ
4. **ವಿದ್ಯಾರ್ಹತೆ:** Must have passed Pre-university Examination or 12th Standard Examination conducted by Central Board of Secondary Education or ICSE. ಅಭ್ಯರ್ಥಿಗಳು ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇಕಡವಾರು ಶ್ರೇಯಾಂಕದ ಮೇರೆಗೆ (ಮೆರಿಟ್ ಆಧಾರದಲ್ಲಿ) ನೇಮಕಾತಿ ಮಾಡಲಾಗುವುದು.
5. ಜಿಲ್ಲಾಧಿಕಾರಿಗಳು ನಿಗದಿಪಡಿಸಿದ ಅರ್ಜಿ ನಮೂನೆಯಲ್ಲಿಯೇ ಅಭ್ಯರ್ಥಿಗಳು ತಮ್ಮ ಸ್ವಂತ ಕೈಬರಹದಿಂದ ಎಲ್ಲಾ ಅಂಕಣಗಳನ್ನು ಜಾಗರೂಕತೆಯಿಂದ ಭರ್ತಿ ಮಾಡತಕ್ಕದ್ದು. ಇತರೆ ಯಾವುದೇ ನಮೂನೆಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
6. ಪ್ರಕಟಿಸಿರುವ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ, ವಯೋಮಿತಿ ಮೀಸಲಾತಿ ಪ್ರಮಾಣ ಪತ್ರ ಇತ್ಯಾದಿ ವಿವರಗಳನ್ನು ಅರ್ಜಿ ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಮೊದಲು ಅಭ್ಯರ್ಥಿ ಹೊಂದಿರಬೇಕು.
7. ಅಧಿಸೂಚನೆಯಲ್ಲಿ ಪ್ರಕಟಿಸಿರುವ ಹುದ್ದೆಗಳ ಸಂಖ್ಯೆ ಮತ್ತು ಅವುಗಳ ವರ್ಗೀಕರಣವು ಅನಿವಾರ್ಯ ಸಂದರ್ಭಗಳಲ್ಲಿ ಉಂಟಾಗುವ ಬದಲಾವಣೆಗೆ ಒಳಪಟ್ಟಿರುತ್ತದೆ.
8. ಭರ್ತಿ ಮಾಡಿದ ಅರ್ಜಿಗಳನ್ನು ಜಿಲ್ಲಾಧಿಕಾರಿಗಳ ಕಚೇರಿ, ಕೊಡಗು ಜಿಲ್ಲೆ, ಮಡಿಕೇರಿ-571201 ಇಲ್ಲಿಗೆ ದಿ:30-10-2009 ರ ಕಚೇರಿ ವೇಳೆಯೊಳಗೆ ತಲುಪುವಂತೆ ಕಳುಹಿಸತಕ್ಕದ್ದು.
9. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
10. ಅಭ್ಯರ್ಥಿಗಳು ಗ್ರಾಮಲೆಕ್ಕಿಗರ ಹುದ್ದೆಗೆ ಈ ಜಿಲ್ಲೆಯನ್ನು ಹೊರತುಪಡಿಸಿ ಬೇರೆ ಯಾವುದೇ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲವೆಂದು ಘೋಷಣಾ ಪತ್ರವನ್ನು ನೀಡತಕ್ಕದ್ದು.
11. ಅಧಿಸೂಚನೆಯ ವಿವರಗಳನ್ನು ಹಾಗೂ ಅರ್ಜಿಯ ನಮೂನೆಗಳನ್ನು ಜಿಲ್ಲಾಧಿಕಾರಿಗಳ ಕಚೇರಿ, ಉಪವಿಭಾಗಾಧಿಕಾರಿಗಳ ಕಚೇರಿ, ತಾಲ್ಲೂಕು ತಹಶೀಲ್ದಾರರುಗಳ ಕಚೇರಿಯ ನೋಟೀಸ್ ಬೋರ್ಡ್ ಮತ್ತು ವೆಬ್ ಸೈಟ್: http://www.kodagu.nic.in ನಿಂದ ಪಡೆಯಬಹುದಾಗಿದೆ.
12. **ಹುದ್ದೆಗಳ ವರ್ಗೀಕರಣ: ಗ್ರಾಮಲೆಕ್ಕಿಗರ ಹುದ್ದೆ**

ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಅಂಗವಿಕಲ	ಮಾಜಿ ಸೈನಿಕ	ಕ.ಮಾ.ಅ	ಒಟ್ಟು
ಪ.ಜಾ	1	2	2	1	–	–	6
ಪ.ಪಂ.	1	–	–	–	–	–	1
ಪ್ರ-1	1	1	–	–	–	–	2
ಪ್ರ-2(ಎ)	1	2	1	1	–	–	5
ಪ್ರ-2(ಬಿ)	1	–	–	–	–	–	1
ಪ್ರ-3(ಎ)	1	–	–	–	–	–	1
ಪ್ರ-3(ಬಿ)	1	–	–	–	–	–	1
ಸಾ.ಅ.	3	5	5	1	1	1	16
ಒಟ್ಟು	**10**	**10**	**8**	**3**	**1**	**1**	**33**

V-F9-B/B

ಪರಿಶೀಲನಾ ಶುಲ್ಕ ಪಾವತಿಸಿದ ವಿವರ:

ಪೋಸ್ಟಲ್ ಆರ್ಡರ್ ನಂ ಮತ್ತು ದಿನಾಂಕ	
ಮೊತ್ತ	

ಸ್ಥಳ:
ದಿನಾಂಕ:

ಅಭ್ಯರ್ಥಿಯ ಸಹಿ/ Signature of the Candidate

ಘೋಷಣೆ

ಅರ್ಜಿಯಲ್ಲಿ ನಾನು ನೀಡಿರುವ ಎಲ್ಲಾ ಮಾಹಿತಿಗಳು ನನ್ನ ಅರಿವು ಮತ್ತು ನಂಬಿಕೆಯಂತೆ ಸತ್ಯ, ಪೂರ್ಣ ಮತ್ತು ಸಮರ್ಪಕವಾಗಿರುತ್ತದೆ ಎಂದು ಘೋಷಿಸುತ್ತೇನೆ. ನಾನು ಅರ್ಜಿಯಲ್ಲಿ ನೀಡಿರುವ ಮಾಹಿತಿಗಳು ಅಸತ್ಯ ಅಥವಾ ಆಯ್ಕೆಯ ಮುನ್ನ ಅಥವಾ ನಂತರ ಅನರ್ಹರೆಂದು ಕಂಡು ಬಂದಲ್ಲಿ ನನ್ನ ವಿರುದ್ಧ ನೇಮಕಾತಿ ಪ್ರಾಧಿಕಾರವು ಅಗತ್ಯ ಕ್ರಮ ಕೈಗೊಳ್ಳಬಹುದೆಂದು ಅರ್ಥೈಸಿಕೊಂಡಿದ್ದೇನೆ. ಹಾಗೂ ನಾನು ಈ ಜಿಲ್ಲೆಯನ್ನು ಹೊರತುಪಡಿಸಿ ಬೇರೆ ಯಾವುದೇ ಜಿಲ್ಲೆಯಲ್ಲಿ ಈ ಹುದ್ದೆಗೆ ಅರ್ಜಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ:
ದಿನಾಂಕ:

ಪಿ.ಆರ್. 834 ಅಭ್ಯರ್ಥಿಯ / Signature of the Candidate

ಜಿಲ್ಲಾಧಿಕಾರಿಯವರ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಅಧಿಸೂಚನೆ ಇಎಸ್‌ಟಿ (2) ಸಿಆರ್. 269/ 2008–09, ದಿನಾಂಕ: 26ನೇ ಸೆಪ್ಟೆಂಬರ್ 2009

ಗ್ರಾಮಲೆಕ್ಕಿಗರ ನೇರನೇಮಕಾತಿಗೆ ಸಂಬಂಧಿಸಿದಂತೆ ಕ್ಯಾಲೆಂಡರ್ ಆಫ್ ಇವೆಂಟ್ಸ್ (Calender of Events)

ಕ್ರ. ಸಂ.	ವಿವರ	ದಿನಾಂಕ
1	ಅರ್ಜಿ ಕರೆಯಲು ನಿಗದಿಪಡಿಸಿದ ದಿನಾಂಕ	26/09/09
2	ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	30/10/09
3	ಜಿಲ್ಲಾಧಿಕಾರಿಗಳು ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಬೇಕಾದ ದಿನಾಂಕ	30/11/09
4	ತಾತ್ಕಾಲಿಕ ಪಟ್ಟಿಯಂತೆ ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ಪರಿಶೀಲನೆಗೆ ಜಿಲ್ಲಾಧಿಕಾರಿಗಳ ಕಚೇರಿಗೆ ಹಾಜರಾಗಬೇಕಾದ ದಿನಾಂಕ	15/12/09
5	ಜಿಲ್ಲಾಧಿಕಾರಿಗಳು ಅಂತಿಮ ಪಟ್ಟಿಯನ್ನು ಪ್ರಕಟಿಸಬೇಕಾದ ದಿನಾಂಕ	19/12/09
6	ವೆಬ್‌ಸೈಟ್ ವಿಳಾಸ	http://recruitment.kar.nic.in/dk-va
7	ಸ್ಪಷ್ಟೀಕರಣ/ಮಾಹಿತಿಗಾಗಿ ಸಂಪರ್ಕಿಸಬಹುದಾದ ಹೆಲ್ಪ್‌ಲೈನ್	0824-2220590 0824-2220592 0824-2220584
8	ಸ್ಪಷ್ಟೀಕರಣ/ಮಾಹಿತಿಗಾಗಿ ಸಂಪರ್ಕಿ ಬಹುದಾದ ಈ–ಮೇಲ್ ವಿಳಾಸ	

ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ದಕ್ಷಿಣ ಕನ್ನಡ ಜಿಲ್ಲಾ ಘಟಕದಲ್ಲಿ ಬರುವ ತಾಲ್ಲೂಕುಗಳಲ್ಲಿ ಖಾಲಿ ಇರುವ ಹಾಗೂ ತಾಲ್ಲೂಕು ಕಛೇರಿಗಳಲ್ಲಿ ಭೂಮಿ ಕೇಂದ್ರಗಳಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರು ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ರೆವಿನ್ಯೂ ಸಬೊರ್ಡಿನೇಟ್ ಬ್ರಾಂಚ್) (ಕೇಡರ್ ಎಂಡ್ ರಿಕ್ರ್ಯೂಟ್‌ಮೆಂಟ್) (ತಿದ್ದುಪಡಿ) ನಿಯಮಗಳು 2008 ಮತ್ತು 2009ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 299/ಬಿಎಸ್ ಸಿ 2006 ದಿನಾಂಕ: 8.9.2009ರಲ್ಲಿ ನೀಡಿದ ನಿರ್ದೇಶನಗಳಂತೆ ನೇರನೇಮಕಾತಿಯಿಂದ ಭರ್ತಿಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಗ್ರಾಮಲೆಕ್ಕಿಗರ ಖಾಲಿ ಇರುವ ಹುದ್ದೆಗಳ ವಿವರಗಳು ಈ ಕೆಳಗಿನಂತಿವೆ:

ಹುದ್ದೆಗಳ ವರ್ಗೀಕರಣ: (ರೋಸ್ಟರ್ ಬಿಂದು 1 ರಿಂದ 107ರ ವರೆಗೆ)

ಕ. ಸಂ.	ವರ್ಗೀಕರಣದ ವಿವರ	ಸಾಮಾನ್ಯ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗ ವಿಕಲ ಅಭ್ಯರ್ಥಿ	ಮಾಜಿ ಸೈನಿಕರು	ಕನ್ನಡ ಮಾಧ್ಯಮ ಅಭ್ಯರ್ಥಿ	ಯೋಜನಾ ನಿರಾಶಿತರು	ಒಟ್ಟು
1	ಪರಿಶಿಷ್ಟ ಜಾತಿ	3	5	5	1	1	1	–	16
2	ಪರಿಶಿಷ್ಟ ಪಂಗಡ	1	1	1	1	–	–	–	4
3	ಪ್ರವರ್ಗ–I	1	2	1	1	–	–	–	5
4	ಪ್ರವರ್ಗ–IIA	3	5	5	1	1	1	–	16

ಕ್ರ. ಸಂ.	ವರ್ಗೀಕರಣದ ವಿವರ	ಸಾಮಾನ್ಯ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗ ವಿಕಲ ಅಭ್ಯರ್ಥಿ	ಮಾಜಿ ಸೈನಿಕರು	ಕನ್ನಡ ಮಾಧ್ಯಮ ಅಭ್ಯರ್ಥಿ	ಯೋಜನಾ ನಿರಾಶ್ರಿತರು	ಒಟ್ಟು
5	ಪ್ರವರ್ಗ–IIB	1	1	1	1	–	–	–	4
6	ಪ್ರವರ್ಗ–IIIA	1	1	1	1	–	–	–	4
7	ಪ್ರವರ್ಗ–IIIB	1	2	1	1	–	–	–	5
8	ಸಾಮಾನ್ಯ ಅರ್ಹತೆ	11	16	14	3	5	2	2	53
	ಒಟ್ಟು	**22**	**33**	**29**	**10**	**7**	**4**	**2**	**107**

1. ಅರ್ಜಿ ಸಲ್ಲಿಸವ ವಿಧಾನ: ಅರ್ಜಿಗಳನ್ನು ಆನ್–ಲೈನ್ (online) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದಾಗಿದೆ. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.

2. ಅರ್ಜಿ ಶುಲ್ಕ:

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಾಗೂ ಪ್ರವರ್ಗ–1	ರೂ. 50–00
ಸಾಮಾನ್ಯ ವರ್ಗ, 2ಎ, 2ಬಿ, 3ಎ, 3ಬಿ ವರ್ಗಕ್ಕೆ	ರೂ.200–00

3. ಆನ್‌ಲೈನ್ (online) ಮುಖಾಂತರ ಅರ್ಜಿ ಸಲ್ಲಿಸುವ ವಿಧಾನ: ಅಭ್ಯರ್ಥಿಯು ಇಲಾಖೆಯ ಅಧಿಕೃತ ವೆಬ್‌ಸೈಟ್ http://recruitment.kar.nic.in/dk-va ತೆರೆದು ಕಂಪ್ಯೂಟರ್ ಪರದೆಯ ಮೇಲೆ ಅರ್ಜಿಯನ್ನು ತುಂಬಬೇಕು. ಅಭ್ಯರ್ಥಿಯು Submit Button ಅನ್ನು ಒತ್ತಿದರೆ ಅರ್ಜಿ ಸಂಖ್ಯೆ (Reference Number) ಸೃಷ್ಟಿಯಾಗುತ್ತದೆ. ಆನ್–ಲೈನ್ ಅರ್ಜಿಯನ್ನು ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ಸ್ವೀಕೃತಿ ಪತ್ರ (Acknowledgement slip) ಮತ್ತು ದ್ವಿಪ್ರತಿ ಚಲನ್‌ನ್ನು ತೆಗೆದುಕೊಳ್ಳತಕ್ಕದ್ದು. ಈ ಚಲನ್‌ನ್ನು ಅರ್ಜಿ ಶುಲ್ಕದೊಂದಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ವಿಜಯ ಬ್ಯಾಂಕ್ ಅಥವಾ ಕಾರ್ಪೊರೇಷನ್ ಬ್ಯಾಂಕ್‌ನ ಯಾವುದಾದರೂ ಶಾಖೆಯಲ್ಲಿ ಪಾವತಿಸಬೇಕು. **ಅಭ್ಯರ್ಥಿಗಳು ಸ್ವೀಕೃತಿ ಸ್ಲಿಪ್‌ನ್ನು ಮತ್ತು ಚಲನ್ ಪಾವತಿಯ ಒಂದು ಪ್ರತಿಯನ್ನು ಕಡ್ಡಾಯವಾಗಿ ತಮ್ಮ ಬಳಿ ಇರಿಸಿಕೊಳ್ಳತಕ್ಕದ್ದು. ಇನ್ನೊಂದು ಚಲನ್ ಪ್ರತಿ ಬ್ಯಾಂಕ್ ಬಳಿ ಇರುತ್ತದೆ.** ಈ ದಾಖಲೆಗಳನ್ನು ಪರಿಶೀಲನೆಗೆ ನಿಗದಿಪಡಿಸಿದ ದಿನಾಂಕದಂದು (15–12–2009) ಹಾಜರುಪಡಿಸತಕ್ಕದ್ದು. ಬ್ಯಾಂಕಿನಲ್ಲಿ ನಿಗದಿತ ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ: 03.11.2009 ಆಗಿರುತ್ತದೆ. ನಿಗದಿತ ಅರ್ಜಿ ಶುಲ್ಕ ಹೊರತುಪಡಿಸಿ ಯಾವುದೇ ವಿಧವಾದ ಬ್ಯಾಂಕ್ ಶುಲ್ಕ ಇತ್ಯಾದಿ ಪಾವತಿಸುವ ಅವಶ್ಯಕತೆ ಇರುವುದಿಲ್ಲ. ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಅಲ್ಲದೆ ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರ ಯಾವುದೇ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. **ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.**

1. ಅರ್ಜಿಗಳನ್ನು ದಿನಾಂಕ 26.09.2009 ರಿಂದ 30.10.2009 ಒಳಗಾಗಿ ಸಲ್ಲಿಸತಕ್ಕದ್ದು.
2. ಅರ್ಜಿ ಶುಲ್ಕವನ್ನು ದಿನಾಂಕ 26.09.2009 ರಿಂದ 03.11.2009 ರ ವರೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ವಿಜಯ ಬ್ಯಾಂಕ್ ಅಥವಾ ಕಾರ್ಪೊರೇಷನ್ ಬ್ಯಾಂಕ್‌ನ ಯಾವುದಾದರೂ ಶಾಖೆಯಲ್ಲಿ ಬ್ಯಾಂಕ್ ವ್ಯವಹಾರದ ವೇಳೆಯಲ್ಲಿ ಪಾವತಿಸತಕ್ಕದ್ದು.
3. ಅಭ್ಯರ್ಥಿಗಳು ಆನ್–ಲೈನ್‌ನಲ್ಲಿ ನಿಗದಿತ ಶುಲ್ಕ ಪಾವತಿಯ ಕುರಿತು ವಸ್ತು ಸ್ಥಿತಿ (status) ಅನ್ನು ಶುಲ್ಕ ಪಾವತಿಸಿದ 5 ದಿವಸಗಳ ನಂತರ ಪರಿಶೀಲಿಸಿಕೊಳ್ಳಬಹುದು. ಪಾವತಿಯಾಗಿರುವುದು ಖಚಿತವಾಗದಿದ್ದಲ್ಲಿ ಚಲನ್ ಪ್ರತಿಯನ್ನು 0824–2220590 ಅಥವಾ 0824–2220584 ಗೆ ಫ್ಯಾಕ್ಸ್ ನೀಡತಕ್ಕದ್ದು.

4. ಅರ್ಹತಾ ಷರತ್ತುಗಳು:

ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

ಇ) ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರತಕ್ಕದ್ದು.

5. ಶೈಕ್ಷಣಿಕ ವಿದ್ಯಾರ್ಹತೆ:

ಪಿ.ಯು.ಸಿ. ಪರೀಕ್ಷೆ ಅಥವಾ CBSE ಅಥವಾ ICSE ನಡೆಸುವ 12ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.

6. ವೇತನ ಶ್ರೇಣಿ:

ರೂ.5800–100–6000–125–6500–150–7100–175–7800–200–8600–225–9500–250–10500

7. ಆಯ್ಕೆ ಸಂಬಂಧವಾಗಿ ಈ ಕಛೇರಿಯೊಂದಿಗೆ ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದ ಇರುವುದಿಲ್ಲ.

8. ಅರ್ಜಿ ತುಂಬುವ ವಿಧಾನ ಹಾಗೂ ಹೆಚ್ಚಿನ ವಿವರಗಳು ದ.ಕ. ಜಿಲ್ಲಾಧಿಕಾರಿ ಕಛೇರಿಯ ಅಧಿಕೃತ ವೆಬ್‌ಸೈಟ್ http://recruitment.nic.in/dk-va ರಲ್ಲಿನ ಮಾಹಿತಿ ಸೂಚಿಯಲ್ಲಿ ಲಭ್ಯವಿರುತ್ತದೆ ಮತ್ತು ಸ್ಪಷ್ಟೀಕರಣ ಅಗತ್ಯವಿದ್ದಲ್ಲಿ ಸಹಾಯವಾಣಿ ಸಂಖ್ಯೆ: 0824–2220590, 0824–2220592, 0824–2220584 ರಲ್ಲಿ ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ವಿ. ಪೊನ್ನುರಾಜ್
ಅಧ್ಯಕ್ಷರು
ಗ್ರಾಮಲೆಕ್ಕಿಗರ ನೇರಮನೇಮಕಾತಿ ಆಯ್ಕೆ ಪ್ರಾಧಿಕಾರ
ಮತ್ತು ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

Application for the post of Village Accountant

1	District opted for appointment /ನೇಮಕಾತಿ ಬಯಸುವ ಜಿಲ್ಲೆಯ ಹೆಸರು	DAKSHINA KANNADA			
2	Full Name /ಅಭ್ಯರ್ಥಿಯ ಪೂರ್ಣ ಹೆಸರು (as in SSLC/10th Cert.)*				
3	Mother's Name /ತಾಯಿಯ ಹೆಸರು*				
4	Father's Name /ತಂದೆಯ ಹೆಸರು*				
5	Gender /ಲಿಂಗ*	○ Male/ಪುರುಷ	○ Female/ಮಹಿಳೆ		
6	Date of Birth /ಜನ್ಮ ದಿನಾಂಕ*	Select Date	/ Select Month	/ Select Year	
7	Applied Category /ಕೋರಿರುವ ವರ್ಗ*	○ GM/ಸಾ.ಅ	○ SC/ಪ.ಜಾ	○ ST/ಪ.ಪಂ	○ Cat-1/ಪ್ರವರ್ಗ–1
		○ 2A/2ಎ	○ 2B/2ಬಿ	○ 3A/3ಎ	○ 3B/3ಬಿ
8	Do you come under these groups? /ನೀವು ಈ ಗುಂಪುಗಳಲ್ಲಿ ಬರುವಿರಾ?	□ Rural/ಗ್ರಾಮೀಣ	□ KMS/ಕನ್ನಡ ಮಾಧ್ಯಮ ಅಭ್ಯರ್ಥಿ		
		□ PDP/ಯೋಜನಾ ನಿರಾಶ್ರಿತ ಅಭ್ಯರ್ಥಿ	□ Ex-Serviceman/ಮಾಜಿ ಸೈನಿಕ		
		□ PHC/ಅಂಗವಿಕಲ			
9	Are you in Govt.Service? ಸರ್ಕಾರಿ ಸೇವೆಯಲ್ಲಿರುವಿರಾ?	○ Yes/ಹೌದು	○ No/ಇಲ್ಲ		
10	Do you claim age relaxation? If yes, select accordingly./ ನೀವು ವಯೋಮಿತಿ ರಿಯಾಯಿತಿ ಕೋರುವಿರಾ?ಹಾಗಿದ್ದಲ್ಲಿ ಸೂಕ್ತ ಚೌಕವನ್ನು ಆಯ್ಕೆ ಮಾಡಿ	□ Widow/ವಿಧವೆ	□ PHC/ಅಂಗವಿಕಲ		
		□ Ex-Serviceman/ಮಾಜಿ ಸೈನಿಕ			
11	Qualifying Exam Passed? / ನೀವು ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದೀರಾ?*	○ PUC 2nd /ಪಿ ಯು ಸಿ 2nd	○ CBSE 12th / ಸಿ ಬಿ ಎಸ್ ಇ 12th		
		○ ICSE 12th/ ಐ ಸಿ ಎಸ್ ಇ 12th			
12	Total Marks Obtained in 2nd PUC/CBSE 12th/ICSE 12th/ 2nd ಪಿ ಯು ಸಿ/ಸಿ ಬಿ ಎಸ್ ಇ 12th/ ಐ ಸಿ ಎಸ್ ಇ 12th ರಲ್ಲಿ ಗಳಿಸಿದ ಒಟ್ಟು ಅಂಕಗಳು*				
13	Maximum Marks in 2nd PUC/CBSE 12th/ICSE 12th/2nd ಪಿ ಯು ಸಿ /ಸಿ ಬಿ ಎಸ್ ಇ 12 /ಐ ಸಿ ಎಸ್ ಇ 12th ರಲ್ಲಿ ಗರಿಷ್ಠ ಅಂಕಗಳು*				
14	Address for communication/ಪೂರ್ಣ ವಿಳಾಸ*	15	Email address (if any)/ ಇ–ಮೇಲ್ ವಿಳಾಸ (ಇದ್ದಲ್ಲಿ)		
		16	Phone (if any)/- ಫೋನ್ ನಂ (ಇದ್ದಲ್ಲಿ)		
	District* Select District PIN/ಪಿನ್	17	Mobile No (if any)/ ಮೊಬೈಲ್ ನಂ (ಇದ್ದಲ್ಲಿ)		

ಅನುಬಂಧ–1

(ಪ.ಜಾ/ಪ.ಪಂ ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ – ಡಿ

(ನಿಯಮ 3ಎ (2) (3) ನೋಡಿ)

ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ (ಪ.ಜಾ /ಪ.ಪಂ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ

ಪ್ರಮಾಣ ಪತ್ರ

.... ರಾಜ್ಯದ / ಕೇಂದ್ರಾಡಳಿತ ಪ್ರದೇಶದ * .... ಜಿಲ್ಲೆಯ/ ವಿಭಾಗದ .... ಗ್ರಾಮ / ಪಟ್ಟಣದ * ನಿವಾಸಿಯಾದ ಶ್ರೀ / ಶ್ರೀಮತಿ .... ಎಂಬುವವರ

ಮಗ / ಮಗಳಾದ ಶ್ರೀ / ಶ್ರೀಮತಿ .... ಇವರು ಅನುಸೂಚಿತ ಜಾತಿ / ಅನುಸೂಚಿತ ಬುಡಕಟ್ಟು * ಎಂದು ಮಾನ್ಯ ಮಾಡಲಾಗಿರುವ ಜಾತಿ / ಬುಡಕಟ್ಟಿಗೆ * ಸೇರಿರುತ್ತಾರೆಂದು ಪ್ರಮಾಣೀಕರಿಸಿದೆ.

* ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951

(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1956, ಮುಂಬಯಿ ರಾಜ್ಯ ಪುನರ್ ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ, 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತು ಈಶಾನ್ಯ ಪ್ರದೇಶಗಳ (ಪುನರ್ ರಚನಾ ಅಧಿನಿಯಮ, 1971ರ ಮೂಲ ತಿದ್ದುಪಡಿಯಾದಂತೆ).

* ಸಂವಿಧಾನ
* ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ, 1956
* ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1976ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟುಗಳ ಆದೇಶ, 1959.
* ಸಂವಿಧಾನ (ದಾದರ್ ಮತ್ತು ನಾಗರ ಹವೇಲಿ) ಅನುಸೂಚಿತ ಜಾತಿಗಳ ಆದೇಶ, 1962
* ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964
* ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967
* ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ / ಬುಡಕಟ್ಟುಗಳ ಆದೇಶ 1988
* ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ

2. ಶ್ರೀ / ಶ್ರೀಮತಿ / ಕುಮಾರಿ* .... ಮತ್ತು / ಅಥವಾ ಅವನ* / ಅವಳ* ಕುಟುಂಬವು .... ರಾಜ್ಯ / ಕೇಂದ್ರಾಡಳಿತ ಪ್ರದೇಶದ .... ಜಿಲ್ಲಾ / ವಿಭಾಗದ .... ಗ್ರಾಮ / ಪಟ್ಟಣದ ಸಾಮಾನ್ಯ ನಿವಾಸಿ (ಗಳು)

ಸಹಿ ....

ತಹಶೀಲ್ದಾರರು ....

ಸ್ಥಳ : ಪದನಾಮ

ದಿನಾಂಕ : ಕಛೇರಿಯ ಮೊಹರಿನೊಂದಿಗೆ

ರಾಜ್ಯ / ಕೇಂದ್ರಾಡಳಿತ ಪ್ರದೇಶ*

***ಅನ್ವಯವಾಗದಿರುವ ಪದಗಳನ್ನು ದಯವಿಟ್ಟು ಬಿಟ್ಟು ಬಿಡಿ / ಹೊಡೆದು ಹಾಕಿ**

ಸೂಚನೆ : ಇಲ್ಲಿ ಉಪಯೋಗಿಸಿದ "ಸಾಮಾನ್ಯ ನಿವಾಸಿಗಳು" ಎಂಬ ಪದಾವಳಿಯು ಪ್ರಜಾ ಪ್ರಾತಿನಿಧ್ಯ ಅಧಿನಿಯಮ, 1950ರ 20ನೇ ಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ.

ಭಾರತ ಸರ್ಕಾರದ ಪತ್ರ ಸಂಖ್ಯೆ ಬಿಸಿ 12028 / 2/ 78–ಎಸ್‌ಸಿಟಿ–1 ಗೃಹ ಮಂತ್ರಾಲಯದ ಅನುಸಾರವಾಗಿ, ಅಂಥ ಪ್ರಮಾಣ ಪತ್ರಗಳನ್ನು ನೀಡಲು ಸಕ್ಷಮವಾಗಿರುವುದಕ್ಕಾಗಿ, ಭಾರತ ಸರ್ಕಾರದ (ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ) ಪತ್ರ ಸಂಖ್ಯೆ 13.02.74 ಇಎಸ್‌ಟಿ (ಎಸ್‌ಸಿಟಿ) ದಿನಾಂಕ 5ನೇ ಆಗಸ್ಟ್ 1975ರಲ್ಲಿ ನಮೂದಿಸಿದ ಪ್ರಾಧಿಕಾರಿಯು, ರಾಷ್ಟ್ರಪತಿಗಳು ಸಂಬಂಧಪಟ್ಟ ಆದೇಶದ ಅಧಿಸೂಚನೆಯನ್ನು ಹೊರಡಿಸಿದ ಸಮಯದಲ್ಲಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು, ತನ್ನ ಖಾಯಂ ವಾಸ ಸ್ಥಳವನ್ನು ಹೊಂದಿದ್ದ ಸ್ಥಳಕ್ಕೆ ಸೇರಿದವರೊಬ್ಬರಾಗಿರತಕ್ಕದ್ದು. ಅದೇ ರೀತಿಯಲ್ಲಿ, ಒಂದು ತಾಲ್ಲೂಕಿನ ರೆವಿನ್ಯೂ ಪ್ರಾಧಿಕಾರಿಯು ಇನ್ನೊಂದು ತಾಲ್ಲೂಕಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ನೀಡಲು ಸಕ್ಷಮ ಪ್ರಾಧಿಕಾರಿಯಾಗಿರುವುದಿಲ್ಲ.

ಅನುಬಂಧ–2

(ಪ್ರವರ್ಗ – 1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ – ಇ

(ನಿಯಮ 3ಎ (2) (3) ನೋಡಿ)

ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗೆ ನೀಡುವ ಪ್ರಮಾಣ ಪತ್ರ

.... ಗ್ರಾಮ / ಪಟ್ಟಣ / ನಗರದ ನಿವಾಸಿಯಾದ ಶ್ರೀ / ಶ್ರೀಮತಿ .... ಇವರ

ಮಗ/ಮಗಳು/ಪತ್ನಿ/ಪತಿಯಾದ ಶ್ರೀ/ಶ್ರೀಮತಿ ....
ಇವರು ಹಿಂದುಳಿದ ವರ್ಗಗಳ (ಪ್ರವರ್ಗ) .... ಜಾತಿಯ
.... ಉಪ ಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ :

ದಿನಾಂಕ :

ತಹಶೀಲ್ದಾರರು

..................ತಾಲ್ಲೂಕು

ಕಛೇರಿಯ ಮೊಹರು

ಅನುಬಂಧ–3

(ಪ್ರವರ್ಗ – 2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ – ಎಫ್

(ನಿಯಮ 3ಎ (2) (3)ನ್ನು ನೋಡಿ)

ಪ್ರವರ್ಗ–1ರ ಹೊರತಾಗಿ, ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ .... ರಲ್ಲಿ ವಾಸವಾಗಿರುವ ಶ್ರೀ / ಶ್ರೀಮತಿ .... ಇವರ ಮಗ / ಮಗಳು / ಪತಿ / ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ .... ಇವರು ಮತ್ತು ಆತನ / ಅವಳ ತಂದೆ / ತಾಯಿ / ಪೋಷಕರು/ಪತ್ನಿ/ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ. ಎಸ್‌ಡಬ್ಲ್ಯೂಡಿ 225 ಬಿಸಿಎ 2000, ದಿನಾಂಕ 30.03.2002ರಲ್ಲಿ ನಿರ್ದಿಷ್ಟ ಪಡಿಸಿದ ಮೇಲುಸ್ತರದ (ಕ್ರೀಮಿ ಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ; ಅಭ್ಯರ್ಥಿಯಾಗಲಿ ಅಥವಾ ಆತನ / ಆಕೆಯ ತಂದೆ ತಾಯಿ/ಪೋಷಕರಾಗಲಿ / ಪತ್ನಿ / ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು:

ಅಥವಾ

ಸಾರ್ವಜನಿಕ ವಲಯ ಉದ್ಯಮದಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ.

ಅಥವಾ

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ. 6000–12000/– ಪ್ರಾರಂಭಿಕ ಹಂತ) ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು:

ಅಥವಾ

ಆತನ/ಆಕೆಯ ತಂದೆ ತಾಯಿ/ಪೋಷಕರು/ಪತ್ನಿ/ಪತಿಯ ಆದಾಯವು ಎರಡು ಲಕ್ಷ ಮೀರಿರುವುದಿಲ್ಲವೆಂದು:

ಅಥವಾ

ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರಲ್ಲಿ ನಿಗದಿಪಡಿಸಿರುವಂತೆ ಆತನ/ಆಕೆಯ ತಂದೆ ತಾಯಿ/ಪೋಷಕರು/ಪತ್ನಿ/ಪತಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತನ/ಆಕೆಯ ತಂದೆ ತಾಯಿ/ಪೋಷಕ/ಪತ್ನಿ/ಪತಿಯು ಅಥವಾ ಇವರಿಬ್ಬರೂ 10 ಯುನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ. ಎಸ್‌ಡಬ್ಲ್ಯೂಡಿ 225 ಬಿಸಿಎ 2000, ದಿನಾಂಕ 30.03.2002ರ ಅನ್ವಯ ಶ್ರೀ/ಶ್ರೀಮತಿ/ಕುಮಾರಿ .... ಇವರು .... ಜಾತಿಗೆ .... ಸೇರಿದ ಉಪಜಾತಿಯವರಾಗಿದ್ದು ಸರ್ಕಾರಿ ಆದೇಶ ಸಂಖ್ಯೆ. ಎಸ್‌ಡಬ್ಲ್ಯೂಡಿ 225 ಬಿಸಿಎ 2000, ದಿನಾಂಕ 30.03.2002ರ ಅನ್ವಯ ಹಿಂದುಳಿದ ವರ್ಗಗಳ ವರ್ಗ .... (2ಎ, 2ಬಿ, 3ಎ, 3ಬಿ) ಸೇರಿರುತ್ತಾರೆ.

ಸ್ಥಳ :

ದಿನಾಂಕ :

ತಹಶೀಲ್ದಾರರು

.... ತಾಲ್ಲೂಕು

ಕಛೇರಿಯ ಮೊಹರು

ಅನುಬಂಧ–4

ನಮೂನೆ–1

ಜನರಲ್ ಮೆರಿಟ್ ಅಭ್ಯರ್ಥಿಗಳು ಮೇಲುಸ್ತರಕ್ಕೆ ಸೇರಿಲ್ಲವೆಂದು, ದೃಢೀಕರಿಸಿ ಗ್ರಾಮೀಣ ಮೀಸಲಾತಿಯನ್ನು ಕೋರಲು ಸಲ್ಲಿಸಬೇಕಾದ ಪ್ರಮಾಣ ಪತ್ರ

(ಜನರಲ್ ಮೆರಿಟ್ ಅಭ್ಯರ್ಥಿಗಳು ಭರ್ತಿ ಮಾಡಬೇಕಾದ ನಮೂನೆ)

ಇವರಿಗೆ:
ತಹಶೀಲ್ದಾರರು,
.... ತಾಲ್ಲೂಕು,
.... ಜಿಲ್ಲೆ.

ಮಾನ್ಯರೆ,

ಶ್ರೀ / ಶ್ರೀಮತಿ .... ಎಂಬುವವರ ಮಗ/ಮಗಳು/ಪತಿ/ಪತ್ನಿ.............................. ಆದ ನಾನು ಮೇಲುಸ್ತರದಲ್ಲಿ (Creamy Layer) ಬರುವುದಿಲ್ಲವೆಂದು ನೇರ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿ ಮೀಸಲಾತಿಯನ್ನು ಪಡೆಯುವುದಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯಲು ತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಾ ಕೋರುತ್ತೇನೆ.

1. ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ :
2. ಅಭ್ಯರ್ಥಿಯ ಸ್ವಂತ ಸ್ಥಳ ಗ್ರಾಮ :
   ತಾಲ್ಲೂಕು :
   ಜಿಲ್ಲೆ :
3. ಅಭ್ಯರ್ಥಿಯು ಹುಟ್ಟಿದ ದಿನಾಂಕ ವಯಸ್ಸು ಮತ್ತು ಹುಟ್ಟಿದ ಸ್ಥಳ :
4. ಅಭ್ಯರ್ಥಿಯ ತಂದೆ/ತಾಯಿ/ಪೋಷಕರ ಪತಿಯ/ಪತ್ನಿಯ ಹೆಸರು ಮತ್ತು ಉದ್ಯೋಗ:
   (ಉದ್ಯೋಗವು ಸರ್ಕಾರಿ/ಅರೆ ಸರ್ಕಾರಿ/ಸಾರ್ವಜನಿಕ ಉದ್ಯಮ/ಖಾಸಗಿ)
5. ಅಭ್ಯರ್ಥಿಯ ಪ್ರಸ್ತುತ ವಿಳಾಸ :
   (ಸ್ಪಷ್ಟವಾಗಿ ನಮೂದಿಸುವುದು)
6. ಅಭ್ಯರ್ಥಿಯ ಖಾಯಂ ವಿಳಾಸ :
7. ಅಭ್ಯರ್ಥಿಯು ಶಾಲಾ ಶಿಕ್ಷಣದ ವ್ಯಾಸಂಗ ಮಾಡಿದ ಶಾಲೆಗಳ ವಿವರಗಳು
   ಪ್ರಾಥಮಿಕ
   ಮಾಧ್ಯಮಿಕ
   ಪ್ರೌಢ
8. ಅಭ್ಯರ್ಥಿಯ ಹಾಗೂ ಅಭ್ಯರ್ಥಿಯ ತಂದೆ/ತಾಯಿ/ಪೋಷಕರ (ತಂದೆ/ತಾಯಿ ಜೀವಂತವಿಲ್ಲದಿದ್ದರೆ) ಇವರ ಒಟ್ಟು ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ :
   1) ವೇತನ ಶ್ರೇಣಿ
   2) ಜಮೀನಿನ ವಿವರ
   3) ಇತರ ಮೂಲಗಳು
9. ಆದಾಯ ತೆರಿಗೆ ಪಾವತಿದಾರರೇ ?
10. ಸಂಪತ್ತು ತೆರಿಗೆ ಪಾವತಿದಾರರೇ ?
11. ಮಾರಾಟ ತೆರಿಗೆ ಪಾವತಿದಾರರೇ ?

ಪ್ರಮಾಣೀಕೃತ ಘೋಷಣೆ

ಈ ಮೇಲೆ ನನ್ನಿಂದ ಒದಗಿಸಿದ ಮಾಹಿತಿ/ವಿವರಣೆಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸ್ಥಳ :
ದಿನಾಂಕ :

ತಮ್ಮ ವಿಧೇಯ
(ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತಾ ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟಲ್ಲಿ ಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.

ಸ್ಥಳ :
ದಿನಾಂಕ :

ತಂದೆ/ತಾಯಿ/ಪೋಷಕರ ಸಹಿ
(ತಂದೆ/ತಾಯಿ ಜೀವಂತವಿಲ್ಲದಿದ್ದರೆ)
(ಹೆಂಡತಿ/ಗಂಡ/ಇವರ ಸಹಿ)

ಸ್ಥಳೀಯ ಇಬ್ಬರು ಸಾಕ್ಷಿದಾರರು

ಅಭ್ಯರ್ಥಿಯ ಮತ್ತು ಅವರ ತಂದೆ/ತಾಯಿ/ಪೋಷಕರು/ಪತಿ/ಪತ್ನಿ ಇವರನ್ನು ಹಾಗೂ ಇವರ ಸಹಿಯನ್ನು ಗುರುತಿಸುತ್ತೇವೆ.

ಸಾಕ್ಷಿದಾರರ ಸಹಿ 1)

(ಪೂರ್ಣ ವಿಳಾಸದೊಂದಿಗೆ) 2)

ಪರಿಶೀಲನಾ ಪ್ರಮಾಣ ಪತ್ರ

1. ಶ್ರೀ/ಶ್ರೀಮತಿ.. ಎಂಬುವವರ ಮಗ/ಮಗಳು/ಪತಿ/ಪತ್ನಿ/ಶ್ರೀ/ಶ್ರೀಮತಿ/ಕುಮಾರಿ.................................... ಎಂಬುವವರು ಕರ್ನಾಟಕ ರಾಜ್ಯದ .... ಜಿಲ್ಲೆಯ ವಿಭಾಗ .... ಗ್ರಾಮ/ಪಟ್ಟಣ/ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆ ಮತ್ತು ಇವರು ಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.

2. ಶ್ರೀ/ಶ್ರೀಮತಿ/ಕುಮಾರಿ .... ಇವರ ತಂದೆ/ತಾಯಿ/ಪೋಷಕರು ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಡಿ 251 ಬಿಸಿಎ 94, ಬೆಂಗಳೂರು, ದಿನಾಂಕ 31.01.1995 ರನ್ವಯ ಜನರಲ್ ಮೆರಿಟ್ ವರ್ಗದ ಮೇಲುಸ್ತರದಲ್ಲಿ (Creamy Layer) ಬರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ : ತಹಶೀಲ್ದಾರರು

ದಿನಾಂಕ : .... ತಾಲ್ಲೂಕು

ಕಛೇರಿಯ ಮೊಹರು

ನಮೂನೆ – 2

ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ / ಶ್ರೀಮತಿ .... ರವರ ಮಗ/ಮಗಳು/ಪತ್ನಿ/ಶ್ರೀ/ಶ್ರೀಮತಿ/ಕುಮಾರಿ .... ಜಿಲ್ಲೆ .... ತಾಲ್ಲೂಕು .... ಗ್ರಾಮದಲ್ಲಿ .... ವಾಸವಾಗಿರುವ ಇವರು ಒಂದನೇ ತರಗತಿಯಿಂದ .... ತರಗತಿಯವರೆಗೆ .... ಜಿಲ್ಲೆ .... ತಾಲ್ಲೂಕು .... ಪಟ್ಟಣ .... ಶಾಲೆಯಲ್ಲಿ ವ್ಯಾಸಂಗ ಮಾಡಿ .... ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯು ಅಭ್ಯರ್ಥಿಯು ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕದ ಪೌರ ನಿಗಮಗಳ ಅಧಿನಿಯಮ, 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿತ್ತು.

ಮೇಲುರುಜು ಮುಖ್ಯೋಪಾಧ್ಯಾಯರ ಸಹಿ

ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ಸಂಸ್ಥೆಯ ಮೊಹರು

ಕಛೇರಿಯ ಮೊಹರು

ಅನುಬಂಧ–5

ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ

ಶ್ರೀ / ಶ್ರೀಮತಿ .... ರವರ ಮಗ/ಮಗಳು/ಪತ್ನಿ/ಶ್ರೀ/ಶ್ರೀಮತಿ/ ಕುಮಾರಿ .... ಜಿಲ್ಲೆ .... ತಾಲ್ಲೂಕು .... ಗ್ರಾಮದಲ್ಲಿ .... ವಾಸವಾಗಿರುವ ಇವರು .... ನೇ ತರಗತಿಯಿಂದ .... ನೇ ತರಗತಿಯವರೆಗೆ .... ಶೈಕ್ಷಣಿಕ ವರ್ಷದಿಂದ .... ಶೈಕ್ಷಣಿಕ ವರ್ಷದವರೆಗೆ................ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ದಿನಾಂಕ : ಮುಖ್ಯೋಪಾಧ್ಯಾಯರ ಸಹಿ ಮತ್ತು ಸಂಸ್ಥೆಯ ಮೊಹರು

ಸ್ಥಳ :

ಸೂಚನೆ: ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಶಾಲೆಗಳಲ್ಲಿ ವ್ಯಾಸಂಗ ಮಾಡಿದ್ದಲ್ಲಿ ಶಾಲಾವಾರು ಪ್ರತ್ಯೇಕ ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ ಸಲ್ಲಿಸಬೇಕು.

ಅನುಬಂಧ–6

ಸರ್ಕಾರದ ಸುತ್ತೋಲೆ ಸಂಖ್ಯೆ : ಸಿಆಸುಇ 44 ಸೆನೆನಿ 2001 ದಿನಾಂಕ 27–07–2001

ನಮೂನೆ–3

ಯೋಜನೆಗಳಿಂದ ನಿರ್ವಸಿತರಾದ ಕುಟುಂಬದ ಅಭ್ಯರ್ಥಿ

ಪ್ರಮಾಣ ಪತ್ರ

ಶ್ರೀ/ಶ್ರೀಮತಿ .... ಎಂಬುವವರ ಮಗ/ಮಗಳು/ಪತ್ನಿ/ಶ್ರೀ/ಶ್ರೀಮತಿ/ ಕುಮಾರಿ .... ಜಿಲ್ಲೆ .... ತಾಲ್ಲೂಕು .... ಗ್ರಾಮದಲ್ಲಿ

.................ವಾಸವಾಗಿರುವ ಇವರು : ಇವರ ಕುಟುಂಬದವರು ಅವಲಂಬಿತರಾಗಿದ್ದ ಈ ಕೆಳಕಂಡ ಆಸ್ತಿಯನ್ನು .... ಯೋಜನೆಗಾಗಿ .... ಇಸವಿ................ಯಂದು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ :-

(i) ** ವಾಸಿಸುವ ಮನೆ ಮತ್ತು ತಾವು ಅವಲಂಬಿತರಾಗಿದ್ದ ಅವರ ಕೃಷಿ ಭೂಮಿಯ ಅರ್ಧದಷ್ಟು,

(ii) ** ಯೋಜನೆಗೆ ಮೊದಲು ಭೂಮಿಯನ್ನು ಹೊಂದಿರದೆ : ಯೋಜನೆಯಿಂದ ತಾವು ವಾಸಿಸುವ ಮನೆ :

(iii) ** ತಾವು ಅವಲಂಬಿತರಾಗಿದ್ದ ತಮ್ಮ ಕೃಷಿ ಭೂಮಿಯ ಅರ್ಧದಷ್ಟು ಅಥವಾ ಅದಕ್ಕಿಂತ ಕಡಿಮೆ ಕೃಷಿ ಭೂಮಿ :

(iv) ** ಇತರ ಇನ್ನಾವುದೇ ಪ್ರಕರಣದಲ್ಲಿ ಯೋಜನೆಯಿಂದ ನಿರ್ವಸಿತರಾದವರು.

ತಹಶೀಲ್ದಾರರು

.... ತಾಲ್ಲೂಕು

(** ಅನ್ವಯವಾಗುವ ಐಟಂನ್ನು ಮಾತ್ರ ಪ್ರಮಾಣ ಪತ್ರದಲ್ಲಿ ನಮೂದಿಸತಕ್ಕದ್ದು.)

ಅನುಬಂಧ–7

ರಾಜ್ಯ ಸರ್ಕಾರಿ/ಕೇಂದ್ರ ಸರ್ಕಾರಿ ನೌಕರರು ಒದಗಿಸಬೇಕಾದ ಪ್ರಮಾಣ ಪತ್ರ

ಶ್ರೀ/ಶ್ರೀಮತಿ.. ರವರು ರಾಜ್ಯ/ಕೇಂದ್ರ ಸರ್ಕಾರದಲ್ಲಿ.............................. (ಪದನಾಮ).. ಇಲಾಖೆಯಲ್ಲಿ ಖಾಯಂ/ತಾತ್ಕಾಲಿಕ ಹುದ್ದೆಯನ್ನು ದಿನಾಂಕ: .... ರವರೆಗೆ ಹೊಂದಿರುವರು. ಈ ಹುದ್ದೆಗೆ ಇವರು ನೇಮಕಾತಿ ನಿಯಮಗಳಡಿ ಆಯ್ಕೆಯಾಗಿದ್ದು, ಸದರಿ ಹುದ್ದೆಗೆ ಅರ್ಜಿ ಸಲ್ಲಿಸಲು ಅವರಿಗೆ ಅನುಮತಿ ನೀಡಲಾಗಿದೆ.

ಸ್ಥಳ:

ದಿನಾಂಕ:

ನೇಮಕಾತಿ ಪ್ರಾಧಿಕಾರದ ಸಹಿ

(ಇಲಾಖೆ, ಹೆಸರು ಮತ್ತು ಮೊಹರಿನೊಂದಿಗೆ)

Certificate to be furnished by the State/Central Government Servant

Certified that Sri/Smt..holds a permanent/temporary post under the State/Central Government as.. (Designation) in the department of..............from............. having been appointed there in under the rules of recruitment. He/She is permitted to apply for the said post.

Signature of the Authority

(Authority of the Department with Name & Seal)

ಅನುಬಂಧ–8

ಕರ್ನಾಟಕ ಸರ್ಕಾರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 115 ಸೆನನಿ 2005, ದಿನಾಂಕ: 19.11.2005.

CERTIFICATE FOR THE PERSONS WITH DISABILITIES

This is to certify that Sri/Smt/Kum.. Son/wife/daughter of Sri .... Age .... old, male/ female. Registration No. .... is a case of .... He/She is physically disabled/visual disabled /speech & hearing disabled and has ....% (..................percent) permanent (Physical impairment/visual impairment speech and hearing impairment) in relation to his/her...

Note:

1. This condition is progressive/non-progressive/likely to improve/not likely to improve*
2. Re-assessment is not recommended/is recommended after a period of ....months/ years.*

* Strike out which is not applicable.

(Recent Attested Photograph showing the disability Affixed here)	Sd/- (Doctor) (Seal)	Sd/- (Doctor) (Seal)	Sd/- (Doctor) (Seal)

Countersigned by the Medical Superintendent CMO/Head of Hospital (with seal)

Signature/Thumb impression of the disabled person.

P.R. 830

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಜಿಲ್ಲಾ ನೋಂದಣಾಧಿಕಾರಿಗಳು, ಕೋಲಾರ ಇವರ ನಡವಳಿಗಳು

ನೇಮಕಾತಿ ಆದೇಶ

ವಿಷಯ: ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕೋಲಾರ ಜಿಲ್ಲೆಯಲ್ಲಿ ದ್ವಿತೀಯ ದರ್ಜೆ ಸಹಾಯಕರ ವೃಂದದಲ್ಲಿ ಗುರುತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ದ್ವಿತೀಯ ದರ್ಜೆ ಸಹಾಯಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ: 1. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರಿಗೆ ಈ ಕಛೇರಿಯಿಂದ ಬರೆದಿರುವ ಪತ್ರ ಸಂಖ್ಯೆ:ಸಿಬ್ಬಂದಿ 65/2001–02, ದಿನಾಂಕ: 26.12.2001.

2. ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್:13:ಎಸ್‌ಬಿಸಿ:2001 ದಿನಾಂಕ:21.11.2001 ರನ್ವಯ ಪ್ರಕಟಿಸಿರುವ ಕೆ.ಸಿ.ಎಸ್. (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟು ತುಂಬದೇ ಇರುವ ಹುದ್ದೆಗಳ) ವಿಶೇಷ ನೇಮಕಾತಿ ನಿಯಮಗಳು, 2001.

3. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ:EST:1–273/01–02, ದಿನಾಂಕ:01.08.2002 (ದಿನಾಂಕ:8.8.2002ರ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ.)

4. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ಬ್ಯಾಕ್‌ಲಾಗ್ ಅಂತಿಮ ಆಯ್ಕೆ ಪಟ್ಟಿ ಸಂಖ್ಯೆ: EST:1-273/2001-02, ದಿನಾಂಕ: 23.11.2004.

5. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ರೀ–ಅಲಾಟ್‌ಮೆಂಟ್ ಆದೇಶ ಸಂಖ್ಯೆ: EST:1-273/2001-02, ದಿನಾಂಕ: 28.08.2009.

6. ಸರ್ಕಾರದ ಆದೇಶ ಸಂಖ್ಯೆ: FD (SPL) 04 PET 2005 ದಿನಾಂಕ: 31.3.2006.

ಪ್ರಸ್ತಾವನೆ:

ಈ ಇಲಾಖೆಯ ಕೋಲಾರ ಜಿಲ್ಲೆಯಲ್ಲಿ ದ್ವಿತೀಯ ದರ್ಜೆ ಸಹಾಯಕರ ವೃಂದದಲ್ಲಿ ಕೆಳಕಂಡಂತೆ ಬ್ಯಾಕ್‌ಲಾಗ್ ಹುದ್ದೆಗಳು ಇರುತ್ತವೆಂದು ಈ ಕಛೇರಿಯಿಂದ ಉಲ್ಲೇಖ (1)ರನ್ವಯ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರಿಗೆ ವರದಿ ಮಾಡಲಾಗಿತ್ತು.

ಕ್ರ. ಸಂ.	ಜಿಲ್ಲೆ	ಸದರಿ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ		
		ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
1	ಕೋಲಾರ ಜಿಲ್ಲೆ	ಒಂದು	ಇಲ್ಲ	ಒಂದು

ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಲುವಾಗಿ ಉಲ್ಲೇಖ (2)ರ ಬ್ಯಾಕ್‌ಲಾಗ್ ನಿಯಮಗಳ ಪ್ರಕಾರ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಬೆಂಗಳೂರು ಇವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಉಲ್ಲೇಖ (3)ರ ಅಧಿಸೂಚನೆ ಮೂಲಕ ಅರ್ಜಿಗಳನ್ನು ಆಹ್ವಾನಿಸಿ, ಈ ಬಗ್ಗೆ ಸ್ವೀಕೃತವಾದ ಎಲ್ಲಾ ಅರ್ಜಿಗಳು ಪರಿಶೀಲನೆಗೊಂಡ ನಂತರ ಉಲ್ಲೇಖ (2)ರ ಬ್ಯಾಕ್‌ಲಾಗ್ ನಿಯಮಗಳ ಪ್ರಕಾರ 29 ರಿಂದ 40 ವರ್ಷ ವಯೋಮಿತಿಯಲ್ಲಿರುವ ಅರ್ಹ ಅಭ್ಯರ್ಥಿಗಳನ್ನು Merit ಮತ್ತು ಮೀಸಲಾತಿ ಆಧಾರದ ಮೇಲೆ ಆಯ್ಕೆ ಮಾಡಿ ಅರ್ಹ ಅಭ್ಯರ್ಥಿಗಳ ಬ್ಯಾಕ್‌ಲಾಗ್ ಅಂತಿಮ ಆಯ್ಕೆ ಪಟ್ಟಿಯನ್ನು ನಿಯಮಾನುಸಾರ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರು ಉಲ್ಲೇಖ (4)ರನ್ವಯ ದಿನಾಂಕ: 23.11.2004 ರಂದು ಪ್ರಕಟಿಸಿರುತ್ತಾರೆ.

ತದನಂತರ ಈ ಜಿಲ್ಲೆಯಲ್ಲಿ ಮೇಲ್ಕಂಡಂತೆ ಗುರುತಿಸಲ್ಪಟ್ಟ ಈ ಬ್ಯಾಕ್‌ಲಾಗ್ ಹುದ್ದೆಯಲ್ಲಿ ನೇಮಕ ಮಾಡಿಕೊಳ್ಳಲು ಕೆಳಕಂಡ ಮೂರು ಬ್ಯಾಕ್‌ಲಾಗ್ ಅಭ್ಯರ್ಥಿಗಳನ್ನು ಒಬ್ಬರಾದ ನಂತರ ಒಬ್ಬರಂತೆ ಕ್ರಮವಾಗಿ ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರು ಈ ಜಿಲ್ಲೆಗೆ ನೇಮಕಾತಿಗಾಗಿ ಅಲಾಟ್ ಮಾಡಿದ್ದರ ಮೇರೆ ಕೆಳಕಂಡ ಈ ಮೂರು ಅಭ್ಯರ್ಥಿಗಳನ್ನು ಒಬ್ಬರಾದ ನಂತರ ಒಬ್ಬರಂತೆ ಕ್ರಮವಾಗಿ ಈ ಜಿಲ್ಲೆಯಲ್ಲಿ ದ್ವಿತೀಯ ದರ್ಜೆ ಸಹಾಯಕರೆಂದು ನೇಮಕಾತಿ ಮಾಡಿದಾಗ್ಯೂ ಸಹ ಸದರಿ ಅಭ್ಯರ್ಥಿಗಳು ದ್ವಿತೀಯ ದರ್ಜೆ ಸಹಾಯಕರಾಗಿ ಕೆಲಸಕ್ಕೆ ಹಾಜರಾಗದೇ ಇದ್ದ ಕಾರಣ ಇವರುಗಳಿಗೆ ಕ್ರಮವಾಗಿ ನೀಡಿದ ಮೂರು ನೇಮಕಾತಿ ಆದೇಶಗಳನ್ನು ನಿಯಮಾನುಸಾರ ಕ್ರಮವಾಗಿ ರದ್ದುಪಡಿಸಲಾಯಿತು. ಹಾಗೂ ಈ ವಿಷಯವನ್ನು ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕ ಆಯುಕ್ತರು ಬೆಂಗಳೂರು ಇವರಿಗೂ ಹಾಗೂ ಸದರಿ ಅಭ್ಯರ್ಥಿಗಳಿಗೂ ತಿಳಿಸಲಾಯಿತು.

1	ಕೆ.ಎನ್. ನಾರಾಯಣಸ್ವಾಮಿ, ಕೋಲಾರ ತಾ:	ಪರಿಶಿಷ್ಟ ಜಾತಿ ಸಾಮಾನ್ಯ ಅಭ್ಯರ್ಥಿ ಮುಖ್ಯ ಪಟ್ಟಿ
2	ಪ್ರಿಯರಂಜನ್ ಜಿ.ಎಸ್. ಮೈಸೂರು–23	ಪರಿಶಿಷ್ಟ ಜಾತಿ ಸಾಮಾನ್ಯ ಅಭ್ಯರ್ಥಿ ಹೆಚ್ಚುವರಿ ಪಟ್ಟಿ
3	ಶ್ರೀ ಮಂಜುನಾಥ ನಾಗರಾಜ, ಭದ್ರಾವತಿ	ಪರಿಶಿಷ್ಟ ಜಾತಿ ಸಾಮಾನ್ಯ ಅಭ್ಯರ್ಥಿ ಹೆಚ್ಚುವರಿ ಪಟ್ಟಿ

ಈ ರೀತಿ ಮೇಲ್ಕಂಡ ಮೂರು ಬ್ಯಾಕ್‌ಲಾಗ್ ಅಭ್ಯರ್ಥಿಗಳು ಈ ಜಿಲ್ಲೆಯ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಕೆಲಸಕ್ಕೆ ಹಾಜರಾಗದೇ ಇದ್ದ ಕಾರಣ ಹಾಗೂ ಸದರಿ ಅಭ್ಯರ್ಥಿಗಳು ತಮ್ಮ ನೇಮಕಾತಿ ಹಕ್ಕನ್ನು ಕಳೆದುಕೊಂಡ ಕಾರಣ, ಮೇಲ್ಕಂಡ

ಸದರಿ ಮಂಜುನಾಥ ನಾಗರಾಜ ಎಂಬ ಅಭ್ಯರ್ಥಿಯ ಬದಲಿಗೆ ಕೆಳಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಯನ್ನು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರು ಉಲ್ಲೇಖ (5)ರ ಅವರ ರೀ-ಅಲಾಟ್‌ಮೆಂಟ್ ಆದೇಶದಲ್ಲಿ ಈ ಜಿಲ್ಲೆಗೆ ನೇಮಕಾತಿಗಾಗಿ ಅಲಾಟ್ ಮಾಡಿ ಈ ಕೆಳಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಯನ್ನು ಈ ಜಿಲ್ಲೆಯಲ್ಲಿ ದ್ವಿತೀಯ ದರ್ಜೆ ಸಹಾಯಕರೆಂದು ನೇಮಕ ಮಾಡಿಕೊಳ್ಳುವಂತೆ ನಿರ್ದೇಶಿಸಿದ್ದರ ಮೇರೆ ಕೆಳಕಂಡ ಅಭ್ಯರ್ಥಿಯನ್ನು ಸದರಿ ಬ್ಯಾಕ್‌ಲಾಗ್ ಹುದ್ದೆಯಲ್ಲಿ ನೇಮಕ ಮಾಡಿಕೊಳ್ಳುವ ಸಲುವಾಗಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ:ಸಿಬ್ಬಂದಿ. 55/2004-05, ದಿನಾಂಕ: 15ನೇ ಸೆಪ್ಟೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಹಾಗೂ ಉಲ್ಲೇಖ (2)ರ ಬ್ಯಾಕ್‌ಲಾಗ್ ನಿಯಮಗಳನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ಉಲ್ಲೇಖ (5)ರಲ್ಲಿನ ರೀ-ಅಲಾಟ್‌ಮೆಂಟ್ ಆದೇಶದಲ್ಲಿ ಕಂಡು ಬಂದ ಕೆಳಕಂಡ ಪರಿಶಿಷ್ಟ ಜಾತಿಯ ಬ್ಯಾಕ್‌ಲಾಗ್ ಅಭ್ಯರ್ಥಿಯನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ರೂ. 5800-100-6000-125-6500-150-7100-175-7800-200-8600-225-9500-250-10500 ರ ವೇತನ ಶ್ರೇಣಿಯಲ್ಲಿ ಇತರೆ ಭತ್ಯೆಗಳು ಸೇರಿದಂತೆ ತಾತ್ಕಾಲಿಕವಾಗಿ ದ್ವಿತೀಯ ದರ್ಜೆ ಸಹಾಯಕರೆಂದು ನೇಮಕ ಮಾಡಲಾಗಿದೆ. ಹಾಗೂ ಸದರಿ ಅಭ್ಯರ್ಥಿಯನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಕಛೇರಿಗೆ ದ್ವಿತೀಯ ದರ್ಜೆ ಸಹಾಯಕರೆಂದು ಸ್ಥಳ ನಿಯುಕ್ತಿಗೊಳಿಸಿದೆ.

ಕ್ರ ಸಂ.	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	SC/ ST	ಜನ್ಮ ದಿನಾಂಕ	7.9.2002 ರ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು ವ-ತಿಂ-ದಿ	ವಿದ್ಯಾರ್ಹತೆ ಮತ್ತು ಶೇಕಡಾವಾರು ಅಂಕಗಳು	ಅಭ್ಯರ್ಥಿಯನ್ನು ದ್ವಿತೀಯ ದರ್ಜೆ ಸಹಾಯಕರೆಂದು ನೇಮಕ ಮಾಡಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ ಹೆಸರು	ಯಾವ ಮೀಸಲಾತಿ ಅಡಿಯಲ್ಲಿ ಮತ್ತು ಯಾವ ವರ್ಗೀಕರಣದ ಅಡಿಯಲ್ಲಿ ನೇಮಕ ಮಾಡಲಾಗಿದೆಯೋ ಅದರ ವಿವರ
1	ತಾರಾಸಿಂಗ್ ಚಾಜು ಚವಾಣ್ S/o ಚಾಜು ಚವಾಣ್, ಮೊಕ್ಕಾಂ ಪೋಸ್ಟ್, ಹಿಟ್ಟನಹಳ್ಳಿ (LT) ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ-586215	SC	10.06.1972	30.02.27	SSLC:73.833	ಉಪ ನೋಂದಣಿ ಕಛೇರಿ, ಮುಳಬಾಗಿಲು, ಕೋಲಾರ ಜಿಲ್ಲೆ.	ಪರಿಶಿಷ್ಟ ಜಾತಿ ಸಾಮಾನ್ಯ ಅಭ್ಯರ್ಥಿ ಹೆಚ್ಚುವರಿ ಪಟ್ಟಿ

S.S.L.C. ಅಂಕಪಟ್ಟಿಯ ನೋಂದಣಿ ಸಂಖ್ಯೆ: F.157102/ಏಪ್ರಿಲ್ 1989ರ ಪ್ರಕಾರ ಸದರಿ ಅಭ್ಯರ್ಥಿಯ ಜನ್ಮ ದಿನಾಂಕವು 10.06.1972 ಆಗಿರುತ್ತದೆ.

ಈ ನೇಮಕಾತಿ ಆದೇಶವು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ ಮತ್ತು ಅಭ್ಯರ್ಥಿಗಳು ಈ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

ಷರತ್ತುಗಳು:

1. ಈ ನೇಮಕಾತಿಯು ತಾತ್ಕಾಲಿಕವಾಗಿದ್ದು, ಸದರಿ ಅಭ್ಯರ್ಥಿಯನ್ನು ಯಾವುದೇ ನೋಟೀಸ್ ಅಥವಾ ಕಾರಣ ನೀಡದೇ ಯಾವುದೇ ಘಳಿಗೆಯಲ್ಲಾದರೂ ಕೆಲಸದಿಂದ ತೆಗೆದು ಹಾಕುವ ಷರತ್ತಿಗೆ ಒಳಪಟ್ಟು ನೇಮಕಾತಿ ಮಾಡಲಾಗಿದೆ.
2. ಸದರಿ ಅಭ್ಯರ್ಥಿಯನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರಲ್ಲಿನ ನಿಬಂಧನೆಗಳಿಗೆ ಒಳಪಡಿಸಿ ಮತ್ತು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷದ ಅರ್ಹತಾ ಪರೀಕ್ಷಾ ಅವಧಿಗೆ ಒಳಪಡಿಸಿ ತಾತ್ಕಾಲಿಕವಾಗಿ ನೇಮಕ ಮಾಡಲಾಗಿದೆ.
3. ಈ ನೇಮಕಾತಿಯು ಆಗಿಂದಾಗ್ಗೆ ಜಾರಿಯಲ್ಲಿರುವ ಸೇವಾ ಷರತ್ತುಗಳು, ನಿಯಮ ಮತ್ತು ಆದೇಶಗಳಿಗೆ ಒಳಪಡುತ್ತದೆ. ಹಾಗೂ ಸದರಿ ಅಭ್ಯರ್ಥಿಗಳು ಕೆ.ಸಿ.ಎಸ್.ಆರ್ ಮತ್ತು ಕೆ.ಸಿ.ಎಸ್ (ನಡತೆ) ನಿಯಮಗಳು 1966 ರಲ್ಲಿನ ಮತ್ತು ಕೆ.ಸಿ.ಎಸ್ (ಸಿ.ಸಿ.ಎ) ನಿಯಮಗಳು 1957ರಲ್ಲಿನ ಹಾಗೂ ಆಗಿಂದಾಗ್ಗೆ ಜಾರಿಗೆ ಬರುವ ಹಾಗೂ ಜಾರಿಯಲ್ಲಿರುವ ಇತರೆ ಸೇವಾ ಷರತ್ತುಗಳಿಗೆ ಮತ್ತು ನಿಬಂಧನೆಗಳಿಗೆ ಒಳಪಡುತ್ತಾರೆ.
4. ಈ ಆದೇಶ ಮುಟ್ಟಿದ 15 (ಹದಿನೈದು) ದಿನಗಳ ಅವಧಿಯೊಳಗೆ ಅಭ್ಯರ್ಥಿಯು ಕೆಲಸಕ್ಕೆ ಹಾಜರಾಗತಕ್ಕದ್ದು. ಒಂದು ವೇಳೆ ನಿಗದಿತ ಅವಧಿಯೊಳಗೆ ಕೆಲಸಕ್ಕೆ ಹಾಜರಾಗದಿದ್ದಲ್ಲಿ ಈ ನೇಮಕಾತಿ ರದ್ದಾಗುವುದು ಹಾಗೂ ನೇಮಕಾತಿ ಬಗ್ಗೆ ಅಭ್ಯರ್ಥಿಯು ಯಾವ ಹಕ್ಕನ್ನೂ ಹೊಂದಿರುವುದಿಲ್ಲವೆಂದು ತಿಳಿಯತಕ್ಕದ್ದು.
5. ಅರ್ಹತಾ ಪರೀಕ್ಷಾ ಅವಧಿಯು ಎರಡು ವರ್ಷಗಳೆಂದು ನಿಗದಿಪಡಿಸಿದೆ. ಈ ಅವಧಿಯೊಳಗೆ 1974ರ ಕರ್ನಾಟಕ ನಾಗರೀಕ ಸೇವಾ (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಾವಳಿಯಲ್ಲಿ ಈ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳಲ್ಲಿ ಅಭ್ಯರ್ಥಿಯು ಕಡ್ಡಾಯವಾಗಿ ತೇರ್ಗಡೆ ಹೊಂದತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಕೆ.ಸಿ.ಎಸ್ (ಪ್ರೊಬೇಷನ್) ರೂಲ್ಸ್ 1977ರ ಅಡಿಯಲ್ಲಿ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು.
6. ಅಭ್ಯರ್ಥಿಯು ತಮಗೆ ವಹಿಸಿದ ಕೆಲಸ ಕಾರ್ಯಗಳನ್ನು ತೃಪ್ತಿಕರವಾಗಿ ಮಾಡತಕ್ಕದ್ದು.
7. ಅಭ್ಯರ್ಥಿಯು ತಮ್ಮ Pass Port Size ನ ಎರಡು ಇತ್ತೀಚಿನ ಫೋಟೋಗಳನ್ನು ತಾವು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿನ ಆ ಕಛೇರಿಯ ಮುಖ್ಯಸ್ಥರ ಮುಂದೆ ಹಾಜರುಪಡಿಸತಕ್ಕದ್ದು.
8. ವಿದ್ಯಾರ್ಹತೆಯ ಬಗ್ಗೆ ಇರುವ ಮೂಲ ಅಂಕಪಟ್ಟಿಯನ್ನು ಮತ್ತು ಪ್ರಮಾಣ ಪತ್ರಗಳನ್ನು ಹಾಗೂ SSLC ಮೂಲ ಅಂಕಪಟ್ಟಿಯನ್ನು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರ ಮುಂದೆ ಹಾಜರುಪಡಿಸತಕ್ಕದ್ದು.

9. ಜನ್ಮ ದಿನಾಂಕದ ಬಗ್ಗೆ ಮೂಲ ಪ್ರಮಾಣ ಪತ್ರವನ್ನು ಮತ್ತು ಶಾಲೆಯಿಂದ ನೀಡಿದ ಮೂಲ TC ಯನ್ನು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರ ಮುಂದೆ ಹಾಜರುಪಡಿಸತಕ್ಕದ್ದು.
10. ಭಾರತದ ಸಂವಿಧಾನಕ್ಕೆ ಬದ್ದರಾಗಿರುವ ಬಗ್ಗೆ ನಿಷ್ಠೆ ಪ್ರಮಾಣ ಪತ್ರವನ್ನು (ಪ್ರತಿಜ್ಞಾ ವಿಧಿ) ಇದಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರಿಗೆ ಬರೆದುಕೊಡತಕ್ಕದ್ದು.
11. ಕೆಲಸಕ್ಕೆ ಹಾಜರಾಗುವ ಮುನ್ನ ಅಭ್ಯರ್ಥಿಯು ಸಂಬಂಧಪಟ್ಟ ಜಿಲ್ಲಾ ಸರ್ಜನ್‌ನಿಂದ ದೈಹಿಕ ಪ್ರಮಾಣ ಪತ್ರವನ್ನು ನಿಗದಿತ ನಮೂನೆಯಲ್ಲಿ ಪಡೆದು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರ ಮುಂದೆ ಹಾಜರುಪಡಿಸತಕ್ಕದ್ದು.
12. ಅಭ್ಯರ್ಥಿಯು ಕಡೆಯದಾಗಿ ಹಾಜರಾಗಿದ್ದ ಶಾಲೆಯ ಮುಖ್ಯೋಪಾಧ್ಯಾಯರು ನೀಡಿರುವ ನಡತೆ ಪ್ರಮಾಣ ಪತ್ರವನ್ನು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರ ಮುಂದೆ ಹಾಜರುಪಡಿಸತಕ್ಕದ್ದು.
13. ಅಭ್ಯರ್ಥಿಯು ಮದುವೆಯಾಗಿದ್ದಲ್ಲಿ, ಒಬ್ಬರೆ ಪತಿ ಅಥವಾ ಪತ್ನಿ ಹೊಂದಿರುವ ಬಗ್ಗೆ ಕೆ.ಸಿ.ಎಸ್ (ನಡತೆ) ನಿಯಮಗಳು, 1966ರಲ್ಲಿನ ನಿಯಮ 28ರ ರೀತ್ಯ ಇದಕ್ಕೆ ಲಗತ್ತಿಸಿರುವ ನಮೂನೆಯಲ್ಲಿರುವ ಘೋಷಣಾ ಪತ್ರವನ್ನು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರ ಮುಂದೆ ಘೋಷಣೆ ಹಾಜರ್‌ಪಡಿಸತಕ್ಕದ್ದು.
14. ಅಭ್ಯರ್ಥಿಯು ತಮ್ಮ ಜಾತಿ, ಜನ್ಮ ದಿನಾಂಕ, ವಿದ್ಯಾರ್ಹತೆ ಇತ್ಯಾದಿಯಾಗಿ ಯಾವುದೇ ವಿಚಾರದಲ್ಲಿ ಅಭ್ಯರ್ಥಿಯು ನೀಡಿರುವ ವಿವರಗಳು ಸುಳ್ಳೆಂದಾಗಲೀ ಅಥವಾ ತಪ್ಪೆಂದಾಗಲೀ ತಿಳಿದು ಬಂದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಭಾರತೀಯ ದಂಡ ಸಂಹಿತೆಯಲ್ಲಿನ ಸೂಕ್ತ ಕಲಂಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಹಾಗೂ ಕೆ.ಸಿ.ಎಸ್. (ಸಿ.ಸಿ.ಎ) ನಿಯಮಗಳು 1957ರ ಅಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
15. ಅಭ್ಯರ್ಥಿಗಳು ಸಲ್ಲಿಸಿರುವ ಅಂಕಪಟ್ಟಿಗಳು ಮತ್ತು ಮೀಸಲಾತಿ ಪ್ರಮಾಣ ಪತ್ರಗಳು ಹಾಗೂ ಜಾತಿ ಪ್ರಮಾಣ ಪತ್ರಗಳು ಸಕ್ಷಮ ಪ್ರಾಧಿಕಾರದಿಂದ ಸತ್ಯಾಪನೆಗೆ ಒಳಪಡುತ್ತವೆ.
16. ಒಂದು ವೇಳೆ ಅಭ್ಯರ್ಥಿಯು ಸಲ್ಲಿಸಿರುವ ಅಂಕಪಟ್ಟಿಗಳು ಮತ್ತು ಮೀಸಲಾತಿ ಪ್ರಮಾಣ ಪತ್ರಗಳು ಹಾಗೂ ಜಾತಿ ಪ್ರಮಾಣ ಪತ್ರಗಳು ಸುಳ್ಳು ಅಥವಾ ನಕಲಿ ಎಂದು ದೃಢಪಟ್ಟಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ಮತ್ತು ನೇಮಕಾತಿಯನ್ನು ಶಾಶ್ವತವಾಗಿ ರದ್ದುಪಡಿಸಲಾಗುವುದು ಹಾಗೂ ಅಭ್ಯರ್ಥಿಯ ವಿರುದ್ಧ ಭಾರತೀಯ ದಂಡ ಸಂಹಿತೆಯಲ್ಲಿನ ಸೂಕ್ತ ಕಲಂಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಹಾಗೂ KCS (CCA) ನಿಯಮಗಳು 1957ರ ಅಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಇದಕ್ಕೆ ಬದ್ದನಾಗಿರುತ್ತೇನೆ ಎಂಬ ಬಗ್ಗೆ ಅಭ್ಯರ್ಥಿಯು 20/– ರೂ.ಗಳ ಛಾಪಾ ಕಾಗದದಲ್ಲಿ ಮುಚ್ಚಳಿಕೆ ನಮೂನೆ–1 ಅನ್ನು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರಿಗೆ ಬರೆದುಕೊಡತಕ್ಕದ್ದು.
17. ಅಭ್ಯರ್ಥಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಲ್ಲವೆಂದು ಸತ್ಯಾಪನೆಯಿಂದ ದೃಢಪಟ್ಟಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ಶಾಶ್ವತವಾಗಿ ಯಾವುದೇ ಸೂಚನೆ ಇಲ್ಲದೆ ರದ್ದುಪಡಿಸಲಾಗುವುದು.
18. ಈ ನೇಮಕಾತಿ ಆದೇಶವು ಯಾವುದೇ ಸಂದರ್ಭದಲ್ಲಾದರೂ ತಿದ್ದೋಲೆ ಮತ್ತು ಮಾರ್ಪಾಡಿಗೆ ಒಳಪಟ್ಟಿರುತ್ತದೆ.
19. ನೇಮಕಾತಿ ಮಾಡಿರುವ ಸ್ಥಳದ ಅಥವಾ ಕಛೇರಿಯ ಮಾರ್ಪಾಡಿಗಾಗಿ ಯಾವುದೇ ಮನವಿಗಳನ್ನು ಯಾವುದೇ ಕಾರಣಕ್ಕಾಗಲೀ ಪುರಸ್ಕರಿಸಲಾಗುವುದಿಲ್ಲ:
20. ಅಭ್ಯರ್ಥಿಯು KGID ಯಲ್ಲಿ ಸರ್ಕಾರಿ ವಿಮೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.
21. ಈ ನೇಮಕಾತಿಗಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪೈಕಿ ಬೇರೆ ಇನ್ನ್ಯಾವುದೇ ಅಭ್ಯರ್ಥಿಯು ಅವರ ಆಯ್ಕೆಯನ್ನು ದಾಖಲೆ ಸಹಿತ Establish ಮಾಡಿದಲ್ಲಿ ಅಥವಾ ನನ್ನ ನೇಮಕಾತಿಯು ಅಸಿಂಧುವೆಂದು ದಾಖಲೆಗಳ ಸಹಿತ ಸಾಬೀತು ಪಡಿಸಿದಲ್ಲಿ ನನ್ನ ನೇಮಕಾತಿಯನ್ನು ಯಾವುದೇ ಕಾರಣ ನೀಡದೇ ಅಥವಾ ಯಾವುದೇ ಸೂಚನೆ ಇಲ್ಲದೇ ಶಾಶ್ವತವಾಗಿ ರದ್ದುಪಡಿಸಿ ನನ್ನ ಬದಲಿಗೆ ಬೇರೊಬ್ಬರನ್ನು ಆಯ್ಕೆ ಮಾಡಬಹುದು ಎಂಬ ಬಗ್ಗೆ ಅಭ್ಯರ್ಥಿಯು 20/– ರೂ. ಛಾಪಾ ಕಾಗದದಲ್ಲಿ ಮುಚ್ಚಳಿಕೆ ನಮೂನೆ–2 ಅನ್ನು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರಿಗೆ ಬರೆದುಕೊಡತಕ್ಕದ್ದು.
22. ಎರಡು ವರ್ಷದ ಪರೀಕ್ಷಾರ್ಥ ಅವಧಿಯಲ್ಲಿ ಅಭ್ಯರ್ಥಿಗಳು ತಮ್ಮ ವರ್ಗಾವಣೆಗಾಗಿ ರಾಜಕೀಯ ಅಥವಾ ಇನ್ನಾವುದೇ ರೀತಿಯ ಒತ್ತಡ ತಂದಲ್ಲಿ ಅಂತಹವರ ವಿರುದ್ಧ ಕಾನೂನು ರೀತ್ಯಾ ಶಿಸ್ತು ಕ್ರಮ ಜರುಗಿಸಲಾಗುವುದು.
23. ಸರ್ಕಾರದವರು ಈ ಹಿಂದೆ ಜಾರಿಯಲ್ಲಿದ್ದ ನಿವೃತ್ತಿ ಪಿಂಚಣಿ ಸೌಲಭ್ಯ ಯೋಜನೆಗೆ ಬದಲಾಗಿ ದಿನಾಂಕ: 01.04.2006 ರಿಂದ ಜಾರಿಗೆ ಬರುವಂತೆ ಉಲ್ಲೇಖ (6)ರ ಸರ್ಕಾರದ ಆದೇಶದಲ್ಲಿ ಹೊಸದಾಗಿ New Defined contributory Pension Scheme ಎಂಬ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿರುತ್ತಾರೆ. ಈ ಹೊಸ ಪಿಂಚಣಿ ಯೋಜನೆಯು ದಿನಾಂಕ: 01.04.2006 ರಿಂದ ಅಥವಾ ತದನಂತರ ನೇಮಕಾತಿ ಹೊಂದಿದ ಎಲ್ಲಾ ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯಿಸುತ್ತದೆ ಎಂದು ಆದೇಶ ಮಾಡಿರುತ್ತಾರೆ. ಆದ್ದರಿಂದ ಈ ಜಿಲ್ಲೆಯಲ್ಲಿ ನೇಮಕ ಹೊಂದಿದ ಸದರಿ ನೌಕರರು ಸರ್ಕಾರದ ಉಲ್ಲೇಖ (6)ರ ಆದೇಶದನ್ವಯ ಹೊಸ ಪಿಂಚಣಿ ಯೋಜನೆಗೆ ಒಳಪಡುತ್ತಾರೆಂದು ಈ ಮೂಲಕ ಆದೇಶಿಸಿದೆ ಹಾಗೂ ಉಲ್ಲೇಖ (6)ರ ಆದೇಶದಲ್ಲಿನ ನಿರ್ದೇಶನಕ್ಕೆ ಸದರಿ ನೌಕರರು ಬದ್ಧರಾಗಿರತಕ್ಕದ್ದು.

ನೇಮಕಾತಿ ಪ್ರಾಧಿಕಾರಿ ಹಾಗೂ ಜಿಲ್ಲಾ ನೋಂದಣಾಧಿಕಾರಿಗಳು,
ಕೋಲಾರ ಜಿಲ್ಲೆ, ಕೋಲಾರ.

ಪಿ.ಆರ್. 798

ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್, ಕೋಲಾರ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 01/2009-10, ದಿನಾಂಕ: 3ನೇ ಅಕ್ಟೋಬರ್ 2009

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೋಲಾರ ತಾಲ್ಲೂಕು ಪಂಚಾಯತ್‌ನ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡ ಕಸಿ/ಸಸಿಗಳನ್ನು ಸರಬರಾಜು ಮಾಡಲು ದ್ವಿ ಲಕೋಟೆಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ.

1.	ಅರ್ಜಿಯನ್ನು ಸ್ವೀಕರಿಸುವ ದಿನಾಂಕ	03.10.2009 ರಿಂದ 20.10.2009 ಸಾಯಂಕಾಲ 4.30 ಗಂಟೆಯವರೆಗೆ
2.	ಟೆಂಡರ್ ಫಾರಂಗಳನ್ನು ನೀಡುವ ದಿನಾಂಕ	03.10.2009 ರಿಂದ 20.10.2009 ಸಾಯಂಕಾಲ 4.30 ಗಂಟೆಯವರೆಗೆ
3.	ಟೆಂಡರ್ ಫಾರಂಗಳ ಶುಲ್ಕ	ರೂ.500=00
4.	ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಕಛೇರಿಗೆ ಸಲ್ಲಿಸುವ ದಿನಾಂಕ	22.10.2009 ಸಾಯಂಕಾಲ 4.00 ಗಂಟೆಯವರೆಗೆ
5.	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ	23.10.2009 ಬೆಳಿಗ್ಗೆ 11.30 ಗಂಟೆಗೆ
6.	ಆರ್ಥಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ	23.10.2009 ಸಾಯಂಕಾಲ 4.30 ಗಂಟೆಗೆ
7.	ಟೆಂಡರ್ ತೆರೆಯುವ ವಿಳಾಸ	ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು (ಜಿಲ್ಲಾ ಪಂಚಾಯತ್), ಕೋಲಾರ.

ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಗಳನ್ನು ಪರಿಗಣಿಸಲಾಗುವುದು.

ಕ್ರ. ಸಂ.	ಸರಬರಾಜು ಮಾಡಬೇಕಾದ ಕಸಿ/ಸಸಿಗಳ ವಿವರಗಳು	ಟೆಂಡರ್‌ಗೆ ಇಟ್ಟಿರುವ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ)	ಷರಾ
1.	ಮಾವು ಕಸಿ, ಸಪೋಟ ಕಸಿ, ಮತ್ತು ತೆಂಗು ಸಸಿಗಳ ಸರಬರಾಜು	20.70	50,000/-	ಟೆಂಡರ್ ಫಾರಂಗಳನ್ನು ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು (ಜಿಲ್ಲಾ ಪಂಚಾಯತ್) ಕೋಲಾರರವರ ಕಛೇರಿಯಲ್ಲಿ ಪಡೆಯಬಹುದು.

ಹೆಚ್ಚಿನ ವಿವರಗಳಿಗೆ ಹಾಗೂ ಷರತ್ತುಗಳಿಗೆ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು (ಜಿ.ಪಂ.) ಕೋಲಾರ ರವರ ಕಛೇರಿಯಲ್ಲಿ ಪಡೆಯಬಹುದು.

ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು,
(ಜಿಲ್ಲಾ ಪಂಚಾಯತ್), ಕೋಲಾರ

ಪಿ.ಡಿ. 118

WATER RESOURCES DEPARTMENT (Minor Irrigation)

Office of the Executive Engineer M.I. Division, Belgaum

Tender Invitation (Two cover system)

(Standard Tender Document K/W 4)

No.EE/MID/BGM/JE/TND/2009- 10/3229, Dated: 26th September 2009

1. The Executive Engineer, Minor Irrigation Division Belgaum invites item rate tender from eligible tenderers Registered in KPWD for the works below in two cover system in duplicate as per the Karnataka transparency in Public Procurement Ordinance act 2000 & standard Tender document. The tenderer are advised to note the minimum qualification criteria specified in K/W-4 clause (3) of the Instructions to tenderers to qualify for award of the contract.
2. Two cover bid system of tenders consist of cover-I i.e., Technical Bid & cover-II Financial Bid, Technical Bid opened first, and eligibility of tenderers evaluated on the criteria prescribed then, The Financial Bid of eligible tenderers only will be opened and evaluated. The decision of the competent authority is the final in this regard.
3. Printed contract documents relating to work consisting of the complete set of drawings, specifications of the work to be done, the schedule of quantities, set of conditions of contract to be complied which can be purchased from the office of the Executive Engineer Minor Irrigation Division Belgaum by

submitting the written application along with a Photostat copy of registration certificate, within office hours on all working days on or before the due date along with cost of tender document.

4. The applicant who wish to get the Blank tender document by post shall submit self addressed 350 mm x 245 mm sized envelope along with Rs.300/- Indian postage stamps. Any delay in transit will be at the risk of the applicant.
5. The intending contractors are requested to note that, they should abide by the details instructions & conditions contained in the standard Tender document K/W-4 purchased by them, particulars regarding the amount and validity period of Earnest Money Deposit, Tender validity period, procedure to be followed by the contractor in submitting the tender & in completing the tender documents, correction paras discrepancies, Security Deposit, payable by the successful tender etc., are also available in Tender document.
6. Further information & clarification may be obtained from this office during office hours, if the office happens to be closed on the date as specified next working day will be considered and during the pre-tender meeting.
7. The sealed completed tenders will be received in the Office of the Chief Engineer, M.I.(N) Zone Bijapur, Superintending Engineer, M.I.Circle Belgaum & Executive Engineer Minor Irrigation Division Belgaum on the prescribed date & time.

Other details can be seen in the Standard Tender Documents (K/W-4) .

Sl. No.	Name of work	Approximate value of work (Rs. In lakhs)	Earnest Money Deposit (Rs.)	Cost of document (Rs.)	Period of completion (including monsoon)
1	Construction of LIS near Boragaon Village in Chikkodi Tq. Belgaum Dist.	435.27	6.53000/-	25000.00+ Tax	18 months (including monsoon)

1. Date of Sale of Tender documents On Application (During Office hours):
   From : 09/11/2009 to 13/11/2009

   (Each Tenderer further demonstrate as given in conditions Sl.No.8(iv) : (a) availability by owning as least 50% of the required/ specified key and critical equipment for this work and (b) the remaining 50% can be deployed on lease/ hire basis for all works provided, the relevant documents (commitment, agreements etc.) for availability for this work are to be furnished with the Tender application) failing which such applications will be not be accepted.
2. Date of Pre-tender meeting : 23-11-09 (In the office of the Executive Engineer, M.I. Division, Belgaum at 11.00 AM
3. Date of receipt of tender document Dt : 08/12/2009 (Up to 16-00 hrs)
4. Date of opening of Technical Bid: Dt.10-12-2009 at 16.00 hrs (if possible)
5. Date of opening of Financial Bid : Shall be Intimated later.

9. Conditions

1) The contractor while applying for blank tender forms should submit contractor Registration certificate copy.
2) The earnest money deposit shall be in favour of Executive Engineer, M.I. Division Belgaum and may be in the form of Banker's cheque/DD/Pay order/ payable at Belgaum or Cash or Specified small savings instruments pledged to Executive Engineer M.I.Division Belgaum.
3) The contractor should produce Original Registration pass book while receiving blank tender forms.
4) The validity of EMD shall be for a period 135 days from the last date of receipt of the tender.

5) Security deposit should be paid 5% before Agreement (For approved tender amount)

10. The applicant should have the Eligibility criteria as per section-3 of KW-4 & Note that

i) Each Tenderer should demonstrate: (a) availability by owning at least 50% of the required/ specified key and critical equipment for this work and (b) the remaining 50% can be deployed on lease/ hire basis for all works provided, the relevant documents (commitment, agreements etc.) for availability for this work are furnished.(to be furnisghed along with the Application Form)

❖ Excavator	1 No.
❖ Lorry/Tipper	2 Nos.
❖ C.C.Mixer with Hopper	3 Nos
❖ Vibrator	4 Nos.
❖ Dewatering pump	4 Nos.
❖ Centering Materials	Sufficient for 100 Cum Per day
❖ Crane for Pipe Laying	1 No.

11 . All the documents enclosed in support of Technical bid shall be attested by Notary or Gazetted officer. (Not below the rank of Executive Engineer,)

12. Application will not be accepted/ Tender forms will not issued to the contractor who have not participated in the tender after purchase of tender documents continuously for 3 times.

13. The right to accept or reject any or all the tenders without assigning any reasons rates is with the competent authority

14. Conditional tenders will not be considered.

V.B. KULKARNI

Executive Engineer, M.I.Division, Belgaum.

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ, ಸಣ್ಣ ನೀರಾವರಿ ವಿಭಾಗ, ಬೆಳಗಾವಿ.

ಕ್ರ.ಸಂ.ಸನೀವಿ.ಬೆಳಗಾವಿ/ಕಿ.ಇಂ./ಟೆಂಡರ್/2009-10/3229, ದಿನಾಂಕ: 26ನೇ ಸೆಪ್ಟೆಂಬರ್ 2009

ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ದತಿ)

(ಸ್ಟ್ಯಾಂಡರ್ಡ್ ಟೆಂಡರ್ ಡ್ಯಾಕ್ಯೂಮೆಂಟ್ ಪದ್ದತಿ ಕೆ/ಡಬ್ಲ್ಯೂ 4)

1) ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಐಟಂ ರೇಟ್ ಟೆಂಡರ್‌ನ್ನು ದ್ವಿ ಲಕೋಟೆ ಪದ್ದತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 2000 ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡ್ಯಾಕ್ಯುಮೆಂಟ್ ಪ್ರಕಾರ ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರಿಂದ ಆಹ್ವಾನಿಸಲಾಗಿದೆ. ಗುತ್ತಿಗೆ ಪಡೆಯಲು ಕನಿಷ್ಠ ಅವಶ್ಯಕ ಅರ್ಹತೆಗಳಿಗಾಗಿ ಕೆ/ಡಬ್ಲ್ಯೂ-4 ಗುತ್ತಿಗೆದಾರರ ಸೂಚನೆಗಳಲ್ಲಿನ ಕಲಂ (3) ನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ.

2) ದ್ವಿ ಲಕೋಟೆಗಳಲ್ಲಿ ಒಂದು ತಾಂತ್ರಿಕ ಬಿಡ್ ಎರಡನೆಯದು ಆರ್ಥಿಕ ಬಿಡ್ ಆಗಿರುತ್ತದೆ. ತಾಂತ್ರಿಕ ಬಿಡ್ ಅನ್ನು ಪ್ರಥಮ ಹಂತದಲ್ಲಿ ತೆರೆಯಲಾಗುವುದು ತದನಂತರ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ಮಾತ್ರ ತೆರೆದು ವಿಶ್ಲೇಷಿಸಲಾಗುವುದು. ಈ ವಿಷಯದಲ್ಲಿ ಸಕ್ಷಮ ಅಧಿಕಾರಿಗಳ ನಿರ್ಧಾರವು ಅಂತಿಮವಾಗಿರುತ್ತದೆ.

3) ಕಾಮಗಾರಿಗೆ ಸಂಬಂಧಿಸಿದ ಐಟಂವಾರು ಪರಿಮಾಣ, ಗುತ್ತಿಗೆಯ ಪತ್ರಗಳು, ಕರಾರುಗಳು, ಕೈಕೊಳ್ಳಬೇಕಾದ ಕಾಮಗಾರಿಯ ವಿವರ, ಹಾಗೂ ನಕ್ಷೆಗಳು ಇತ್ಯಾದಿಗಳನ್ನೊಳಗೊಂಡ ಮುದ್ರಿತ ಟೆಂಡರ್ ಪುಸ್ತಕಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ವಿಭಾಗ ಬೆಳಗಾವಿ ಇವರಿಂದ ಕಚೇರಿ ವೇಳೆಯಲ್ಲಿ ಲಿಖಿತ ಅರ್ಜಿ ಸಲ್ಲಿಸಿ, ಗುತ್ತಿಗೆದಾರರೆಂದು ನೋಂದಾಯಿಸಿದ ಬಗೆಗಿನ ಪ್ರಮಾಣ ಪತ್ರದ ಪ್ರತಿ ಹಾಗೂ ನಿಗದಿತ ಶುಲ್ಕವನ್ನು ಸಂದಾಯ ಮಾಡಿ ಖರೀದಿಸಬಹುದು.

4) ಖಾಲಿ ಟೆಂಡರ್ ಪುಸ್ತಕಗಳಿಗಾಗಿ ಅರ್ಜಿಯನ್ನು ಅಂಚೆ ಮೂಲಕ ಸಲ್ಲಿಸುವವರು ನಿಗದಿತ ಶುಲ್ಕವನ್ನು ರಾಷ್ಟ್ರೀಕೃತ/ಶೆಡ್ಯೂಲ್ಡ್ ಭಾರತೀಯ ಬ್ಯಾಂಕಿನಿಂದ ಪಡೆದ ಡಿ.ಡಿ.ಮುಖಾಂತರ ಗುತ್ತಿಗೆದಾರರೆಂದು ನೋಂದಾಯಿಸಿದ ಬಗೆಗಿನ ಪ್ರಮಾಣ ಪತ್ರದ ಪ್ರತಿಯೊಂದಿಗೆ ಸಲ್ಲಿಸಬಹುದಾಗಿದೆ. ಟೆಂಡರ್ ಪುಸ್ತಕಗಳನ್ನು ಅಂಚೆ ಮೂಲಕ ಪಡೆಯಲಿಚ್ಚಿಸುವ ಗುತ್ತಿಗೆದಾರರು

ಅರ್ಜಿಯ ಜೊತೆಗೆ ಸ್ವವಿಳಾಸವಿರುವ 350 ಎಂಎಂ X 245 ಎಂ.ಎಂ. ಅಳತೆಗೂ ಕಡಿಮೆ ಇಲ್ಲದ ರೂ.300.00ಗಳ ಅಂಚೆ ಚೀಟಿ ಅಂಟಿಸಿದ ಲಕೋಟೆಯನ್ನು ಸಲ್ಲಿಸಬೇಕು. ಅಂಚೆಯಲ್ಲಿ ಅಥವಾ ಕೊರಿಯರ್‌ನಲ್ಲಿ ಯಾವುದೇ ತರಹದ ವಿಳಂಬವಾದಲ್ಲಿ ಅದಕ್ಕೆ ಈ ಕಚೇರಿಯು ಜವಾಬ್ದಾರಿಯಿಲ್ಲವೆಂದು ತಿಳಿಯಪಡಿಸಲಾಗಿದೆ.

5) ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ತಾವು ಖರೀದಿಸಲು ಇಚ್ಚಿಸಿದ ಕಾಮಗಾರಿಗಳ ಟೆಂಡರ್ ಪುಸ್ತಕದ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ/ಡಬ್ಲ್ಯೂ–4ರಲ್ಲಿನ ಅಂಶಗಳಿಗೆ ಬದ್ಧರಾಗಿರಬೇಕೆಂದು, ಟೆಂಡರ್‌ಗಿಟ್ಟ ಮೊತ್ತ, ಟೆಂಡರ್ ವ್ಯಾಲಿಡಿಟಿ, ಟೆಂಡರ್ ಸಲ್ಲಿಸಲು ಗುತ್ತಿಗೆದಾರರು ಪಾಲಿಸಬೇಕಾದ ನಿಯಮಗಳು, ತಿದ್ದುಪಡಿಗಳ ಸರಿಪಡಿಸುವಿಕೆ, ವ್ಯತ್ಯಾಸಗಳು, ಗುತ್ತಿಗೆದಾರರು ಸಲ್ಲಿಸಬೇಕಾದ ಠೇವಣಿ ಮೊತ್ತ, ಸೆಕ್ಯೂರಿಟಿ ಠೇವಣಿ ಮೊತ್ತ ಇತ್ಯಾದಿ ವಿವರಗಳು ಲಭ್ಯವಿರುತ್ತವೆ.

6) ಇನ್ನುಳಿದ ಎಲ್ಲ ವಿವರಗಳನ್ನು ಕಚೇರಿಯ ವೇಳೆಯಲ್ಲಿ ಈ ಕಚೇರಿಯಲ್ಲಿ ಹಾಗೂ ಪೂರ್ವ ಟೆಂಡರ್ ಸಭೆಯಲ್ಲಿ ಪಡೆಯಬಹುದು ಕೆಳಗೆ ನಮೂದಿಸಿದ ದಿನಾಂಕಗಳಲ್ಲಿ ಯಾವುದಾದರೂ ರಜಾ ದಿನವಾಗಿದ್ದಲ್ಲಿ ಮುಂದಿನ ಕಚೇರಿಯ ಕಾರ್ಯನಿರ್ವಹಿಸುವ ದಿನಾಂಕವನ್ನು ಕಡೆಯ ದಿನವೆಂದು ಪರಿಗಣಿಸುವುದು.

7) ಭರ್ತಿ ಮಾಡಿದ ಮೊಹರ್ ಬಂದ ಟೆಂಡರ್‌ಗಳನ್ನು ಮುಖ್ಯ ಇಂಜಿನೀಯರರು ಸಣ್ಣ ನೀರಾವರಿ (ಉ)ವಲಯ ಬಿಜಾಪೂರ, ಅಧೀಕ್ಷಕ ಇಂಜಿನೀಯರ್ ಸಣ್ಣ ನೀರಾವರಿ ವೃತ್ತ ಬೆಳಗಾವಿ ಹಾಗೂ ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ವಿಭಾಗ ಬೆಳಗಾವಿ ಇವರ ಕಚೇರಿಗಳಲ್ಲಿ ಇರಿಸಿದ ಮೊಹರ್ ಮಾಡಿದ ಟೆಂಡರ್ ಪೆಟ್ಟಿಗೆಯಲ್ಲಿ ನಿಗದಿತ ಸಮಯದಲ್ಲಿ ಸ್ವೀಕರಿಸಲಾಗುವುದು.

8) ಇನ್ನುಳಿದ ವಿವರಗಳನ್ನು ಹಾಗೂ ನಿಯಮಗಳನ್ನು ಮಾದರಿ ಗುತ್ತಿಗೆ ದಾಖಲೆ (ಕೆ/ಡಬ್ಲ್ಯೂ–4)ದಲ್ಲಿ ವಿವರಿಸಲಾಗಿದ್ದು ಗುತ್ತಿಗೆದಾರರು ನಿಯಮಾವಳಿಗಳನ್ನು ಸಂಪೂರ್ಣ ಅಭ್ಯಸಿಸಿ ಅರ್ಥೈಸಿಕೊಳ್ಳಲು ಸೂಚಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಡುಗಂಟು ಮೊತ್ತ (ರೂ. ಗಳಲ್ಲಿ)	ಟೆಂಡರ್ ಫಾರಂ ಬೆಲೆ ರೂ.+ತೆರಿಗೆ ಪ್ರತ್ಯೇಕ ಹಿಂದಿರುಗಿ ಸಲಾಗದು	ಕೆಲಸವನ್ನು ಮುಗಿಸುವ ಕಾಲಮಿತಿ ಮಳೆಗಾಲ ಸೇರಿ
1	ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಬೋರಗಾಂವ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ	435.27	653000/–	25000+ ತೆರಿಗೆ	18 ತಿಂಗಳು (ಮಳೆಗಾಲ ಸೇರಿ)

ಮೇಲಿನ ಕಾಮಗಾರಿಗಳಿಗೆ ಈ ಕೆಳಗಿನಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

1) ಖಾಲಿ ಟೆಂಡರ್ ಪುಸ್ತಕಗಳಿಗಾಗಿ ಅರ್ಜಿ ಸಲ್ಲಿಸಿ ಖಾಲಿ ಟೆಂಡರ್ ಪುಸ್ತಕಗಳನ್ನು ಈ ಕಛೇರಿಯಲ್ಲಿ ಪಡೆಯುವ ದಿನಾಂಕಗಳು (ಕಚೇರಿ ವೇಳೆಯಲ್ಲಿ) : 09/11/2009 ರಿಂದ 13/11/2009
(ಸದರಿ ಕಾಮಗಾರಿಗಳಿಗಾಗಿ ಅವಶ್ಯವಿರುವ ಈ ಕೆಳಗಿನ ಷರತ್ತುಗಳಲ್ಲಿನ ಕ್ರಮ ಸಂಖ್ಯೆ 10(I) ಯಂತ್ರೋಪಕರಣಗಳನ್ನು ಸ್ವತಃ ಅಥವಾ ಲೀಜ್ ಮೇಲೆ ಹೊಂದಿರುವ, ಲೀಜ್ ಆಗಿದ್ದಲ್ಲಿ ಜಿ.ಪಿ.ಎ.ಮೂಲ ದಾಖಲಾತಿ ಒದಗಿಸುವುದು, ಹಾಗೂ ಶೇಕಡಾ 50ರಷ್ಟು ವಾಹನಗಳ ಸ್ವಂತ ಮಾಲಿಕತ್ವ ಹೊಂದಿರುವ ವಿವರಗಳನ್ನು ಅರ್ಜಿಯ ಜೊತೆಗೆ ಲಗತ್ತಿಸಿ ಅರ್ಜಿಯನ್ನು ಸಲ್ಲಿಸುವುದು).

2) ಪೂರ್ವ ಟೆಂಡರ್ ಸಭೆಯ ದಿನಾಂಕ 23–11–09 (ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ವಿಭಾಗ, ಬೆಳಗಾವಿ. ಇವರ ಕಛೇರಿಯಲ್ಲಿ ಮುಂ 11.00 ಘಂಟೆ)

3) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ದಿನಾಂಕ : 8/12/2009 ಸಂಜೆ 16.00 ಘಂಟೆಯೊಳಗಾಗಿ

4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ :10/12/2009 ಸಂಜೆ 16.00 ಘಂಟೆ.(ಸಾಧ್ಯವಾದಲ್ಲಿ)

5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : ತದನಂತರ ತಿಳಿಸಲಾಗುವುದು.

9) ಷರತ್ತುಗಳು

1) ಟೆಂಡರ್ ಖಾಲಿ ಪುಸ್ತಕಗಳನ್ನು ಪಡೆಯಲು ಇಚ್ಛಿಸುವ ಗುತ್ತಿಗೆದಾರರು ಅರ್ಜಿಯ ಜೊತೆ ನೋಂದಾಯಿತ ಪ್ರಮಾಣ ಪತದ್ರ ಪ್ರತಿಯನ್ನು ಲಗತ್ತಿಸಬೇಕು.

2) ಅಗತ್ಯವಾದ ಮುಂಗಡ ಠೇವಣಿಯನ್ನು (ಇ.ಎಮ್.ಡಿ)ನಗದು ಅಥವಾ ಕಾರ್ಯನಿರ್ವಾಹಕ ಅಭಿಯಂತರರು ಸಣ್ಣ ನೀರಾವರಿ ವಿಭಾಗ, ಬೆಳಗಾವಿ. ಇವರ ಹೆಸರಿಗೆ ಬೆಳಗಾವಿಯಲ್ಲಿ ನಗದೀಕರಣಗೊಳಿಸಬಹುದಾದ ಬ್ಯಾಂಕರ್ ಚೆಕ್/ಡಿಡಿ/ಪೇ–ಆರ್ಡರ್/ ರೂಪದಲ್ಲಿ ಅಥವಾ ಕಾರ್ಯನಿರ್ವಾಹಕ ಅಭಿಯಂತರರು ಸಣ್ಣ ನೀರಾವರಿ ವಿಭಾಗ. ಬೆಳಗಾವಿ ಇವರ ಹೆಸರಿಗೆ ಪ್ಲೆಡ್ಜ್ ಮಾಡಿದ ಸಣ್ಣ ಉಳಿತಾಯದ ಪತ್ರಗಳನ್ನು ಸಲ್ಲಿಸಬೇಕು.

3) ಖಾಲಿ ಟೆಂಡರ್ ಪುಸ್ತಕಗಳನ್ನು ಪಡೆಯಲು ತಮ್ಮ ಮೂಲ ನೋಂದಣಿ ಪುಸ್ತಕ ತರುವುದು.

4) ಇ.ಎಮ್.ಡಿ ಮಾನ್ಯತೆಯು ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕದಿಂದ 135 ದಿನಗಳ ಅವಧಿಗೆ ಹೊಂದಿರಬೇಕು.

5) ಯಶಸ್ವಿ ಗುತ್ತಿಗೆದಾರರು ಭದ್ರತಾ ಠೇವಣಿ ಮೊತ್ತವನ್ನು ಟೆಂಡರ್ ಒಪ್ಪಂದ ಮಾಡಿಕೊಳ್ಳುವ ಪೂರ್ವದಲ್ಲಿ 5% ರಷ್ಟು ಭರಣಾ ಮಾಡಬೇಕು. (ಅಂಗೀಕರಿಸಲ್ಪಟ್ಟ ಮೊತ್ತಕ್ಕೆ)

10) ಖಾಲಿ ಟೆಂಡರ್ ಪುಸ್ತಕಗಳಿಗೆ ಅರ್ಜಿ ಸಲ್ಲಿಸುವ ಗುತ್ತಿಗೆದಾರರು ಕೆ/ಡಬ್ಲ್ಯೂ-4 ಸಕ್ಷಮ-3ರಂತೆ ಅರ್ಹತೆ ಹೊಂದುವುದು ಅವಶ್ಯವಾಗಿದೆ. ಅರ್ಜಿಯ ಜೊತೆಗೆ

i. ಮುಖ್ಯವಾಗಿ ಹಾಗೂ ಮಹತ್ವವಾಗಿರುವ ಈ ಕೆಳಕಂಡ ಯಂತ್ರೋಪಕರಣಗಳನ್ನು ಸ್ವತಃ ಅಥವಾ ಲೀಜ್ ಮೇಲೆ ಹೊಂದಿರಬೇಕು.ಲೀಜ್ ಆಗಿದ್ದಲ್ಲಿ ಜಿ.ಪಿ.ಎ.ಮೂಲ ದಾಖಲಾತಿ ಒದಗಿಸುವುದು ಶೇಕಡಾ 50ರಷ್ಟು ವಾಹನಗಳ ಸ್ವಂತ ಮಾಲಿಕತ್ವ ಹೊಂದಿರಬೇಕು.

- ❖ ಎಕ್ಸ್‌ಕವೇಟರ್ =1 ಸಂಖ್ಯೆ.
- ❖ ಲಾರಿಗಳು /ಟಿಪ್ಪರ್‌ಗಳು =2 ಸಂಖ್ಯೆ
- ❖ ಕಾಂಕ್ರೀಟ್ ಮಿಕ್ಸರ್ ಹಾಪರ್‌ನೊಂದಿಗೆ =3 ಸಂಖ್ಯೆ
- ❖ ವೈಬ್ರೇಟರ್ (ಪೀನ್/ಟೇಬಲ್) =4 ಸಂಖ್ಯೆ
- ❖ ನೀರು ಎತ್ತುವ ಪಂಪ್ =4 ಸಂಖ್ಯೆ
- ❖ ಸೆಂಟ್ರಿಂಗ್ =100 ಘಮೀ. ಒಂದು ದಿನಕ್ಕೆ
- ❖ ಕ್ರೇನ್ (ಪೈಪ್ ಲೇಯಿಂಗ್‌ಗಾಗಿ) =1 ಸಂಖ್ಯೆ

11) ತಾಂತ್ರಿಕ ಬಿಡ್‌ನಲ್ಲಿ ತಿಳಿಸಲಾದ ಎಲ್ಲಾ ವಿವರಗಳಿಗೆ ಸೂಕ್ತ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರಗಳಿಗೆ ನೋಟರಿ ಅಥವಾ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿರಬೇಕು.(ಕಾರ್ಯನಿರ್ವಾಹಕ ಇಂಜನೀಯರ್‌ರವರಿಗಿಂತ ಕಡಿಮೆ ಅಲ್ಲದ)

12) ಯಾವುದೇ ಗುತ್ತಿಗೆದಾರರು ಸತತ ಮೂರು ಬಾರಿ ಖಾಲಿ ಬುಕ್‌ಲೆಟ್‌ಗಳನ್ನು ಪಡೆದು, ಟೆಂಡರ್‌ಗಳನ್ನು ಸಲ್ಲಿಸದೆ ಇದ್ದಲ್ಲಿ ಅಂತಹ ಗುತ್ತಿಗೆದಾರರ ಅರ್ಜಿ ಸ್ವೀಕರಿಸಲಾಗುವುದಿಲ್ಲ ಹಾಗೂ ಖಾಲಿ ಟೆಂಡರ್ ಪುಸ್ತಕ ವಿತರಿಸುವುದಿಲ್ಲ.

13) ಯಾವುದೇ ಕಾರಣ ನೀಡದೆ ಯಾವುದೇ ಅಥವಾ ಎಲ್ಲ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕು ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ.

14) ಷರತ್ತಿನ ಟೆಂಡರ್‌ಗಳನ್ನು ಪರಿಗಣಿಸುವುದಿಲ್ಲ.

ವ್ಹಿ.ಬಿ. ಕುಲಕರ್ಣಿ

ಪಿ.ಆರ್. 829 ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ.

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಜಿಲ್ಲಾ ನೋಂದಣಾಧಿಕಾರಿಗಳು, ಕಾರವಾರ ಇವರ ನಡವಳಿಗಳು

ನೇಮಕಾತಿ ಆದೇಶ

ವಿಷಯ: ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಉತ್ತರ ಕನ್ನಡ ಜಿಲ್ಲೆಯಲ್ಲಿ ದ್ವಿತೀಯ ದರ್ಜೆ ಸಹಾಯಕರ ವೃಂದದಲ್ಲಿ ಗುರುತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ದ್ವಿತೀಯ ದರ್ಜೆ ಸಹಾಯಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ: 1. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರಿಗೆ ಈ ಕಛೇರಿಯಿಂದ ಬರೆದಿರುವ ಪತ್ರ ಸಂಖ್ಯೆ:ಜಿನೋ:ಸಿಬ್ಬಂದಿ 27/2001-02 ದಿನಾಂಕ: 07.01.2002.

2. ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್:13:ಎಸ್‌ಬಿಸಿ:2001 ದಿನಾಂಕ:21.11.2001 ರನ್ವಯ ಪ್ರಕಟಿಸಿರುವ ಕೆ.ಸಿ.ಎಸ್. (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟು ತುಂಬದೇ ಇರುವ ಹುದ್ದೆಗಳ) ವಿಶೇಷ ನೇಮಕಾತಿ ನಿಯಮಗಳು, 2001.

3. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ:EST:1-273/01-02, ದಿನಾಂಕ:01.08.2002 (ದಿನಾಂಕ:8.8.2002ರ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ.)

4. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ಬ್ಯಾಕ್‌ಲಾಗ್ ಅಂತಿಮ ಆಯ್ಕೆ ಪಟ್ಟಿ ಸಂಖ್ಯೆ: EST:1-273/01-02 ದಿನಾಂಕ: 23.11.2004.

5. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ಅಲಾಟ್‌ಮೆಂಟ್ ಆದೇಶ ಸಂಖ್ಯೆ: EST:1-273/01-02 ದಿನಾಂಕ: 07.10.2008.

6. ಈ ಕಛೇರಿಯ ನೇಮಕಾತಿ ಆದೇಶ ಸಂಖ್ಯೆ:ಜಿನೋ ಸಿಬ್ಬಂದಿ–15/08–09 ದಿನಾಂಕ: 20.10.08.
7. ಈ ಕಛೇರಿಯ ರದ್ದತಿ ಆದೇಶ ಸಂಖ್ಯೆ: ಜಿನೋ ಸಿಬ್ಬಂದಿ–15/08–09 ದಿನಾಂಕ:28.1.09.
8. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ರೀ–ಅಲಾಟ್‌ಮೆಂಟ್ ಆದೇಶ ಸಂಖ್ಯೆ: EST:1-273/01-02 ದಿನಾಂಕ: 28.08.2009.
9. ಸರ್ಕಾರದ ಆದೇಶ ಸಂಖ್ಯೆ: FD (SPL) 04 PET 2005 ದಿನಾಂಕ: 31.3.2006.

ಪ್ರಸ್ತಾವನೆ:

ಈ ಇಲಾಖೆಯ ಉತ್ತರ ಕನ್ನಡ ಜಿಲ್ಲೆಯಲ್ಲಿ ದ್ವಿತೀಯ ದರ್ಜೆ ಸಹಾಯಕರ ವೃಂದದಲ್ಲಿ ಕೆಳಕಂಡಂತೆ ಬ್ಯಾಕ್‌ಲಾಗ್ ಹುದ್ದೆಗಳು ಇರುತ್ತವೆಂದು ಈ ಕಛೇರಿಯಿಂದ ಉಲ್ಲೇಖ (1)ರನ್ವಯ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರಿಗೆ ವರದಿ ಮಾಡಲಾಗಿತ್ತು.

ಕ್ರ. ಸಂ.	ಜಿಲ್ಲೆ	ಸದರಿ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ		
		ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
1	ಉತ್ತರ ಕನ್ನಡ ಜಿಲ್ಲೆ	ಒಂದು	ಒಂದು	ಎರಡು

ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಲುವಾಗಿ ಉಲ್ಲೇಖ (2)ರ ಬ್ಯಾಕ್‌ಲಾಗ್ ನಿಯಮಗಳ ಪ್ರಕಾರ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಉಲ್ಲೇಖ (3)ರ ಅಧಿಸೂಚನೆ ಮೂಲಕ ಅರ್ಜಿಗಳನ್ನು ಆಹ್ವಾನಿಸಿ, ಈ ಬಗ್ಗೆ ಸ್ವೀಕೃತವಾದ ಎಲ್ಲಾ ಅರ್ಜಿಗಳು ಪರಿಶೀಲನೆಗೊಂಡ ನಂತರ ಉಲ್ಲೇಖ (2)ರ ಬ್ಯಾಕ್‌ಲಾಗ್ ನಿಯಮಗಳ ಪ್ರಕಾರ 29 ರಿಂದ 40 ವರ್ಷ ವಯೋಮಿತಿಯಲ್ಲಿರುವ ಅರ್ಹ ಅಭ್ಯರ್ಥಿಗಳನ್ನು Merit ಮತ್ತು ಮೀಸಲಾತಿ ಆಧಾರದ ಮೇಲೆ ಆಯ್ಕೆ ಮಾಡಿ ಅರ್ಹ ಅಭ್ಯರ್ಥಿಗಳ ಬ್ಯಾಕ್‌ಲಾಗ್ ಅಂತಿಮ ಆಯ್ಕೆ ಪಟ್ಟಿಯನ್ನು ನಿಯಮಾನುಸಾರ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರು ಉಲ್ಲೇಖ (4)ರನ್ವಯ ದಿನಾಂಕ: 23.11.2004 ರಂದು ಪ್ರಕಟಿಸಿರುತ್ತಾರೆ.

ತದನಂತರ ಈ ಕಛೇರಿಯಿಂದ ಉಲ್ಲೇಖ (1)ರ ಪತ್ರದಲ್ಲಿ ಮೇಲ್ಕಂಡಂತೆ ವರದಿ ಮಾಡಿದ ಒಂದು ಪರಿಶಿಷ್ಟ ಜಾತಿಯ ಬ್ಯಾಕ್‌ಲಾಗ್ ಹುದ್ದೆಗೆ ಅನುಗುಣವಾಗಿ ಕೆಳಕಂಡ ಪರಿಶಿಷ್ಟ ಜಾತಿ ಬ್ಯಾಕ್‌ಲಾಗ್ ಅಭ್ಯರ್ಥಿಯನ್ನು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರು ಉಲ್ಲೇಖ (5)ರ ಅವರ ಅಲಾಟ್‌ಮೆಂಟ್ ಆದೇಶದಲ್ಲಿ ಈ ಜಿಲ್ಲೆಗೆ ನೇಮಕಾತಿಗಾಗಿ ಅಲಾಟ್ ಮಾಡಿದ್ದರ ಮೇರೆ ಕೆಳಕಂಡ ಪರಿಶಿಷ್ಟ ಜಾತಿಯ ಬ್ಯಾಕ್‌ಲಾಗ್ ಅಭ್ಯರ್ಥಿಯನ್ನು ಉಪ ನೋಂದಣಿ ಕಛೇರಿ, ಕುಮಟಾ ಇಲ್ಲಿಗೆ ಉಲ್ಲೇಖ (6)ರನ್ವಯ ದ್ವಿತೀಯ ದರ್ಜೆ ಸಹಾಯಕರೆಂದು ನೇಮಕಾತಿ ಮಾಡಿದ್ದರೂ ಸಹ ಸದರಿ ಅಭ್ಯರ್ಥಿಯು ನೇಮಕ ಮಾಡಿದ ಕಛೇರಿಯಲ್ಲಿ ಕೆಲಸಕ್ಕೆ ಹಾಜರಾಗದೇ ಇದ್ದ ಕಾರಣ ಇವರಿಗೆ ನೀಡಿದ ಉಲ್ಲೇಖ (6)ರ ನೇಮಕಾತಿ ಆದೇಶವನ್ನು ಉಲ್ಲೇಖ (7)ರನ್ವಯ ರದ್ದುಪಡಿಸಲಾಯಿತು ಹಾಗೂ ಈ ವಿಷಯವನ್ನು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರಿಗೂ ಹಾಗೂ ಸದರಿ ಅಭ್ಯರ್ಥಿಗೂ ತಿಳಿಸಲಾಯಿತು.

1	ಯಲ್ಲಪ್ಪರಾಮು ಕಟ್ಟೀಮನಿ S/o ರಾಮುಕಟ್ಟೀಮನಿ ಚಂದಾವಾಬಡಿ ರೋಡ್, ವೆಂಕಟರಮಣಗಲ್ಲಿ ಬಿಜಾಪುರ.	ಪರಿಶಿಷ್ಟ ಪಂಗಡ ಮಾಜಿ ಸೈನಿಕ ಅಭ್ಯರ್ಥಿ ಮುಖ್ಯ ಪಟ್ಟಿ

ಈ ರೀತಿ ಮೇಲ್ಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಯು ಈ ಜಿಲ್ಲೆಯ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಕೆಲಸಕ್ಕೆ ಹಾಜರಾಗದೇ ಇದ್ದ ಕಾರಣ ಹಾಗೂ ಇವರು ತಮ್ಮ ನೇಮಕಾತಿ ಹಕ್ಕನ್ನು ಕಳೆದುಕೊಂಡ ಕಾರಣ ಮೇಲ್ಕಂಡ ಯಲ್ಲಪ್ಪ ರಾಮು ಕಟ್ಟೀಮನಿ ಎಂಬ ಅಭ್ಯರ್ಥಿಯ ಬದಲಿಗೆ ಕೆಳಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಯನ್ನು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರು ಉಲ್ಲೇಖ (8)ರ ಅವರ ರೀ–ಅಲಾಟ್‌ಮೆಂಟ್ ಆದೇಶದಲ್ಲಿ ಈ ಜಿಲ್ಲೆಗೆ ನೇಮಕಾತಿಗಾಗಿ ಅಲಾಟ್ ಮಾಡಿ ಈ ಕೆಳಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಯನ್ನು ಈ ಜಿಲ್ಲೆಯಲ್ಲಿ ದ್ವಿತೀಯ ದರ್ಜೆ ಸಹಾಯಕರೆಂದು ನೇಮಕ ಮಾಡಿಕೊಳ್ಳುವಂತೆ ನಿರ್ದೇಶಿಸಿದ್ದರ ಮೇರೆ ಕೆಳಕಂಡ ಅಭ್ಯರ್ಥಿಯನ್ನು ಸದರಿ ಬ್ಯಾಕ್‌ಲಾಗ್ ಹುದ್ದೆಯಲ್ಲಿ ನೇಮಕ ಮಾಡಿಕೊಳ್ಳುವ ಸಲುವಾಗಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ:ಜಿನೋ:ಸಿಬ್ಬಂದಿ:16:09–10, ದಿನಾಂಕ: 10ನೇ ಸೆಪ್ಟೆಂಬರ್ 2009

